TEXT PROBLEM WITHIN THE BOOK ONLY

TEXT CUT WITHIN THE BOOK ONLY

UNIVERSAL LIBRARY
OU_200562
UNIVERSAL LIBRARY

OUP—902—26-3-70—5,000

OSMANIA UNIVERSITY LIBRARY

Call No. Accession No.

Author

Title

This book should be returned on or before the date last marked below.

Government Oriental Library Series

EDITED BY PANDITS UNDER THE SUPERVISION OF THE CURATOR, GOVERNMENT ORIENTAL LIBRARY MYSORE.

Kannada Section No. IV.

ಕುಮಾರವ್ಯಾಸಮಹಾಕವಿ ವಿರಚಿತ

ಕರ್ನಾಟಕ ಮಹಾಭಾರತದ ಆದಿಪರ್ವದೊಳ್ ಸಂಭವಪರ್ವಂ

THE

KARNATAKA MAHABHARATA

SAMBHAVA PARVA

BY

KUMARAVYASA MAHAKAVI

EDITED BY

V SYAMACHARYA,

Pandit, Govt. Oriental Library,

Mysore.

PUBLISHED UNDER THE AUTHORITY OF THE GOVERNMENT OF HIS HIGHNESS THE MAHARAJA OF MYSORE

MYSORE

PRINTED AT THE GOVERNMENT BRANCH PRESS

1912

ಅವತರಣಿಕೆ.

ಈ ಪುಸ್ತಕವು ಕರ್ಣಾಟಕಮಹಾಭಾರತದ ಮೊದಲನೆಯ ಸಂಚಿಕೆಯಾಗಿರುವುದು. ಈ ಮಹಾಭಾರತಗ್ರಂಥವು ತಿಳಿಗನ್ನಡದಲ್ಲಿ 'ಕುಮಾರವ್ಯಾಸ' ನೆಂದು ಪ್ರಸಿದ್ಧನಾದ ಕವಿಯಿಂದ ಭಾಮಿನೀಷಟ್ಪದಿಯಲ್ಲಿ ರಚಿಸಲ್ಪಟ್ಟಿದೆ. ಈ ಕವಿಯ ಭಾಷೆಯ ವಿಷಯದಲ್ಲಿಯೂ ಶೈಲಿಯ ವಿಷಯದಲ್ಲಿಯೂ ಹೇಳಬೇಕಾದ ವಿಷಯವೆಲ್ಲಾ (ಕನ್ನಡ ಸೆಕ್ಷನ್ ನಂಬರು ಮೂರನೆಯದಾದ) ಉಪೋದ್ಘಾತಸಂಚಿಕೆಯ ಅವತರಣಿಕೆಯಲ್ಲಿ ಹೇಳಿರುವುದಕ್ಕಿಂತಲೂ ಹೆಚ್ಚಿಲ್ಲವಾದುದರಿಂದ ಅವುಗಳನ್ನಿಲ್ಲಿಯೂ ಹೇಳಲಾವಶ್ಯಕವಿಲ್ಲ. ಪ್ರಕೃತ ಈ ಕವಿಯ ವಿಷಯದಲ್ಲಿ ಮಾತ್ರ ವಿಚಾರವು ಆವಶ್ಯಕವಾಗಿದೆ.

ಈ ಕರ್ಣಾಟಕಮಹಾಭಾರತಕ್ಕೆ ಕರ್ತನಾದ ಕವಿಗೆ 'ಕುಮಾರವ್ಯಾಸ' ನೆಂಬ ಪ್ರಸಿದ್ಧಿಯಿರುವುದು. ಇದು ವಾಸ್ತವವಾಗಿ ಬಿರುದಾಗಿರಬಹುದೇ ಹೊರತು ರೂಢನಾಮವಲ್ಲ. ಈತನ ಸಂಕೇತನಾಮವು 'ಗದುಗಿನ ನಾರಣಪ್ಪ' ಎಂದು ಕೆಲವರು ಹೇಳುವರು. ಮತ್ತು ಕೆಲವರು ಈತನಹೆಸರು ಗೊತ್ತಿಲ್ಲವೆಂದೆನ್ನುವರು. ಈತನ ವಿಷಯವನ್ನು ವಿಚಾರಿಸಲಾಗಿ ಗದುಗಿನ ಸಮೀಪದ ಜನರಹೇಳಿಕೆಯಿಂದ ಈತನ ಪೂರ್ವಿಕರು ಕುಲಕ್ರಮವಾಗಿ ಶಾನಭೋಗರೆಂತಲೂ ವೈಷ್ಣವಬ್ರಾಹ್ಮಣರೆಂತಲೂ ತಿಳಿದು ಬರುತ್ತದೆ. ಆದರೆ ಮತ್ತೆ ಕೆಲವರು ಬೇರೆ ವಿಧವಾಗಿ ಹೇಳುವರು, ಅದೆಂತೆಂದರೆ: ಸಂಧಿಗಳ ಕೊನೆಯಲ್ಲಿ ವೀರನಾರಾಯಣ ನಾಮಾಂಕನಮಾತ್ರದಿಂದಲೇ ಈತನು ವೈಷ್ಣವನೆಂದು ಹೇಳಲಾಗದು. ಅಲ್ಲದೆ ಆದಿಪರ್ವದ ಹದಿನಾಲ್ಕನೆಯ ಸಂಧಿಯ 37ನೆಯ ಪದ್ಯದಲ್ಲಿ

"ಹರಹರ ಮಹಾದೇವೆನುತ ತೆಗೆದಪ್ಪಿದನು ಬಾಲಕನ"

ಎಂದೂ ಇನ್ನೂ ಇದೇರೀತಿಯಲ್ಲಿ ಅನೇಕಸ್ಥಳಗಳಲ್ಲಿ "ಶಿವ ಶಿವ" ಎಂದು ಹೇಳಿರುವುದರಿಂದಲೂ, ಅರಣ್ಯಪರ್ವದ 4-5-6ನೆಯ ಸಂಧಿಗಳಲ್ಲಿ ಶಿವಭಕ್ತಿಯನ್ನು ಚೆನ್ನಾಗಿ ತೋರ್ಪಡಿಸಿ ಇರುವುದರಿಂದಲೂ, ಈತನು ಅದ್ವೈತಿಯೆಂದು ನಿರ್ಧರಿಸಬಹುದೆಂದು ಹೇಳುವರು.

ಈ ಉಭಯಪಕ್ಷಗಳಿಗೂ ಇರುವ ಬಲಾಬಲಗಳನ್ನು ಸ್ವಲ್ಪವಾಗಿ ತೋರಿಸುವುದು ಯುಕ್ತವಾಗಿದೆ. ಸಾಧಾರಣವಾಗಿ ಕವಿಗಳು ಮತ್ತು ಇತರ ಗ್ರಂಥಕರ್ತರು ತಾವು ರಚಿಸುವ ಗ್ರಂಥದ ಆದಿಮಧ್ಯಾಂತಭಾಗಗಳಲ್ಲಿ ತಾವು ಉಪಾಸಿಸುವ ಇಷ್ಟದೇವತೆಯನ್ನು ಪ್ರಾರ್ಥಿಸುವುದು ಅಂತಹ ದೇವತೆಯ ನಾಮಾಂಕನವನ್ನು ಮಾಡುವುದು ಸುಪ್ರಸಿದ್ಧವಲ್ಲವೆ? ಈ ಕವಿಯು ಗ್ರಂಥಾದಿಯಲ್ಲಿ ವೀರನಾರಾಯಣನನ್ನೇ ಭಜಿಸಿರುವನು. ಮತ್ತು ಸಂಧ್ಯಂತಗಳಲ್ಲಿಯೂ ಆತನ ನಾಮವನ್ನೇ ಅಂಕಿತಮಾಡಿರುವನು. ಇದು ನಾರಾಯಣಭಕ್ತನಲ್ಲದವನಿಗೆ ಸಲ್ಲಲಾರದು. ಆದರೆ ಅಲ್ಲಲ್ಲಿ 'ಹರ ಹರ' 'ಶಿವಶಿವ' ಎಂದು ಶಿವನಾಮವನ್ನು ಉಪಯೋಗಿಸುತ್ತಾ ಬಂದಿರುವುದರಿಂದ ಈತನನ್ನು ಶಿವಭಕ್ತನೆಂದು ಏಕೆ ಹೇಳಬಾರದು? ಎನ್ನಬಹುದು. ಮೇಲೆ ತೋರಿಸಿದ ಸ್ಥಳಗಳಲ್ಲಿ 'ಹರಹರ' 'ಶಿವಶಿವ' ಇವೇ ಮೊದಲಾದ ಪದಗಳು ಪ್ರಕರಣವನ್ನು ಪರ್ಯಾಲೋಚಿಸಲಾಗಿ ಭಕ್ತಿಪೂರ್ವಕ ಶಿವಸ್ಮರಣಾರ್ಥವಾಗಿ ಉಪಯೋಗಿಸಿದಂತೆ ತೋರಿ ಬರುವುದಿಲ್ಲ. ಅಲ್ಲದೆ ಆಶ್ಚರ್ಯಾದ್ಯರ್ಥದಲ್ಲಿಯೇ ಉಪಯೋಗಿಸಿರುವನು. ಇಂತಹ ಪ್ರಯೋಗಗಳು ಸಂಸ್ಕೃತದಲ್ಲಿಯೂ ಕಾಣಬರುವುದು. ಹೇಗೆಂದರೆ—

"**शिव शिव परितापं कोवदेत्कोमलांग्याः ॥**

ಎಂದು (ಪುಷ್ಪಬಾಣ ವಿಲಾಸದಲ್ಲಿ) ಖೇದಾತಿಶಯದಲ್ಲಿಯೂ

"**शिलाकंपं धत्ते शिव शिव**"

ಎಂದು ಆಶ್ಚರ್ಯಾರ್ಥದಲ್ಲಿಯೂ

"गणयति करुणापराङ्मुखोसौ शिव शिव तान्यपि
वासराणि वेधाः ॥

ಎಂದು ವೇದದಲ್ಲಿಯೂ, ಹೀಗೆಯೇ ಅನೇಕ ಸ್ಥಳಗಳಲ್ಲಿ ಪ್ರಯೋಗಗಳಿರುವುವು. ಮತ್ತು

"आश्चर्येपि भये शोके क्षुभिते नाम वा मम ।
व्याजेन वा स्मरेद्यस्तु मम सायुज्यमाप्नुयात् ॥

ಎಂದು (ಪದ್ಮಪುರಾಣದಲ್ಲಿ,) ಆಶ್ಚರ್ಯಾದಿಪರವಶರಾದವರು ಶಿವನಾಮಸಂಕೀರ್ತನದಿಂದ ತಮ್ಮ ಆಶ್ಚರ್ಯಾದಿಗಳನ್ನು ವ್ಯಕ್ತಪಡಿಸುವರೆಂದು ಅಂತಹ ಶಿವನಾಮಸಂಕೀರ್ತನವು ಕೂಡ ಮಹಾಫಲವನ್ನು ಕೊಡುವುದೆಂದು ಹೇಳಿದೆ.

ಅರಣ್ಯಪರ್ವದಲ್ಲಿರುವ ಶಿವಭಕ್ತಿನಿರೂಪಣಪ್ರಕಾರವನ್ನು ಆ ಪರ್ವದ ಸಂಚಿಕೆಯಲ್ಲಿಯೇ ವಿಚಾರಮಾಡುವೆವು. ಅಂತು ಗ್ರಂಥಮಧ್ಯದಲ್ಲಿ ಪ್ರಕರಣಾನುಸಾರವಾಗಿ ಇತರರ ಶಿವಭಕ್ತ್ಯಾದಿಗಳನ್ನು ಈತನು ವಿವರಿಸಿರುವದರಿಂದಲೇ ಕವಿಯು ಶಿವಭಕ್ತನೆಂದು ಹೇಳಲು ಎಷ್ಟುಮಾತ್ರವೂ ಅವಕಾಶವಿರುವುದಿಲ್ಲ. ಒಂದು ವೇಳೆ ಶಿವಭಕ್ತನೆಂದು ಹೇಳಬಹುದಾದರೂ ಅದ್ವೈತಿಯೆಂದು ಹೇಳಲು ಏನೂ ಸಾಧಕ ತೋರುವುದಿಲ್ಲ. ಶಿವಭಕ್ತರೆಲ್ಲರೂ ಅದ್ವೈತಿಗಳಲ್ಲ. ಅದ್ವೈತಿಗಳೆಲ್ಲರೂ ಶಿವಭಕ್ತರಲ್ಲ. ಅದ್ವೈತಿಗಳಲ್ಲಿ ವಿಷ್ಣುಭಕ್ತ್ಯಾದಿಗಳು ಇರುವುದೆಂಬುದು ಮತವಿವೇಕವುಳ್ಳವರಿಗೆ ವಿಶದವೆ. ಅಲ್ಲದೆ ಅದ್ವೈತಸಿದ್ಧಾಂತದ ಪರಮಪ್ರಮೇಯವಾದ ಜೀವಬ್ರಹ್ಮೈಕ್ಯವೇ ಮೊದಲಾದುವುಗಳನ್ನು ಈ ಗ್ರಂಥದಲ್ಲಿ ಯಾವಭಾಗದಲ್ಲಿಯೂ ನಿರೂಪಿಸಿರುವುದಿಲ್ಲ. ಹೀಗೆ ಇರಲು ಈ ಕವಿಯು ಅದ್ವೈತಿ ಯೆಂದು ಹೇಗೆ ಹೇಳಬಹುದು ?

ಈ ಕವಿಯು ಯಾವರೀತಿಯಿಂದ ಈ ಭಾರತರಚನೆಯಂ ಮಾಡಲುಜ್ಜುಗಿಸಿದನೋ ಆರೀತಿಯನ್ನು ಕುರಿತು ಗದುಗಿನ ಪ್ರಾಂತದವರು ಹೇಳುವ ಕಥೆ ಏನೆಂದರೆ—

ಈ ಕವಿಯು ಮೊದಲು ಕೋಳಿವಾಡು ಎಂಬ ಗ್ರಾಮದ ಶಾನ ಭೋಗನಾಗಿ ಗದುಗಿನ ವೀರನಾರಾಯಣಸ್ವಾಮಿಗೆ ಭಕ್ತನಾಗಿದ್ದನು. ಈತನನ್ನು 'ನಾರಣಪ್ಪ' ಎಂದು ಕರೆಯುತ್ತಿದ್ದರು. ಈತನು ಶ್ರೀವೀರನಾರಾಯಣಸ್ವಾಮಿಯ ಭಕ್ತನಾದುದರಿಂದ ಅಂತಹ ಭಗವಂತನ ವಿಷಯದಲ್ಲಿ ಏನಾದರೂ ಒಂದು ಗ್ರಂಥವನ್ನು ಬರೆಯಬೇಕೆಂಬ ಅಭಿಲಾಷೆಯಿಂದ ಭಗವಂತನನ್ನು ತನಗೆ ಈಕಾರ್ಯಕ್ಕೆ ತಕ್ಕ ಶಕ್ತಿಯನ್ನೀದಗಿಸಿಕೊಡಲು ಪ್ರಾರ್ಥಿಸುತ್ತಿದ್ದನು. ಹೀಗಿರಲು ಶ್ರೀವೀರನಾರಾಯಣಸ್ವಾಮಿಯು ಒಂದುದಿನ ಈತಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಉಪದೇಶಿಸಿದಪ್ರಕಾರ ಈ ನಾರಣಪ್ಪನು ಲಕ್ಷಬ್ರಾಹ್ಮಣಸಂತರ್ಪಣೆ ನಡೆಯುವ ಸ್ಥಳವನ್ನು ವಿಚಾರಿಸುತ್ತಿರುವಾಗ ಆಸಮೀಪಪ್ರಾಂತದಲ್ಲಿ ಒಬ್ಬಾನೊಬ್ಬ ಧಾರ್ಮಿಕನು ಲಕ್ಷಬ್ರಾಹ್ಮಣಸಂತರ್ಪಣೆಯನ್ನು ನಡೆಸುವನೆಂದು ತಿಳಿದುಬಂತು. ಅಲ್ಲಿಗೆ ಈತನು ಪ್ರಯಾಣವಂ ಮಾಡಿ ಆಸಂತರ್ಪಣಾಸ್ಥಳದಲ್ಲಿ ಸೇರಿರುವ ಬ್ರಾಹ್ಮಣಸಮುದಾಯದೊಳಗೆ ತನಗೆ ಸ್ವಪ್ನದಲ್ಲಿ ಸೂಚಿಸಲ್ಪಟ್ಟ ಲಕ್ಷಣಗಳುಳ್ಳ ಬ್ರಾಹ್ಮಣನನ್ನು ಎಷ್ಟು ಅನ್ವೇಷಿಸಿದಾಗ್ಯೂ ಕಾಣದೆ, ನಿರಾಶನಾಗುವ ಸಮಯದಲ್ಲಿ ನಡೆದುದೇನಂದರೆ—ಒಬ್ಬನು ಬಾಳೆಯ ಎಲೆಯನ್ನು ಹಾಕುತ್ತಲೂ ಮತ್ತೊಬ್ಬನು ದೊನ್ನೆಗಳನ್ನು ಕೊಡುತ್ತಲೂ ಇರುವಾಗ ಹುಡುಗರು ತಮತಮಗೆ ಬೇಕಾದ ಎಲೆದೊನ್ನೆಗಳನ್ನು ಕುರಿತು ವಿವಾದವನ್ನು ಮಾಡುತ್ತಿದ್ದಾಗ ಅಲ್ಲಿನ ಜನಗಳು ಎಷ್ಟು ಸಮಾಧಾನವನ್ನು ಮಾಡಿದಾಗ್ಯೂ ಕೇಳದೇ ಇರುವ ಒಬ್ಬ ಹುಡುಗನನ್ನು ಕುರಿತು "ಏನೋ ನೀನು ದುರ್ಯೋಧನನಿಗಿಂತ ಹೆಚ್ಚು ದುರಭಿಮಾನವುಳ್ಳವನಾಗಿದೀಯೆ" ಎಂದು ಎಲೆದೊನ್ನೆಗಳನ್ನು ಕೊಡುವವರು ನುಡಿದರು. ಅದನ್ನು ಕೇಳಿ ಅಲ್ಲಿ ಸಮೀಪದಲ್ಲಿದ್ದ ಒಬ್ಬ ಬ್ರಾಹ್ಮಣನು ತನ್ನ ಕಣ್ಣಿನಿಂದ ನೀರನ್ನು ಸುರಿಸಿದನು. ಅದನ್ನು ನೋಡಿ ಈ ನಾರಣಪ್ಪನು ತನ್ನ ಮನಸ್ಸಿನಲ್ಲಿ ವಿಚಾರಮಾಡತೊಡಗಿದನು. ಈ ಬ್ರಾಹ್ಮಣನಿಗೆ ದುರ್ಯೋಧನನ ಹೆಸರನ್ನು ಕೇಳುತಲೇ ಕಣ್ಣಿನಲ್ಲಿ ನೀರು ಸುರಿಯಲು ಕಾರಣವೇನು? ಮಹಾಪಾಪಿಷ್ಠನಾದ ದುರ್ಯೋಧನನ ಹೆಸರು ನೆನಪಿಗೆ

ಬಂದುದು ಈತನಿಗೆ ಶೋಕಕಾರಣವಾಗಬೇಕಾದರೆ ಈ ಬ್ರಾಹ್ಮಣ
ನಿಗೂ ದುರ್ಯೋಧನನಿಗೂ ಹೆಚ್ಚು ಸಂಬಂಧವಿದ್ದಿರಬೇಕೆಂದು ವಿಚಾರ
ಮಾಡುತ್ತಿರುವಾಗ ಆಬ್ರಾಹ್ಮಣನಲ್ಲಿ ಸ್ವಪ್ನಸೂಚಿತವಾದ ಕೆಲವು ಲಕ್ಷ
ಣಗಳು ಕಂಡು ಬಂದುದರಿಂದ. ನಾರಣಪ್ಪನಿಗೆ ಮನಸ್ಸಮಾಧಾನ
ವಾಯಿತು.

ಭೋಜನವಾದ ಬಳಿಕ ಆಬ್ರಾಹ್ಮಣನು ಪ್ರಯಾಣಮಾಡತೊಡ
ಗಲು ನಾರಣಪ್ಪನು ಹಿಂಬಾಲಿಸಲು ಅವನು ಹಿಂದಿರುಗಿ ನೋಡಿ ನಾರಣ
ಪ್ಪನಿಗೆ ಹಿಂದೆ ಬರಬೇಡವೆಂದು ಎಷ್ಟು ಹೇಳಿದಾಗ್ಯೂ ಕೇಳದೆ ಇರುವಾಗ
ಆ ಬ್ರಾಹ್ಮಣನು ನಿಂತು ಏಕೆ ನನ್ನನ್ನು ಬಿಡದೆ ಹಿಂಬಾಲಿಸುತ್ತಿ? ಎಂದು
ಕೇಳಿದರು. ಅದಕ್ಕೆ ನಾರಣಪ್ಪನು ಹೇಳಿದುದೇನೆಂದರೆ--ತಾವು ಸಾಕ್ಷಾತ್
ಅಶ್ವತ್ಥಾಮಾಚಾರ್ಯರೆಂದು ನಾನು ನಂಬಿರುವೆನು. ತಮ್ಮಿಂದ ಜ್ಞಾನೋ
ಪದೇಶವಂ ಪಡೆದು ಶ್ರೀಮಹಾಭಾರತವನ್ನು ಕನ್ನಡಿಸುವ ಯತ್ನವಂ ನಡಿ
ಸಲು ನನ್ನನ್ನು ಶ್ರೀವೀರನಾರಾಯಣದೇವರು ಪ್ರೇರಿಸಿರುವರು. ಆದುದ
ರಿಂದ ಅನುಗ್ರಹಿಸಿ ಮೇಲೆ ಹೇಳಿದ ಕಾರ್ಯಕ್ಕೆ ತಕ್ಕಷ್ಟು ಜ್ಞಾನಶಕ್ತಿಗಳ
ನ್ನು ಕೊಟ್ಟು ನನ್ನನ್ನು ಉದ್ಧರಿಸಬೇಕೆಂದು ಬೇಡಿಕೊಳ್ಳುವೆನು ಎನಲು
ಅಶ್ವತ್ಥಾಮಾಚಾರ್ಯರು ಸಂತುಷ್ಟರಾಗಿ "ನಾನು ದುರ್ಯೋಧನನ
ಮರಣದವರೆಗೂ ಯುದ್ಧದಲ್ಲಿ ಆಸಕ್ತನಾಗಿದ್ದುದರಿಂದ ಆವರೆಗಿನ ಕಥೆ
ಗಳು ನಿನಗೆ ಚೆನ್ನಾಗಿ ಸ್ಫುರಿಸುವಂತೆ ಅನುಗ್ರಹಿಸಿರುವೆನು ; ಹೋಗು,
ಗ್ರಂಥವನ್ನು ಆರಂಭಿಸು. ಸ್ನಾನವನ್ನು ಮಾಡಿ ನೀನುಟ್ಟ ಬಟ್ಟೆಯು
ಒಣಗದೇ ಇರುವವರೆವಿಗೂ ನೀನು ಹೇಳುವ ಗ್ರಂಥವೆಲ್ಲವೂ ಶ್ಲಾಘ್ಯವಾಗಿ
ರಲಿ, ಶ್ರೀವೀರನಾರಾಯಣದೇವರ ಕೃಪೆಯಿಂದ ದುರ್ಯೋಧನಪಾತಪ
ರ್ಯಂತ ನಿನ್ನ ಗ್ರಂಥವು ನಿರ್ವಿಘ್ನವಾಗಿ ಬೆಳೆಯಲಿ. ನಮ್ಮ ದರ್ಶನಾದಿ
ವೃತ್ತಾಂತಗಳನ್ನು ಯಾರೊಡನಾದರೂ ನೀನು ತಿಳಿಸಿದರೆ ನಿನ್ನ
ದೇಹ ಉಳಿಯಲಾರದು" ಎಂದು ಉಪದೇಶಿಸಿ ಅಂತರ್ಹಿತರಾದರು.

ಬಳಿಕ ಈತನು ಆ ಮಹಾತ್ಮರ ಅಪ್ಪಣೆಯಂತೆ ನಿಯಮಪೂರ್ವ
ಕವಾಗಿ ಗ್ರಂಥವನ್ನು ರಚಿಸುತ್ತಾ, ಒಬ್ಬ ಸ್ನೇಹಿತನ ಕಡೆಯಿಂದ ಬರ

ಸುತ್ತಾ ಬಂದನು. ದಶಪರ್ವಗಳು ಮುಗಿದುವು. ಸಂತೋಷವಶ ದಿಂದ ಈ ವರ್ತಮಾನವನ್ನು ತನ್ನ ಸ್ನೇಹಿತನೊಡನೆ ಹೇಳಿಕೊಂಡುದ ರಿಂದಲೇ ಆತಗೆ ಮರಣವೂ ಸಂಭವಿಸಿತೆಂದು ಹೇಳುವರು.

ಇದೇ ರೀತಿಯಾಗಿ ಈತನು ಅಕ್ಷರಾಭ್ಯಾಸವನ್ನು ಕೂಡ ಮಾಡ ದವನಾಗಿದ್ದು ಕೇವಲ ದೈವಾನುಗ್ರಹದಿಂದೇ ಗ್ರಂಥವನ್ನು ರಚಿಸಿರುವ ನೆಂದು ಅನೇಕರು ಅನೇಕವಿಧವಾಗಿ ಹೇಳುವರು. ಇವುಗಳಲ್ಲಿ ಆವುದು ಸಮೂಲವೋ ಆವುದು ನಿರ್ಮೂಲವೋ? ಗೊತ್ತಾಗುವುದು ಕಷ್ಟವಾಗಿದೆ. ಅದು ಹೇಗಿದ್ದರೂ ಇರಲಿ. ಈ ಗ್ರಂಥಸ್ಥಿತಿಯನ್ನು ಪರ್ಯಾಲೋಚಿಸಿ ವಿಮರ್ಶವಂ ಮಾಡುವಾಗ ಈ ಕವಿಯು ವೀರನಾರಾಯಣಭಕ್ತನೆಂದು ನಿಶ್ಚಿತವಾಗಿ ತೋರಿಬರುತ್ತದೆ. ಅದ್ವೈತಿಯೆನಲು ತಕ್ಕ ಸಾಧಕಗಳಾ ವವೂ ಕಾಣಬರುವುದಿಲ್ಲ. ಮತ್ತು ಕೆಲವರು ಹೇಳುವಂತೆ ವೈಷ್ಣವ ಬ್ರಾಹ್ಮಣನೆಂದು ನಂಬುವುದಕ್ಕೆ ಕೆಲವು ಸಾಧಕಗಳೂ ದೊರೆಯುವುವು. ಹೇಗೆಂದರೆ:—

ಪೀಠಿಕಾಸಂಧಿಯಲ್ಲಿ 12ನೆಯ ಪದ್ಯವು—

ವಂದಿತಾಮಳಚರಿತನಮರಾ
ನಂದ ಯದುಕುಲಚಕ್ರವರ್ತಿಯ
ಕಂದ ನತಸಂಸಾರಕಾನನಘನದವಾನಳನು ।
ನಂದನಂದನಸನ್ನಿಭನು ಸಾ
ನಂದದಿಂದಪೆ ನಮ್ಮವನು ಕೃಪೆ
ಯಿಂದ ಸಲುಹುಗೆ ದೇವ ಜಗದಾರಾಧ್ಯಗುರುರಾಯ ॥

ಎಂದು ಇರುವುದು. ಈ ಕವಿಯು ಮೊದಲಿನ ಮೂರು ಪದ್ಯಗ ಳಿಂದ ವೀರನಾರಾಯಣನನ್ನು ನಾಲ್ಕನೆಯ ಪದ್ಯದಿಂದ ಲಕ್ಷ್ಮಿಯನ್ನು ಐದನೆಯ ಪದ್ಯದಿಂದ ಬ್ರಹ್ಮನನ್ನು ಆರನೆಯ ಪದ್ಯದಿಂದ ಸರಸ್ವತಿ ಯನ್ನು ಏಳನೆಯ ಪದ್ಯದಿಂದ ಮಹಾದೇವನನ್ನು ಎಂಟನೆಯ ಪದ್ಯ ದಿಂದ ಪಾರ್ವತಿಯನ್ನು ಒಂಬತ್ತನೆಯ ಪದ್ಯದಿಂದ ಗಣಪತಿಯನ್ನು

ಪತ್ತು ಹನ್ನೊಂದನೆಯ ಪದ್ಯಗಳಿಂದ ವೇದವ್ಯಾಸರನ್ನು ಭಜಿಸಿರುವನು. ಬಳಿಕ ಮೇಲೆ ತೋರಿಸಿದ ಪದ್ಯದಲ್ಲಿ ಯಾರನ್ನು ಪ್ರಾರ್ಥಿಸಿರುವನೋ ಅಲ್ಲಿನ ಪದಗಳಿಂದ ಸ್ಪಷ್ಟವಾಗುವುದಿಲ್ಲ. 'ಗುರುರಾಯ' ಎಂಬ ಪದ ದಿಂದ ಒಬ್ಬ ಗುರುಗಳನ್ನು ಪ್ರಾರ್ಥಿಸಿದನೆಂದು ಮಾತ್ರ ಹೇಳಬಹುದು. ಆ ಗುರುಗಳು ಪೂರ್ವಪದ್ಯಗಳಲ್ಲಿ ಪ್ರಸಕ್ತರಾದ ವ್ಯಾಸರೇ ಎಂದು ನಿಶ್ಚ ಯಿಸುವುದಕ್ಕೆ 'ಯದುಕುಲಚಕ್ರವರ್ತಿಯ ಕಂದ' 'ನಂದನಂದನಸನ್ನಿ ಭನು' ಎಂಬ ವಿಶೇಷಣಗಳು ವಿರೋಧಿಸುತ್ತವೆ. ವ್ಯಾಸರು ಪರಾಶರ ಪುತ್ರರೆಂದು ಪ್ರಸಿದ್ಧರು. ಯದುಕುಲದವರಲ್ಲ. ವಿಷ್ಣ್ವಂಶರಾದುದ ರಿಂದ 'ನಂದನಂದನಸನ್ನಿಭ' ಎಂದು ಕೃಷ್ಣ ಸಾಮ್ಯ ಜ್ಞಾಪನೆಯು ಸರಿ ಯಲ್ಲ. ಆದುದರಿಂದ ಈ ಪದ್ಯದಿಂದ ಸ್ತುತ್ಯರು ಇಂತಹರೆಂದು ಹೇಳು ವುದು ಅಸಾಧ್ಯವಾಗಿರುವುದಷ್ಟೆ? ಹೀಗಿರಲು ನಾವು ಶೋಧನಾ ರ್ಥವಾಗಿ ಉಪಯೋಗಿಸುತ್ತಿರುವ ಪುಸ್ತಕಗಳಲ್ಲಿ 'ಘ' 'ಠ' ಎಂದು ಗುರ್ತು ಮಾಡಿರುವ ಪುರಾತನವಾದ ತಾಳಪ್ರತಿಯ ಎರಡು ಪುಸ್ತಕಗಳಲ್ಲಿ ಮೇಲೆ ಕಂದಪದ್ಯದ ಆದಿಭಾಗದ ಪಾಠವು—

ವಂದಿತಾಮರಸೇವ್ಯನಾಯಕ
ನಂದಮುನಿ ಯತಿಚಕ್ರವರ್ತಿಯ
ಕಂದ . . . . |

ಎಂದು ಕಂಡು ಬರುವುದು. ಈ ಪಾಠದಲ್ಲಿ ಈ ಗುರುರಾಯರೆಂಬು ವರು 'ನಂದಮುನಿ' ಎಂದು ಪ್ರಸಿದ್ಧರಾದ ಶ್ರೀಮಧ್ವಾಚಾರ್ಯರೆಂದು ನಿಶ್ಚಯಿಸಬಹುದು. ಇವರಲ್ಲಿ ಸಕಲ ವಿಶೇಷಣಗಳೂ ಒಪ್ಪುವುವು. ಇವರು ಈ ಸಂಪ್ರದಾಯಪ್ರಕಾರ ದೇವತಾಶ್ರೇಷ್ಠರಾದ ವಾಯುದೇವ ರಾದುದರಿಂದ 'ಅಮರಸೇವ್ಯ' ಎಂಬ ವಿಶೇಷಣವು, ಶ್ರೀಮದಚ್ಯುತ ಪ್ರೇಕ್ಷಸ್ವಾಮಿಗಳವರ ಶಿಷ್ಯರಾದುದರಿಂದ 'ಯತಿಚಕ್ರವರ್ತಿಯ ಕಂದ' ಎಂಬ ವಿಶೇಷಣವು, 'ಮಧ್ವಾಖ್ಯನಾರಾಯಣಃ' ಎಂದು ಪ್ರಾಚೀನಗ್ರಂಥಾ ನುಸಾರವಾಗಿ 'ನಂದನಂದನಸನ್ನಿಭನು' ಎಂಬ ವಿಶೇಷಣವು ಕೂಡ

ಯಾವ ಬಾಧೆಯೂ ಇಲ್ಲದೆ ಹೊಂದುತ್ತವೆ. ಈ ಪಾಠವನ್ನೊಪ್ಪುವ ಪಕ್ಷದಲ್ಲಿ ಈ ಕವಿಯು ವೈಷ್ಣವನೆಂದು ಹೇಳಬೇಕಲ್ಲವೆ?

ಮತ್ತು ಇದೇ ಪರ್ವದ 15 ನೆಯ ಸಂಧಿಯಲ್ಲಿ ಭೀಮೋತ್ಪತ್ತಿ ಪ್ರಕರಣದಲ್ಲಿ—

ಎಂದು ಬಟಿಕರವಿಂದಲೋಚನೆ
ಯೆಂದು ಸಾಕ್ಷಾದ್ದೇವಮಧ್ವರ
ತಂದೆಯನು ರಜಗುಣದ ಮುಖ್ಯಪ್ರಾಣದೇವನನು ।
ಇಂದುಮುಖಿ ವರಮಂತ್ರದಿಂದವೆ
ಕಂದೆಱೆದು ಕಳುಹಿದಳು . . . . ॥

ಎಂಬ ಪದ್ಯವು 'ಜ' 'ಗ' ಎಂದು ಗುರ್ತು ಮಾಡಿರುವ ಪ್ರಾಚೀನ ವಾದ ತಾಳಪ್ರತಿಯ ಪುಸ್ತಕಗಳಲ್ಲಿ ದೊರಕುವುದು. ಈ ಪದ್ಯದಲ್ಲಿ ಕವಿಯು ಸ್ವತಂತ್ರವಾಗಿ ಉಪಯೋಗಿಸಿರುವ 'ಸಾಕ್ಷಾದ್ದೇವಮಧ್ವರ ತಂದೆಯನು' ಎಂಬ ಮುಖ್ಯ ಪ್ರಾಣವಿಶೇಷಣವು ಈ ಕವಿಯು ವೈಷ್ಣವನೆಂಬುದಕ್ಕೆ ಸಾಕಾದಷ್ಟು ಸಾಧಕವು.

ಮತ್ತು ಕವಿಯು ಅಲ್ಲಲ್ಲಿ ದ್ವೈತಸಿದ್ಧಾಂತದ ಪ್ರತಿತಂತ್ರ ವಿಷಯಗಳನ್ನು—ಅಂದರೆ, ಇತರಸಿದ್ಧಾಂತದವರು ಒಪ್ಪದೆ ಇವರು ಮಾತ್ರ ಒಪ್ಪಿರುವ ವಿಷಯಗಳನ್ನು—ಮೂಲಾಭಿಪ್ರೇತವನ್ನಾಗಿ ನಿರೂಪಿಸಿರುವನು. ಉದಾಹರಣೆಗಾಗಿ ಕೆಲವು ಇಲ್ಲಿ ತೋರಿಸಲ್ಪಡುವುದು.

ಇದೇ ಪರ್ವದ ಆರನೆಯ ಸಂಧಿಯಲ್ಲಿ ಅಮೃತಮಥನಕಥಾ ಪ್ರಕರಣದಲ್ಲಿ, ಹುಟ್ಟಿದ ವಿಷವನ್ನು ವಾಯುದೇವರು ನೀರಸವಂ ಮಾಡಿ ಮಹಾದೇವರಿಗೆ ಕೊಟ್ಟ ಕಥೆಯನ್ನು ಕೆಳಗೆ ಬರೆಯುವ 19ನೆಯ ಪದ್ಯದಿಂದ ಹೇಳಿರುವನು.

ಹೊಸೆಯಲಿಕೆ ವಾಸುಗಿಯ ಹೊಟ್ಟೆಯ
ಹಸರಕಾಯ್ದುಂತುರಿಯನುಗುಟಿತು
ವಿಷವ ಹಾಲಾಹಲವನಮರಾಸುರರು ಬೇಯಲಿಕೆ ।

ವಿಷದ ಕ್ರೂರತೆ ಲೋಕವೆಲ್ಲವ
ಘಸಣಿಸುತ ಬರಲಾಸಮೀರಣ
ಹೊಸೆದನಂಗೈತಳದಿ ಕೋಪದಿ ನೋಡಿ ಪಡಿಸಣವ ॥

ಈಪದ್ಯದಲ್ಲಿ 5ನೆಯ ಪಾದದ 'ಬರಲಾಸಮೀರಣ' ಎಂಬ ಸ್ಥಳದಲ್ಲಿ 'ಬರೆ ಲೋಕವಾಕ್ಷಣ' ಎಂದು ಕ. ಖ. ಎಂದು ಗುರ್ತುಮಾಡಿರುವ ಪುಸ್ತಕಗಳ ಪಾಠವು ಅನನ್ವಿತವಾಗಿರುವುದರಿಂದ 'ಆಸಮೀರಣ' ಎಂಬ ಪಾಠವೇ ಸಾಧುವಾದುದು. ಈಪಕ್ಷಕ್ಕೆ ಅನುಸಾರಿಯಾದ ಕಥೆಯು

"वायुरस्मा उपामंथत् पिनष्टिस्माकुनन्न-
मा । केशी विषस्य पात्रेण यद्रुद्रेणापि-
बत्सह"

ಎಂದು ಋಗ್ವೇದದ 8—7—24ರಲ್ಲಿ ಸಿದ್ಧವಾಗಿರುವುದಲ್ಲದೆ, ಶ್ರೀ ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದ 10ನೆಯ ಅಧ್ಯಾಯದಲ್ಲಿ ನಿರೂಪಿಸಿರುವ ಕಥೆಗೆ ಅನುಸಾರವಾಗಿ ಇರುವುದು. ಈ ಕಥೆಯನ್ನು ಇತರ ಮತದವರು ಒಪ್ಪುವುದಿಲ್ಲವೆಂಬುದಕ್ಕೆ ಶ್ರೀಸಾಯಣಾಚಾರ್ಯರು ಮೇಲೆ ತೋರಿಸಿದ ವೇದಮಂತ್ರಕ್ಕೆ ಬೇರೆ ರೀತಿಯಿಂದ ವ್ಯಾಖ್ಯಾನಮಾಡಿರುವುದೇ ಸಾಕ್ಷಿಯಾಗಿರುವುದು.

ಮತ್ತು ಇದೇ ಪರ್ವದ 8ನೆಯ ಸಂಧಿಯಲ್ಲಿ 132ನೆಯ ಪದ್ಯದಿಂದ 140ನೆಯ ಪದ್ಯದವರೆಗೂ ಹರಿದ್ವೇಷಿಗಳಾದ ದೈತ್ಯರಿಗೆ ನಿತ್ಯ ನರಕವೇ ಲಭಿಸುವುದು ಹೊರತು ಮೋಕ್ಷವು ದೊರಕುವುದಿಲ್ಲವೆಂದು ಹಿರಣ್ಯಕಶಿಪುವಿನ ಗತಿವಿಚಾರಾವಸರದಲ್ಲಿ ನಿರೂಪಿಸಿರುವನು. ಈ ವಿಷಯವು ಅದ್ವೈತಿಗಳಿಂದ ಅಂಗೀಕರಿಸಲ್ಪಟ್ಟುದುದಲ್ಲ. ಇದೇರೀತಿಯಾಗಿ ಅಲ್ಲಲ್ಲಿ ದ್ವೈತಸಿದ್ಧಾಂತ ವಿಷಯಗಳನ್ನು ನಿರೂಪಿಸಿರುವನು.

ಮತ್ತು ಈ ಪರ್ವದ 8ನೆಯ ಸಂಧಿಯಲ್ಲಿ ಪ್ರಹ್ಲಾದಹಿರಣ್ಯಕಶಿಪುಗಳ ವಿವಾದನಿರೂಪಣ ಪ್ರಕರಣದಲ್ಲಿ ಹಿರಣ್ಯಕಶಿಪುವು ತನ್ನನ್ನು ಬಿಟ್ಟು ದೇವರು ಬೇರೇ ಇಲ್ಲವೆಂದುದಕೆ—

. . . ಇಹಪರತ್ರಕೆ

ಭೇದಪಡುಹುವ ಶ್ರುತಿಗಳವುಂಟು ತತ್ತ್ವದಲಿ' (72 ಪ.)

ಎಂದು ಪಾರಮಾರ್ಥಿಕಭೇದಸಾಧನೆಯನ್ನು

'ಲಾಲಿಸುವ್ರೊಡದ್ವೈತಪಕ್ಷಕೆ

ಕಾಳು ನಿಮ್ಮಯ ಕರ್ಮಕಾಂಡವು

ಮೇಲೆ ನೀನೊದೆದು ಕಳಯ್ಯ . . . । 74 ಪ.

ಎಂದು ಅದ್ವೈತನಿರಾಕರಣವನ್ನು ವಿಶದವಾಗಿ ಮಾಡಿರುವನು. ಇದರಿಂದಲೂ ಇವನು ದ್ವೈತಿಯೆಂದೂ ಅದ್ವೈತಿಯಲ್ಲವೆಂದೂ ಹೇಳಬಹುದಾಗಿದೆ. ಈಗ ಉದಾಹರಿಸಿದ ವಾಕ್ಯಗಳಲ್ಲಿ ಪುಸ್ತಕಭೇದದಿಂದ ಪಾಠಭೇದಗಳೂ ದೊರೆಯುವುದಿಲ್ಲ. ಆದರೆ ಈ ಕವಿಯನ್ನು ದ್ವೈತಿಯೆಂದು ತೋರ್ಪಡಿಸುವುದಕ್ಕಾಗಿ ಇಂತಹ ವಾಕ್ಯಗಳನ್ನು ಹೊಸದಾಗಿ ರಚಿಸಿ ಕೆಲವರು ಮಧ್ಯಮಧ್ಯದಲ್ಲಿ ಸೇರಿಸಿರಬಹುದೆಂದು ಕೆಲವರು ಹೇಳಬಹುದು. ಹೀಗೆಯೇ ಮತ್ತೆ ಕೆಲವರು ಬೇರೇಮತದವನೆಂದು ತೋರ್ಪಡಿಸುವುದಕ್ಕಾಗಿ ಕವಿಯು ರಚಿಸಿದ ಗ್ರಂಥದಿಂದ ಇಂತಹ ಭಾಗಗಳನ್ನು ತೆಗೆದುಹಾಕಿ ಬೇರೆ ರೀತಿಯಾಗಿ ಪುಸ್ತಕಗಳನ್ನು ಬರೆದು ಕೊಂಡಿರುವುದಾಗಿಯೂ ಕೆಲವರು ಹೇಳಬಹುದಾಗಿದೆ.

ಈ ವಿವಾದವನ್ನು ಪರೀಕ್ಷಕರು ತಾವುತಾವೇ ವಿಚಾರಪೂರ್ವಕವಾಗಿ ಪರಿಹರಿಸಿಕೊಳ್ಳತಕ್ಕುದಾಗಿ ಇರುವುದರಿಂದ ನಾವು ಇರುವ ಸ್ಥಿತಿಯನ್ನು ಸೂಚಿಸಿರುವವೇ ಹೊರತು ಯಾವ ಪಕ್ಷವನ್ನು ನಿರ್ಧರಿಸಲು ಯತ್ನಿಸಿರುವುದಿಲ್ಲ.

ಈ ಕವಿಯು ಏನೂ ಓದಿದವನಲ್ಲದೆ ಇದ್ದು ದೇವತಾನುಗ್ರಹದಿಂದೇ ಗ್ರಂಥವನ್ನು ರಚಿಸಿರುವನೆಂದು ಹೇಳುವ ವಿಷಯದಲ್ಲಿ ಸ್ವಪ್ನ

ವಿಚಾರಮಾಡತಕ್ಕದ್ದಿದೆ. ಏನೂ ಓದಿದವನಲ್ಲವೆಂದು ಹೇಳುವುದಕ್ಕೆ ಆರಂಭದಲ್ಲಿ—

ಹಲಗೆ ಬಳಪವ ಹಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಹಿಡಿಯದಗ್ಗಳಿಕೆ |
ಬಳಸಿ ಬರೆಯಲು ಕಂಠಪತ್ರದ
ಉಲುಹು ಗೆಡದಗ್ಗಳಿಕೆ ಯೆಂಬೀ
ಬಲುಹು ಸಲುವುದು ವೀರನಾರಾಯಣನ ಕಿಂಕರಗೆ ||

ಎಂದು ಹೇಳಿಕೊಂಡಿರುವುದೇ ಸಾಧಕವೆಂದು ಹೇಳಬಹುದಷ್ಟೆ! ಸರಿಯಾಗಿ ವಿಚಾರಿಸಲಾಗಿ ಈ ಪದ್ಯದ ತಾತ್ಪರ್ಯವು ತನ್ನ ಸಕಲ ಸಾಮರ್ಥ್ಯವೂ ವೀರನಾರಾಯಣನ ಅನುಗ್ರಹದ ಫಲವೇ ಹೊರತು ತನ್ನದಲ್ಲವೆಂಬುದಾಗಿಯೇ ಇರುತ್ತದೆ. ಹೀಗಿರುವಲ್ಲಿ ಇವನು ಓದಿಕೊಂಡವನಲ್ಲವೆಂದು ಹೇಳುವುದಕ್ಕೆ ಏನೂ ಅವಕಾಶವಿರುವುದಿಲ್ಲ. 'ಹಲಗೆ ಬಳಪವ ಹಿಡಿಯದ ಅಗ್ಗಳಿಕೆ' ಎಂದರೆ ಅಕ್ಷರಾಭ್ಯಾಸ ಮಾಡಲಿಲ್ಲವೆಂದು ಅರ್ಥವಲ್ಲ. ಸಾಧಾರಣ ಕವಿಗಳಂತೆ ಮೊದಲು ಹಲಗೆಯ ಮೇಲೆ ಬರೆದುಕೊಂಡು ಅದು ಸರಿಯಾಗಿದೆಯೇ ಇಲ್ಲವೇ ಎಂದು ಯೋಚಿಸಿ ಸರಿಯಾಗಿದ್ದ ಪಕ್ಷದಲ್ಲಿ ಗ್ರಂಥದಲ್ಲಿ ಸೇರಿಸಿರುವಂತೆ ಈ ಕವಿಯು ಮೊದಲೇ ಬರೆದಿಟ್ಟುಕೊಂಡು ಆಲೋಚನೆ ಮಾಡಿ ಗ್ರಂಥರಚನೆಯನ್ನು ಮಾಡಿರುವವನಲ್ಲ ಆಆಕಾದಲ್ಲಿಯೇ ಸರಿಯಾಗಿ ವಿಷಯಗಳು ಸ್ಫುರಿಸಲು ಗ್ರಂಥವನ್ನು ರಚಿಸಿದನೆಂದು ಹೇಳಬೇಕು. ಈ ವಿಧವಾಗಿ ಗ್ರಂಥಕಾರರು ತಮ್ಮಲ್ಲಿರುವ ಅಸಾಧಾರಣಸಾಮರ್ಥ್ಯವನ್ನು ದೈವಾಯತ್ತವೆಂದು ತಾವಾಗಿ ಹೇಳಿಕೊಳ್ಳುವ ಪದ್ಧತಿ ಇರುವುದು. ಅಲ್ಲದೆ ಇತರರು ಗ್ರಂಥಕಾರರ ಸಾಮರ್ಥ್ಯವನ್ನು ಅದ್ಭುತವೆಂದು ಹೇಳುವುದಕ್ಕಾಗಿಯೂ ಹೀಗೆ ಹೇಳುವರೆಂಬುದು—

"उक्तं नो वक्ति भूयः क्वचिदपि लिखितं नैव निर्माष्टि"

ಇವೇ ಮೊದಲಾದ ಸಂಸ್ಕೃತ ಗ್ರಂಥಗಳನ್ನು ಪರಿಶೀಲಿಸಿದವರಿಗೆ ವಿಶದವು.

ಅಲ್ಲದೆ ಈತನ ಶೈಲಿಯನ್ನು ಪದಗುಂಭನವನ್ನು ತನ್ನ ಅಭಿಪ್ರಾಯವಂ ನಿರೂಪಿಸುವ ಭಂಗಿಯನ್ನು ಚೆನ್ನಾಗಿ ಪರಿಭಾವಿಸಲಾಗಿ, ಈ ಕವಿಯು ಸಂಸ್ಕೃತಕರ್ಣಾಟಕ ಭಾಷೆಗಳಲ್ಲಿ ಪಂಡಿತನೆಂದೇ ಹೇಳಬೇಕಾಗಿದೆ. ಈತನು ಕೆಲವು ಸಂಸ್ಕೃತ ಶ್ಲೋಕಗಳನ್ನು ಪರಿವರ್ತನೆಮಾಡಿ ಕೂಡ ಸೇರಿಸಿರುವನು. ಉದಾಹರಣೆಗಾಗಿ ಇದರಡಿಯಲ್ಲಿ ಕೆಲವು ಪದ್ಯಗಳು ಬರೆಯಲ್ಪಟ್ಟವೆ.

ಪೀಠಿಕಾಸಂಧಿಯಲ್ಲಿ—

"ಎರಡುತೋಳಿನ ವಿಷ್ಣು ಮುಖವೊಂ
ದರಲಿ ಮೆಱೆವ ಬ್ರಹ್ಮ ಣೊಸಲಲಿ
ವರನಯನವೊಂದಿಲ್ಲದಾ ಸನ್ನುತಪರಮಶಿವ ॥"

ಎಂದು ವ್ಯಾಸರ ವರ್ಣನೆಯು

'**अचतुर्वदनो ब्रह्मा द्विबाहुरपरो हरिः ।
अफाललोचनश्शंभुर्भगवान्बादरायणः ॥**'

ಎಂಬ ಪ್ರಾಚೀನಶ್ಲೋಕದ ಅಭಿಪ್ರಾಯವಾಗಿದೆ.

ಹೀಗೆಯೇ ಇದೇ ಪರ್ವದ ಆರನೆಯ ಸಂಧಿಯಲ್ಲಿ ಲಕ್ಷ್ಮೀಸ್ವಯಂವರಪ್ರಕರಣದ—

ಸರಸಿರುಹಸಂಭವನು ಬರ ಬರ
ಹಿರಿಯನತಿವೃದ್ಧಾಪ್ಯದಾತನು
ಪುರಹರನು ಭಸ್ಮಾಂಗಭಿಕ್ಷುಕನುರಗಭೂಷಣನು ।
ಸುರಶಿರೋಮಣಿ ಗರ್ವಿಯುಷ್ಣಾ
ಕರನು ದಿನಪತಿ ಇಂದು ಕ್ಷಯಕಳ
ತರಳ ವೈಶ್ವಾನರನು ವಂತಕನೀತ ನಿಷ್ಕರುಣಿ ॥ (43 ಪ.)

ಆತ ರಾಕ್ಷಸಯೋನಿ ನಿರುರುತಿ
ಈತನೇ ಜಡರಾಶಿಗಧಿಪತಿ

ವಾತ ಮಿಗೆ ಚಂಚಲನು ಯಕ್ಷನು ನೀತಿಬಾಹಿರನು।
ಈತ ಧನಪತಿ ಲುಬ್ಧಕನು ತಾ
ನೀತನುದ್ಧತ ನಾತ್ರಿಯಂಬಕ
ನೀತರೆಲೆ ಕಿಗ್ಗಿಯಿರಶ್ವಿನಿದೇವರಿವರೆಂದು॥ (44 ಪ.)

ಎಂಬ ಪದ್ಯಗಳು

एष ब्रह्मातिवृद्धस्तपति दिनपतिश्चंचलो मातरिश्वा
दिग्वासा नीलकंठस्त्रिदशपतिरसौ गर्वितः क्षीयतेब्जः॥
इत्थं देव्या विचिन्त्य भ्रमरकुलकलागीतशब्दप्रफुल्ला
दत्ता माला मुरारेः सुरतरुकुसुमालंकृता पातु युष्मान्॥

ಎಂಬ ಪ್ರಾಚೀನ ಶ್ಲೋಕದ ಛಾಯೆಯಾಗಿರುವುವು.

ಇದೇ ರೀತಿಯಾಗಿ ಅಲ್ಲಲ್ಲಿರುವುದು. ಇವುಗಳನ್ನು ಪರ್ಯಾಲೋಚಿಸಲಾಗಿ ಈ ಕವಿಯು ಭಾಷಾದ್ವಯದಲ್ಲಿಯೂ ವ್ಯಾಸಂಗಿಯೆಂದು ಬಹುದರ್ಶಿಯೆಂದು ಹೇಳಬೇಕು.

ಈ ಕವಿಯು ಕರ್ಣಾಟಕವ್ಯಾಕರಣಾದಿಗಳನ್ನು ಅನುಸರಿಸದೆ ಗ್ರಂಥವನ್ನು ರಚಿಸಿರುವುದರಿಂದ ಈ ಕವಿಯು ಓದಿಕೊಂಡವನಲ್ಲವೆಂದು ಒಂದು ವೇಳೆ ಊಹಿಸಬಹುದು. ಆದರೆ ಸುಲಭ ಶೈಲಿಯಿಂದ ರಚಿಸಲುದ್ದೇಶಿಸುವ ಕವಿಗಳು ಈಷಟ್ಪದಿಗಳಲ್ಲಿ ಧಾರಾಳವಾಗಿ ಅಕ್ಷರ ಸಂಖ್ಯಾದಿ ನಿಯಮವಿಲ್ಲದೆ, ಮತ್ತು ಸಾಮಾನ್ಯರಿಗೆ ಸುಬೋಧವಲ್ಲದ ಹಳಗನ್ನಡಪದಗಳನ್ನು ಹೆಚ್ಚಾಗಿ ಉಪಯೋಗಿಸದೆ, ಬಳಕೆಯಲ್ಲಿರುವ ಕನ್ನಡಪದಗಳಿಂದೇ ಗ್ರಂಥವನ್ನು ರಚಿಸುವ ಪದ್ಧತಿಯನ್ನವಲಂಬಿಸಿ ಇರುವನೆಂದೂ, ಇಂತಹ ಗ್ರಂಥಗಳಿಗೆ ಶಬ್ದಮಣ್ಯಾದಿವ್ಯಾಕರಣ ವಿರೋಧವು ದೂಷಣವಲ್ಲವೆಂದೂ ಪೀಠಿಕಾಸಂಚಿಕೆಯ (ಕನ್ನಡಸೆಕ್ಷರ್ 3ನೆಯ ನಂಬರಿನ) ಅವತರಣಿಕೆಯಲ್ಲಿ ವಿಶದವಾಗಿ ನಿರೂಪಿಸಲ್ಪಟ್ಟದೆ.

ಆದುದರಿಂದ ಇಷ್ಟುಮಾತ್ರದಿಂದಲೇ ವಿದ್ಯೆಯನ್ನು ಅಭ್ಯಾಸಮಾಡಿದವನಲ್ಲ ವೆಂದು ಹೇಳಲಾಗದು.

ಈ ಕವಿಯ ಜೀವಿತಕಾಲವು ಆವುದೆಂಬುದನ್ನು ಸರಿಯಾಗಿ ನಿಶ್ಚಯಿಸಲು ಈ ಕವಿಯ ಗ್ರಂಥದಿಂದ ಏನೂ ಸಾಧಕ ದೊರೆಯುವುದಿಲ್ಲ. ಆದರೆ ಕೆಲವರು ಕವಿಚರಿತ್ರವಿಮರ್ಶಕರು 1508—1530 ರವರೆಗೂ ಗಣನೆಗೆ ಬರುವ ಕ್ರೈಸ್ತವಾಬ್ದಗಳಲ್ಲಿ ಇದ್ದ ವಿಜಯನಗರದ ಕೃಷ್ಣರಾಯರ ಕಾಲದಲ್ಲಿ ಈ ಕವಿಯು ಈಗ್ರಂಥವನ್ನು ರಚಿಸಿರಬಹುದೆಂದು ಹೇಳುವರು. ಅಲ್ಲದೆ ಈ ಕವಿಯನ್ನು 1590ನೆಯ ಕ್ರೈಸ್ತವಾಬ್ದದಲ್ಲಿದ್ದ ಕುಮಾರವಾಲ್ಮೀಕಿಯು ತೊರವೆ ರಾಮಾಯಣದ ಕೊನೆಯಲ್ಲಿ—

ಸರಸವರ್ಣಕಕವಿಗಳೊಳು ಭಾ
ಸುರಕುಮಾರವ್ಯಾಸನೊಬ್ಬನು
ಪರಿಕಿಸುವೊಡಾನೊಬ್ಬ ಮಗುಪೆರತನೆಯ ವರ್ಣಕಕೆ ।
ವರಕುಮಾರವ್ಯಾಸನೊಬ್ಬನು
ಎರಡನೆಯಲಾನೊಬ್ಬ ಮಿಕ್ಕಿನ
ಬರಡು ಕವಿಗಳ ಲೆಕ್ಕಿಸುವನೇ ಕುಮಾರವಾಲ್ಮೀಕಿ ॥

ಎಂದು ಹೊಗಳಿರುವುದರಿಂದ ಆತನಿಗಿಂತಲೂ ಪ್ರಾಚೀನನೆಂದು ಹೇಳಬೇಕು.

ಈ ಭಾರತದ ದಶಪರ್ವಗಳು ಬೆಂಗಳೂರು ಮತ್ತು ಮಂಗಳೂರು ಸ್ಥಳಗಳಲ್ಲಿ ಮುದ್ರಿತವಾಗಿ ಪ್ರಚುರವಾಗಿರುವಾಗ ಹೊಸದಾಗಿ ಮುದ್ರಿಸಲು ಯತ್ನಿಸುವುದಕ್ಕೆ ಕಾರಣಗಳನ್ನು ಹೇಳಬೇಕಾಗಿದೆ.

ಮೇಲೆಕಂಡ ಸ್ಥಳಗಳಲ್ಲಿ ಮುದ್ರಿತವಾದ ಪ್ರತಿಗಳನ್ನು ನಮಗೆ ದೊರೆತಿರುವ ಭಾರತದ ಲಿಖಿತಪ್ರತಿಗಳೊಡನೆ ಹೋಲಿಸಿ ನೋಡುವಾಗ ಮುದ್ರಿತಪುಸ್ತಕಗಳಲ್ಲಿ ಕವಿರಚಿತಗ್ರಂಥವು ಸಂಪೂರ್ಣವಾಗಿ ಪ್ರಕಟವಾಗಿರುವುದಿಲ್ಲವೆಂದು ನಾವು ಇದರಡಿಯಲ್ಲಿ ತೋರಿಸುವ ರೀತಿಯಿಂದ ವ್ಯಕ್ತವಾಗುವುದು.

ಪರ್ವ	ಮುದ್ರಿತಪುಸ್ತಕದಲ್ಲಿ ಕಂಡು ಬರುವ ಸಂಧಿಗಳು	ಓಲೆಯಪುಸ್ತಕದಲ್ಲಿ ಕಂಡು ಬರುವ ಸಂಧಿಗಳು
ಆದಿಪರ್ವ	20 ಸಂಧಿಗಳು.	* 53 ಸಂಧಿಗಳು.
ಸಭಾಪರ್ವ	16 ,,	17 ,,
ಅರಣ್ಯಪರ್ವ	23 ,,	34 ,,
ಉದ್ಯೋಗಪರ್ವ	11 ,,	12 ,,
ಭೀಷ್ಮಪರ್ವ	9 ,,	31 ,,
ದ್ರೋಣಪರ್ವ	19 ,,	23 ,,

ಈ ರೀತಿಯಾಗಿ ಸಂಧಿವ್ಯತ್ಯಾಸವು ಇರುವುದಲ್ಲದೆ, ಕೆಲವು ಸಂಧಿಗಳಲ್ಲಿ ಪದ್ಯಗಳ ಸಂಖ್ಯೆಯಲ್ಲಿಯೂ ಸಹ ವ್ಯತ್ಯಾಸಗಳಿರುವುವು.

ಹೀಗೆ ಮುದ್ರಿತಪುಸ್ತಕಗಳಲ್ಲಿ ತೋರಿಬರುವ ಅಸಂಪೂರ್ಣತೆಯು ಭಾಷಾಭಿಮಾನಿಗಳಲ್ಲಿ ಬಹುಜನಗಳಿಗೆ ಸಾಮಾನ್ಯವಾಗಿ ಕಂಡುಬಂದುದರಿಂದ ಪ್ರಾಚೀನವಾದ ಪುಸ್ತಕಗಳನ್ನನುಸರಿಸಿ ಸಂಪೂರ್ಣವಾಗಿ ಸರಿಯಾದ ಮುದ್ರಣವು ಆವಶ್ಯಕವೆಂಬ ಅಭಿಪ್ರಾಯದಿಂದ ಈ ಪುಸ್ತಕದ ಮುದ್ರಣಕಾರ್ಯವು ಆರಂಭಿಸಲ್ಪಟ್ಟಿತು. ಇದರ ಶೋಧನಕ್ಕಾಗಿ ಉಪಯೋಗಿಸಿರುವ ಪುಸ್ತಕಗಳ ವಿವರಣೆ—

ಗುರ್ತು	ಗ॥ ಓ॥ ಲೈಬ್ರರಿ ನಂಬರು		ವಿಶೇಷ
ಕ.	ನಂ॥	70	ಸಮಗ್ರ. 1763ನೆಯ ಶಕವರ್ಷ॥ ಬರೆದುದು.
ಖ.	,,		ಸಮಗ್ರ. ಕ್ರೈಪ್ರಸ್ ಪ್ರೊಪ್ರೈಟರಿಂದ ಬಂದದ್ದು.
ಗ.	,,	218	ಅಸಮಗ್ರ.
ಘ.	,,	210	ಅಸಮಗ್ರ.
ಚ.	,,	251	ಸಮಗ್ರ.
ಛ.	,,	57	ಅಸಮಗ್ರ.
ಜ.	,,	2	ಪ್ರಾಯಿಕ ಸಮಗ್ರ. ಪುರಾತನಪ್ರತಿ.
ಝ.	,,	266	ಅಸಮಗ್ರ.
ಟ.	,,	205	ಸಮಗ್ರ.
ಠ.	,,	273	ಅಸಮಗ್ರ.

---

* ಉಪೋದ್ಘಾತಸಂಚಿಕೆಯಲ್ಲಿ ಪ್ರಕಟಿಸಿರುವ ಸಂಧಿಗಳು ಈ ಸಂಖ್ಯೆಯಲ್ಲಿ ಸೇರಿವೆ.

ಮೇಲೆ ತೋರಿಸಿರುವ ಪ್ರತಿಗಳಲ್ಲಿ ಮೂರು—ಅಂದರೆ ಚ, ಛ, ಟ, ಗುರ್ತುಗಳ—ಪುಸ್ತಕಗಳು ಮಾತ್ರ ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಮುದ್ರಿಸಲ್ಪಟ್ಟಿರುವ ಪುಸ್ತಕಗಳ ಪಾಠಕ್ಕೆ ಸರಿಹೋಗುವುವು. ಉಳಿದ 7 ಪ್ರತಿಗಳೂ ಈಗ ಪ್ರಚುರಪಡಿಸುತ್ತಿರುವ ಪಾಠಕ್ಕೆ ಆಧಾರಗಳಾಗಿವೆ. ಈ ಪುಸ್ತಕಗಳಲ್ಲಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪವಾಗಿ ಪಾಠಭೇದಗಳು ಕಂಡುಬರುವುವು. ಕೆಲವೆಡೆಯಲ್ಲಿ ಬೇರೆಬೇರೆ ಪದಗಳು ಮಾತ್ರವಿದ್ದು ಅರ್ಥಭೇದವಾಗದಂತಿರುವುದು, ಕೆಲವೆಡೆಗಳಲ್ಲಿ ಕೆಲವು ಪದ್ಯಗಳೇ ಹೆಚ್ಚಾಗಿರುವುವು. ಹಾಗೆ ಹೆಚ್ಚಾಗಿರುವ ಪದ್ಯಗಳು ಹೇಳಿದ ವಿಷಯಗಳನ್ನೇ ಹೇಳುವುವು. ಅವುಗಳಲ್ಲಿ ಅನೇಕ ಪುಸ್ತಕಗಳಲ್ಲಿ ಕಂಡು ಅತ್ಯಂತ ಸಂಗತವಾಗಿ ಇರುವುವನ್ನು ಪುಸ್ತಕಮಧ್ಯದಲ್ಲಿ ಸೇರಿಸಿ ಉಳಿದ ಏನೋ ಒಂದುರೀತಿಯಿಂದ ಹೊಂದಿಸಿಕೊಳ್ಳಬಹುದಾದ ಪುಸ್ತಕಾಂತರಪಾಠಗಳನ್ನು ಆಯಾಪುಟಗಳ ಕೆಳಭಾಗದಲ್ಲಿ ಪುಸ್ತಕದ ಚಿಹ್ನದೊಡನೆ ತೋರಿಸಿದೆ. ಹೇಗೂ ಹೊಂದದೇ ಇರುವ ಪಾಠಭೇದಗಳನ್ನು ಬಿಟ್ಟಿದೆ. ಮತ್ತು ಅಲ್ಲಲ್ಲಿ ಸಂಧಿಇಲ್ಲದೆಯೂ ಅಪಸಂಧಿಯಾಗಿಯೂ ಪಾಠಗಳು ಇರುವುವು. ಅಂತಹ ಸ್ಥಳಗಳಲ್ಲಿ ಯಾವುದಾದರೊಂದು ಪುಸ್ತಕದಲ್ಲಿ ಕಂಡು ಬಂದ ಯುಕ್ತಪಾಠವು ಅನುಸರಿಸಲ್ಪಟ್ಟಿದೆ. ಮತ್ತು ಪೂರ್ವೋತ್ತರಾನುಗುಣ್ಯದಿಂದ ಆಲೋಚಿಸಲಾಗಿ ಯಾವಪುಸ್ತಕಪಾಠವೂ ಹೊಂದದೇ ಇರುವ ಸ್ಥಳಗಳಲ್ಲಿ ಸಂಧರ್ಭವನ್ನು ಅನುಸರಿಸಿ ಬಹುಸ್ವಲ್ಪವಾಗಿ ಸ್ವತಂತ್ರಶೋಧನೆಯೂ ಮಾಡಲ್ಪಟ್ಟಿದೆ. ಅಂತು ನಿರ್ಮೂಲವಾಗಿಯೂ ಅನಾವಶ್ಯಕವಾಗಿಯೂ ಅಸಂಗತವಾಗಿಯೂ ಯಾವಶೋಧನೆಯೂ ಮಾಡಲ್ಪಟ್ಟಿರುವುದಿಲ್ಲ. ಪ್ರಾಮಾದಿಕದೋಷಗಳೇನಾದರೂ ಇದ್ದರೆ ಗುಣಜ್ಞರು ಕ್ಷಮಿಸಲರ್ಹವಾಗಿವೆ.

ಈಗ ಮುದ್ರಿಸಿರುವ ಪಾಠಕ್ರಮದಲ್ಲಿ ಸೇರಿದ ಮತ್ಸ್ಯಾದ್ಯವತಾರ ಚರಿತ್ರಭಾಗವು ಮತ್ತು ಐರಾವತದ ಕಥೆಯು ಸಂಸ್ಕೃತಮೂಲಭಾರತದಲ್ಲಿ ಇಲ್ಲವಾದುದರಿಂದ ಈ ಭಾಗದ ಗ್ರಂಥಗಳು ಕುಮಾರವ್ಯಾಸಕೃತಿಯಲ್ಲಿ ಸೇರಲರ್ಹವೇ ಅಲ್ಲವೆ? ಎಂಬುದು ವಿಚಾರಕ್ಕೆ ತಕ್ಕ ವಿಷಯ

ವಾಗಿದೆ. ಇದರ ನಿರ್ಧಾರಣಕ್ಕಾಗಿ ಸಂಸ್ಕೃತಭಾರತಸ್ಥಿತಿಯನ್ನು ಸ್ವಲ್ಪ ವಾಗಿ ಹೇಳಬೇಕಾಗಿದೆ. ಮತತ್ರಯಭಾಷ್ಯಕಾರರಲ್ಲಿ ದ್ವೈತಭಾಷ್ಯ ಕಾರರೊಬ್ಬರೆ ಭಾರತದ ವಿಷಯವನ್ನು ವಿಚಾರ ಮಾಡಿದವರು. ಅವರು ಸ್ವತಂತ್ರವಾಗಿ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವೆಂಬ ಗ್ರಂಥ ವನ್ನು ರಚಿಸಿರುವರು. ಭಾರತಕ್ಕೆ ಪದಾರ್ಥಕಥನಪೂರ್ವಕ ವ್ಯಾಖ್ಯಾನ ವನ್ನು ಮಾಡದೆ ತಾತ್ಪರ್ಯನಿರ್ಣಯವನ್ನು ಮಾಡುವುದಕ್ಕೆ ಕಾರಣ ವನ್ನು ಹೇಳುವಾಗ—

क्वचिद्ग्रंथान् प्रक्षिपंति क्वचिदंतरितानपि ।
कुर्युः क्वचिच्च व्यत्यासं प्रमादात्क्वचिदन्यथा ॥
अनुत्सन्ना अपि ग्रंथा व्याकुला इति सर्वशः ।
उत्सन्नाः प्रायशस्सर्वे कोट्यंशोपि न वर्तते ॥
ग्रंथोप्येवं विलुलितः .. .. ..
देशे देशे तथा ग्रंथान् दृष्ट्वा चैव पृथग्विधान् ॥

ಎಂಬ ಭಾಗದಿಂದ ಅವರ ಕಾಲದಲ್ಲಿ ಭಾರತಪುಸ್ತಕಗಳು ಹೇಗೆ ಇದ್ದವು ಎಂಬ ವಿಷಯವನ್ನು ಹೇಳಿರುವರು. ಇದರಿಂದ ಅವರ ಕಾಲದಲ್ಲಿಯೇ ಅಂದರೆ ಸುಮಾರು ಈಗ್ಗೆ 800 ವರ್ಷಗಳಿಗೆ ಹಿಂದೆ ಭಾರತಗ್ರಂಥದಲ್ಲಿ ಅನೇಕ ಅಧಿಕಭಾಗಗಳು ಸೇರಿದ್ದುವೆಂದೂ ಇದ್ದ ಭಾಗಗಳು ಅಧಿಕ ವಾಗಿ ಹೋಗಿದ್ದುವೆಂದೂ ಒಂದೊಂದುಮನೆಯಲ್ಲಿರುವ ಪುಸ್ತಕಗಳ ಪಾಠವೂ ಒಂದೇ ರೀತಿಯಾಗಿರಲಿಲ್ಲವೆಂದೂ ವ್ಯಕ್ತವಾಗುತ್ತದೆ. ಅಲ್ಲದೆ ಈಗ ಮದ್ರಾಸು ಬೊಂಬಾಯಿ ಮೊದಲಾದ ಸ್ಥಳಗಳಲ್ಲಿ ಪ್ರಕಟಿಸಲ್ಪಟ್ಟಿ ರುವ ಭಾರತಗ್ರಂಥಗಳಲ್ಲಿಯೂ ಪಾಠಭೇದವು ಹೆಚ್ಚಾಗಿ ಕಂಡು ಬರು ತ್ತದೆ. ಭಾರತಗ್ರಂಥದ ಸಂಖ್ಯೆಯು ಸಪಾದಲಕ್ಷವೆಂದು ಪ್ರಸಿದ್ಧಿ ಇರುವುದು. ಇಷ್ಟು ಪರಿಮಾಣವುಳ್ಳ ಭಾರತದಲ್ಲಿ ಮತ್ಸ್ಯಾದ್ಯವತಾರ ಚರಿತ್ರಗಳನ್ನು ನಿರೂಪಿಸಲಿಲ್ಲವೆಂದು ಹೇಳುವುದು ಯುಕ್ತವಾಗಿ ತೋರು ವುದಿಲ್ಲ. ಮತ್ತು ಮೇಲೆ ತೋರಿಸಿದ ಮಹಾಭಾರತತಾತ್ಪರ್ಯನಿರ್ಣ

ಯವೆಂಬ ಗ್ರಂಥದಲ್ಲಿ ದಶಾವತಾರಚರಿತ್ರೆಯನ್ನು ನಿರೂಪಿಸಿರುವರು. ಆದುದರಿಂದ ಈಕವಿಗೆ ದೊರೆತ ಭಾರತಪುಸ್ತಕದಲ್ಲಿ ಮತ್ಸ್ಯಾದ್ಯವತಾರ ಗಳುಳ್ಳಭಾಗವೂ ಇತ್ತೆಂದೂ, ಅದನ್ನನುಸರಿಸಿ ಆಚರಿತ್ರಗಳನ್ನು ಈ ಕವಿಯೇ ರಚಿಸಿರುವನೆಂದು ಹೇಳುವುದು ಯುಕ್ತವಾಗಿದೆ. ಅಲ್ಲದೆ ಮೇಲೆ ತೋರಿಸಿರುವ ಪುರಾತನವಾದ ಬಹುಪುಸ್ತಕಗಳಲ್ಲಿ ಈಭಾಗಗಳೆಲ್ಲವೂ ಇವೆ. ಆದುದರಿಂದ ಈಭಾಗಗಳನ್ನು ಬಿಡುವುದು ಯುಕ್ತವಲ್ಲವೆಂದು ಬಹುಪುಸ್ತಕಗಳನ್ನನುಸರಿಸಿ ಶೋಧನಪೂರ್ವಕಮುದ್ರಣವು ನಡೆದಿರು ತ್ತದೆ. ಆದುದರಿಂದ ಈ ವಿಷಯದಲ್ಲಿ ಗುಣಗ್ರಾಹಿಗಳು ಅಭಿಜ್ಞರೂ ಆದ ವರೆಲ್ಲರೂ ಸಂತೋಷಿಸುವರೆಂದು ನಂಬಿದೆ.

ವಿ ಷ ಯ ಸೂ ಚಿ ಕೆ .

ವಿಷಯ

೧ನೆಯ ಸಂಧಿ— ಪುಟ

ದೇವತಾಸ್ತುತಿಗಳು 1

ಕವಿಪಂಡಿತಮೊದಲಾದವರನ್ನು ಪ್ರಾರ್ಥಿಸಿ ತಾನು ರಚಿಸುವುದನ್ನು ತಿಳಿಸುವಿಕೆ 2

ಕವಿಯು ತನ್ನ ಸಾಮರ್ಥ್ಯವನ್ನು ಹೇಳಿಕೊಳ್ಳುವಿಕೆ 6

ಭಾರತಮಾಹಾತ್ಮ್ಯಕಥನ 9

೨ನೆಯ ಸಂಧಿ—

ಸೂತರು ಬರಲು ಶೌನಕಾದಿಗಳು ಅವರನ್ನು ಸ್ತುತಿಸುವಿಕೆ 9

ಸೂತರ ಪ್ರತಿವಚನ 10

ತಾವು ಹೇಳುವ ಕಥೆಯು ಸಕಲಪಾಪಹರವು ಪುಣ್ಯಕರವು .... ,,

೩ನೆಯ ಸಂಧಿ—

ಜನಮೇಜಯನು ರಾಜ್ಯರಕ್ಷಣಮಾಡುವಾಗ ವೇದವ್ಯಾಸರ ಆಗಮನ 14

ವೇದವ್ಯಾಸರು ಮುಂದೆ ಬರುವ ತೊಂದರೆಯನ್ನು ಹೇಳುವಿಕೆ 15

ವೇದವ್ಯಾಸರು ಹೇಳಿದಂತೆ ಹಯವು ಬರಲು ಅದನ್ನು ಲಾಯದಲ್ಲಿ ಕಟ್ಟುವಿಕೆ 17

ರಾಜನು ಕುದುರೆಯ ಮೇಲೆ ಏರಲು ಅದು ಮಂದರಾಚಲಕೆ ತಂದು ಬಿಡುವಿಕೆ 18

ಮಂದರಾಚಲದಲ್ಲಿ ಶಾಪದಿಂದ ಮನುಷ್ಯಳಾಗಿದ್ದ ದೇವಸ್ತ್ರೀಯನ್ನು ನೋಡಿ ಆಕೆಯನ್ನು ಅರಮನೆಗೆ ಕರೆದುಕೊಂಡು ಹೋಗುವಿಕೆ .... ,,

ಮಕ್ಕಳಿಲ್ಲವೆಂದು ಪುತ್ರಕಾಮೇಷ್ಟಿಯನ್ನು ಮಾಡುವಿಕೆ 19

ಬಳಿಕ ರಾಜನು ಪೂರ್ಣಪಾತ್ರೆಯಲ್ಲಿರತಕ್ಕ ಜಲವನ್ನು ಮುಟ್ಟಲು ಋತ್ವಿಜರು ಸಾಯುವಿಕೆ 21

ರಾಜನಿಗೆ ಬ್ರಹ್ಮಹತ್ಯ ಬಂತೆಂದು ಪುರೋಹಿತರು ಹೇಳುವಿಕೆ 22

ವಿಷಯ	ಪುಟ
ಬ್ರಹ್ಮಹತ್ಯೆ ಹೋಗಲು ಉಪಾಯವೇನೆಂದು ಕೇಳಲು ಭಾರತವಂ ಕೇಳೆಂದು ವ್ಯಾಸರ ಉಪದೇಶ	23
ಫಲಕಥನ	24
೪ನೆಯ ಸಂಧಿ—	
ಮನುವು ಅರ್ಘ್ಯವನ್ನು ಕೊಡುವಾಗ ಮೀನು ಬರಲು ಅದಕ್ಕೆ ಅದರ ಪ್ರಾರ್ಥನೆಯ ಪ್ರಕಾರ ಸ್ಥಳಗಳನ್ನು ಕೊಡುವಿಕೆ	25
ಆಗ ಪ್ರಾಪ್ತವಾದ ಪ್ರಳಯದಲ್ಲಿ ಮತ್ಸ್ಯರೂಪನಾದ ಹರಿಯು ಮನುವನ್ನು ಕಾಪಾಡುವಿಕೆ	27
ಬ್ರಹ್ಮದೇವರ ದಿನಮಾನಾದಿಕಥನ	28
ಆಗ ವೇದವೆಲ್ಲವು ಬ್ರಹ್ಮನಲ್ಲಿರುವಾಗ ತಮನೆಂಬ ದೈತ್ಯನು ಅದನ್ನು ಅಪಹರಿಸುವಿಕೆ	29
ಅಕ್ರಮವಾಗಿ ವೇದವನ್ನು ಪಠಿಸುವರಿಗೆ ಅನರ್ಥ	,,
ವೇದಾಭಿಮಾನಿದೇವತೆಗಳು ತಮನಿಂದ ನಮ್ಮನ್ನು ಬಿಡಿಸೆಂದು ಹರಿಯನ್ನು ಮರೆಹೊಗುವಿಕೆ	30
ವೇದಾಭಿಮಾನಿಗಳ ಮೊರೆಯನ್ನು ಕೇಳಿ ತಮನನ್ನು ಸಂಹರಿಸಲು ಮನಸ್ಸನ್ನು ಮಾಡುವಿಕೆ	31
ಮತ್ಸ್ಯಗಳ ಪರಿಮಾಣಕಥನ	32
ಮತ್ಸ್ಯಾವತಾರನಾದ ಹರಿಯು ಬಾಲದ ಪೆಟ್ಟಿನಿಂದ ತಮನು ಸಾಯುವಿಕೆ	33
ವೇದಾಭಿಮಾನಿಗಳು ಹರಿಯನ್ನು ಸ್ತುತಿಸುವಿಕೆ	,,
ವೇದಗಳನ್ನು ಬ್ರಹ್ಮನಿಗೆ ಕೊಡಲು ಪೂರ್ವದಂತೆ ಪ್ರಪಂಚವನ್ನು ಸೃಜಿಸಿ ಸರ್ವಧರ್ಮಗಳನ್ನು ನಡೆಸುವಿಕೆ	34
೫ನೆಯ ಸಂಧಿ—	
ಜನಮೇಜಯನನ್ನು ಕುರಿತು ಸೃಷ್ಟಿಕ್ರಮವನ್ನು ಹೇಳಲಾರಂಭಿಸುವಿಕೆ	36
ಸೃಷ್ಟಿಕ್ರಮದಲ್ಲಿ ಬ್ರಹ್ಮಾದಿಗಳ ಉತ್ಪತ್ತಿ	,,
ದೇವತೆಗಳ ಸತಿಯರ ಸೃಷ್ಟಿ	39
ಬಳಿಕ ಋಷಿಗಳ ಸೃಷ್ಟಿಯನ್ನು ಹೇಳುವಿಕೆ	,,

ವಿಷಯ.		ಪುಟ

ದೈತ್ಯರಿಗೆ ನಿರ್ಮಿಷ್ಟದಂತೆ ಜೀವಿಸುವುದೆಂದು ಬ್ರಹ್ಮನ ಅಪ್ಪಣೆ 41

ಕದ್ರುವು ವಿನತೆಯನ್ನು ಸುರಪತಿಯ ಕುದುರೆಯು ಬಿಳಿದೊ ಕರಿದೋ ಎಂದು ಕೇಳುವಿಕೆ 46

ಬಿಳಿದೆಂದು ಹೇಳಿದ್ದರಿಂದ ವಿನತೆಯು ದಾಸಿಯಾಗುವಿಕೆ 48

ಗರುಡನು ತಾಯಿಯ ಅಪ್ಪಣೆಯಿಂದ ಕದ್ರುವಿನ ಮನೆಗೆ ಹೋಗಲು ಅಮೃತವನ್ನು ಅಪೇಕ್ಷಿಸುವಿಕೆ 48

ಅಮೃತವಂ ತಂದು ಕೊಟ್ಟು ತಾಯ ದಾಸ್ಯವನ್ನು ಬಿಡಿಸುವಿಕೆ 50

ಇಂದ್ರನು ಸಪರಿವಾರನಾಗಿ ಬರುವಾಗ ದೂರ್ವಾಸರ ದರ್ಶನ 51

ದೂರ್ವಾಸರು ಕೊಟ್ಟ ಮಾಲಿಕೆಯನ್ನು ತಾನು ಧರಿಸದೆ ಐರಾವತಕ್ಕೆ ಹಾಕಲು ದೂರ್ವಾಸರ ಕೋಪ 52

ಇಂದ್ರನಿಗೆ ದೂರ್ವಾಸಶಾಪದಿಂದ ದಾರಿದ್ಯ ಪ್ರಾಪ್ತಿ ... 53

ಕೆಲವು ಕಾಲ ಕಳೆಯಲು ದೇವತೆಗಳು ಹರಿಯನ್ನು ಪ್ರಾರ್ಥಿಸುವಿಕೆ .... ,,

ಬೃಹಸ್ಪತ್ಯಾಚಾರ್ಯರನ್ನು ಕರೆದು ಶೋಣಿತಪುರಕ್ಕೆ ಕಳುಹಿಸುವಿಕೆ .... ,,

ಅಲ್ಲಿ ಶುಕ್ರಾಚಾರ್ಯರ ಆದರ 54

ಅಂಧಾಸುರನ ಸಭೆ 57

ಗುರುವು ಮಂತ್ರಾಕ್ಷತೆ ಕೊಡಲು ಹರಿಯ ಸ್ಥಿತಿಯನ್ನು ಕೇಳುವಿಕೆ 58

ಅಂಧಾಸುರನು ಹರಿಯ ಬಳಿ ಬರುವಿಕೆ 59

ದೇವದೈತ್ಯರು ಕೂಡಿ ಮಂದರಪರ್ವತವನ್ನು ಕೀಳುವಿಕೆ 60

ಸಮುದ್ರದಲ್ಲಿ ಮಂದರವಿಟ್ಟು ದೇವದೈತ್ಯರು ಕಡೆಯುವಿಕೆ 62

ಅಲ್ಲಿ ಐರಾವತ ಮೊದಲಾದವುಗಳ ಜನನ 63

ಹುಟ್ಟಿದ ಅಮೃತವನ್ನು ದೈತ್ಯರು ಶಿವನ ಬಳಿ ಕೊಡುವಿಕೆ 64

ಅಮೃತವನ್ನು ಯಾರು ಬಡಿಸಬೇಕೆಂಬ ವಿಚಾರ 65

ದೇವದೈತ್ಯರಿಗೆ ಅಮೃತವಂ ಕೊಡಲು ಬ್ರಹ್ಮನ ಪ್ರಾರ್ಥನೆ 66

ರಾಹುಕೇತುಗಳು ಸುರರ ಸಂಘದಲ್ಲಿ ಬರುವಿಕೆ 67

ಅಮೃತವನ್ನುಂಡ ರಾಹುಕೇತುಗಳ ಖಂಡನ 68

೬ನೆಯ ಸಂಧಿ—

ಋಷಿಗಳ ಮನೆಗೆ ಶಿವನು ಬರುವಿಕೆ 69

ವಿಷಯ	ಪುಟ
ಶಿವನು ಹಿಂತಿರುಗಿ ಹೋಗೆ ಬಾಲರ ಕಾಟದಿಂದ ಶಿವನು ಶಪಿಸಲು ಆಶ್ರಮದಹನ	70
ಶಾಪದಿಂದ ಶಿವದೇಹವು ಉರಿಯುವಾಗ ಕಾಮಧೇನುವು ಹಾಲ ಕರೆಯಲು ಕ್ಷೀರಸಮುದ್ರೋತ್ಪತ್ತಿ	71
ಶ್ವೇತದ್ವೀಪದಧಿಸಮುದ್ರಾದಿಗಳ ಜನನ	72
ದೇವದೈತ್ಯರನ್ನು ಕುರಿತು ಹರಿಹರಬ್ರಹ್ಮರ ಸಮಾಧಾನ	73
ತಿರುಗಿ ಸಮುದ್ರ ಕಡೆಯುವ ಪ್ರಯತ್ನ	74
ವಿಷವು ಹುಟ್ಟಲು ವಾಯುವು ನೀರಸಮಾಡಿ ಶಿವನಿಗೆ ಕೊಡುವಿಕೆ	,,
ಶಿವನು ವಿಷವನ್ನು ಕುಡಿದು ಸರ್ವರನ್ನು ಬದುಕಿಸುವಿಕೆ ...	75
ಸಿಡಿದ ವಿಷದಿಂದ ದುಷ್ಟಜಂತುಗಳ ಜನನ	76
ತಿರುಗಿ ದೇವದೈತ್ಯರ ಯುದ್ಧ	,,
ದೈತ್ಯರು ಸೋತು ಬೇರೆಸ್ಥಳಗಳಿಗೆ ಹೋಗುವಿಕೆ	77
ಮೃತರಾದ ದೈತ್ಯರ ಪುನರ್ಜನ್ಮ	78
ಸಮುದ್ರದಲ್ಲಿ ಹುಟ್ಟಿದ ಪದಾರ್ಥಗಳನ್ನು ದೇವತೆಗಳಿಗೆ ಹಂಚುವಿಕೆ	79
ಲಕ್ಷ್ಮಿಯು ವಿಷ್ಣುವನ್ನು ವರಿಸುವಿಕೆ	80
ಬಳಿಕ ನಾರಾಯಣನಿಗೆ ತನ್ನ ಸ್ಥಾನಗಮನ	82
ಇಂದ್ರನು ತನ್ನ ಪಟ್ಟಣಕ್ಕೆ ಹೋಗುವಿಕೆ	83
ವಿಷ್ಣುಮಾಹಾತ್ಮ್ಯಕಥನ	,,
ನೆಯ ಸಂಧಿ—	
ವಿಷ್ಣುವಿನ ವೈಭವ ವರ್ಣನ	84
ಜಯವಿಜಯರಿಗೆ ಸನಕಾದಿಗಳ ಶಾಪ	86
ಅವರು ಹಿರಣ್ಯಾಕ್ಷಹಿರಣ್ಯಕಶಿಪುಗಳೆಂದು ಹುಟ್ಟುವಿಕೆ	87
ಅವರ ಪರಾಕ್ರಮಕಥನ	88
ಹೀಗೆ ಮಾಡಬೇಡಿರೆಂದು ಕಶ್ಯಪರ ಬುದ್ಧಿವಾದ	90
ಅದಕ್ಕೆ ವಿರುದ್ಧವಾಗಲು ಅವರ ಪರಿತಾಪ	,,
ನಾರದರು ಬರಲು ಶೂರರು ಇದ್ದಾರೆ ಯೆಂದು ಪ್ರಶ್ನೆ	91
ಪದ್ಮನಾಭನನ್ನು ಹೇಳಲು ಆತನು ಯುದ್ಧಕ್ಕೆ ಬರುವ ಉಪಾಯವನ್ನು ಚಿಂತಿಸುವಿಕೆ	,,
ದೇವತೆಗಳು ಹರಿಯನ್ನು ಮರೆಹೊಗುವಿಕೆ	94

ವಿಷಯ	ಪುಟ
ವರಾಹಾವತಾರ	95
ವರಾಹ ಹಿರಣ್ಯಾಕ್ಷರ ಯುದ್ಧ	96
ಹಿರಣ್ಯಾಕ್ಷಸಂಹಾರ	98
ಹಿರಣ್ಯಾಕ್ಷನಿಗೆ ಪುತ್ರಜನನ	,,
ಭೂದೇವೀಕೃತಸ್ತೋತ್ರ	99
ನರಕಾಸುರನಿಗೆ ಪ್ರಜ್ಞಾತಿಪುರದಾನ	102
ಹರಿಯು ತನ್ನ ಮನೆಗೆ ಬರುವಿಕೆ	,,
ದೇವತೆಗಳಿಗೆ ಅಭಯದಾನ	103

ನೆಯ ಸಂಧಿ—

ಹಿರಣ್ಯಕಶಿಪುವಿನ ತಪಸ್ಸು	104
ಬ್ರಹ್ಮನ ಬಳಿಗೆ ಹೋಗೆಂದು ಹರನ ಅಪ್ಪಣೆ	105
ಆವ ರೀತಿಯಿಂದೂ ಮರಣಬಾರದಂತೆ ಪ್ರಾರ್ಥನೆ	,,
ಹಿರಣ್ಯಕಶಿಪುವಿಗೆ ವರಲಾಭ	106
ನಾರದರು ಗರ್ಭದಲ್ಲಿದ್ದ ಶಿಶುವಿನ ಲಕ್ಷಣವನ್ನು ಹೇಳುವಿಕೆ	107
ಸೆರೆಯಿಂದ ಬಿಡಿಸಿ ಆಕೆಯನ್ನು ರತ್ನಪುರಿಗೆ ಕಳುಹಿಸುವಿಕೆ	108
ವರವನ್ನು ಪಡೆದು ನಾರಾಯಣನ ಬಳಿ ಯುದ್ಧಕ್ಕಾಗಿ ಬರುವಿಕೆ	,,
ಹಿರಣ್ಯಕಶಿಪುವಿಗೆ ಸ್ವಪುರಾಗಮನ	110
ತನ್ನ ಮಗನನ್ನು ಹರಿಭಕ್ತನೆಂದು ತಿಳಿಯುವಿಕೆ	,,
ಹುಟ್ಟಿದ ಎಂಟು ಜನಗಳ ಹೆಸರುಗಳು	112
ಹರಿಯನ್ನು ನೆನೆಯಬೇಡವೆಂದು ತಂದೆಯ ಅಪ್ಪಣೆ	113
ಹರಿಯೇ ಸಂರಕ್ಷಕನೆಂದು ಮಗನ ಉತ್ತರ	,,
ಮಗನನ್ನು ಸಂಹರಿಸಲು ನಾನಾವಿಧೋಪಾಯ	114
ಮಗನ ಮರಣಕ್ಕಾಗಿ ಹೋಮವನ್ನು ಮಾಡುವಿಕೆ	115
ಯಾವ ಉಪಾಯದಿಂದಲೂ ಸಾಯದೇ ಇರಲು ಸಮುದ್ರದಲ್ಲಿ ಹಾಕುವಿಕೆ	117
ಸಮುದ್ರದಿಂದೆದ್ದು ರಾಜಗೃಹಕ್ಕೆ ಬರುವಿಕೆ	119
ಹರಿಯೇ ತನಗೆ ಬಂಧುವೆಂದು ಪ್ರಲ್ಹಾದನ ವಚನ	120
ಹರಿಯನ್ನು ಪ್ರಲ್ಹಾದನು ಸ್ತುತಿಸುತ್ತಾ ಬರುವಿಕೆ ...	121

ವಿಷಯ				ಪುಟ
ಹರಿಯು ನೆನೆಯ ಬೇಡವೆಂದು ತಂದೆಯ ಅಪ್ಪಣೆ			....	122
ಹರಿಯ ವಿಷಯದಲ್ಲಿ ತಂದೆಮಕ್ಕಳ ವಿವಾದ		....	...	,,
ಕೋಪದಿಂದ ಹರಿಯನ್ನು ತೋರಿಸೆಂದು ತಂದೆಯ ವಚನ			....	123
ಪ್ರಹ್ಲಾದಕೃತಸ್ತುತಿ	....	....	....	126
ಹಿರಣ್ಯಕಶಿಪುವಿನ ಕೋಪ	....	....	....	128
ನೃಸಿಂಹಾವತಾರ	....	....	....	129
ನರಸಿಂಹಮೂರ್ತಿಯು ಮೃಗವೆಂದು ಹಿರಣ್ಯಕಶಿಪುವಿನ ಅಪಹಾಸ			....	,,
ನರಸಿಂಹದೇವರು ಮತ್ತು ಹಿರಣ್ಯಕಶಿಪುಗಳ ಸಂವಾದ			....	130
ಯುದ್ಧಕ್ಕಾಗಿ ದೈತ್ಯಾಗಮನ	....	....	...	131
ದೈತ್ಯರ ಸಂಹಾರ	....	....	....	132
ಹಿರಣ್ಯಕಶಿಪುಸಂಹಾರ	....	....	....	134
ಬ್ರಹ್ಮಾದಿಗಳ ಸ್ತುತಿ	....	....	....	,,
ವರವ ಬೇಡು ಎಂದು ನರಹರಿಯ ಅಪ್ಪಣೆ		....	....	135
ಹರಿದ್ವೇಷಿಗಳಿಗೆ ಮೋಕ್ಷಾಭಾವಕಥನ		....	....	138

೯ನೆಯ ಸಂಧಿ—

ಶಂಭುವು ಶರಭಾಕಾರನಾಗಿ ಯುದ್ಧಕ್ಕೆ ಬರುವಿಕೆ			....	143
ಶರಭನ ಪರಾಜಯ	....	....	....	143
ರುದ್ರಕೃತಸ್ತುತಿ	....	....	....	144
ದತ್ತಾತ್ರೇಯಾವತಾರ	....	....	....	146
ಬಲಿಚಕ್ರವರ್ತಿಯ ಜನನ	....	....	...	147
ಬಲಿಚಕ್ರವರ್ತಿಯ ದಿಗ್ವಿಜಯ		....	....	,,
ಬಲಿಚಕ್ರವರ್ತಿಯು ಇಂದ್ರನನ್ನು ಹಿಡಿಯುವಿಕೆ			....	150

೧೦ನೆಯ ಸಂಧಿ—

ಅದಿತಿಕಶ್ಯಪರ ತಪಸ್ಸು	....	....	....	152
ವಾಮನಾವತಾರ	...	....	....	,,
ಬಲಿಯ ನಗರಿಗೆ ವಾಮನದೇವರ ಆಗಮನ		....	....	154
ಮೂರಡಿಭೂಮಿಯ ಕೇಳಿದುದಕೆ ಪಶ್ಚಾತ್ತಾಪ		....	....	156
ಬಲಿಚಕ್ರವರ್ತಿಯ ವಿತಳಪ್ರವೇಶ		....	....	158

ವಿಷಯ	ಪುಟ
೧೧ನೆಯ ಸಂಧಿ—	
ಲೋಕವಿಸ್ತಾರಪ್ರಶ್ನೆ ಮತ್ತು ಉತ್ತರ	160
೧೨ನೆಯ ಸಂಧಿ—	
ಜನಮೇಜಯನ ಪೌರ್ವಿಕರ ವೃತ್ತಾಂತ	168
ಅಷ್ಟವಸುಗಳಿಗೆ ಶಾಪಕಾರಣ	171
ಗಂಗಾವರುಣರಿಗೆ ಮಾನುಷಜನ್ಮಕಾರಣಪ್ರಶ್ನೆ	174
ಬ್ರಹ್ಮಸಭೆಗೆ ಭಾಗೀರಥಿಯು ಆಗಮನ	,,
ಗಂಗೆಯ ವಸ್ತ್ರವು ಜಾರಲು ವರುಣನು ನೋಡುವಿಕೆ	,,
ಆಗ ವರುಣನಿಗೆ ಮನುಷ್ಯನಾಗೆಂದು ಬ್ರಹ್ಮಶಾಪ	175
ವರುಣನು ಶಂತನುವಾಗಿ ಜನಿಸುವಿಕೆ	176
ಶಂತನುವಿಗೆ ಗಂಗಾದರ್ಶನ	177
ವಿವಾಹವಾಗುವಿಕೆ	,,
ಈ ಶಿಶುವನ್ನು ಕೊಲ್ಲಬೇಡವೆಂದು ಶಂತನುವಚನ	178
ಗಂಗೆಯು ಭೀಷ್ಮನನ್ನು ಶಂತನುವಿಗೆ ಒಪ್ಪಿಸುವಿಕೆ....	
೧೩ನೆಯ ಸಂಧಿ—	
ಚಂದ್ರವಂಶದವರ ಮಹಿಮೆ	
ಉಪರಿಚರವಸುವಿಗೆ ಪುತ್ರ ಮತ್ತು ಪುತ್ರಿಯ ಜನನ ...	181
ದಾಶರಾಜನು ಮೀನನ್ನು ತಂದು ಕಡಿಯಲು ಮಕ್ಕಳು ಸಿಕ್ಕುವಿಕೆ ...	182
ಗಂಡುಮಗುವನ್ನು ಅರಸಗೆ ಕೊಟ್ಟು ಹೆಂಗೂಸನ್ನು ಸಂರಕ್ಷಿಸುವಿಕೆ....	,,
ಆ ಕನ್ಯೆಯಲ್ಲಿ ಪರಾಶರರಿಂದ ವ್ಯಾಸೋತ್ಪತ್ತಿ	183
ಆಗ ಶಂತನುವಿಗೆ ಸತ್ಯವತಿಯ ದರ್ಶನ	185
ಸತ್ಯವತಿಯು ಒಪ್ಪದಿರಲು ಚಿಂತೆಯಿಂದಿರುವಿಕೆ	187
ಸತ್ಯವತಿಯನ್ನು ತಂದೆಗೆ ಭೀಷ್ಮನು ವಿವಾಹ ಮಾಡುವಿಕೆ	188
ಶಂತನುವಿಗೆ ಚಿತ್ರಾಂಗದವಿಚಿತ್ರವೀರ್ಯರ ಜನನ	189
ಚಿತ್ರಾಂಗದನು ಮೃತನಾಗಲು ವಿಚಿತ್ರವೀರ್ಯನ ರಾಜ್ಯಪರಿಪಾಲನ ...	,,
ವಿಚಿತ್ರವೀರ್ಯನ ವಿವಾಹ	190
ಅಂಬಾಭೀಷ್ಮರ ಕಲಹ	,,
ಪರಶುರಾಮರನ್ನು ಪ್ರಾರ್ಥಿಸೆಂದು ಅಂಬೆಗೆ ನಾರದೋಪದೇಶ	191

ವಿಷಯ	ಪುಟ
ಅಂಬೆಯನ್ನು ಅಂಗೀಕರಿಸು ಇಲ್ಲದಿದ್ದರೆ ಯುದ್ಧಕ್ಕೆ ಬಾ ಎಂದು ಪರಶುರಾಮರ ಅಪ್ಪಣೆ	192
ಆಗ ಯುದ್ಧವಾಗಲು ಪರಶುರಾಮರ ಪರಾಜಯ	193
ನೀನೇ ಭೀಷ್ಮನ ಪ್ರೀತಿಯನ್ನು ಪಡೆ ಯೆಂದು ಹೇಳಿ ನಡೆಯುವಿಕೆ	194
ಅಂಬೆಯು ಭೀಷ್ಮನನ್ನು ಶಪಿಸಿ ಹೋಗುವಿಕೆ	195
ತಪಸ್ಸಿನಿಂದ ಅಂಬೆಗೆ ಶಂಕರದರ್ಶನ ಮತ್ತು ಆಲಾಪ ...	,,
ಅಂಬೆಯ ದೇಹತ್ಯಾಗ	,,
ಮೊದಲು ಮಗಳಾಗಿ ಬಳಿಕ ಪುತ್ರನಾಗುವನೆಂದು ದ್ರುಪದಗೆ ಶಂಕರನ ವರ	196
ಅಂಬೆಯು ಸ್ತ್ರೀಯಾಗಿರಲು ವಿವಾಹವನ್ನು ನಡೆಸುವಿಕೆ	,,
ತನ್ನ ಸ್ತ್ರೀತ್ವವು ಪ್ರಸಿದ್ಧವಾಗಲು ಶಿಖಂಡಿಯು ವನಪ್ರವೇಶ	197
ತುಂಬುರುವಿನ ಅನುಗ್ರಹದಿಂದ ಪುಂಸ್ತ್ವಪ್ರಾಪ್ತಿ. ...	,,
ಬಂದ ಪುಂಸ್ತ್ವವು ಸ್ಥಿರವಾಗುವಿಕೆ	199

೧೪ನೆಯ ಸಂಧಿ

ವಿಚಿತ್ರವೀರ್ಯನ ಮರಣ	201
ವೇದವ್ಯಾಸಾಗಮನ	202
ಧೃತರಾಷ್ಟ್ರಾದಿಜನನ	203
ಯಮನಿಗೆ ಮಾಂಡವ್ಯಶಾಪ	204
ಧೃತರಾಷ್ಟ್ರವಿವಾಹ	207
ಕುಂತಿಯ ಪೂರ್ವವೃತ್ತಾಂತ	,,
ದೂರ್ವಾಸರ ಆಗಮನ	208
ಕುಂತಿಯ ಉಪಚಾರ	,,
ಕುಂತಿಗೆ ದೂರ್ವಾಸರ ಮಂತ್ರೋಪದೇಶ	,,
ಕುಂತಿಯು ಮಂತ್ರವನ್ನು ಜಪಿಸಲು ಸೂರ್ಯಾಗಮನ	,,
ಕುಂತಿಗೆ ಪುತ್ರಜನನ	209
ಹುಟ್ಟಿದ ಮಗುವನ್ನು ಗಂಗೆಯಲ್ಲಿ ಬಿಡುವಿಕೆ	210
ಆಮಗುವನ್ನು ಸೂತನು ಮನೆಗೊಯ್ದು ಹೆಂಡತಿಗೆ ಕೊಡುವಿಕೆ	,,
ತನಗೆ ಪುತ್ರಲಾಭವಾಯಿತೆಂದು ನಾನಾದಾನ	211

ವಿಷಯ	ಪುಟ
೧೫ನೆಯ ಸಂಧಿ—	
ಪಾಂಡುವಿಗೆ ಕುಂತೀಮಾದ್ರಿಯರ ವಿವಾಹ	213
ಪಾಂಡುವಿನ ರಾಜ್ಯಪರಿಪಾಲನ	,,
ಧೃತರಾಷ್ಟ್ರನಿಗೆ ಮಕ್ಕಳಿಲ್ಲದ ಚಿಂತೆ	214
ವೇದವ್ಯಾಸರ ಆಗಮನ	215
ಗಾಂಧಾರಿಗೆ ವ್ಯಾಸರ ಮಂತ್ರೋಪದೇಶ	,,
ಪಾಂಡುವು ಮೃಗರೂಪರಾದ ಋಷಿದಂಪತಿಗಳನ್ನು ಹೊಡೆಯುವಿಕೆ	216
ಆಮುನಿದಂಪತಿಗಳ ಶೋಕ, ಪಾಂಡುವಿನ ಪಶ್ಚಾತ್ತಾಪ	,,
ಪಾಂಡುವಿಗೆ ಮುನಿಶಾಪ	217
ಶಾಪಪರಿಹಾರಕ್ಕಾಗಿ ನಾನಾದಾನ ತಪೋವನಗಮನ	218
ಆವನದಲ್ಲಿ ಪಾಂಡುರಾಯನನ್ನು ಕುರಿತು ಕುಂತಿಯ ವಚನ	219
ಕುಂತೀಪಾಂಡುಗಳ ಸಂವಾದ	220
ಕುಂತಿಯು ದೂರ್ವಾಸರಿಂದ ಬಂದ ಮಂತ್ರದ ಸಂಗತಿಯನ್ನು ಪತಿಗೆ ಹೇಳುವಿಕೆ	221
ಪತಿಯ ಅಪ್ಪಣೆಯಂತೆ ಕುಂತಿಯು ಪುತ್ರರನ್ನು ಪಡೆಯುವಿಕೆ	222
ಧರ್ಮಜನನ	224
ಕುಂತಿಗೆ ಮಕ್ಕಳಾದ ಸಂಗತಿಯಂ ಕೇಳಿದ ಗಾಂಧಾರಿಗೆ ಗರ್ಭಪಾತ	225
ವ್ಯಾಸರ ಅಪ್ಪಣೆಯಂತೆ ಗರ್ಭಸಂರಕ್ಷಣೆ	226
ಭೀಮಜನನ	228
ಗಾಂಧಾರಿಗೆ ದುಶ್ಶಲಾಜನನ	231
ಭೀಮಾಂಗಸ್ಪರ್ಶದಿಂದ ಪರ್ವತಭೇದನ	232
ಅರ್ಜುನನ ಜನನ	234
ಮಾದ್ರಿಗೆ ಒಂದು ಮಂತ್ರವನ್ನುಪದೇಶಿಸು ಯೆಂದು ಪಾಂಡುವಿನ ಅಪ್ಪಣೆ	236
ಕುಂತಿಯು ಮಂತ್ರೋಪದೇಶದಿಂದ ಮಾದ್ರಿಗೆ ನಕುಲಸಹದೇವರ ಜನನ	237
ಪಾಂಡುವು ತನಗೆ ಮಕ್ಕಳಾದುದನ್ನು ವಸುದೇವನಿಗೆ ತಿಳಿಸುವಿಕೆ	238
ವಸುದೇವನು ಭೂಷಣಾದಿಗಳನ್ನು ಕಳುಹಿಸುವಿಕೆ	,,
ಪಾಂಡವರಿಗೆ ಕೃಷ್ಣನು ಬಂದು ಅಭಯವಂ ಕೊಡುವಿಕೆ	239
೧೬ನೆಯ ಸಂಧಿ—	
ಶತಶೃಂಗಪರ್ವತದಲ್ಲಿ ಮುನಿವೃತ್ತಿಯಿಂದ ಪಾಂಡುವಿನ ವಾಸ	242

ವಿಷಯ				ಪುಟ
ವಸಂತಋತುವರ್ಣನೆ	....	....	...	243
ಆಗ ಪಾಂಡುವಿಗೆ ವನದಲ್ಲಿ ಮಾದ್ರಿಯ ದರ್ಶನ		....	....	245
ಮಾದ್ರಿಯ ಸಂಗದಿಂದ ಪಾಂಡುವಿನ ಮರಣ		....	....	,,
ಮಕ್ಕಳ ಪ್ರಲಾಪ	....	....	....	247
ಕುಂತೀಮಾದ್ರಿಯರ ಸಹಗಮನವಿಚಾರ		....	....	248
ಮಾದ್ರಿಯ ಸಹಗಮನ	....	....	....	249
ಮುನಿಗಳು ಧರ್ಮಾದಿಗಳನ್ನು ಹಸ್ತಿನಾಪುರಕ್ಕೆ ತಂದುಬಿಡುವಿಕೆ			....	,,
ವ್ಯಾಸರು ಸತ್ಯವತಿಯನ್ನು ಇಲ್ಲಿರಬೇಡವೆಂದು ಹೇಳುವಿಕೆ			....	250
ಸತ್ಯವತಿ ಮತ್ತು ಸೊಸೆಯರ ಲೋಕಾಂತರಗಮನ			....	251
೧೭ನೆಯ ಸಂಧಿ—				
ಪಾಂಡವಧಾರ್ತರಾಷ್ಟ್ರರ ಆಟಗಳು		....	....	252
ಭೀಮನ ಪರಾಕ್ರಮ	....	....	....	253
ಭೀಮಸೇನನ ಮೇಲೆ ಬಾಲರ ದೂರುಗಳು		....	....	254
ಮಕ್ಕಳಿಗೆ ಧೃತರಾಷ್ಟ್ರನ ಬುದ್ಧಿವಾದ		....	....	255
ಭೀಮದುರ್ಯೋಧನರಿಗೆ ವೈರಾಭಿವೃದ್ಧಿ		....	....	256
ಭೀಮನನ್ನು ಕೊಲ್ಲುವ ಉಪಾಯಗಳು		....	....	257
ಭೀಮವಾಸುಕಿಸಂವಾದ	....	....	...	258
ಭೀಮನ ಪಾತಾಳಲೋಕಗಮನ		....	....	,,
ಪಾತಾಳಲೋಕದಲ್ಲಿ ಭೀಮನ ವಿವಾಹ		....	....	259
ನಾಗಕನ್ನಿಕೆಯಿಂದ ಭೀಮನು ಅಮೃತಸ್ಥಳವನ್ನು ತಿಳಿಯುವಿಕೆ			...	,,
ಅಲ್ಲಿದ್ದ ಕಾವಲುಗಾರರನ್ನು ಹೊಡೆದು ಅಮೃತಪಾನಮಾಡಿದುದು			....	,,
ಇಂದ್ರಾದಿಗಳು ಸೋತು ಶಿವನನ್ನು ಮರೆಹೋಗುವಿಕೆ			....	260
ರುದ್ರಭೀಮರ ದ್ವಂದ್ವಯುದ್ಧ		....	....	261
ಪಾರ್ವತಿಯು ಪ್ರಾರ್ಥಿಸಿದಂತೆ ಶಿವನನ್ನು ಬಿಡುವಿಕೆ			...	262
ವ್ಯಾಘ್ರೇಶ್ವರಪ್ರತಿಷ್ಠೆ	....	....	....	,,
ಕುಂತಿಗೆ ಭೀಮ ಬರುವನೆಂದು ವ್ಯಾಸರ ವಚನ		....	....	263
ದುರ್ಯೋಧನನ ಚಿಂತೆ	....	....	....	264
ಭೀಮನನ್ನು ಕೊಲ್ಲುವ ಉಪಾಯಚಿಂತನೆ		....	....	267
ವಿಷಾನ್ನವನ್ನು ತಿಂದು ಮತ್ತು ಕೌರವರನ್ನು ಸೋಲಿಸುವಿಕೆ			....	268

ವಿಷಯ. ಪುಟ

ಧರ್ಮಾದಿಗಳಿಗೆ ಕೃಪಾಚಾರ್ಯರಿಂದ ಶಸ್ತ್ರಾದ್ಯಭ್ಯಾಸ 269
ದ್ರೋಣಾಚಾರ್ಯರ ಜನನ 270
ದ್ರುಪದಜನನ 271
ಅಶ್ವತ್ಥಾಮಜನನ .... ,,
ದ್ರೋಣರಿಂದ ದ್ರುಪದಗೆ ರಾಜ್ಯಲಾಭಸೂಚನೆ 272
ದ್ರೋಣರಿಗೆ ಅರ್ಧರಾಜ್ಯದಾನಪ್ರತಿಜ್ಞೆ .... ,,
ದ್ರುಪದನಿಗೆ ರಾಜ್ಯಲಾಭ .... ,,
ದ್ರೋಣಾಚಾರ್ಯರು ಪರಶುರಾಮರ ಬಳಿ ಬರುವಿಕೆ 273
ದ್ರೋಣಪರಶುರಾಮರ ಸಂಭಾಷಣ 274
ಶಸ್ತ್ರಾದ್ಯಭ್ಯಾಸವನ್ನು ವಂಸುವಿಕೆ 275
ದ್ರೋಣನು ದ್ರುಪದನ ಬಳಿ ಬರುವಿಕೆ 276
ಐಶ್ವರ್ಯಮದದಿಂದ ದ್ರುಪದರಾಯನ ಉಪೇಕ್ಷೆ .... ,,
ಆಗ ದ್ರೋಣಾಚಾರ್ಯರ ಪ್ರತಿಜ್ಞೆ 277

೧೮ನೆಯ ಸಂಧಿ—

ಧರ್ಮಾದಿಗಳ ವಿದ್ಯಾಭ್ಯಾಸಕ್ರಮ 285
ಧನುರ್ಧಾರಿಗಳಲ್ಲಿ ಉತ್ತಮರನ್ನು ತಿಳಿಯಲು ದ್ರೋಣಾಚಾರ್ಯರ ಪರೀಕ್ಷೆ 287
ಅರ್ಜುನನ ಶಸ್ತ್ರಕೌಶಲವನ್ನು ದ್ರೋಣನು ಸ್ತುತಿಸುವಿಕೆ 290
ಅರ್ಜುನನಿಗೆ ದ್ರೋಣರು ಸಕಲವಿದ್ಯಾದಾನ ಮಾಡಿದುದು .... ,,
ಆಗ ಅರ್ಜುನನು ಸಿದ್ಧನಾಗಿ ಬರುವಿಕೆ 292
ದ್ರೋಣರು ಅರ್ಜುನನಲ್ಲಿ ವಿದ್ಯೆಯನ್ನು ತುಂಬಿದುದು ... 293
ವಿದ್ಯಾಭ್ಯಾಸಕ್ರಮವನ್ನು ಪರೀಕ್ಷಿಸುವುದೆಂದು ದ್ರೋಣರ ಹೇಳಿಕೆ .... ,,
ವಿದ್ಯಾಪ್ರದರ್ಶನಕ್ಕಾಗಿ ಸ್ಥಳನಿರ್ಮಾಣ 294
ಅಲ್ಲಿಗೆ ಕುಂತೀಮೊದಲಾದವರ ಆಗಮನ 295
ರಾಜಕುಮಾರರ ವಿದ್ಯಾಪ್ರದರ್ಶನ 297
ದುರ್ಯೋಧನನ ವಿದ್ಯಾಪ್ರದರ್ಶನ 298
ಭೀಮಸೇನನ ವಿದ್ಯಾಪ್ರದರ್ಶನ 299
ಭೀಮದುರ್ಯೋಧನರ ಕಲಹ ಮತ್ತು ಕಲಹಶಾಂತಿ 300

ವಿಷಯ	ಪುಟ
ಅರ್ಜುನನ ವಿದ್ಯಾಪ್ರದರ್ಶನ	302
ಕರ್ಣನ ವಿದ್ಯಾಪ್ರಕಾಶ	304
ಕರ್ಣನನ್ನು ಅಂಗದೇಶದ ರಾಜನನ್ನಾಗಿ ಮಾಡುವಿಕೆ	306
ದ್ರೋಣರು ಶಿಷ್ಯರನ್ನು ಗುರುದಕ್ಷಿಣೆಯನ್ನು ಬೇಡುವಿಕೆ	308
ಕೌರವರ ಪರಾಜಯ	309
ಪಾಂಡವರು ಸನ್ನದ್ಧರಾಗಿ ಪಟ್ಟಣವನ್ನು ಪ್ರವೇಶಿಸುವಿಕೆ	310
ದ್ರುಪದನನ್ನು ಹಿಡಿದು ಗುರುಗಳ ಬಳಿ ತರುವಿಕೆ	311
ದ್ರುಪದನಿಗೆ ದ್ರೋಣರ ಭರ್ತ್ಸನೆ	313
ದ್ರುಪದನ ಪುತ್ರಕಾಮೇಷ್ಟಿ	314
೧೯ನೆಯ ಸಂಧಿ—	
ವೈಶಂಪಾಯನರ ಭಾಷಣ	317
ಕರ್ಣನ ಆಶ್ರಮಕ್ಕೆ ವಿಭಾಂಡತನುಜರ ಆಗಮನ....	,,
ಕರ್ಣದೈತ್ಯರ ಯುದ್ಧ	318
ಮುನಿಯು ತುಷ್ಟನಾಗಿ ವರವನ್ನು ಕೊಡುವಿಕೆ	319
ಕರ್ಣನು ಸಿಂಧುದೇಶಕ್ಕೆ ಹೋಗುವಿಕೆ	320
ಅಲ್ಲಿಂದ ರಾಜನ ಅಪ್ಪಣೆಯಿಂದ ಹಸ್ತಿನಾವತಿಯ ಗಮನ	321
ಆಗ ಸ್ವಯಂವರವಾರ್ತಾಶ್ರವಣ	322
ಕರ್ಣನು ಯಂತ್ರಮತ್ಸ್ಯವನ್ನು ಖಂಡನಮಾಡಿದುದು	324
ಮಾಗಧಾದಿಗಳೊಡನೆ ಕರ್ಣನ ಯುದ್ಧ	325
ಮಾಗಧನು ಕರ್ಣನೊಡನೆ ಸ್ನೇಹಮಾಡುವಿಕೆ	328
ಕರ್ಣಾದಿಗಳ ವಿವಾಹ	,,
೨೦ನೆಯ ಸಂಧಿ—	
ವೇದವ್ಯಾಸರ ಆಗಮನ	330
ಗಾಂಧಾರಿಗೆ ಐರಾವತವ್ರತನಿರೂಪಣ	332
ಗಾಂಧಾರಿಯ ವ್ರತೋದ್ಯೋಗ	,,
ಗಾಂಧಾರಿಯ ಪರಿವಾರಸ್ತ್ರೀಯರ ವರ್ಣನೆ	334
ವ್ರತಾನಂತರ ನಾನಾದಾನ	335
ಗಾಂಧಾರಿಯು ಕುಂತಿಯನ್ನು ಉಪೇಕ್ಷಿಸಿದುದು	336
ಆಗ ಅರ್ಜುನನು ತಾಯಿಯನ್ನು ಪ್ರಾರ್ಥನೆಮಾಡಿದುದು	337

ವಿಷಯ	ಪುಟ
ಅರ್ಜುನನು ತಾಯಿಗೆ ಐರಾವತವ ಮಾಡಿಸುವೆನೆಂದು ಹೇಳುವಿಕೆ	340
ಸುರಪತಿಯು ಗಜವನ್ನು ತರಿಸಲು ಅರ್ಜುನನ ಪ್ರಯತ್ನ	,,
ಅರ್ಜುನನು ಇಂದ್ರನ ಸಭೆಗೆ ಬಾಣವನ್ನು ಹಾಕಿದುದು	343
ಇಂದ್ರನಿಗೆ ಅರ್ಜುನನ ಪತ್ರ	344
ಅರ್ಜುನನ ಮೇಲೆ ಇಂದ್ರನ ಕೋಪ	346
ನಾರದರ ವಚನದಿಂ ಕೋಪಶಮನ	347
ಪ್ರಭಂಜನೆಂಬ ಖೇಚರನನ್ನು ಕರೆಸುವಿಕೆ	348
ಅರ್ಜುನನಿಗೆ ಪ್ರಭಂಜನನಿಂದ ಪತ್ರವನ್ನು ಕಳುಹಿಸುವಿಕೆ	,,
ಇಂದ್ರನ ಪತ್ರಪ್ರಕಾರ ಮಾರ್ಗಮಾಡಲು ಹೇಳಿ ಕಳುಹಿಸುವಿಕ	349
ಖೇಚರನು ಇಂದ್ರನಿಗೆ ಅರ್ಜುನಾಭಿಪ್ರಾಯವನ್ನು ತಿಳಿಸುವಿಕೆ	349
ಈ ಉತ್ಸವಪ್ರಸಿದ್ಧಿಯಿಂದ ಜನಗಳ ಬರುವಿಕೆ	350
ಬಾಣಮಯಮಾರ್ಗನಿರ್ಮಾಣ	351
ಅರ್ಜುನನಿರ್ಮಿತಮಾರ್ಗದಿಂದ ಐರಾವತಾದಿಗಳ ಬರುವಿಕೆ	353
ಈ ಉತ್ಸವವಾರ್ತೆಯನ್ನು ಧೃತರಾಷ್ಟ್ರನು ಭೀಷ್ಮರಿಗೆ ತಿಳಿಸಲು ಅವರ ಸಂತೋಷ	355
ಕುಂತಿಯು ಗಾಂಧಾರಿಯನ್ನು ವ್ರತಕ್ಕೆ ಕರೆಯಲು ಆಕೆಯ ಅಸಮ್ಮತಿ	356
ಬಳಿಕ ಭೀಷ್ಮಾದಿಗಳ ಸಹಾಯದಿಂದ ಕುಂತಿಯ ವ್ರತಾಚರಣೆ	360
ಕುಂತಿಯು ಐರಾವತಾರೋಹಣ	363
ಧರ್ಮರಾಜನ ಅಪ್ಪಣೆಯಂತೆ ಐರಾವತಾದಿಗಳನ್ನು ಸ್ವರ್ಗಕ್ಕೆ ಕಳುಹಿ ಮಾರ್ಗವನ್ನು ತೆಗೆದುದು	366

ಶ್ರೀ

ಕುಮಾರವ್ಯಾಸಮಹಾಕವಿವಿರಚಿತಂ

ಕರ್ಣಾಟಕಮಹಾಭಾರತಂ

ಆದಿಪರ್ವ

ಪೀಠಿಕಾಸಂಧಿ.

ದೇವತಾಸ್ತುತಿಗಳು.

ಶ್ರೀವನಿತೆಯರಸನೆ ವಿಮಲರಾ
ಜೀವಪೀಠನ ಜನಕ ಜಗಕತಿ
ಪಾವನನೆ ಸನಕಾದಿಸಜ್ಜನನಿಕರದಾತಾರ ।
ರಾವಣಾಸುರಮಥನ ಶ್ರವಣಸು
ಧಾವಿನೂತನಕಥನಕಾರಣ
ಕಾವುದಾನತಜಗವ ಗದುಗಿನ ವೀರನಾರಯಣ ॥ ೧

ಶ್ರೀಮದಮರಾಧೀಶನತಪದ
ತಾಮರಸ ಘನವಿಪುಳನಿರ್ಮಳ
ಧಾಮನನುಪಮವಿಮಳಸುರಮುನಿವಿನುತನಿಜಚರಿತ ।
ರಾಮನೂರ್ಜಿತರಾಮ ರಘುಕುಲ
ರಾಮನಾಹವಭೀಮ ಯದುಕುಲ ।
ರಾಮ ಪಾಲಿಸು ವೊಲಿದು ಗದುಗಿನ ವೀರನಾರಯಣ ॥ ೨

ವೇದಪುರುಷನ ಸುತನ ಸುತನ ಸ
ಹೋದರನ ಹೆಮ್ಮಗನ ಮಗನ ತ

ಳೋದರಿಯ ಮಾತುಳನ ಮಾವನ ನತುಳಭುಜಬಲದಿ |
ಕಾದಿ ಗೆಲಿದನನಣ್ಣನವ್ವೆಯ
ನಾದಿನಿಯ ಜಠರದಲಿ ಜನಿಸಿದ
ನಾದಿಮೂರುತಿ ಸಲಹೊ ಗದುಗಿನ ವೀರನಾರಯಣ || ೩

ಶರಧಿಸುತೆ ಸನಕಾದಿವಂದಿತೆ
ಸುರನರೋರಗಮಾತೆ ಸುಜನರ
ಪೋಷಿವ ದಾತೆ ಸುರಾಗ್ರಗಣ್ಯಸುಮುನಿವರಸ್ತುತ್ಯೆ |
ಪರಮಕರುಣಾಸಿಂಧು ಪಾವನ
ಚರಿತೆ ಪದ್ಮಜಮುಖ್ಯಸಕಲಾ
ಮರಸುಪೂಜಿತೆ ಲಕ್ಷ್ಮಿ ಕೊಡುಗೆಮಗಧಿಕಸಂಪದವ || ೪

ವರಚತುರ್ಮುಖ ಕಮಲಸಂಭವ
ಕರಕಮಂಡಲು ವಿಶ್ವಯೋನಿಜ
ಸುರನರೋರಗವಂದ್ಯಜನ ಪರಮೇಷ್ಠಿ ಲೋಕೇಶ |
ಸರಸಿರುಹಭವಪೀಠ ನಾರದ
ವರಪಿತಾಮಹ ಹಂಸವಾಹನ
ಹರಿಹರಪ್ರಿಯ ರಕ್ಷಿಸೆನ್ನನು ಭಾರತೀರಮಣ || ೫

ವಾರಿಜಾಸನೆ ಸಕಲಶಾಸ್ತ್ರಪಿ
ಚಾರದುದ್ಭವೆ ವಚನರಚನೋ
ದ್ಧಾರೆ ಶ್ರುತಿಪೌರಾಣಿಕಾಗಮಸಿದ್ಧಿದಾಯಕೆಯು |
ಸೂರಿಸುರಪತಿಸಕಲಮುನಿಜನ
ಭೂರಿಗುಣಗಣಪದದ [1] ಯುಕ್ತಿಯೆ
ಶಾರದೆಯು ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ || ೬

ಶರಣಸಂಗವ್ಯಸನ ಭುಜಗಾ
ಭರಣನಮರಕಿರೀಟಮಂಡಿತ .

---

[1] ಸೂರಿಗಳಿಗನುಪಮದ, ಚ.

ಚರಣ ಚಾರುಚರಿತ್ರ ನಿರುಪಮ ಫಾಲಶಿಖಿನೇತ್ರ |
ಕರಣನಿರ್ಮಳಭಜಕರಘಸಂ
ಹರಣ ದಂತಿಚಮೂರುಚರ್ಮಾಂ
ಬರನೆ ಸಲಹುಗೆ ಭಕ್ತಜನವನು ಪಾರ್ವತೀರಮಣ || ೭

ಗಜಮುಖನ ವರಮಾತೆ ಗೌರಿಯೆ
ತ್ರಿಜಗದರ್ಚಿತ [1] ಚಾರುಚರಣಾಂ
ಬುಜೆಯೆ ಪಾವನಮೂರ್ತಿ ಪದ್ಮಜಮುಖ್ಯಸುರಪೂಜ್ಯೆ |
ಭಜಕರಘಸಂಹರಣೆ ಸುಜನ
ವ್ರಜಸುಸೇವಿತೆ ಮಹಿಷಮರ್ದಿನಿ
ಭುಜಗಭೂಷಣನರಸಿ ಕೊಡು ಕಾರುಣ್ಯದಲಿ ಮತಿಯ || ೮

ವರಮಣಿಗಳಿಂದೆಸೆವ ಮೌಳಿಯ
ಸರಸಿಜಾರಿಯ ಕಿರಣ ಧೂಳಿಯ
ವಿರಚಿಸುವ ಸಿಂಧೂರಭಾಳದಿ ಕುಣಿವ ಕುಂತಳದ |
ಕರಿನಿಭಾಕೃತಿಯೆನಿಪ ವದನದ
ಕರದ ಪಾಶದ ಮೋದಕದ ವಿ
ಸ್ತರದ ಗಣಪತಿ ಮಾಡೆಮಗೆ ನಿರ್ವಿಘ್ನದಾನವನು [2] || ೯

ದುರಿತಕುಲಗಿರಿವಜ್ರದಂಡನು
ಧರೆಯ ಜಂಗಮಮೂರ್ತಿ ಕವಿವಾ
ರಿರುಹದಿನಮಣಿ ನಿಖಿಳಯತಿಪತಿದಿವಿಜವಂದಿತನು |
ತರಳನನು ತನ್ನವನೆನಿಸಿ ಪತಿ
ಕರಿಸಿ ಮಗನೆಂದೊಲಿದು ಕರುಣದಿ
ವರವನಿತ್ತನು ದೇವ ವೇದವ್ಯಾಸಮುನಿರಾಯ || ೧೦

---

[1] ತ್ರಿಜಗವಂದಿತೆ, ಕ. [2] ದಾಯಕವ, ಕ. ಖ. ಗ.

ಮುದ್ರಿತ ಪುಸ್ತಕದಲ್ಲಿರುವ ಗಣಪತಿ ಪ್ರಾರ್ಥನೆಯ ಮತ್ತೊಂದು ಪದ್ಯ ಬಹುಕೋಶಗಳಲ್ಲಿಲ್ಲವಾಗಿ ಬಿಟ್ಟಿದೆ.

ಎರಡು ತೋಳಿನ ವಿಷ್ಣುಮುಖವೊಂ
ದಱಲಿ ಮೆಱೆವ ಬ್ರಹ್ಮನೊಸಲಲಿ
ವರನಯನವೊಂದಿಲ್ಲದಾಸಂನುತಪರಮಶಿವ ।
ಧರೆಯ ಜೀವರ ಜನ್ಮಮರಣಾಂ
ಕುರವಿದಾರಕುಠಾರ ವಿದ್ಯಾ
ಶರಧಿ ವೇದವ್ಯಾಸಮುನಿ ಮಾಳ್ಕೆಮಗೆ ಸನ್ಮತಿಯ ॥ ೧೧

ವಂದಿತಾಮಳಚರಿತನಮರಾ [1]
ನಂದ ಯದುಕುಲಚಕ್ರ [2] ವರ್ತಿಯ
ಕಂದ ನತಸಂಸಾರಕಾನನಘನದವಾನಳನು ॥
ನಂದನಂದನಸನ್ನಿಭನು ಸಾ
ನಂದದಿಂದವೆ ನಮ್ಮವನು ಕೃಪೆ
ಯಿಂದ ಸಲಹುಗೆ ದೇವ ಜಗದಾರಾಧ್ಯಗುರುರಾಯ ॥ ೧೨

ಕೃತಿಯ ಸತ್ಕರ್ಣಾಟಕದ ಭಾ
ರತಕೆ ಮಂಜುಳಮಂಜರಿಯ ಮಹ
ಕೃತಿಗೆ ನಾಯಕನಾದ ಗದುಗಿನ ವೀರನಾರಯಣ ।
ನುತಕುಮಾರವ್ಯಾಸಮುನಿಯೀ
ಕೃತಿಗೆ ಕರ್ತೃವೆನಲ್ಕೆ ಸದಲಂ
ಕೃತಿಚಮ [3] ತ್ಕೃತಿಯೆನಿಸದೇತಕೆ ಶೂಲಿ [4] ಸಭೆಯೊಳಗೆ ॥ ೧೩

ವೀರನಾರಾಯಣನ ಸುಕವಿಕು
ಮಾರವ್ಯಾಸರಚನಾಕೃತಿಯ ಕೇಳುವ
ಸೂರಿಗಳು ಸನಕಾದಿಗಳು ಜಂಗಮಜನಾರ್ದನರು ।
ಹಾರಗವಿತೆಯ ಬಳಕೆ ಯಂತೆ ವಿ
ಚಾರಿಸುವೊಡಳವಲ್ಲ ಚಿತ್ತವ
ಧಾರು ಹೋ ಸರ್ವಜ್ಞರಾಯರು ಸಲುಗೆ ಬಿನ್ನಪವೆ ॥ ೧೪

---

1 ಮರಸೇವ್ಯನಾಯಕ, ಘ. 2 ನಂದಮುನಿ ಯತಿ ಚಕ್ರ, ಘ.
3 ಕೃತಿಯೆನಿಸದೇಚಮ, ಕ. 4 ಸದೆಕಮಲಾದಿ, ಕ.

ಕವಿಪಂಡಿತ ಮೊದಲಾದವರನ್ನು ಪ್ರಾರ್ಥಿಸಿ ತಾನು ರಚಿಸುವುದನ್ನು ತಿಳಿಸುವಿಕೆ.

ಕೃತಿಯನವಧರಿಸುವುದು ಸುಕವಿಯ
ಮತಿಗೆ ಮಂಗಳವೀವುದಧಿಕರು
ಸ್ತುತಿಸುವುದು ತಿದ್ದುವುದು ಮೆಚ್ಚುವುದು ಲೇಸ ಚಿಂತಿಪು[1]ದು ।
ಅತಿಗುಣರು ಭಾವಕರು ವರಪಂ
ಡಿತರು ಸುಜನರು ಸೂಕ್ತಿಕಾರರು
ಮತಿಯನೀವುದು ವೀರನಾರಾಯಣನ ಕಿಂಕರಗೆ ॥ ೧೫

ತಿಣುಕಿದನು ಫಣಿರಾಯ[2] ರಾಮಾ
ಯಣದ ಕವಿಗಳ ಭಾರದಲಿ ತಿಂ
ಥಿಣಿಯ ರಘುವರಚರಿತೆಯಲಿ ಕಾಲಿಡಲು ತೆರಪಿಲ್ಲ ।
ಬಣಗುಕವಿಗಳ ಬಗೆವನೇ ಸಾ
ಕೆಣಿಸದಿರು ಶುಕರೂಪನಲ್ಲದೆ
ಕುಣಿಸಿ ನಗನೇ ಕವಿಕುಮಾರವ್ಯಾಸನುಳಿದವರ ॥ ೧೬

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀಶ್ವ
ರರ ತತ್ತ್ವವಿಚಾರ ಮಂತ್ರಿಜನಕೆ ಬುದ್ಧಿಗುಣ ।
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥ ೧೭

ಕೋವಿದರಿಗಿದು ಮೆಚ್ಚು ಜಾಣರ
ಜೀವವಿದು ಪರಿಣತರ ಹರಣವು
ಭಾವಕರ ಕುಲದೈವ ಮನುಜರಿಗುಂ[3] ಮಹಾಮಮತೆ ।
ಆವಿಮುಖಖಳಜನರ ಚಿತ್ತ

---

1 ಸಂಚಿಪು, ಕ. ಘ. 2 ಹುಣಿಗಿದನು ಫಣಿರಾಯ, ಕ. ಫಣಿಯದೆಡೆ ಕುಸಿಯಿತು, ಗ. 3 ಕುಲವಿದ್ಯಮುನಿನಿಕರಕೆ, ಕ. ಗ.

ದ್ರಾವಣವು ಮೂರ್ಖರಿಗೆ ಪೀಯೂ
ಷಾವಗಾಹನ ಮತ್ಕೃತಿಯು ಸಕಳರ ಕುತೂಹಳಿಕೆ ॥ ೧೮

ಕವಿಯು ತನ್ನ ಸಾಮರ್ಥ್ಯವನ್ನು ಹೇಳಿಕೊಳ್ಳುವಿಕೆ.

ಹಲಿಗೆ ಬಳಹವ ಹಿಡಿಯದೊಂದ
ಗ್ಗಳಿಕೆಪದವಿಟ್ಟಳುಪದೊಂದ
ಗ್ಗಳಿಕೆ ಪರರೊಪ್ಪವದ ರೀತಿಯ ಹಿಡಿಯದಗ್ಗಳಿಕೆ ।
ಬಳಸಿ ಬರೆಯಲು ಕಂಠಪತ್ರದ
ವುಲುಹು ಗೆಡದಗ್ಗಳಿಕೆ ಯೆಂಬೀ
ಬಲುಹು ಸಲುವುದು ವೀರನಾರಾಯಣನ ಕಿಂಕರಗೆ ॥ ೧೯

ಪದದ ಪ್ರೌಢಿಯ ನವರಸಂಗಳ
ವುದಿತವನುವಭಿಧಾನಭಾವವ
ಬೆದಕಲಾಗದು ಬಲ್ಲಪ್ರೌಢರು ಮೀಕಥಾಂತರಕೆ ।
ಇದ ವಿಚಾರಿಸೆ ಬಱಿಯ ತೊಳಸಿಯ
ವುದಕದಂತಿರೆ ಯಿಲ್ಲಿ ನೋೞ್ಪುದು
ಪದುಮನಾಭನ ಮಹಿಮೆ ಧರ್ಮವಿಚಾರಮಂತ್ರವನು ॥ ೨೦

ಭುವನನುತಚರಿತನು ಭಕುತಜನ
ಭವವಿಪಿನದಾವಾನಳನು ಪಾಂ
ಡವನೃಪಾಲಪ್ರೀಣಿತಪ್ರಾಣದ ಮಹೋ[1] ನಿಲಯ ।
ದಿವಿಜಪತಿಮೌಳಿಪ್ರಣಿಹಿತ
ಪ್ರವರರತ್ನಶ್ರೇಣಿ ಶೋಭಾ
ಧವಳಿತಾಂಘ್ರಿಸರೋಜ ಗದುಗಿನ ವೀರನಾರಯಣ ॥ ೨೧

ಭಾರತಮಾಹಾತ್ಮ್ಯಕಥನ

ಹೇಮಖುರಶೃಂಗಾಭರಣದಿಂ
ಕಾಮಧೇನು ಸಹಸ್ರಕಪಿಲೆಯ

---
1 ಮಹಾ, ಕ. ಘ.

ಸೋಮಸೂರ್ಯಗ್ರಹಣದಲಿ ಸುರನದಿಯ ತೀರದಲಿ |
ಶ್ರೀಮುಕುಂದಾರ್ಪಣವೆನುತ ವರ
ಭೂಮಿದೇವರಿಗಿತ್ತ ಫಲವಹು
ದೀಮಹಾಭಾರತದೊಳೊಂದಕ್ಷರವ ಕೇಳ್ದರಿಗೆ || ೧೨

ವೇದಪಾರಾಯಣದ ಫಲ ಗಂ
ಗಾದಿತೀರ್ಥಸ್ನಾನಫಲ ಕೃ
ಚ್ಛ್ರಾದಿತಪಸಿನ ಫಲವು ಜ್ಯೋತಿಷ್ಟೋಮಯಾಗಫಲ |
ಮೇದಿನಿಯನೊಲಿದಿತ್ತ ಫಲವು
ನ್ಯಾದವಸ್ತ್ರಸುದಾನಫಲವಹು
ದಾದರದಿ ಭಾರತದೊಳೊಂದಕ್ಷರವ ಕೇಳ್ದರಿಗೆ || ೧೩

ಜಾರೆ [1] ನಿಂದಿಸಿ ಶಶಿಯ ಬೈದರೆ
ಕ್ಷೀರವನು ಕ್ಷಯರೋಗಿ ಹಳಿದರೆ
ವಾರಣಾಸಿಯ ಹೆಳವ ನಿಂದಿಸಿ ನಕ್ಕೊಡೇನಹುದು |
ಭಾರತದ ಪುಣ್ಯಪ್ರ [2] ಸಂಗವ
ಕ್ರೂರಕರ್ಮಿಗಳೆತ್ತ ಬಲ್ಲರು
ಘೋರತರದಘಭವವ ಕೆಡಿಸುವುದು [3] ಕೇಳ್ದ ಸಜ್ಜನರ || ೧೪

ತಿಳಿಯಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣಮೆಚ್ಚಲಿಕೆ |
ಹಲವು ಜನ್ಮದ ಪಾಪರಾಶಿಯ
ತೊಳೆವ ಜಲವಿದು ಶ್ರೀಮದಾಗಮ
ಕುಳಕೆನಾಯಕ ಭಾರತಾಕೃತಿಪಂಚಮಶ್ರುತಿಯ || ೧೫

ಸರಸರಿಗೆ ಸಾಹಿತ್ಯರಿಗೆ ಹರಿ
ಶರಣರಿಗೆ ಸುಜನರಿಗೆ ಶಾಂತಾ

---

1 ಚೋರ, ಘ. ಚ. 2 ಕಥನಪ್ರ, ಘ. ಚ. 3 ಘೋರತರತಾಪವ ಕೆಡಿಸುಗು, ಘ. ಚ.

ತ್ತರಿಗೆ ವರವಿದು ವಶ್ಯಮಂತ್ರದ ಯೋಘ[1] ನದ ಘುಟಿಕೆ |
ದುರುಳರಿಗೆ ದೂಷಕರಿಗಲ ಮೊಗ
ದಿರುಹುವರಿಗಜ್ಞರಿಗೆ ಚಿತ್ತಾ
ಕರುಷಣ ಕವಿಕಲಾವಿಲಾಸದ ವರಚಮತ್ಕಾರ ॥ ೨೬

ಪೃಥ್ವಿಯಮರರು ಕೇಳ್ ವೇದಪ
ವಿತ್ರರಹರು ಮಹಾವಿಭೂತಿಯ
ಕ್ಷತ್ರಿಯರು ಕೇಳಿದರೆ ಶೌರ್ಯಸಮರ್ಥರೆನಿಸುವರು |
ಅರ್ಥಪತಿಯೆನಿಸುವರು ವಿಶರು ಚ
ತುರ್ಥಕರು ಧನಧಾನ್ಯದಿಂದ ಸ
ಮರ್ಥರೆನಿಸುಗು ವೊಲಿದು ಭಾರತಕಥೆಯ ಕೇಳ್ದಡೆಗೆ ॥ ೨೭

ಹಳಿಉ ಹೊದ್ದದ ಕುಲಕೆ ಖ್ಯಾತಿಯು
ಬಳಗದಲಿ ಬೆಳಗುವುದು ಯಾದವ
ತಿಳಕನನು ಮನವುಟ್ಟಿ ಹೊಗೞುವ ಪಂಚಮಶ್ರುತಿಯ |
ಇಳೆಯೊಳಿದ ಹೇೞುವರ ಕೇಳ್ವರ
ಬಳಗವಾಕ್ಷಣ ಪುಣ್ಯರಾಶಿಯ
ಬಳೆವುದೆಂಬುದನಱಿದು ಭಾರತಕೃತಿಯ ಪೇೞುವೆನು ॥ ೨೮

ಭಾರತವ ಹೇೞಿದರೆ ಕೇಳ್ದರೆ
ಶಾರದೆಯಲೋದಿದರೆ ಬರೆದರೆ
ಕ್ರೂರಕರ್ಮನಿವಾರಣವ ಮಾಡುವನು ಮುರವೈರಿ |
ಸಾರಹೃದಯರು ಕೇಳುತಿರಲು ವಿ
ಚಾರದಿಂ ಕಾಳ್ಗಡದ ಮನುಜರ
ಘೋರನರಕದಲಿಕ್ಕುವನು ಹರಿ ವೀರನಾರಯಣ ॥ ೨೯

ಮಾತು ಬೆಱಗಿನ ಬಳಕೆ ರಾಗದ
ರೀತಿ ಕರ್ಣಾಮೃತದ ಜಳದ ಸು

---

[1] ದೋಘ, ಗ.

ಧಾತು ಜಾಣರ ಧಾತು ಸೊಗಸಿನ ಸಾಗರದ ಲಹರಿ ।
ನೂತನಾಳಾಪವನು ಲೋಕದ
ಧಾತುಗಳ ಬಳಕೆಗಳ ಬೆಳಪ ಸು
ಧಾತು ರಂಗದಸಮಕುಮಾರವ್ಯಾಸಕೃತಿವಚನ ॥ ೩೦

ಶ್ರೀಗಿರಿಜೆಯರಸನನು ವಿಮಲಗು
ಣಾಗಮೋತ್ತಮವರ್ಣ್ಯನನು ವರ
ಯೋಗಿಭಿವಂದ್ಯನನಖಿಳಶ್ರುತಿಪಾರಾಯಣದಾಯಕನ ।
ನಾಗಭೂಷಣನಮರವಂದಿತ
ಯೋಗಿಜನಹೃದಯನನು ಕರುಣಾ
ಸಾಗರನ ಬಲಗೊಂಡು ಭಾರತಕಥೆಯ ವಿರಚಿಸುವ ॥ ೩೧

ಒಂದನೆಯ ಸಂಧಿ ಮುಗಿದುದು.

ಎರಡನೆಯ ಸಂಧಿ.

ಸೂಚನೆ.

ರಾಯುಜನಮೇಜಯಗೆ ವ್ಯಶಂ
ಪಾಯನನು ಹೇಳಿದನು ಮುನಿದ್ವೈ
ಪಾಯನನು ವರ್ಣಿಸಿದ ಭಾರತವರಕಥಾಮೃತವ ॥

ಸೂತರು ಬರಲು ಶೌನಕಾದಿಗಳು ಅವರನ್ನು ಸ್ತುತಿಸುವಿಕೆ.

ಸೂತನೈತಂದನು ಜಗದ್ವಿ
ಖ್ಯಾತಶೌನಕಮುಖ್ಯಮುನಿಸಂ
ಘಾತಪಾವನನೈಮಿಶಾರಣ್ಯದ ವರಾಶ್ರಮಕೆ ।
ಆತನನು ಕಂಡುದು ತಪಸ್ವಿ

ಪ್ರಾತ ಕುಶಲಕ್ಷೇಮಮಧುರ
ಪ್ರೀತಿವಚನಾಮೃತದಿ ಸಂಭಾವನೆಯ ಮಾಡಿದುದು ॥ ೧

ಪರಮಪೌರಾಣಿಕಶಿರೋಮಣಿ
ಬರವಿದೆತ್ತಣವಾಯ್ತು ಕೌತುಕ
ವರಕಥಾಪೀಯೂಷಸಾರವಿಶೇಷವೇನುಂಟು ।
ಚರಿತಚತುರಾಶ್ರಮತಪೋನಿ
ಷ್ಠರಿಗೆ ವಿಶ್ರಮವೈ ಭವಾದೃಶ
ದರುಶನವು ನಮಗೆಂದು ನುಡಿದರು ರೌಮಹರ್ಷಣಿಯ ॥ ೨

ಸೂತರ ಪ್ರತಿವಚನ

ವಂದಿಸಿದೆನ್ನೈ ವರತಪೋಧನ
ವೃಂದ ಚಿತ್ತೈಸುವುದು ತಾನೇ
ನೆಂದು ನುಡಿವೆನು ಕೌತುಕಾಮೃತರಸದ ಕಡುಗಡಲ ।
ಹಿಂದೆ ಕೇಳುವುದಲ್ಲ ಹೇಳ್ವುದು
ಮುಂದೆ ಹೊಸತಿದು ನಿಗಮಶತವಿದ
ರೊಂದೊರೆಗೆ ನೆಱೆ ಬಾರದೆಂ [1] ದನು ಸೂತ ಕೈಮುಗಿದು ॥ ೩

ತಾವು ಹೇಳುವ ಕಥೆಯು ಸಕಲಪಾಪಹರವು ಸಕಲಪುಣ್ಯಾಕರವು.

ಆಮಹಾಫಲವೀವುದೀಕಥೆ
ಸೋಮಪಾನಾದಿಗಳ ಫಲ ವರ
ಸೋಮಕ್ರತುಗಳನಂತಜ್ಯೋತಿಷ್ಟೋಮಮುಖನಿಕರ ।
ಭೂಮಿಯಲಿ ಸರಿಯಲ್ಲ ನಿಮ್ಮಯ
ಹೋಮಗಳು ಸರಿಯಲ್ಲ ಮಿಕ್ಕಿನ
ಮಾನುಷರ ಜಪತಪಾದಿಗಳೇಕೆ ಯೀಕಥೆಗೆ ॥ ೪

ಕೇಳಿದನು ಜನಮೇಜಯಕ್ಷಿತಿ
ಪಾಲಕನು ವರಸರ್ಪಯಜ್ಞ

---

[1] ದೊರೆಗೆ ಬರಲಱಿಯದೆಂ, ಚ. ಛ.

ಸ್ಥೂಲಪಾಪವಿಘಾತಿಗೋಸುಗವೀಮಹಾಕಥೆಯ |
ಕೇಳಿದನು ತಾನಲ್ಲಿ ಮುನಿಗಳ
ಮೌಳಿಮಂಡಿತಚರಣಕಮಲವಿ
ಶಾಲವೇದವ್ಯಾಸಕೃತಿಭಾರತಕಥಾಮೃತವ || ೫

ಹಾ ಮಹಾದೇವಾ ಇದೆತ್ತಣ [1]
ರೋಮಹರುಷಣಿ ನಾವು ಮಾಡಿದ
ಸೋಮಪಾನಾದಿಗಳಪೂರ್ವಸ್ತೋಮತರುಗಳಿಗೆ |
ಈಮಹಾಭಾರತಕಥಾಮೃತ
ರಾಮಣೀಯಕಫಲವನೀಯಲ
ಸೀಮಪುಣ್ಯರು ಧನ್ಯರಾವೆಂದುದು ಋಷಿಸ್ತೋಮ || ೬

ಹೇಳು ಸಾಕೆಲೆ ಸೂತ ದುರಿತ
ವ್ಯಾಳವಿಷಜಾಂಗಲಿಕವನು ನೀ
ಕೇಳಿದಂದದೊಳಂದು ಜನಮೇಜಯನ ಯಾಗದಲಿ |
ಮೌಳಿಗಳಲಾನುವೆವು ನಿನ್ನಯ
ಹೇಳಿಕೆಯನೆನೆ ನಿಖಿಳಮುನಿಗಳ
ನೋಲಗಿಸುವೆನು ನಿಮ್ಮ ನೇಮದಲೆಂದು [2] ಕೈಮುಗಿದ || ೭

ಸರ್ಪಯಜ್ಞದಲಾದ ದುರಿತದ
ದರ್ಪವನು ಕೆಡೆ ಬೀಳುಗುಟ್ಟಲು
ತರ್ಪಣಾದಿಕ್ರಿಯೆಗಳಲಿ ಸಾಮರ್ಥ್ಯವಿಲ್ಲೆಂದು |
ದರ್ಪಕಾಹಿತಮೂರ್ತಿ ಮುನಿಮುಖ
ದರ್ಪಣನು ಶಿಷ್ಯನನು ಕರೆದು ಸ
ಮರ್ಪಿಸಿದನರಸಂಗೆ ವೇದವ್ಯಾಸ ಮುನಿರಾಯ || ೮

ರಾಯ ಕೇಳೈ ಪೂರ್ವ ಪಾಂಡವ
ರಾಯಕಥನವನೆಂದು ವೈಶಂ

---

1 ಇದೆಂತ್ತೈ, ಚ. ಛ.   2 ನಿಮ್ಮನುಜ್ಞೆಯಲೆಂದು, ಚ. ಛ

ಪಾಯನನನು ಬೆಸಸಿದನು ಕೊಟ್ಟನು ಬಹಳಪುಸ್ತಕವ ।
ರಾಯನತಿಭಕ್ತಿಯಲಿ ವೈಶಂ
ಪಾಯನಗೆ ವಂದಿಸಿ ನಿಜಾಭಿ
ಪ್ರಾಯದಲಿ ಕೇಳಿದನು ಚಿತ್ತೈಸುವುದು ಮುನಿನಿಕರ ॥ ೯

ವಿತತಪುಸ್ತಕವನು ಸುಗಂಧಾ
ಕ್ಷತೆಯೊಳರ್ಚಿಸಿ ಸೋಮಸೂರ್ಯ
ಕ್ಷಿತಿಜಲಾನಲವಾಯುಗಗನಾದಿಗಳಿಗಭಿನಮಿಸಿ ।
ಶತಮಖಾದಿಸಮಸ್ತದೇವ
ಪ್ರತತಿಗೆಱಗಿ ಸರೋಜಭವಪಶು
ಪತಿಗಳಿಗೆ ಕೈಮುಗಿದು ವಿಮಳಜ್ಞಾನಮುದ್ರೆಯಲಿ ॥ ೧೦

ಇನನ ಧೇನುವ ದೇವರಾಯನ
ಮನೆಯ ಧೇನುವ ಜಗವ ಪೋಷಿಪ
ಮನಸಿಜಾರಿಯ ಮನೆಯ ಧೇನುವ ಬ್ರಹ್ಮಧೇನುವನು ।
ಮುನಿಜನಂಗಳ ಧೇನುವೆಲ್ಲವ
ಮುನಿವಸಿಷ್ಠನ ಕಾಮಧೇನುವ
ನೆನೆದು ವಿಸ್ತರಿಸಿದನು ಕಥೆಯನು ಭಾರತಾಖ್ಯವನು ॥ ೧೧

ವೇದನಾಲ್ಕದಱಂಗವಾಱು
ಷ್ಟಾದಶಾದಿಪುರಾಣಸ್ಮೃತಿಗಳೂ
ಳಾದಪೂರ್ವೋತ್ತರದ ಮೀಮಾಂಸಾಪರಿಕ್ರಮದ ।
ವಾದವಿವಿಧನ್ಯಾಯವನು ತಾ
ವಾದಿಯಲಿ ವಿಸ್ತರಿಸಿ ಸಲುಹಿದ [1]
ಬಾದರಾಯಣಗೆಱಗಿ ವೈಶಂಪಾಯನನು ಪೇಳ್ದ ॥ ೧೨

ಅರಸ ಕೇಳೈ ನಾರದಾದ್ಯರು
ಸರಸಿರುಹಸಂಭವನ ಸಭೆಯಲಿ
ವರಮಹಾಭಾರತವ ಕೊಂಡಾಡಿದರು ತವತವಗೆ [2]

---

1 ರಕ್ಷಿಸಿದ. ಚ. ಛ. 2 ಭಕ್ತಿಯಲಿ, ಗ. ಘ. ಚ. ಛ.

* ವರಮಹಾಭಾರತವಿದೊಂದೇ
ದುರಿತದುರ್ಗೋತ್ತರಣಕಾರಣ
ಪರಮಶ್ರುತಿಯೆಂದೆನಿಸಿ ಮೆಱೆವುದೀರೇೞುಲೋಕದಲಿ * ॥ ೧೩

ಹೇೞಿದನು ಪೌಲೋಮಚರಿತ
ವ್ಯಾಳತಾರ್ಕ್ಷ್ಯರ ಚರಿತವನು ಮುನಿ
ಹೇೞಿದನು ಫಣಿನಿಕರಗರುಡಾಸ್ತಿಕರ ಸಂಭ್ರಮವ ।
ಮೇಲೆ ಬೞಿಕ ಪರೀಕ್ಷಿದವನೀ
ಪಾಲಶಾಪವ ಮರಣವನು ನೆಱೆ
ಹೇೞಿದನು ಮುನಿಗಳಿಗೆ ಸರ್ಪಾಧ್ವರವ ಸಂಗತಿಯ ॥ ೧೪

ಕೇಳಿದನು ಜನಮೇಜಯಕ್ಷಿತಿ
ಪಾಲ ವೈಶಂಪಾಯನನನು ನಾ
ಭೀಳದುರಿತಂಗಳಿಗೆ ಪ್ರಾಯಶ್ಚಿತ್ತರೂಪದಲಿ ।
ಕೇಳಿರೈ ಮುನಿನಿಕರವೀಕಲಿ
ಕಾಲದಲಿ ಫಲಿಸುವುದು ಲಕ್ಷ್ಮೀ
ಲೋಲನಾಮಸ್ಮೃತಿ ಮಹಾಭಾರತಕಥಾಶ್ರವಣ ॥ ೧೫

ರಾಯ ಚಿತ್ತೈಸೆಂದು ವೈಶಂ
ಪಾಯನನು ಹೇೞಿದನು ಕಮಲದ
ಳಾಯತಾಕ್ಷನ ಬಾಲಕೇಳಿವಿಧೂತಕಿಲ್ಬಿಷವ ।
ಕಾಯಕಲ್ಮಷಹರವಖಿಳನಿ
ಶ್ರೇಯಸದ ಶುಶ್ರೂಷೆಯಲಿ ಸಂ[1]
ದಾಯಕವ ನಿರ್ಮಳಮಹಾಭಾರತಕಥಾಮೃತವ ॥ ೧೬

ಎರಡನೆಯ ಸಂಧಿ ಮುಗಿದುದು

---

* ವರಮಹತ್ತ್ವದಿಭಾರವತ್ತ್ವದಿ । ವರಮಹಾಭಾರತವಿದೊಂದೇ ।
ದುರಿತದುರ್ಗವಿಭಾಡಕರವೀರೇೞುಲೋಕದಲಿ ॥ * ಗ. ಘ. ಚ. ಛ.

ಸದ್ರೂಪುವಿನಸಂ, ಚ. ಛ.

ಮೂ ಱ ನೆ ಯ ಸ ಂ ಧಿ .

ಸೂಚನೆ

ಪುತ್ರಕಾಮೇಷ್ಟಿಯನು ಮಾಡಿದ
ಸತ್ರ ಯೋಗ [1] ದಬಟ್ಟಿಕ ವಿಪ್ರ [2] ಪ
ವಿತ್ರರಚನೆಯ ಕೇಳಿದಾಯಿತು ಹತ್ಯ ಹದಿನೆಂಟು ॥

ಜನಮೇಜಯನು ರಾಜ್ಯರಕ್ಷಣ ಮಾಡುವಾಗ ವೇದವ್ಯಾಸರ ಆಗಮನ

ಪಿತನು ಸ್ವರ್ಗಕ್ಕೈದಲಿತ್ತಲು
ಕ್ಷಿತಿಯ ಪಾಲಿಸುತಿರಲು ಭೂಪನ
ಪಿತಪಿತಾಮಹರವರ ಮುತ್ತಯ ಬದರಿಕಾಶ್ರಮದಿ ।
ಕ್ರತುಸಹಸ್ರದನಂತಕೋಟಿ
ಕ್ಷಿತಿಯೊಳುಳ್ಳ ಸಮಸ್ತತೀರ್ಥದ
ಗತಿಯನೀವ ಮಹಾನುಭಾವರ ಪಿತನು ನಡೆತಂದ ॥ ೧

ಬಟ್ಟಿಕ ವೇದವ್ಯಾಸದೇವರು
ಪ್ರೊಲಿದು ಜನಮೇಜಯನ ಹೊರೆಗಾ
ಕೆಲವುದಿನವೈತಂದು ಕಾಲಜ್ಞಾನವಾದುದನು ।
ತಿಳುಹಲೋಸುಗ ತಮ್ಮಯಾಶ್ರಮ
ನೆಲೆಯ ಠಾವಿಂದಾಗ ಬಂದರು
ಪ್ರೊಲಿದು ತಮ್ಮನ್ವಯದ ಬಳವಿಗೆಗಾಗ ಲೋಭದಲಿ ॥ ೨

ಬಂದ ವೇದವ್ಯಾಸದೇವರಿ
ಗಂದವಿಟ್ಟನುವಾಸನಾದಿಯೊ
ಳಂದು ಮಧುಪರ್ಕವನು ಸತ್ಕೃತಿಗಳಲಿ ಮನ್ನಿಸಿದ ।

---

[1] ಸರ್ಪಯಾಗ, ಗ ಸತ್ರಯಾಗ, ಕ ಖ ಘ   [2] ರಾಯಬಟ್ಟಿಕ, ಘ

ಬಂದುದನು ಬೆಸಗೊಳಲಿಕಾಕ್ಷಣ
ವೆಂದನೃ ಸತ್ಯವತಿಯ ಸುತನು
ಮುಂದೆ ಹೇೞುವದೊಂದು ಕಾಲಜ್ಞಾನವಿಧಿಯುಂಟು ॥ ೩

ವೇದವ್ಯಾಸರು ಮುಂದೆ ಬರುವ ತೊಂದರೆಯನ್ನು ಹೇಳುವಿಕೆ.

ಅರಸ ಕೇಳ್ಯ ಯೇೞುದಿನದೊಳು
ತುರಗ ತಾನೊಂದಮಳಶ್ವೇತದ
ನಿರುತ ತಾನದನೊಬ್ಬ ಭೂಪತಿಯಧಿಕಹರುಷದಲಿ ।
ಪರುತವಿಸೆ ನೀನದನ ನೋಡದೆ
ಯಿರುತಿಹುದು ನೀ ನೋಡಿದಾದೊಡೆ
ಯರಸ ಕೊಳಲಿಕೆ ಯದಕೆ ಚಿತ್ತವ ಮಾಡದಿರು ಬೞಿಕ ॥ ೪

ಆದೊಡೆಯು ನೀ ಕೊಂಡೆಯಾದೊಡೆ
ಮೇದಿನೀಪತಿಯದನು ಲಾಯಕೆ
ವೇದಿಸಿಯೆ ನೀನೇೞಚಿತ್ತವ ಮಾಡದಿರು ಬೞಿಕ ।
ಆದರಿಸಿ ರಾವುತಿಕೆಯಾದುದ
ಭೇದವಿಲ್ಲದೆ ಮಾಪ್ಪ ಪಯವನು
ಸಾಧನೆಯ ಧನಪತಿಯ ದಿಕ್ಕಿಗೆ ಹೋಗದಿರಿ ಯೆಂದ ॥ ೫

ಎಂದೊಡೆಯು ನೀ ಮಾಣದುತ್ತರ
ದಂದಕ್ಕೈದುವೆ ಯಾದೊಡಲ್ಲಿಯು
ಮಂದರಾಚಲದಲ್ಲಿ ಕಾಣಿಸಿ ಕೊಂಬಳೊಬ್ಬಬಲೆ ।
ಮುಂದೆ ಕಾಣಲು ನೀನುವಾಕೆಯ
ಮಂದಿರಕೆ ತಂದವಳ ಸತಿಯರ
ವೃಂದನಾಯಕತನದಲಿಕ್ಕದೆ ಯಿಹುದು ಮತ್ತಿದನು ॥ ೬

ಮಿಾೞಿಯಾಕೆಯ ನೀೞಿತನವ ವಿ
ಚಾರಿಸದೆ ಪತಿಕರಿಪೆ ಯಾದೊಡೆ
ನೀೞಿಯನು ನೀ ಯಜ್ಞಕಾಲಕೆ ಕರೆದು ಪಿಂಡವನು ।

ಹಾಱಿಸುವುದೈ ಯೆನಲು ಮತ್ತಿದ
ಹಾಱಬಡಿಯದೆ ಯಜ್ಞ ಪಿಂಡವ
ನೀಱೊಳಗಿಕ್ಕಸದೆ ಸರ್ವದ ಯೆಂದನಾಮುನಿಪ ॥ ೭

ಮೀಱದಿರು ನಾವೆಂದ ಮಾತನು
ತೋಱಿ ಕಳೆವುದು ತಾವು ಹೇಳಿದ
ತಾರುಥಟ್ಟನ ಮಾತದೆಲ್ಲವ ನೆನಲಿಕಿಂತೆಂದ ।
ತಾರುಥಟ್ಟನು ಹೇಳ್ವ ನೀಱಿರು
ತೋಱಿ ನುಡಿಯರದೇನು ಹಿಂದಣ
ಧೀರರಾಯರು ನಮ್ಮ ಪೂರ್ವದಲಾಪಿತಾಮಹರು ॥ ೮

ಮುನ್ನ ಪಾಂಡವಕೌರವಾಧಿಪ
ರುನ್ನತದ ಕದನದಲಿ ನೀ ವಿರು
ತೆನ್ನಿರೇ ಕಾಳಗವು ಕಷ್ಟವದೆಂಬ ಮಾತುಗಳ ।
ಮನ್ನಣೆಯುಲದನೇಕೆ ನಿಲಿಸಿರಿ
ಯೆನ್ನ ಸನ್ನೆಯು ಕೇಳಿ ಕಾಳಗ
ಮುನ್ನವೇ ಬೇಡೆಂದು ಮಾಣಿಸಿರೆಂದನಾಭೂಪ । ೯

ಹಮ್ಮಲೇಕದುವೆನಲು ಮುನಿಪತಿ
ಹಮ್ಮ ಹಿಡಿದಿಹ ನೃಪರು ಹಿರಿಯರು
ನಮ್ಮ ಹೇಳಿದ ಮಾತ ಕೇಳರು ಎಂದನಾಮುನಿಪ ।
ಹೊಮ್ಮಿನಲಿ ಸಿಂಹಾಸನಾಗ್ರದ
ಸೊಮ್ಮಿನಲ್ಲಿರೆ ನೀನು ನಮ್ಮಯ
ರೊಮ್ಮದೀಮಾತಿದನು ಮಾಡಿದ ನೋಡಿ ಬಳಿಕೆಮಗೆ ॥ ೧೦

ಹೇಳಿತೆಂಬೀ ಕುಂದ ಹೊಱಿಸುವ
ಕೇಳು ಕೌರವರೊಬ್ಬರೆಂದುದು
ತಾಳಲೊಲ್ಲರು ಹಿತರು ಹೇಳಿದ ಪೂರ್ವಸೂಚನೆಯ ।

ಕೇಳು ಜನಮೇಜಯನೆ ನಮ್ರಯ
ಹೇಳಿಕೆಯನೊಂದೇಟು ದಿನದೊಳು
ಕೇಳಿ ನಡೆವುದು ಎಂದು ವೇದವ್ಯಾಸಮುನಿ ನುಡಿದ ॥ ೧೧

ವೇದವ್ಯಾಸರು ಹೇಳಿದಂತೆ ಹಯವು ಬರಲು ಅದನ್ನು ಲಾಯದಲ್ಲಿ ಕಟ್ಟುವಿಕೆ.

ಬೊಮ್ಮಬೋಧೆಯ ಹೇಳಿ ಕೇಳಿಯು
ಸುಮ್ಮನಿಹ ನೃಪತನವು ಬಂದಿರೆ
ಹೆಮ್ಮೆಯಲಿ ಹಿರಿದಾಗಿ ಕೆಡುವರು ಹಿತರು ಹೇಳಿದರೆ ।
ಒಮ್ಮೆ ಕೇಳರು ಎಂದು ಮುನಿಪತಿ
ತಮ್ಮ ಬದರಿಕೆಗೈಯ್ದಲಿತ್ತಲು
ಕರ್ಮವಶದಿಂದಾಗ ಬಂದುದು ತುರಗವಿಭಪುರಿಗೆ ॥ ೧೨

ಅಮ್ಮದಾತುರಗವನು ನೋಡದೆ
ಸುಮ್ಮನಿರುತಿರಲವರು ಸಾಧಿಸಿ
ಒಮ್ಮೆಯೋಲಗ ಕೇಳಿ ತೋಟಲಿಕರಸ ಹರುಷಿಸಿದ ।
ತಮ್ಮ ಪಿತರ ಪಿತಾಮಹರ ನುಡಿ
ಸೊಮ್ಮಿನಲಿ ಪಿರಿದೆನಿಸ ಹಿರಿಯರ
ದೊಮ್ಮೆ ಬುದ್ಧಿಯನೀವ ಋಷಿವಚನವನು ಮೀಱಿದನು ॥ ೧೩

ಕೊಂಡನಾತುರಗವನದಾಕ್ಷಣ
ಗಂಡುಗಲಿ ಮನವೆಳಸಿದಾಗಳು
ದಂಡೆಯಿದು ಲೇಸೆನುತ ಮೀಟಲಿಕೆ ತುರಗ ಖುರಗಳಲಿ ।
ದಿಂಡುದಿರುಹುತ್ತಿರಲದಕ್ರಾಥ
ಗಂಡುಗಲಿ ಶಾಬರನೃಪನು ಮುಂ
ಕೊಂಡು ಹೊಗಟುತ್ತಿರಲು ತುರಗದ ಪೂರ್ವಪಾಯುವನು ॥ ೧೪

ವಿರಚಿಸಿದ [1] ಗುರುವೆಂದ ಮಾತನು
ಭರದಿ ಮೀಱಿದ ನೋಡಿ ಸುಮ್ಮನೆ

---

[1] ನಿರವಿಸಿದ, ಘ. ಜ.

ಯಿರದೆ ಕೊಂಡನು ಬಟ್ಟಿಕ ಲಾಯದಿ ಕಟ್ಟಿಸಿದ ಹಯವ ।
ನಿರುತ ಕಟ್ಟಿಸಿ ತಾನು ಗುರುಗಳು
ವೊರೆದ ಮಾತನು ಮೀಱಿ ತನ್ನಯ
ದುರುಳಬುದ್ಧಿಯ ಮಾಡಿ ನಡೆಸಿದ ರಾಜಮಾರ್ಗದಲಿ ॥ ೧೫

ಒಮ್ಮೆಯುಜ್ಜುಗಬಡುತಲೆಂದನು
ಹೆಮ್ಮೆಯಲಿ ಬಂದುದನು ಕೊಂಡೆವು
ಒಮ್ಮೆಯೇಱುವ ತನ್ನಿ ಯೆನಲಿಕೆ ನೆರೆದ ಮಂತ್ರಿಗಳು ।
ನಿಮ್ಮ ಗುರುಗಳು ಬೇಡವೆಂದರು
ಕರ್ಮಗತಿಯು ತುರಗವನೆನಲಿಕೆ
ಸುಮ್ಮನೆಲ್ಲರ ಜಱಿದು ತರಿಸಿಗನಾಮಹಾಹಯವ ॥ ೧೬

ರಾಜನು ಕುದುರೆಯ ಮೇಲೆ ಏರಲು ಅದು ಮಂದರಾಚಳಕೆ ತಂದು ಬಿಡುವಿಕೆ.

ತರಿಸಿ ಯಾರೋಹಣವ ಮಾಡಿದ
ಬೆರಸಿ ಸೂತರ ನೋಡೆ ಹಯ ತರ
ಹರಿಸದಿರಲಾ ಹಂದಿ ಹಾಯ್ದುದು ಬಡಗದಿಕ್ಕಿನಲಿ ।
ತುರಗವರಸನ ಕೊಂಡು ಮಂದರ
ಗಿರಿಯ ಹೊಗಿಸಿತು ಹಂದಿ ಹಿಂದಕೆ
ಸರಿದು ತಪ್ಪಿತು ಬಟ್ಟಿಕ ಮತ್ತಾರಾಯ [1] ನನು ಹೊಗಿಸಿ ॥ ೧೭

ಮಂದರಾಚಲದಲ್ಲಿ ಶಾಪದಿಂದ ಮನುಷ್ಯಳಾಗಿದ್ದ ದೇವಸ್ತ್ರೀಯನ್ನು ನೋಡಿ ಆಕೆಯನ್ನು ಅರಮನೆಗೆ ಕರೆದುಕೊಂಡು ಹೋಗುವಿಕೆ.

ಮಂದರಾಚಲದೊಳಗೆ ಶೂಲಿಯ
ಮಂದಿರವು ರಮಣೀಯವಾಗಿರ
ಲಿಂದುವದನೆಯು ವಿದ್ದಳಾಸುರಪತಿಯ ಶಾಪದಲಿ ।
ಒಂದುದಿನ ಸೈರಂಧ್ರಿ ತನ್ನಯ

---

1 ಪರಿದು ತಪ್ಪಿಸಿ ಮರಳಿ ಬಂದುದುರಾಯ, ಘ. ಜ.

ಮಂದಿರಕೆ ಬರೆ ಯಾತಿಲೋತ್ತಮೆ
ಮುಂದು ಗಾಣದೆ ನಗ್ನೆಯಾಗಿರೆ ಶಾಪವಶೆಯಾಗಿ ॥ ೧೮

ನರನ ಸ್ತ್ರೀಯಾಗಿರುವುದೊಂದೇ
ವರುಷಪರಿಯಂತರವದೆಂಬಾ
ಸುರಪತಿಯ ಶಾಪದಲೆ ಇದ್ದಳ ಕಂಡನಾ ನೃಪನು ।
ಸುರಸತಿಯ ನೋಡಲಿಕೆ ಮೋಹಿಸಿ
ಹರುಷದಲಿ ಪಲ್ಲವವ ಹಿಡಿಯಲಿ
ಕರಸ ನೀ ಯೆನ್ನರಸನಪ್ಪೊಡೆ ನಿನ್ನ ಸತಿಯರೊಳು ॥ ೧೯

ಇಂದು ನಿನ್ನಯ ಪಟ್ಟದರಸಿಯ
ಳೆಂದು ಕೊಂಡಾಡುವೊಡೆ ಬಪ್ಪೆನು
ಎಂದೆನಲು ಕಾಮಾತುರನು ತಾನಧಿಕತಾಪದಲಿ ।
ಎಂದುದನು ಪತಿಕರಿಸಿ ಕೊಟ್ಟನು
ತಂದನಿಭಪುರಿರಾಜಧಾನಿಯೊ
ಳಿಂದುವದನೆ ಯಿರುತಿರೆ ಕತಿಪಯದಿನಕೆ ಮುನಿ ಬಂದ ॥ ೨೦

ಬಂದು ಭೂಪನ ಕರೆದು ತಾನೇ
ನೆಂದು ಹೇಳದದಾಯ್ತೆಯೆನಲಿಕೆ
ವಂದಿಸುತ ಮುನಿವರನ ಚರಣಕೆ ಚಾಚಿದನು ಶಿರವ ।
ತಂದೆ ಸಾಕ್ಷಾದ್ಬ್ರಹ್ಮಕೋಟಿಯ
ತಂದೆ ನಮ್ಮಯ ಕುಲಕೆ ತನ್ನನು
ಮಂದಮತಿಯೆಂದಱಿದು ಕಾವುದು ವ್ಯಾಸಮುನಿರಾಯ ॥ ೨೧

ಮಕ್ಕಳಿಲ್ಲವೆಂದು ಪುತ್ರಕಾಮೇಷ್ಟಿಯನ್ನು ಮಾಡುವಿಕೆ

ಎಂದು ಬಿನ್ನಹ ಮಾಡಿದನು ತನ
ಗಿಂದು ಮೂವತ್ತಾಱುವತ್ಸರ
ಹಿಂದುಗಳೆದವದೊಬ್ಬ ಪುತ್ರನು ಜನಿಸುವಂದವನು ।
ಇಂದು ಕರುಣಿಸಬೇಹುದೆನಲಿಕ

ದೊಂದು ಹಯಮೇಧವನು ಮಾಡಿಸ
ಲಂದು ಸುತ ಜನಿಯಿಸುವನೆನಲಿಕೆ ಭೂಪ ಕೈಕೊಂಡ ॥ ೨೨

ಮತ್ತೆ ಭೂದೇವರನು ನೆರಹಿದ
ಪುತ್ರಕಾಮೇಷ್ಟಿಯನು ಮಾಡಿಸಿ
ಚಿತ್ತವಲ್ಲಭೆಯುಖಿಯುದಂತಿರೆ ನದಿಯ ತೀರದಲಿ ।
ಅತ್ತಲಿರೆ ನಾರದನು ಯುವತಿಗೆ
ಬಿತ್ತಿದನು ತಾ ಯಜ್ಞಬೀಜವ
ನೆತ್ತಿದಾಗ್ರಹದಿಂದ ಬಂದಳು ಕೇಳದಾಕ್ಷಣಕೆ ॥ ೨೩

ಬರಲಿಕಾ ಯಜ್ಞಾಂತವಾಯಿತು
ಧರಣಿದೇವರು ನೃಪಗೆ ನುಡಿದಪ
ರರಸಿ ಯೊಬ್ಬಳ ಯಾಗಶಾಲೆಗೆ ಕರೆಯ ಕಳುಹೆನಲು 1 ।
ತ್ವರಿತದಲಿ ನೃಪವರನು ಬಿಡೆಯಕೆ
ಸುರಸತಿಯು ನೋಡಲಿಕೆ ಪಿಂಡಕೆ
ಧರಣಿದೇವರು ನುಡಿದರಾಕೆಗೆ ತುರಗಸೃಷ್ಟಿಯನು ॥ ೨೪

ಭರದಲೀಕ್ಷಿಸಿ ಯೊತ್ಮಯೋನಿಯು
ಬೆರಸಿಕೋ ಯೆನೆ ಯಾಕೆ ಯಾಕ್ಷಣ
ಶಿರವಖಿದ ಹಯಕಿದಿರು ಕುಳ್ಳಿರೆ ನಗ್ನೆತಾನಾಗಿ ।
ನಿರುತ ಲಾವಣಿಗೆಯಲಿ ಹೊಕ್ಕಿರೆ
ಸುರಪತಿಯು ಹಯದಲ್ಲಿ ಮೆಸಿಸಿದ
ನೆರೆದನೈತನ್ನಾತ್ಮಸತಿಯಳ ಯಜ್ಞಕಾಲದಲಿ ॥ ೨೫

ವರಘೃತಾಚಿಯು ರಂಭೆ ಮೇನಕೆ
ಸುರಮನೋಹರಿಯೂತಿಲೋತ್ತಮೆ
ನಿರುತ ಶೃಂಗಾರಾಬ್ಧಿ ಯೂರ್ವಶಿ ಪರಮಸುವ್ಯಾಸಿ ।
ಭರತಜೀವನೆ ಕಾಮಘೋಷಿತೆ

1 ಕಳುಹಬೇಹುದೆನೆ, ಜ. ಘ

ಸುರಪತಿಯು ಸತಿನಿಕರ ಮಧ್ಯಕೆ
ವರಸತಿಯೊಳವರಧಿಕ ಮೂವತ್ತಾಱುಲಕ್ಷದಲಿ ॥ ೧೬

ಮಿಗಿಲು ಸುತ್ರಾಮಾದಿಗಾಗಳು
ಹಗಲಿರುಳು ವಲ್ಲಭರು ಮಾಡುವ
ಜಗದ ಯಜ್ಞಗಳೆಲ್ಲ ವಿವರಿಗೆ ಸ್ವರ್ಗಸದನದಲಿ ।
ಹೊಗುವುವಿವರಿಗೆ ಯುಳುಕಿ ಭೂಪರು
ಮಿಗಿಲೆನಿಸುವೀರೇೞುಜಗಗಳ
ಸೊಗಸಿ ಬಾಗಿಲ ಬೋವರಾಗಿಯೆ ಯಿಹರು ಯಾಸತಿಯ ॥ ೧೭

ಬಳಿಕ ರಾಜನು ಪೂರ್ಣಪಾತ್ರಯಲ್ಲಿರತಕ್ಕ ಜಲವನ್ನು ಮುಟ್ಟಲು ಋತ್ವಿಜರು ಸಾಯುವಿಕೆ.

ನೆರೆದು ಸುರಪತಿ ಹೋಗಲಾಸತಿ
ತುರಗದುಪಟಳ ತಾಳ[1] ದಾಗಳು
ಧರಣಿಯುಲಿ ಕೆಡೆದಿರಲು ಭೂಪತಿ ದ್ವಿಜರ ಕೇಳಲಿಕೆ ।
ಅರಸಿ ಕೆ[2] ಡೆದಳದೇತಕೆಂಬೀ
ತ್ವರಿತದಲಿ ನಡೆತಂದು ವಿಪ್ರರ
ನರಸಮುಟ್ಟದೆ ಯಜ್ಞದೀಕ್ಷೆಯ ಪೂರ್ಣಪಾತ್ರಯುಲಿ ॥ ೧೮

ಮಂತ್ರಜಲವಿರಲರಸ ಬ್ರಾಹ್ಮರ
ತಂತ್ರವನು ತಾನಱಿಯದಾಗ ಸ್ವ
ತಂತ್ರತಳದನದಾಗಳಾಹದಿನೆಂಟು ಋತ್ವಿಜರು ।
ಮಂತ್ರಮುಖಿಗಳು ಬೀಲೆ ಭೂಸುರ
ರಂತರಿಕ್ಷಕೆ ಹಾಯ್ದು ಹೋದರು
ಕಂತುಪಿತನಹ ವ್ಯಾಸವಾಕ್ಯವ ಮೀಱಲಿಂತಾಯ್ತು ॥ ೧೯

ಸುರಸತಿಯು ಪರವಶತೆಯಿಂದಿರ
ಲರಸ ಚಿಂತಾಕ್ರಾಂತನಾಗಿರೆ

---

1 ತಾರ, ಕ. ಖ. ಗ.   2 ಅರಸುತ್ತ, ಕ. ಖ. ಪ

ಹಿರಿದು ಚಿಂತಿಸಿ ವ್ರುಚಿದ ಭೂಸುರರೆಲ್ಲರನು ಕೇಳೆ ।

ರಾಜನಿಗೆ ಬ್ರಹ್ಮಹತ್ಯ ಬಂತೆಂದು ಪುರೋಹಿತರು ಹೇಳುವಿಕೆ.

ನಿರುತ ವೆಂದರು ನೀನು ಮಾಡಿದ
ವರಮಹಾಪುತ್ರೇಷ್ಟಿಕಾಮ್ಯವು
ಹರುಷವಾಯಿತು ನಿನಗೆ ಬಂದುದು ಹತ್ಯ ಬ್ರಾಹ್ಮರದು ॥ ೩೦

ಬೞಿಕ ಸುರಸತಿಯಾದ ಪುತ್ರನ
ಸಿಳೆಯು ವಲ್ಲಭಗಿತ್ತು ಸ್ವರ್ಗದ
ನೆಲೆಗೆ ಹಾಯ್ದಳು ಶಾಪ ಹಿಂಗಲು ಹೋದಬೞಿಕಿತ್ತ ।
ಇಳೆಯುವಧುವಲ್ಲಭನ ಪುಣ್ಯ
ಸ್ಥಳಕೆ ಬಂದುದು ಹತ್ಯ ವಿಪ್ರರ
ಬಳಗ ಹದಿನೆಂಟಾಗೆ ದೇವಾಂಗನೆಯು ಸಂಗದಲಿ ॥ ೩೧

ಇಳೆಯೊಳಾವನು ಹಿರಿಯರಾಜ್ಞೆಯ
ನೊಳಿಸಿದವಗೀಪರಿಯ ಪಾತಕ
ನೆಲಸುವುದು ದಿಟವೆಂದು ಸೂತಜನುಸುರೆ ಮುನಿಗಳಿಗೆ ।
ಕೇಳಿರೈ ಮುನಿಗಳಿರ ಹತ್ಯವ
ಜಾಳಿಸಲಿಕಿನ್ನಾವುದೆಂದಾ
ಲೋಲಮತಿ ಚಿಂತಿಸುತಲಿರ್ದನು ನೃಪನು ಮನದೊಳಗೆ ॥ ೩೨

ದೇವ ಕಂಡಿರೆ ವ್ಯಾಸದೇವರು
ಪೋವಿ ನಿಮಗಂದೆಂದ ಮಾತನು
ನೀವು ಚಿತ್ತವಿಸಿದಿರೆ ಎಂದರು ಮಂತ್ರಿಸಂದೋಹ ।
ಭಾವಿಸಲು ಹದಿನೆಂಟು ದ್ವಿಜವಧೆ
ಪೋವಿ ಬಂದವು ನಿಮಗದೆನಲಿಕೆ
ಕೋವಿದನು ತಾ ಬಂದ ವೇದವ್ಯಾಸಮುನಿರಾಯ ॥ ೩೩

ಬ್ರಹ್ಮಹತ್ಯ ಹೋಗಲು ಉಪಾಯವೇನೆಂದು ಕೇಳಲು ಭಾರತವಂ ಕೇಳೆಂದು ವ್ಯಾಸರ ಉಪದೇಶ.

ಬಿದ್ದು ಹೊರಳಿದನೆನಗೆ ಹತ್ಯದ
ಮದ್ದದಾವುದೊ ಎನಲು ತತ್ವದ
ಶುದ್ಧಿಬದ್ಧನು ಬಾದರಾಯಣರಾಯನಿಂತೆಂದ |
ತಿದ್ದಿ ಹೋಹುದು ನಿನ್ನ ಪಾಪಕೆ
ಮದ್ದು ತಾನೊಂದಿಹುದು ಭಾರತ
ವೊದ್ದಿದಲಿ ನೆಗಹುದು ಪಾಪದ ರಾಶಿಯೊಳಗಿಂದ || ೨೪

ಕರಿಯ ಕಂಬಳಿಯಿಂದ ಗದ್ದುಗೆ
ನಿರುತದಲಿ ಹದಿನೆಂಟು ಕೇಳಿದು
ಯರಸ ಕೇಳ್ಯ ಬಿಚ್ಚಿಕ ಗದ್ದುಗೆಯೆಲ್ಲ ಬಿಳಿದಹುದು |
ಹರಿಕಥಾಮೃತವೆಂಬ ಭಾರತ
ವರಕಥೆಯ ನೀ ಕೇಳ್ವುದೆಂದಾ
ವರಮುನಿಯು ನೇಮಿಸಿದ ವೈಶಂಪಾಯನವ್ರತಿಗೆ || ೨೫

ಭಾರತಾಧ್ಯಾಯವನು ಮಾಡುವ
ಸಾರಹೃದಯರುಗಳಿಗೆ ಸುಕೃತವು
ಸೇಱುವುದು ವಿಶ್ವಾಸವುಳ್ಳೊಡೆ ಸಕಲಪಾತಕವು |
ತೀರುವುದಲೆ ಪಾದವೊಂದಱ
ಭಾರಣೆಗೆ ನಿಶ್ಚಯವಾಗಿ ವಿ
ಚಾರವೇತಕೆ ಕೇಳು ಜನಮೇಜಯಮಹೀಪಾಲ || ೨೬

ಒಂದುಪದವನು ಕೇಳಿದರೆ ಸಾ
ಕೊಂದರೊಳಗರ್ಥವನು ಕೇಳ್ದರೆ
ವೊಂದುಪದದೊಳಗೆರಡುಮಾತನು ಕೇಳಿದರೆ ಸಾಕು |
ಒಂದುಪದವನು ಕೇಳಿದವರಿಗ
ದೊಂದು ಪದವನು ಹೇಳಿದವರಿಗೆ
ಕುಂದದಿಹ ಪರಸುಖವನೀವನು ವೀರನಾರಯಣ || ೨೭

ನಿರುತದಲು ತಾ ಪುಷ್ಯಮಾಸದ
ವರತ್ರಯೋದಶಿಯಲ್ಲಿ ಶುದ್ಧದ
ಪರಮಶುಭಕೃತುವಬ್ದದೊಳಗಂದರಸ ಹರಿಕಥೆಯ |
ವರಮುನಿಯ ಕಯ್ಯಿಂದ ಕೇಳಲು
ಯರಸಗಬುಪಿಯು ತಮ್ಮ ಶಿಷ್ಯಗೆ
ನಿರುತದಲಿ ಹೇಳೆನುತಲಾಶ್ರಮಕೈದಿದನು ಮುನಿಪ || ೩೮

ಇಷ್ಟಕಥೆಯನು ಸೂತ ಮುನಿಯು
ತ್ಕೃಷ್ಟ ಶೌನಕರಿಂಗೆ ಪೇಳಿದ
ಯಷ್ಟವಿಂಶತಿಯೆನಿಪ ದ್ವಾಪರದಂತ್ಯಸತ್ಕಥೆಯ |
ಶಿಷ್ಟಸಂರಕ್ಷಣೆಯ ನಿಗ್ರಹ
ದುಷ್ಟಜನರಿಗೆ ಮಾಳ್ಪ ಯಾದವ
ಸೃಷ್ಟಿಪ್ರತಿಪಾಲಕನ ಮಹಿಮೆಯ ಮುನಿಪ ಹೇಳಿದನು || ೩೯

ಫಲಕಥನ.

ರಾಯ ನೀ ಭಾರತವ ಸಾಭಿ
ಪ್ರಾಯದಲಿ ಕೇಳುವುದು ಹೇಳುವೆ
ನ್ಯಾಯದಿಂದೇ ಮನ್ನಿಸೆಂದನು ಭೂಪತಿಗೆ ಮುನಿಪ |
ರಾಯ ಮುನಿದ್ವೈಪಾಯನಾಂಘ್ರಿಯ
ಗೇಯ ಮಾಡಿದ ಮತ್ತೆ ಪುನರಪಿ
ರಾಯ ಮನದಲಿ ಧ್ಯಾನ ಮಾಡಿದನೇಕಚಿತ್ತದಲಿ || ೪೦

ಕೇಳತೊಡಗಿದನಾಮಹಾಮುನಿ
ಹೇಳಿದಂದದಿ ಗುರುವಿಗೆಱಗಿಯು
ಕಾಳಕಂಬಳಗದ್ದುಗೆಯನಳವಡಿಸಿ ಯರ್ಚಿಸಿಯು |
ಭಾಳನಯನನ ಚರಣಕಮಲವ
ಲೀಲೆಯಲಿ ಧ್ಯಾನಿಸುತ ಲಕ್ಷ್ಮೀ
ಲೋಲನನು ನೆನೆವುತ್ತ ಗುರುವಿಗೆ ನಮಿಸಿ ಕೈಮುಗಿದ || ೪೧

ಹೇಳಿದನು ಹದಿನೆಂಟುಪರ್ವದ
ಯೇಳಿಗೆಯನಾದ್ಯಂತವಾಗಿಯೆ
ಹೇಳಿ ತೊಡಗಿದನಂದು ವೈಶಂಪಾಯನಮುನಿವರನು ।
ಕೇಳು ಜನಮೇಜಯಧರಿತ್ರೀ
ಪಾಲ ವೇದವ್ಯಾಸದೇವರು
ಹೇಳಿದಂದದಿ ನಿಮಗೆ ಹೇಳುವೆ ಕೌತುಕಾವೃತವ ॥ ೪೦

ಅಲಿಸ್ಯ ಹದಿನೆಂಟುಹತ್ಯೆಯು
ಜಾಳಿಸಲಿ ಯೆಂದೆನಲು ಗದ್ದುಗೆ
ಮೇಲೆ ಕುಳ್ಳಿತು ಬಟ್ಟಕರೆಯನು ಬಿಟ್ಟು ಮೊದಲಾಗಿ ।
ಲೋಲ ಹದಿನೆಂಟಗ್ರಹಾರವ
ಕೇಳತೊಡಗಲಿಕಾಗ ಮಂಗಳ
ಲೋಲ ಗದುಗಿನ ವೀರನಾರಾಯಣನ ಕರುಣದಲಿ ॥ ೪೧

ಮೂರನೆಯ ಸಂಧಿ ಮುಗಿದುದು.

ನಾಲ್ಕನೆಯ ಸಂಧಿ.

ಸೂಚನೆ.

ಜನಿಸುವನು ತಾನಮರಹಿತದಲಿ
ಮನು [1] ಮಹೋತ್ಸಾಹಕನು ಲಕ್ಷ್ಮೀ
ವನಿತೆಯರಸನುವೊಲಿದು ಮತ್ಸ್ಯಾಕೃತಿಯ ತನುವಿಡಿದು ॥

ಮನುವು ಅರ್ಘ್ಯವನ್ನು ಕೊಡುವಾಗ ಮೀನು ಬರಲು ಅದಕ್ಕೆ ಅದರ ಪ್ರಾರ್ಥನೆಯ ಪ್ರಕಾರ ಸ್ಥಳಗಳನ್ನು ಕೊಡುವಿಕೆ.

ಕೇಳು ಜನಮೇಜಯಧರಿತ್ರೀ
ಪಾಲ ಸಾವರ್ಣಿಕೆಯನೆಂಬಾ

1 ಮುನಿ, ಘ.

ಲೋಲಮನು[1] ಸಂಧ್ಯಾದಿಕರ್ಮದೊಳರ್ಘ್ಯ ಗೊಡುತಿರಲು ।
ತೋಳ ಕೊನೆಯಲಿ ಕಂಡನರ್ಘ್ಯದ
ಮೇಲುಗುಡುಕೆಯೊಳಲ್ಲಿ ಮತ್ಸ್ಯನ
ಲೋಲಸೂಕ್ಷ್ಮದ ರೂಪ ಕರದಲು ಕಂಡು ಕರುಣದಲಿ ॥ ೧

ಇರಲು ಮನು ಮತ್ಸ್ಯನನು ಬಿಸುಡದೆ
ಕರಕಮಂಡಲುವಿನೊಳಗಿರಿಸಲು
ಧರೆಯ ಜೀವರ ನೋವ ಕಾಣದೆ ಮನು ಮಹೋತ್ಸವದಿ ।
ಧರಣಿಯಲಿ ಚೌರಾಶಿಲಕ್ಷದ
ಕರಣಜೀವರ ಹರಣಕಾಗಳು
ವರಮಹಾಕೃಪೆಯುಳ್ಳನನ್ಯರ ನೋಡನಾತಂಗೆ ॥ ೨

ಅದಕೆ ಪರಮಾಯುಷ್ಯಪರಿಯಲು
ವಿದಿತಸ್ವರ್ಗದೊಳರ್ಪರೆಂದ[2] ರೆ
ಮುದದಿ ಜೀವರ ನೋವ ಮಾಡದೆ ಸುಖವ ಬಯಸುವನು ।
ಉದಕವೆಱೆವ್ರತ ತುಷ್ಟಿಕರವಹ
ಮುದದಿ ಹಸಿದರಿಗನ್ನ ವೀವ್ರತ
ನದನಱಿದು ಜಲಪಾತ್ರೆಗಿರಿಸಲು ಬಳೆದನದ ತುಂಬಿ ॥ ೩

ಇಲ್ಲಿ ಮತ್ಸ್ಯಂಗಿರಲಿಕುಬ್ಬಸ
ಮೆಲ್ಲನಲ್ಲಿಂ ತೆಗೆದು ಕೇಲಿನೊ
ಳಲ್ಲಿ ತಾನಂದಿರಿಸೆ ಬಳದನು ಕೇಲು ತುಂಬಲಿಕೆ ।
ಅಲ್ಲಿ ಮತ್ಸ್ಯಂಗಿರಲದಾಯುತ
ವೆಲ್ಲನುತ ತಾ ಪರಿಮಳಾಂಬುಗ
ಳಲ್ಲಿ ಸರಸಿಯ ಜಕ್ಕವಕ್ಕಿಯ ಕೊಳನ ಮಧ್ಯದಲಿ ॥ ೪

ಅಲ್ಲಿ ಯಿರಿಸಲಿಕಾಸರೋವರ
ವೆಲ್ಲ ತುಂಬಿತು ಮನುಗೆ ಜಪತಪ

---

1 ಮುನಿ, ಘ.   2 ಳಿಹರುಯೆಂದ, ಕ. ಖ. ಗ. ಘ. ಙ.

ವೆಲ್ಲ ತಾನಂದಿದಕೆ ತೆಗೆತೆಗೆದಾತ ಬಳಲುತಲು ।
ಫುಲ್ಲನಾಭನ ಪ್ರಕೃತಿಯ್ಸ ಸಲೆ
ಬಲ್ಲರಿದನಾರೆನುತ ಮೆಲ್ಲನೆ
ನಿಲ್ಲದೈದಿದ ಮ[1]ತ್ಸ್ಯದೇವರನೊಯ್ದು ಗಂಗೆಯಲಿ । ೫

ಬಿಟ್ಟು ಬಿಜಯಂಗೈಸೆ ಗಂಗೆಯ
ನೈದೆ ತುಂಬಿದನೊಂದುರೂಪಿಲಿ
ಹೊಯ್ದು ಗಂಗೆಯಿ ಕೂರ್ಮಪರಿಯಂತತ್ತ ಬೆಳದಿರ್ದ ।
ಮೇದಿನಿಯು ಹೊಱಗಾಱರೆಲ್ಲರು
ವೇದಿಸುತ ಬೆಂಡಾಗುತಿರ್ದರು
ವಾದಯಾಂಬುಧಿ ವರಮಹಾಮನು ದೇವ ಗತಿ ಯೆನುತ ॥ ೬

ಆಗ ಪ್ರಾಪ್ತವಾದ ಪ್ರಳಯದಲ್ಲಿ ಮತ್ಸ್ಯರೂಪನಾದ ಹರಿಯು ಮನುವನ್ನು ಕಾಪಾಡುವಿಕೆ.

ಇರುತಿರಲು ತಾ ನಾಲ್ಕು ದಿಕ್ಕಿನ
ಶರಧಿಗಳು ಪರಿತಂದು ಲೋಕವ
ನರಸ ಮುಚ್ಚಲು ಪೃಥ್ವಿ ನಾವೆಯು ರೂಪುಗೊಂಡಿರಲು ।
ಪರಿಹರಿಸುತೀ ಜೀವರಾಶಿಯ
ಕರಣವನು ತಾ ಬೀಜಮೊಡೆಯ
ಹೊಱೆವ ಪರಿಯಲಿ ಹೊಱೆಯೆ ತಾನೀಮನುವು ಮೊದಲಾಗಿ ॥ ೭

ಬಳಿಕ ನಾವೆಯು ಪಾಶ ವಾಸುಗೆ
ಹೊಳವ ಹಗ್ಗವೆಯಾದ ಮತ್ಸ್ಯನು
ಬಿಳಿಯಕೋಡಿಗೆ ಸಿಕ್ಕಿದಂಬಿಗನಾದ ಸಾರ್ವೇಶ ।
ಇಳೆಯು ಜೀವರ ತುಂಬಿ ಭೂಮಿಯ
ನುಱುಹಿದನು ಹರಿ ಮತ್ಸ್ಯರೂಪದಿ
ಪ್ರಳಯಮನ್ವಂತರದಿ ರಕ್ಷಿಸಿದಾಮಹಾಮನುವ[2] ॥ ೮

---

1 ಯಲ್ಲಿಯಿಂ ವರಮ್ಮ, ಗ ಘ ಙ.   2 ಯುಗವ, ಖ ಗ.

ಬ್ರಹ್ಮದೇವರ ದಿನಮಾನಾದಿಕಥನ.

ಕಾದನ್ನೈ ಹೊಱದೊಂದುಖೇಪೆಯಿ [1]
ನಾದಯಾಂಬುಧಿ ಮತ್ಸ್ಯನಾಗಿಯೆ
ಮೇದಿನಿಯು ಹದಿನಾಲ್ಕುಮನುವಿನ ರಾಜ್ಯ ಕಮಲಜನ ।
ವೇದಮಾರ್ಗದೊಳೊಂದುದಿನಪರಿ
ತೀದು ಹೋದುದು ಮತ್ತೆ ಕೇಳೈ
ಮೇದಿನಿಯುಲೊಂದಬುದ ತಿರುಗಲು ಸುರರಿಗೊಂದುದಿನ ॥ ೯

ವರಮಹಾದಿನವರುಷಯುಗವದು
ನಿರುತದಲಿ ತಾ ನಾಲ್ಕು ಯುಗಗಳು
ತಿರುಗಿ ಸಾವಿರಸಂಖ್ಯೆಯಾದರೆ ಬ್ರಹ್ಮಗೊಂದುದಿನ ।
ಇರುತಿರಲು ತಾರಾತ್ರಿಯನ್ನಕ
ವರಮಹಾತಪಸತ್ಯಲೋಕದ
ನಿರುತವಾಪರಿಯಂತವಾಯಿತು ಬಱಿಕ ಪಾತಾಳ ॥ ೧೦

ನೆಲೆಯುಹುದು ತಾ ಸತ್ಯಲೋಕವು
ಇಳೆ ಮೊದಲು ಹದಿಮೂಱುಲೋಕದ
ಸುಱಿವ ಜೀವರಿಗೈದೆ ಮಿಕ್ಕಿನ ಮನುಜರಳವೇನು ।
ಮುಱುಗಿದರು ವೀಚಂದ್ರಸೂರ್ಯರು
ಬೆಳಗು ಬೀತುದು ಶಿಖಿಮರೀಚಿಯು
ತಲೆಗಳಡಗಲು [2] ಮೇರುಮೊದಲಾಗಷ್ಟಕುಲಗಿರಿಯು ॥ ೧೧

ಆಮಹಾಕಮಲಜನ ರಾತ್ರಿವಿ
ರಾಮಸಿತು ಹದಿಮೂಱುಲೋಕವ
ನೇಮಿಸುವನ್ನೆ ಸರ್ವಜೀವರ ಕರ್ಮವೃತ್ತಿಗಳ ।
ಆಮನೋಜ್ಞಾನಿಯುನು ಪುಣ್ಯ

---

[1] ನೊಂದುಸಾಱಿಗೆ, ಗ.   [2] ತಲೆಗಳದ್ದವು, ಘ. ಙ.

ಸ್ತೋಮದೇಶಗ್ಗಯು ಸತ್ಯಲೋಕದ
ಧಾಮವನು ಪೋಹರಿಸಿ ಮುಚ್ಚಿತು ತಮಸಿನೊಡ್ಡವಣಿ ॥ ೧೦

ಬಂದು ಚೌಕಡಿ ತಿರುಗೆ ಧರಣಿಯು
ನಂದು ಸೋಕುವುದುದಕ ಚೌಕಡಿ
ಕುಂದದೆಪ್ಪತ್ತೆರಡು ತಿರುಗಲು ಧ್ರುವನ ಮಂಡಲವ ।
ಬಂದು ಸೋಕುವುದರಸ ಚೌಕಡಿ
ವೃಂದಸಾವಿರವಾಗ ಶೂಲಿಯು
ಮಂದಿರವ ಥೆರೆ ಹೊಯ್ಯುತಿರ್ಪುದು ಪ್ರಳಯಮೂಱಱಲಿ ॥ ೧೩

ಆಗ ವೇದವೆಲ್ಲವು ಬ್ರಹ್ಮನಲ್ಲಿರುವಾಗ ತಮನೆಂಬ ದೈತ್ಯನು ಅದನ್ನು ಅಪಹರಿಸುವಿಕೆ.

ಬಲ್ಲನೊಬ್ಬನು ನಿದ್ರೆಗೆಯ್ಯಲು
ಫುಲ್ಲನಾಭನುಪಾಸ್ತಿ ಮಾಡುವ
ನೆಲ್ಲವೇದವು ಬ್ರಹ್ಮಮುಖದಲಿ ಶ್ವಾಸರೂಪದಲಿ ।
ನಿಲ್ಲದೆಡೆಯಾಟದಲಿ ಯಿರುತಿರೆ
ಯಲ್ಲಿ ತಾ ತಮನೆಂಬ ದೈತ್ಯನು
ವೆಲ್ಲವೇದವನೊಯ್ದು ಜೀವನರಾಶಿಯೊಳಗಡಗೆ ॥ ೧೪

ಇಂತು ಕಾರಣವಾದನೊಬ್ಬನು
ಸಂತತವು ಸ್ವಾಧ್ಯಾಯವೇಱುವ
ಪಂಥವೆಱಿಯದೆ ತಾ ನಿಶಾಚರಕಾಲದೇಶಗ್ಗಯಲಿ ।
ಸಂತರಾಗಲಸಂತರಾಗಲಿ
ಯಂತಕಾಲದಲವರು ಬೀಱ್ವರು
ಮಂತ್ರಗಳು ತಾವಿರವು ಜ್ಯೋತಿಯು ಸಾಕ್ಷಿಯಿಲ್ಲದಿರೆ ॥ ೧೫

ಅಕ್ರಮವಾಗಿ ವೇದವನ್ನು ಪಠಿಸುವವರಿಗೆ ಅನರ್ಥ

ಆವನಸ್ನಾನ[1] ದಲಿಯೋದುವ
ದೇವಲಕರನು ಮುಟ್ಟಿಯೋದುವ

---

1 ನಸ್ನಾನ್ನು ಖ.

ದೇವರಿಗೆ ಹೊತ್ತಿಸಿದ ದೀಪದ ಬೆಳಗಿನಲಿ ಪೇಳ್ವ ।
ಆವ ನೀಲಿಯ ವಸ್ತ್ರ ಕೆಂಪಿನ
ಕಾವಿಯಲು ತಾ ನಗ್ನನಾಗಿಯೆ
ಯಾವನೋದುವ ಯುವತಿಸಂಗದ ಮೇಲೆ ಋತುಮತಿಯ ॥ ೧೬

ನೋಡುತಲು ಸ್ವಾಧ್ಯಾಯಪೇಳುವ
ನೋಡುತಲು ಕುಕ್ಕುರನ ಕುಣಪವ
ನೋಡುತಲು ಪಾಷಂಡಪತಿತರ ಬ್ರಹ್ಮಘಾತಕರ ।
ನೋಡುತಲುವಧ್ಯಯನ ಹೇಳುವ
ಮೂಢಗಹುದತ್ಯಧಿಕನರಕದ
ಗೂಡು ಮುಂದಣಕಥೆಯ ವಿವರವ ನೀನು ಕೇಳೆಂದ ॥ ೧೭

ವೇದಾಭಿಮಾನಿ ದೇವತೆಗಳು ತಮನಿಂದ ನಮ್ಮನ್ನು ಬಿಡಿಸೆಂದು ಹರಿಯನ್ನು ಮರೆ ಹೋಗುವಿಕೆ.

ನಿಗಮದಧಿದೇವತೆಗಳೆಲ್ಲರು
ಜಗಳುತಲಿ ಸರ್ವೇಶ್ವರೀಶನ
ಸೊಗಸಿ ಹೊಗಳುತ ತಮನ ಕೈಯ್ಯಲು ಸಿಲುಕಿ ಮೊಱೆಯಿಡುತ ।
ಮಿಗೆ ಮನೋಮಂತ್ರಾಧಿದೇವತೆ
ಯುಗಧರನೆ ಶ್ರೀಕಾಂತ ಲೋಕದ
ಹಗರಣಿಗ ನೀನೆಮ್ಮ ಕಾವುದು ತಮನ ಕಯ್ಯಿಂದ ॥ ೧೮

ಕಾವುದೈ ಯಜ್ಞಾದಿರಕ್ಷಕ
ಕಾವುದೈ ಕೈವಲ್ಯನಾಥನೆ
ಕಾವುದೈ ನೀ ಸರ್ವಜೀವರ ನಾಥ ನಮ್ಮನು ।
ಕಾವುದೈ ಯಘದೂರ ನಿರ್ಮಳ
ಕಾವುದೈ ಕಾರುಣ್ಯಸಾಗರ
ಕಾವುದೈ ವಿಧಿರಹಿತದೈವವೆ ತಮನ ಕೈಯ್ಯಿಂದ ॥ ೧೯

ಹಿಂದೆ ನಾನಾಕಲ್ಪದಲಿ ಮು
ನ್ನೊಂದು ತಾಮಸರಾದಜೀವಕೆ

ಸಂದುದಿಲ್ಲೈ ಯಾಗ ತಾಮಸನಾದ ತಮಗೀಗ ।
ಸಂದೆವೈ ನೀನೆಮ್ಮ ರಕ್ಷಿಸು
ತಿಂದು ಸೆಱೆಯನು ಬಿಡಿಸ ಬೇಕೈ
ಯೆಂದು ಹೊಗಳುತ ತಮ್ಮ ತನುಗಳು ಬಯಸಿ ಬಾಯಾಱಿ ॥ ೨೦

ಅಱಿತು ನಿನ್ನನು ಹೊಗಳಲಱಿಯೆವು
ಕುಱುಹಿನಲಿ ಬೊಬ್ಬಾಟಮಾಡುವ
ಬಱಿಯ ಬಾಯಿಯಲಿ ನಿನ್ನ ಹೊಗಳುವ ಭಟ್ಟರಾರೆಂದು ।
ಮಱುಕವಿಲ್ಲಲೆ ನಿಮ್ಮ ಕೂಡೆವು
ಗಱಿತ ಮುನ್ನವೆ ಶೂನ್ಯ ತಮ್ಮಯ
ಹೊಱಗೆ ನಿಮ್ಮದು ಯೆಂದು ನಿಗಮವು ಬಾಯ ಬಿಡುತಿರಲು ॥ ೨೧

ವೇದಾಭಿಮಾನಿಗಳ ಮೊರೆಯನ್ನು ಕೇಳಿ ತಮನನ್ನು ಸಂಹರಿಸಲು ಮನಸ್ಸನ್ನು ಮಾಡುವಿಕೆ.

ತಮನ ಕಯ್ಯಲು ಬಿದ್ದವೆಂದಾ
ಕ್ರಮವು ಬೊಬ್ಬಿಡೆ ಮತ್ಸ್ಯರೂಪದ
ಸುಮನು ಹುಯ್ಯಲ ಕೇಳಿ ತಮನನು ಸೀಳಲನುವಾದ ।
ಪ್ರಮೆಯು ರಹಿತನು ವೇದವಾಕ್ಯದ
ಲಮರನಿಕರದ ದಾತ ಮಂಗಳ
ರಮಣಿಯಾನನಕುಮುದಚಂದ್ರಮ ವೇದವೆಲ್ಲವನು ॥ ೨೨

ಸುಮನಸರಿಗೊಪ್ಪಿಸಲು ಭೂಮಿಯ
ಸುಮನಸರಿಗ್ಗೆದಿಸುವೆನೆನುತಾ
ಸಮಯಸಮರವ ಮಾಡಿ ಮತ್ಸ್ಯನು ತಮನ ಕೆದಱಿದನು ।
ಅಮಮ ವೇದದ ವಾಕ್ಯದಧಿಕ
ಕ್ರಮಕೆ ತಾ ಕಲಿ ಮತ್ಸ್ಯದೇವರು
ತಮನ ಸೀಳಲಿಕಾಯ್ತು ವೆನುತಲಿ ಸುರರು ಹರುಷಿಸಲು ॥ ೨೩

ಮತ್ಸ್ಯಗಳ ಪರಿಮಾಣ ಕಥನ.

ಮುನ್ನ ಶರಧಿಯೊಳೊಬ್ಬ ನಿಳಿವರ
ನುನ್ನತದ ವಿಸ್ತಾರ ಹುಬ್ಬಿನ
ತನ್ನ ಮಧ್ಯದಯೋಜನಂಗಳು ಮೇಲೆ ಮುನ್ನೂಱು ।
ಭಿನ್ನವಿಲ್ಲದೆ ನಿಳಿಯನುಂಗುವ
ತನ್ನ ಪುಚ್ಛದ ಮಧ್ಯಯೋಜನ
ದುನ್ನತಿಯು ತಾನಾದುದೈಯಱುನೂಱು ಯೋಜನವು ॥ ೨೪

ಆತನನು ನುಂಗುವ ತಿಮಿಂಗಿಳ
ನಾತ ಕಂಗಳ ಮಧ್ಯಯೋಜನ
ವ್ರಾತನವಶತದಗಲದ ಗುಣಿತ ಗಣನೆಯಗಣಿತವು ।
ಭೂತಳಾಧಿಪ ಕೇಳ್ ತಿಮಿಗಿಳ
ನಾತನನು ನುಂಗುವಹಿಂಗಿಳ
ಖ್ಯಾತಿ ಪುಚ್ಛಿನ ಮಧ್ಯಯೋಜನ ಹನ್ನೆರಡುನೂಱು ॥ ೨೫

ಇವರ ನಾಲ್ವರ ನುಂಗಲೆಳಸುವ
ಭುವನರಕ್ಷಕ ಮತ್ಸ್ಯದೇವರ
ಹವಣನಾರೆಣಿಸುವರು ವೇದದ ರಾಶಿ ಬಳಲಿದವು ।
ಭವಮುಮುಕ್ಷುಗಳವರುವಱಿಯರು [1]
ಭುವನದಲಿ ಪರಮಋಷಿಯರಱಿಯ
ರವನಿಪತಿ ಕೇಳ್ ವೇದವಾಕ್ಯಕೆ ಹತ್ತುಮೊಳ ಮಿಗಿಲು ॥ ೨೬

ಆಮಹಾಪರದೈವವಾದುದು
ಸೋಮಶೇಖರನಳಿನ ಸಂಭವ
ನೇಮಿಸಲು ತಾವಱಿಯೆವೆಂದರು ಮತ್ಸ್ಯಮೂರುತಿಯ ।
ನೇಮಿಸುವರಾರಾಶ್ರಯಂಗಳ
ಸೀಮೆಯಂತವ ನೇನ ಹೇಳುವೆ
ಭೂಮಿ ಬಿರಿಯಲು ಮತ್ಸ್ಯಬಿಂಬದ ಪುಚ್ಛಪವಮಾನ ॥ ೨೭

---

1 ಸವನ ಮುಖದಿಂದಱಿಸಿಕಾಱರು, ಘ.

ಭೀಷಣಾಂತವ ಮಾಡುತಸುರರ
ಶೋಷಿಸುತ ತಾ ಜಡದ ರಾಶಿಯು
ನೀಸಿಸುತ ತಾನಧಿಕಜಲವನು ಸುರರ ಗಂಗೆಯಲಿ |
ಆಸುರದಿ ವೆಗುಷಾದಿಋತುವಿಗೆ
ಭಾಸುರದಿ ಬೀಸುವುದು ಪವನನ
ಪೋಷದುಬ್ಬರದಿಂದ ಸುಱಿವುದು ವೃಷ್ಟಿರೂಪದಲಿ ‖ ೧೮

ಮತ್ಸ್ಯಾವತಾರನಾದ ಹರಿಯು ಬಾಲದ ಪೆಟ್ಟಿನಿಂದ ತಮನನ್ನು ಸಾಯಿಸುವಿಕೆ.

ಬೀಱುವುದು ತಾ ಮತ್ಸ್ಯವಾಲದಿ
ಜಾಳಿಸಿದ ಜಲವೀಗ ಭೂಮಿಗೆ
ಲೋಲಹರಿ ಮತ್ಸ್ಯಾವತಾರದಿ ತಮನನಱಿಯುಟ್ಟ |
ಬೀಱಲಪ್ಪಳಿಸಿದನು ವಾಲದಿ
ಪೋಳನುತ ತಮ ಬೀಪೆ ವೇದದ
ಪಾಳಿಗಳು ಕ್ರಮದಿಂದ ಹರಿಯನು ಹೊಗಱುತಿದಿರಾಗಿ ‖ ೧೯

ವೇದಾಭಿಮಾನಿಗಳು ಹರಿಯನ್ನು ಸ್ತುತಿಸುವಿಕೆ.

ದ್ವೈತ ಸಕಳದ ಚಕ್ಷು ವಿಶ್ವದ
ತಾತ ನೀನೇ ಸಕಲಲೋಕದ
ನಾಥ ಭೂತಭವಿಷ್ಯವಾರ್ತಾತೀತ [1] ನೀನೆಂದು |
ಓತು ಹೊಗಱ್ದವು ವೇದರಾಶಿಗ
ಳಾತನನು ಮನವಱಿತು ತಮ್ಮಯ
ನೀತಿಬುದ್ಧಿಯೊಳ ನಿತುವಱಿತವನಱಿತನೊಂದುವನು ‖ ೨೦

ಆಹರಿಯು ವರಮಹಿಮೆಯಾದುದ
ಸೋಹಿ ಮುನಿಕುಲ ಸ್ತುತಿಸಲಱಿಯದು
ಗಾಹೆ ವೇದಗಳಱಿಯವೈ ಸಲೆ ನರರ ಪಾಡೇನು |
ಊಹೆಯಲಿ ನಿಗಮಂಗಳಾರವು

---

1 ನಾಥನಚ್ಯುತಭೂತಭವ್ಯಾತೀತ, ಜ.

ಸಾಹಸಾಂಬುಧಿಕೃಷ್ಣ ರಾಯನ
ಆಹವಕೆ ತಮನೇನು ನಿಮಿಷಕೆ ಬಿದ್ದ ತಮಸಿನಲಿ॥ ೨೧

ವೇದಗಳನ್ನು ಬ್ರಹ್ಮನಿಗೆ ಕೊಡಲು ಪೂರ್ವದಂತೆ ಪ್ರಪಂಚವನ್ನು ಸೃಜಿಸಿ ಸರ್ವಧರ್ಮಗಳನ್ನು ನಡೆಸುವಿಕೆ.

ಬಳಿಕ ತಾ ಹರಿ ವೇದರಾಶಿಯ
ಬಳಲಿಕೆಯನಪಹರಿಸಿ ಲೋಕವ
ನಳವಡಿಸಿ ಶ್ರೀಬ್ರಹ್ಮದೇವರಿಗಿತ್ತ ನಿಗಮವನು।
ನಳಿನಸಂಭವಗಾಯ್ತು ಪುನರಪಿ
ಬೆಳಗುಗಳು ಜಲರಾಶಿ ಶೋಷಿಸೆ
ಬಳಿಕ ಮಾಡಿದ ಮತ್ತೆ ಸೃಷ್ಟಿಯ ಪೂರ್ವಕ್ರಮಗಳಲಿ॥ ೨೨

ಹರಿ ಬಳಿಕ ಮನುವಿಂಗೆ ನಾನಾ
ಪರಮಧರ್ಮವ ಹೇಳಿ ಪುನರಪಿ
ತಿರದಿ ಬಿಜಯಂಗೈದು ಹೊಕ್ಕನು ಕ್ಷೀರಸಾಗರವ।
ಮರಳಿ ಯೊಂಭತ್ತನೆಯ ಮನು ತಾ
ಪುರಿಕೊಳಿಸಿ ವರಯಜನವಾದಲಾ
ದುರುತರದ ಷಟ್ಕರ್ಮವೆಲ್ಲವ ಧರಣಿಸುರರಿಂದ॥ ೨೩

ರೂಢಿಮಾಡಿದ ಧರ್ಮಗತಿಯಲಿ
ಗಾಢಮಾಡಿದ ಸರ್ವಜನಗಳ
ಮೂಢತನ ಬಯಲಾಗಿ ಹೋಯಿತು ರಾಯ ಕೇಳೆಂದ।
ಮಾಡಿದನು ಮನು ಪ್ರಜೆಗೆ ಹರುಷವ
ಕೂಡೆ ಸಾಗರವೇಬು ಮುನ್ನಿನ
ರೂಢಿಯಲಿ ನೆಲೆಗೊಂಡು ನಿಂದವು ಸ್ವಾದುಜಲವಾಗಿ॥ ೨೪

ಭೂತಳದ ಮೇಲಾಯ ಋತುಗಳು
ನೋತು ನಡೆದವು ತಮ್ಮ ಕಾಲದ
ಧಾತು ಜರಿಯದೆ ವೊಂದು ತೀವ್ರವ ಮಾಡವೈ ಧರೆಗೆ।

ಭೂತಳವು ಮನ್ವಂತರಾದಿಯು
ಲೋತು ಬೆಳೆದುದು ಸರ್ವಸತ್ವಕೆ
ಕಾತರಿಸರಾಧ್ಯೈರ್ಯಜೀವರುವನುಪಪತ್ತಿಯಲಿ ॥ ೩೫

ಅರಸ ಕೇಳ್ಳ ಬೇಡಿದಾಗಳೆ
ವರುಷವೀವುದು ತಮ್ಮ ಧರ್ಮದಿ
ಧರಣಿಗೊಂಭತ್ತಾದ ಮನುವಿನ ರಾಜ್ಯ ಲೇಸಾಯ್ತು ।
ನಿರುತವಾಯಿತು ಮರ್ತ್ಯದೇವರ
ಪರಮಕರುಣದಿ ಹವ್ಯಕವ್ಯವು
ಸುರರು ಮೆಚ್ಚಲಿಕನ್ನಸಂಕುಳದಿಂದಲತಿವಿಭವ ॥ ೩೬

ಮೊದಲ ಕೃತಯುಗದಾದಿಯಲಿ ಹರಿ
ಯುದಿಸಿದನು ಮತ್ಸ್ಯಾವತಾರದಿ
ನದಟಿನುಳಿದವು ವೇದರಾಶಿಗಳಂದು ವಿಪ್ರರಿಗೆ ।
ಸದಮಲಶ್ರುತಿವಾಕ್ಯಗೋಚರ
ನದಟುತನವನು ಗಣಿಸಬಹುದೇ
ಸದರ ನಿಮಗಾವೀರನಾರಾಯಣನ ಕೃಪೆಯೆಂದ ॥ ೩೭

ನಾಲ್ಕನೆಯ ಸಂಧಿ ಮುಗಿದುದು.

ಐದನೆಯ ಸಂಧಿ.

ಸೂಚನೆ.

ಹೇಳಿದನು ಮುನಿ [1] ಸೃಷ್ಟಿಕ್ರಮವನು
ಮೇಲೆ ಶ್ರೀಕೂರ್ಮಾವತಾರವ
ಕೇಳಿ ಪೂರ್ವಾಪರದ ದೇವರ ಜನನಸಂಗತಿಯು ॥

---

1 ಹರಿ, ಘ. ಜ.

ಜನಮೇಜಯನನ್ನು ಕುರಿತು ಸೃಷ್ಟಿಕ್ರಮವನ್ನು ಹೇಳಲಾರಂಭಿಸುವಿಕೆ.

ಕೇಳು ಜನಮೇಜಯಧರಿತ್ರೀ
ಪಾಲ ತರದಿಂಲೋಕ [1] ಹುಟ್ಟಿದ
ಲೀಲೆಯನು ಕಮಲನಯನನಯಿದುಮೂರ್ತಿ ವಿಷ್ಣುವಿನ ।
ಆಲತಾಂಗಿಯ ರಮಣಿ ಲಕ್ಷ್ಮಿಯ
ಲೋಲನಾಭಿಯ ತುದಿಯಲಗ್ರದ
ಲೀಲೆಯಿಮ್ಮಡಿಸಿರ್ದ ಲೋಕದ ವರಪಿತಾಮಹನ ॥ ೧

ಸೃಷ್ಟಿಕ್ರಮದಲ್ಲಿ ಬ್ರಹ್ಮಾದಿಗಳ ಉತ್ಪತ್ತಿ.

ಸೃಜಿಸಿದನು ಹರಿ ನಿಮಿಷಮಾತ್ರದೊ
ಳಜನನಾತನ ನೊಸಲ ಮಧ್ಯದಿ
ಪ್ರಜೆಯ ಮಾಡಿದನಾಚತುರ್ದಶಲೋಕಪಿತನೆಂಬ ।
ರಜತಶೈಲಾಧಿಪನ ತಾ ಮಿಗೆ
ಭಜಿಸಲಿಕೆ ಮನ್ವಾದಿನಿಕರವ
ಸೃಜಿಸಿದನು ಶ್ರೀವಾಣಿದೇವಿಯನಜನು ಜಿಹ್ವೆಯಲಿ ॥ ೨

ಜನಿಸಿದರು ವರಬ್ರಹ್ಮದೇವರ
ಮನದ ದೆಸೆಯಲಿ [2] ನಾರದಾದ್ಯರು
ಜನಿಸಿದಳು ಹೆಡತಲೆಯ ದೆಸೆಯಲಿ ಮೃತ್ಯುದೇವತೆಯು ।
ಜನಿಸಿದರು ವರಸಪ್ತಮಾತೃಕೆ
ವಿನುತಕಂಗಳ ಕೊನೆಯಲೂರ್ವಸಿ
ಜನಗಳಾದರುಮೊಮೆಯ ಮಧ್ಯದೊಳಪ್ಸರೋತ್ತಮರು ॥ ೩

ಜನಿಸಿದರು ಬ್ರಹ್ಮಂಗೆ ಮನುಗಳು
ನೆನೆಯಲಿಕೆ ಹದಿನಾಲ್ಕು [3] ಕ್ರಮದಲಿ
ಜನಿಸಿದರು ಮುಖದಲ್ಲಿ ಯಷ್ಟಾಶೀತಿಮುನಿನಿಕರ ।
ಜನಿಸಿದರು ಭೂಭುಜರು ಭುಜದಲಿ

1 ಹರಿಯಿಂಧಾತ, ಕ, ಖ. 2 ಕೊನೆಯಲಿ, ಕ. ಘ. 3 ಯಾರೇಳು ಘ.

ಜನಿಸಿದರು ತೊಡೆಯಲ್ಲಿ ವೈಶ್ಯರು
ಜನಿಸಿದರು ಪಾದದಲಿ ಶೂದ್ರರು ಭೂಪ ಕೇಳೆಂದ ॥ ೪

ಜನಿಸಿದರು ದಕ್ಷಾದಿವಿಭುಗಳು
ನೆನೆಯಲಾದರು ತಾವು ನವ [1] ಜನ
ವಿನಯದಲ್ಲೀ ಸೃಷ್ಟಿಕರ್ತರು ನವಪ್ರಜೇಶ್ವರರು ।
ಜನಪ ಕೇಳಿಂತಿವರ ಕಡೆಯಲಿ
ಜನಿಸಿದಳು ತಾನೊಬ್ಬ ಕನ್ಯೆಯು
ವಿನಯನಿಧಿ ಶೃಂಗಾರತವನಿಧಿ ಗೌತಮಾಂಗನೆಯು ॥ ೫

ಜನಿಸಿದರು ವರಬ್ರಹ್ಮದೇವರ
ತನುವಿನಲ್ಲಿಂದ್ರಾದಿದೇವರು
ತನತನಗೆ ಪವಮಾನ ತಪ್ಪಿಸೆ ಯುೞಿದ ನಾಕಜರು ;
ಜನಿಸಿದನು ಪವಮಾನ ಮಧುಸೂ
ದನನ ದಕ್ಷಿಣಬಾಹುದಂಡದಿ
ಜನಿಸಿದಳು ತ್ರೈಲೋಕ್ಯಜೀವನನರಸಿ ವಾಮದಲಿ ॥ ೬

ಅರಸ ಕೇಳದು [2] ಮೊದಲ ಸೃಷ್ಟಿಯ
ನಿರುತವೀಪರಿ ಬೞಿಕ ಹರಿಯಲಿ
ಕೊರಳ ಮೂರೇಖೆಯಲಿ ಜನಿಸಿದ [3] ಮೀನಕೇತನನು ।
ಅರಸಿ ಜನಿಸಿದಳಾತನಂಗನೆ
ಹರಿಯೆದೆಯ ಹೆಂಗೂಸಿನಂದದಿ
ವರರತಿಯು ಜನಿಸಿದಳು ಮುಂದಣಕಥೆಯ ಕೇಳೆಂದ । ೭

ಅಮಿತತತ್ವಸಮೂಹದೇವೋ
ತ್ತಮನು ಕರುಣಾಕರನು ಬ್ರಹ್ಮ

---

1 ವನ, ಘ. 2 ಕೇಳ್ವೈ, ಘ.
3 ಯಾಯ್ತು ಬೞಿಕಾಹರಿಗೊರಳ ಮೂರೇಖೆಯಲಿ ಪುಟ್ಟಿದ,

ದ್ಯಮರರಿಗೆ ವೆಗ್ಗಳನವನೆಣಿಸುಹೋಚ್ಚರೂಪದಲಿ |
ಕ್ರಮದೆ ಪದ ಹರಿಯಲ್ಲಿ ಬ್ರಹ್ಮಾ
ದ್ಯಮರರಿಗೆ ನೇಮಿಸಿಯೆ ಬ್ರಹ್ಮವ
ದಮಿತದಲಿ ವರಸೃಷ್ಟಿದೇವರು ಜೀವ ತಾನೆನಿಸಿ || ೮

ಈ ಜಗದ ಜೀವರಿಗದೊಂದೇ
ವ್ಯಾಜವಿಲ್ಲದ ಸೃಷ್ಟಿಯನು ಮಿ
ಕ್ಕೋಜಿಸಲು ಹದಿನಾಲ್ಕುಲೋಕದ ಜೀವರಾಶಿಗಳ |
ರಾಜಭಾವವು ರಾಜಮೌಳಿಗೆ
ರಾಜಿಸಲಿಕೀರೇಳುಲೋಕದಿ
ರಾಜಿತತ್ವವು ಸೋಮಸೂರ್ಯರಿಗಂದು ವ್ಯಾಪಿಸಲು || ೯

ರವಿಗದೊಂದೇ ಲೋಕದೇಪ್ಗೆಯು
ಭುವನದಲಿ ಮಿಕ್ಕವರು ತವ
ತವಗಮಿತಸತ್ವದ ಸಾಧನಂಗಳ ಸರ್ವಸುರನಿಕರ |
ತವತವಗೆ ಬಲ್ಲಿದರು ಮರುತನ
ಲವಿರಳತ್ವವನೇನ ಹೇಳುವೆ
ಸವೆದಳಸಿ ಮದ್ದಳೆಯ ಲೆಕ್ಕದೆ ಕೊರಳಗಿಕ್ಕಿಹುದು || ೧೦

ಈ ಚತುರ್ದಶಲೋಕವನು ತಾ
ಯೋಚಿಸಿಹನೈ ಇಂತು ಮುಂದಣ
ವಾಚಕರಲೀ ಸೃಷ್ಟಿಕ್ರಮವನು ಕೇಳು ಭೂಪತಿಯೆ |
ಯೋಚಿಸುವೊಡಳವಲ್ಲ ನಿಗಮದ
ವಾಚನೆಗದಳವಡದು ಯಂತ್ರದ
ಸೂಚನೆಯು ತಾ ವಿಷ್ಣುಮಾಯೆಯಲಜುವಗಳವಡದು || ೧೧

ವಿಮಲವಹ ಸೃಷ್ಟಿಯನದಾಗಳ
ಕ್ರಮದಲೇ ಸೃಜಿಸಲಿಕೆ ದಕ್ಷನು
ಸುಮನಸರು ಮೊದಲಾಗಿ ಮಿಕ್ಕಾದಖಿಳನಾಕಜರು |

ದೇವತೆಗಳ ಸತಿಯರ ಸೃಷ್ಟಿ.

ಸುಮನಸರ ವೃಂದಕ್ಕೆ ಸತಿಯರ
ಕ್ರಮದಲೇ ಸೃಜಿಯಿಸಿದನಾಗಲು
ವಿಮಲಮತಿ ಸೌಭಾಗ್ಯಗೌರಿಯು ಶಿವಗೆ ಸತಿಯುಳನು ‖ ೧೦

ದ್ವಿಜಪತಿಗೆ ಸೌಪರ್ಣಿ ಶೇಷಗೆ
ಸೃಜಿಸಿದನು ವಾರುಣಿಯನತ್ರಿಗೆ
ತ್ರಿಜಗದಲು ಸೌಭಾಗ್ಯರೂಪಳನನಸುಯಾಸತಿಯು ।
ಸೃಜಿಯಿಸಿದನಿಂದ್ರಂಗೆ ಶಚಿಯನು
ಸೃಜಿಸಿದನು ಛಾಯೆಯನು ಸೂರ್ಯಗೆ
ಸೃಜಿಸಿದನು ಚಂದ್ರಂಗಮಿಪ್ಪತ್ತೇಳುತಾರೆಗಳ ‖ ೧೩

ಸೃಜಿಸಿದನು ಶ್ಯಾಮಳೆಯು [1] ಕಾಲಗೆ
ಸೃಜಿಸಿದನು ತಾ ಸರ್ವಋಷಿಯರ
ಯಜನಸೇವೆಗೆ ವರಪತಿವ್ರತೆಯೆನಿಪ ಸತಿಯರನು ।
ಸೃಜಿಸಿದನುಕಶ್ಯಪಗವದಿತಿಯು
ಸೃಜಿಸಿದನು ವಾಸಿಷ್ಠನರಸಿಯು
ಸೃಜಿಸಿದನು ಶ್ರೀಯಜ್ಞದೇವರಿಗಾಗ ಸ್ವಾಹೆಯನು ‖ ೧೪

ಬಳಿಕ ಋಷಿಗಳ ಸೃಷ್ಟಿಯನ್ನು ಹೇಳುವಿಕೆ.

ಅರಸ ಕೇಳ್ಳ ಆದಿಸೃಷ್ಟಿಯು
ನಿರುತವೀಪರಿ ಯಿನ್ನು ಮುಂದಣ
ವರಕಥೆಯು ವಿವರಿಸುವೆ ಮತ್ತಾ ದ್ವಿಜರ ಸೃಷ್ಟಿಯನು ।
ಪರಿವಿಡಿಯು ಕೇಳರಸ ಮೊದಲಲಿ
ಧರೆಯೊಳೀಕಶ್ಯಪನ ಸೃಷ್ಟಿಯು
ಪರಿಯು ಹೇಳುವೆ ನಿನಗೆ ನಿಶ್ಚಯವಾಗಿ ಕೇಳೆಂದ ‖ ೧೫

---

[1] ಸೌಮಿಳೆಯು, ಘ ಪಾಠ.

ಆತಗಾದರು ಬಹಳ ಸತಿಯರು
ಓತು ದಿತಿ ಕದ್ರುವೆಯು ವಿನತೆಯು
ನೀತಿಯಿಂದಾಯದಿತಿ ಮನು ದನು ಯಕ್ಷಿ ರಾಕ್ಷಸಿಯು ।
ಪ್ರೀತಿಯಿಂದಿವರಿಂದ ಹುಟ್ಟಿದ
ಖ್ಯಾತಿಸೃಷ್ಟಿಯ ಕೇಳು ದಿತಿಯಲಿ
ದೈತೆಯರು ಜನಿಯಿಸಿದರಱುವತ್ತಾಱುಕೋಟಿಗಳು ॥ ೧೬

ಉದಿತರಾಗಲು ಪೂರ್ವದೇವರು
ಯದಿತಿಯಲಿ ತೆತ್ತೀಸಕೋಟಿಯು
ತ್ರಿದಶರಾಕದ್ರುವಿನಲುರಗಗಳಂಟುಮಾನಿಸರು ।
ಮುದದಿ ನಾಲ್ವರು ಸುತರು ವಿನತೆಗೆ
ಮುದದಿ ದನುವಿಂಗಸುರಕೋಟಿಯು
ಸುದತಿ ಮನುವಿಗೆ ಮನುಜಕೋಟಿಯು ಯಕ್ಷಿಗವನೀಶ ॥ ೧೭

ಒಬ್ಬನಾದನು ವರಕುಬೇರನ
ದಿಬ್ಬರಾದರು ಮೇಲೆ ರಾಕ್ಷಸಿ
ಗರ್ಭದಲಿ ನೈಋತಿಯು ಮತ್ತಾವಿಪ್ರಚಿತ್ತಿಕನು ।
ನಿರ್ಭರದ ಕಡು ಪಾಪಿ ದೈತ್ಯರ
ಗರ್ಭದುಬ್ಬರ ಹಬ್ಬಿಸಿದುರ್ದು
ಗರ್ಭದಿಂದಾ ದೇವ ಸಂಘದಲರಸ ಕೇಳೆಂದ ॥ ೧೮

ದೇವರೊಳಗತ್ಯಧಿಕರಿಬ್ಬರು
ಭಾವಿಸಲಿಕಾದಿತ್ಯಶಕ್ರರು
ತಾವು ದೈತ್ಯರೊಳಬ್ಬರಾದರು ತಾಮಸೋತ್ತಮರು ।
ದೇವದಲ್ಲಣ ಕಾಲನೇಮಿಯು
ಮಾವಿಬುಧಪಕ್ಷಾರಿ ಯಂಧಕ
ತಾವು ದುಷ್ಕರ್ಮಿಗಳು ಮತ್ತಂತಧಮರಿವರೆಂದ ॥ ೧೯

ಪೂತಕುಂಭೀಪಾಕಕರ್ಹರು
ಆತಗಳು ವಚ್ಯುತಗೆ ದೂರರು

ನೀತಿಬಾಹ್ಯರು ದಿತಿಜರಱುವತ್ತಾಱುಕೋಟಿಗಳು ।
ಭೂತಳಾಧಿಪ ಕೇಳು ರಾಕ್ಷಸ
ರೀತಿಗಳ ಸುರರೊಡನೆ ವೈರವ
ಭೂತಳೇಶನು ಹರಿಯೆ ಕಾಯ್ವನು ಸುರರ ಕೃಪೆಯಿಂದ ॥ ೨೦

ದೈತ್ಯರಿಗೆ ನಿಮ್ಮಿಷ್ಟದಂತೆ ಜೀವಿಸುವುದೆಂದು ಬ್ರಹ್ಮನ ಅಪ್ಪಣೆ.

ಹೊರೆಯಲಿಕೆ ತಾನಿವರನಾಗಳು
ನಿರುತ ದೈತ್ಯರು ಹರಿಗೆ ವಿಗ್ರಹ
ವೆರಸೆ ಕಶ್ಯಪಋಷಿಯ ಸೃಷ್ಟಿಯ ನಿರುತವೀಪರಿಯ ।
ಹೊರೆಯಲಿಕೆ ಶ್ರೀಬ್ರಹ್ಮದೇವರು
ಕರೆಸಿ ದೈತ್ಯರಿಗೆಂದನೊಂದನು
ಹೊರೆದು ಕೊಂಬುದು ನೀವೆ ಒಡಲನು ಬಲ್ಲ ಬುದ್ಧಿಯಲಿ ॥ ೨೧

ಎನಲಿಕವದಿರೊಬ್ಬರೊಬ್ಬರ
ತಿನಲಿಕೆದ್ದರು ಬ್ರಹ್ಮಸೃಷ್ಟಿಯ
ನನುಕರಿಸಿ ಭೂಸುರರ ದೇವಸ್ತೋಮವೊದಲಾಗಿ ।
ಜನರ ತಿನುತಿರೆ ಕಮಳಸಂಭವ
ಕನಲಿ ದೈತ್ಯರ ನಿಲಿಸಿ ದೇವರ
ಜನಕೆ ಯಾಣತಿಗೊಟ್ಟು ನಿಮ್ಮನು ನೀವು ಹೊರೆದಿಹುದು ॥ ೨೨

ಎನಲು ನಾಕಜರೊಂದು ಪ್ರಾಪ್ತಿಯ
ನೆನೆಯಲಱಿಯದೆ ತಾವು ಪಾರದೆ
ಮನೆಯಲಿರುತಿರೆ ಕಂಡು ದಾನವಜನಕೆ ನೇಮಿಸಲು ।
ದನುಜರವದಿರು ಬದುಕಲಱಿಯದೆ
ಕನಲಿ ಶ್ವಾಪದವಧೆಯ ಮಾಡಲು
ದನುಜರನು ಕೆಡೆನೂಂಕಿ ರಾಕ್ಷಸಜನಕೆ ನೇಮಿಸಲು ॥ ೨೩

ನೇಮಿಸಲಿಕವರಾಗ ತಮ್ಮಯ
ಸ್ತೋಮಸಹಿತವರೆಲ್ಲಭೂಮಿಯ

ಕಾಮಿಸಲು ಬಟ್ಟಿಕಱಿಯದೆಲ್ಲರು ತಮ್ಮ ಕೈಕಾಲ ।
ತಾಮಸರು ತಿನುತಿರಲಿಕಾ ಕ್ಷಣ
ನೇಮಿಸಲಿಕಳುಕಿರಲು ರಾಕ್ಷಸ
ಸ್ತೋಮಕೆನಲಿಕೆ ವಿಷವ ಸುಱಿಯಲು ಕಮಲಸಂಭವನು ॥ ೨೪

ಮಾಣಿಸಲು ತಾನವರಿಗಾಗಳು
ಆಣತಿಯ ಕುಡೆ ಬದುಕಹೇೞಲು
ಮಾಣದೆಯು ತಾ ಹರಿಯ ಮಂಗಳ ಮನುಜನಿಕರವನು ।
ಹೂಣಿಸಲು ನೀವಿಂದುವಗ್ನಿಯ
ಕಾಣಿಕೆಯಲ್ಲೈದಿತು ಜಗತ್ತಿನ
ಪ್ರಾಣಿವರ್ಗವ ಸಲುಹಿ ಯೆಂದರೆ ಮನುಜರತಿಮುದದಿ ॥ ೨೫

ಮುನ್ನ ಮಧುಕೈಟಭರನಾಹರಿ
ಭಿನ್ನವಿಲ್ಲದೆ ಕೊಲ್ಲಲವದಿರ
ಬೆನ್ನಡಗನೇ ನೀರಲೊರಸಲಿಕಾಯ್ತು ಮೇದಿನಿಯು ।
ನನ್ನಿಯಿಂದಿರುತಿರಲು ಮಾನವ
ಜನ್ಮರಾಕ್ಷಣ ಭೂಮಿದೇವಿಯು
ಬನ್ನನಗುಳಿದು ಇಲ್ಲಿ ಪರ್ಜನ್ಯಾಂಬು ಬೀೞಲಿಕೆ ॥ ೨೬

ಅನ್ನಧಾನ್ಯವ ಬಿತ್ತಿ ಬೆಳೆಯಲು
ಮುನ್ನ ದೇವಾಸುರರಿಗಿಕ್ಕುತ
ಮನ್ನಿಸುವರಾಸರ್ವಭೂತವನರಸ ಕೇಳಿದನು [1] ।
ಉನ್ನತಿಯ ಪದುಮಜನು ಕಂಡನು
ಮನ್ನಿಸಿದನಾ ಮನುಜವರ್ಗವ
ಸಿನ್ನು ತಾ ನಿಮಗೊಂದು ಸಾಧನವೀವೆನನುವಾಗಿ ॥ ೨೭

ಈಚತುರ್ದಶಭುವನಜೀವರ
ಸ್ವೋಚಿತ [2] ವ್ರತಪುಣ್ಯವೆಲ್ಲವು

---

1 ಸ್ವರ್ಗಭೋಗವ ನರಸಕೇಳೆಂದ, ಘ. 2 ಸೌಚತ, ಘ.

ಬಾಚಿ ಪುಟ್ಟಿತು ಕಾಮಧೇನುವಿನಂಗಮಧ್ಯದಲಿ ।
ವಾಚನೆಗೆ [1] ಯಳವಲ್ಲ ಲೋಕಕೆ
ಗೋಚರವು ತಾನಲ್ಲ ಧರ್ಮವು
ಯೋಚಿಸಲಿಕೆತ್ತಾಗಿ ಹುಟ್ಟಿತು ಭೂಮಿಮಧ್ಯದಲಿ ॥ ೧೮

ಏಱಬಾರದು ವೃಷಭನಾಗಳ
ದಾರು ಕರ್ಮವನುಳ್ಳ ಜನ್ಮಿಗ
ಳೇಱಿದರೆ ಯಮಲೋಕಸಾಧನ ಶಿವನು ಹೊಱತಾಗಿ ।
ಏಱಲಾಗದು ರುದ್ರವಾಹನ
ವಾಱುಕರ್ಮದ ವಿಪ್ರರೆಲ್ಲರು
ಮಿಾಱಿ ಯೇಱಿದರವರು ನರಕಿಗಳೀಜಗತ್ತಿನಲಿ ॥ ೧೯

ರಾಯ ಕೇಳ್ಯ ಮನುಜವರ್ಗದು
ಪಾಯಕಿದು ಕೃಪೆಯಾಯ್ತು ಸಾಧನ
ಕೋಯಿದರು ಮಯವಿಶ್ವಕರ್ಮರು ಜನಿಸಿ ಮೂಜಗಕೆ ।
ಪ್ರಾಯದಲಿ ಸಕಲೋಪಕರಣಾಗ
ಳಾಯುಧಗಳಾದವಖಿಳಕಳಾ
ಕೋಯಿದರು ಜನಿಸಿದರು ಕಡೆಯಲಿ ಸೂರ್ಯನಂಗದಲಿ ॥ ೨೦

ಹುಟ್ಟಿದುದು ದೇವಾಂಗನಾಜನ
ನೆಟ್ಟನೆಯದೀರೇೞುಲೋಕದ
ದಿಟ್ಟವನು ನಿರ್ಮಿಸಲಿಕಾಯ್ತು ಮನುಜವರ್ಗದಲಿ ।
ಹುಟ್ಟಿದವರೊಂದೊಂದುಕೆಲಸವ
ನೆಟ್ಟನಾಶ್ರಯಿಸಿದರು ಲೋಕದ
ಭೀಷ್ಟವನು ನೆಱೆ ಮಾಡುತಿರ್ದರು ಮನುಜಜಾತಿಯೊಳು ॥ ೨೧

ಒಬ್ಬರಿಕ್ಕುವರೊಬ್ಬರುಂಬರ
ದೊಬ್ಬರೇ ಆಕ್ರಮಿಸಿ ಕೊಂಬರು

---

1 ಯೋಚನೆಗೆ, ಘ.

ಸಬ್ಬ ಜನರುಗಳೊಳಗೆ ಮೂಱೇ ವರ್ಗವಾಗಿಹುದು ।
ಹಬ್ಬದಲು ದೇವತೆಗಳುಂಬರು
ಜೊಬ್ಬದಲು ದಾನವರುಂಬರು
ಸಬ್ಬದಿನದಲು ಮನುಜರುಂಬರದೆಂದು ಋಷಿ ನುಡಿದ ॥ ೨೧

ನುಡಿದು ತಾನಿತ್ತಾಗಿ ಕೊಡುವನು
ಬಿಡದೆ ದಾನವದೇವಮಾನವ
ರೊಡಲ ತುಂಬುವ ಪಿತರು ವಿಶ್ವೇದೇವಮೊದಲಾಗೆ ।
ಪೊಡವಿಯಲಿ ತನಗಾಯ್ತು ಗ್ರಾಸವು
ಬಿಡದೆ ತೃಣತತಿ ಯುರಗಜಾತಿಗೆ
ದೃಢದಿ ತಾ ಪವಮಾನನಾಹರವರಸ ಕೇಳೆಂದ ॥ ೨೨

ಮನುಜವರ್ಗಕೆ ನಾಲ್ಕು ಭಾಗವು
ಜನರೊಳಾಯಿತದೊಂದು ಪಾದದ
ಮನುಜರಾಗಾಲಸ್ಯವಾಗಿರದುಚ್ಚ ಪೌರುಷದ ।
ಜನತತಿಯು ಸೇವೆಯಲಿ ನಿಂದರು
ಮನುಜರಾಮತ್ತೊಂದು ಪಾದದ
ಜನದ ಮೂಲದದೆಲ್ಲ ಕೃಷಿ ತಾನೊಂದು ಪಾದದಲಿ ॥ ೨೩

ಜನಿತವಾಗಲಿಕದಱ ನಾಮಕೆ
ವಿನಿಮಯದೆ ತಾ ನಾಲ್ಕುವರ್ಣವು
ಮನುಜಜಾತಿಯೊಳಾಗಲಾದವು ಪಾದಭೇದದಲಿ ।
ಮನವಚನಕಾಯದಲಿ ಬ್ರಾಹ್ಮಣ
ನೆನೆಯಲಾಗದು ಕೃಷಿಯನಾಗಳು
ವಿನಯದಲಿ ತಾ ವೇದಶಾಸ್ತ್ರವನೋದಿ ಸುಖಿಯಿಸುವ ॥ ೨೪

ಜನಪತಿಗಳುಂ ಮತ್ತೆ ಕೃಷಿಯನು [1]
ನೆನೆಯಲಾಗದು ಕ್ಷತ್ರಧರ್ಮವ

---

[1] ಗಳೊಳಗೊಬ್ಬರಿಗೆ ಕೃಷಿ, ಕ. ಖ.

ನನುಭವಿಸಿ ತಾನಿರ್ದ ಮೊದಲು ವೈಶ್ಯ ಕೃಷಿಯಿದನು |
ಜನಪ ಕೇಳ್ಳೈ ಕೃಷಿಯು ತಾನದು
ಜನಿಯಿಸಿತು ಶೂದ್ರಂಗೆ ಮುಂದಣ
ವಿನುತದಾವರಕಾರಣಾರ್ಥ ಸಹಸ್ರಕಾರಣದಿ ‖ ೩೬

ಇವು ಮೊದಲು ಸರ್ವಾನುಭೂತದ
ವ್ಯವಹರಣೆಯಲಿ ಕೃಷಿಯು ಜೀವನ
ವಿವನು ಬಿಟ್ಟಹ ಶೂದ್ರ ಬೀಳುವ ನಿತ್ಯನರಕದಲಿ |
ಅವನಿಪತಿ ಕೇಳ್ ಸರ್ವಜೀವದ [1]
ನಿವಹ ನಿರ್ಣಯವಾಯ್ತು ದೇವ
ಪ್ರವರರಲಿ ದೈತ್ಯೇಂದ್ರನಿಗ್ರಹವಾದ ಸತ್ಕಥೆಯು ‖ ೩೭

ನೆಲೆಯ ಕೇಳ್ಳೈ ನೀನು ಮುಂದಣ
ಇಳೆಯ ಸೃಷ್ಟಿಯೊಳಾಯ್ತುದೊಮ್ಮೆಯೆ
ಬಳಿಕ ಕಡೆಯಲ್ಲಾತ ಜನಿಸಿದನತ್ರಿ ಕೇಳಂದ |
ಇಳೆ ಮೊದಲು ಹದಿನಾಲ್ಕು ಲೋಕದ
ಬಳಯಿಕಿವರಿಂದಾಯ್ತು ಪ್ರಜೆಗಳ
ನೊಲಿದು ಸೃಜಿಸುವ ನವಪ್ರಜಾಪತಿಸೃಷ್ಟಿ ಕೇಳಂದ ‖ ೩೮

ಇವರನೇ ನವಬ್ರಹ್ಮರೆಂಬರು
ಭವನು ಭಾಳಜ ಯೋನಿಯಲಿ ಸಂ
ಭವಿಸಲುೞಿದಾ ಯೇೞುಜನಗಳು ವಾಣಿಯುವತಿಯಲಿ |
ವಿವರಿಸಲು ಕಮಳಜಗೆ ಜನಿಸಿದ
ರಿವರು ಸಪ್ತರ್ಷಿವರ ಸೃಷ್ಟಿಯು
ವಿವರ ಹೇೞುವೆ ನಿನಗೆ ಕಶ್ಯಪನಾಗಲೇನೆಂಬೆ ‖ ೩೯

ಸಿಡಿಲುಮಿಂಚುಗಳರುಣ ತಾನಿವ
ರೊಡನೆ ಹುಟ್ಟಿದ ಗರುಡದೇವರು

[1] ದೇವರ್, ಖ.

ಮಡದಿ ವಿನತಾದೇವಿಗಾದರು ಶುದ್ಧಸಾತ್ವಿಕರು |
ಹೊಡೆದನೊಬ್ಬನು ಸೂರ್ಯ ರಥವನು
ಬಿಡದೆ ಲಕ್ಷ್ಮೀಪತಿಯ ವರಮೆ
ಲ್ಲಡಿಯ ಸೇವಿಪನೊಬ್ಬ ಪೊಡವಿಯ ಮೇಲೆ ಸೌಪರ್ಣ || ೪೦
ಬೞಿಕ ಕಡೆಯಲಿ ಹರಿಯ ವಹನವ
ನೊಲಿದು ತಾ ಶ್ರೀಗರುಡನಾದನು
ನಳಿನನಾಭಂಗಧಿಕಪ್ರೀತನು ಸುರಸಮೂಹದಲಿ |
ಎಲೆ ಮಹೀಪತಿ ಕದ್ರುವಿಗೆ ಸುತ
ರೊಲಿದು ಜನಿಸಿದರಷ್ಟಕುಲ
ಗಳ ಉರಗನಾಗಗಳಿಂತು ಕಶ್ಯಪಸೃಷ್ಟಿ ಕೇಳೆಂದ || ೪೧
ಇವರೊಳಗೆ ಪ್ರತಿಪಕ್ಷವಾಯಿತು
ಭುವನದಲಿ ದಿತಿಸುತರಿಗಮದಿತಿ
ಗುವರರಿಗಮಿಂತು ವಿನತಾಕದ್ರುಗಳ ತನುಜರಿಗೆ |
ಅವನಿಪತಿ ಕೇಳ್ ನಿನಗೆ ಮೊದಲಲಿ
ವಿವರಿಸುವೆ ನಾ ವಿನತೆಕದ್ರುಗ
ಳ ವರತನುಜರ ವೈರಮಾರ್ಗವನೆಂದನಾಮುನಿಪ || ೪೨

ಕದ್ರುವು ವಿನತೆಯನ್ನು ಸುರಪತಿಯ ಕುದುರೆಯು ಬಿಳಿದೊ ಕರಿದೊ ಎಂದು ಕೇಳುವಿಕೆ.

ಇರಲಿರಲು ಶ್ರೀಗರುಡದೇವರ
ವರಜನನಿಯೊಳಗೊಮ್ಮೆ ನಾಗರ
ನಿರುತಮಾತೆಯು ಸವತಿಮತ್ಸರದಿಂದ ಮತ್ಸರಿಸಿ |
ಗರುಡದೇವರ ಮಾತೆಗೆಂದಳು
ಸುರಪತಿಯ ಹಯವಹುದು ಬಿಳಿದೋ
ಕರಿದೊ ಹೇಪೌ ಅಕ್ಕ ಎಂದಳು ವಿನತೆ ಮನಮುಟ್ಟ || ೪೩
ಸುರನದಿಯ ಜಲವೀಂಟುವಾಹಯ
ನಿರುತ ಬಿಳಿಧೌ ತಂಗಿ ಯೆಂದಳೆ

ಯುರಗಮಾತೆಯು ನಕ್ಕು ವಂಚಿಸಿ ಕಱದು ಹಯವೆಂದು |
ಪರಮಪಾವನೆ ವಿನತೆಯುವತಿಯು
ಸುರಗಮಾತೆಯು ಕೆಡಿಸ ಬಗೆದಾ
ಪರಿಯು ಕೇಳ್ಳೈ ಭೂಪ ಸವತಿಯು ಮನದ ಕಷ್ಟವನು ॥ ೪೪

ಎಂದು ತಕ್ಷಣ ಕಟ್ಟಿ ಯೊಡ್ಡವ
ನಿಂದುವೆದನೆಗೆ ಕದ್ರು ನುಡಿದಳು
ಬಂದು ತುರಗವ ನಾಳೆ ನೋಡುವ ಸೋತೊಡವರಾಗ |
ಹಿಂದುಗಳೆಯದೆ ತೊತ್ತಿರಾಗುವ
ರೆಂದು ನಾಗರ ಮಾತೆ ತನ್ನಯು
ಮಂದಿರಕೆ ಬಂದಾಗ ದುಗುಡವ ಹಿಡಿದು ಮಲಗಿರಲು ॥ ೪೫

ಬಂದು ನಾಗರು ತಾಯಿಗೆಂದರ
ದಿಂದು ನಿಮ್ಮಯು ದುಗುಡವೇನೆನೆ
ಕಂದ ನೀವಿರಲೆನಗೆ ಸವತಿಯು ತೊತ್ತುತನವಾಯ್ತು |
ಎಂದೊಡಾಕರ್ಕೋಟನಾಗನು
ಬಂದ ಹದನೇನೆನಲಿಕೆಂದಳು
ಕಂದ ಕೇಳ್ಳೈ ತಾನದಿಂದ್ರನ ಹಯುವ ಕಱದೆಂದೆ ॥ ೪೬

ನಾಳೆ ಹಯು ನೀರ್ಗುಡಿಯು ಬರಲಿಕೆ
ಮೇಲೆ ಬಿಳದಾಗಿರಲು ಸವತಿಯು
ಕೀಳ ತೊತ್ತಹೆನೆಂದು ದುಗುಡವ ಹಿಡಿದೆ ನಾನಿಂದು |
ಬಾಲಸರ್ಪನು ನುಡಿದ ಜನನಿಗೆ
ಕಾಳನಾಡದಿರವ್ವ ಸತ್ಯವ
ಪಾಲಿಸದೆ ಸತ್ಯವನು ಕೆಡಿಸುವೆನೆಂದು ಮನಮುಟ್ಟಿ ॥ ೪೭

ನೀವು ನುಡಿದರೆ ನಿಮಗೆ ತಾನಿದು ನ್ಯಾ
ಯುವಲ್ಲೆಂದೆನಲು ಸರ್ಪನು
ತಾಯೆ ಚಿಂತಿಸಬೇಡದೆಂದರು ಮಿಕ್ಕಸರ್ಪಗಳು |

ನಾವು ನೀರೊಳು ನಾಳಗಿನಿಬರು
ದೇವರಾಜನ ತುರಗದಂಗವ
ನಾವರಿಸಿ ಕೊಂಡಿರುವೆವಾ ಕ್ಷಣ ನೀವು ವಿನತೆಯನು ॥ ೪೮

ಕರೆದು ತೋಱುವುದಲ್ಲಿಗೆಂದರೆ
ಹರುಷಿಸಿದಳಹಿಮಾತೆ ಯಾಕ್ಷಣ
ನಿರುತದಲಿ ಶುಚಿಯಾಗಿ ಮಱುದಿನ ತುರಗ ಬರಲೊಡನೆ ।
ಭರದಿನಾಕೆಯು ಕರೆಯಲಟ್ಟಲಿ
ಕರಸ ಇಂತಹ ಸತಿಯರಿಗೆ ತಾ
ನಿರುತ ಸ್ವಾತಂತ್ರಿಕೆಯು ಸಲ್ಲದದೆಂದನಾಮುನಿಪ ॥ ೪೯

ಬಿಳಿದೆಂದು ಹೇಳಿದ್ದರಿಂದ ವಿನತೆಯು ದಾಸಿಯಾಗುವಿಕೆ.

ಉರವಣಿಸಿ ತಾ ಬರಲಿಕೆಂದಳು
ಸಿರಿಯೆ ಕೀಪೆಂದೆನಿಪ ಪುತ್ರರ
ಸರಕುಗೊಳ್ಳದೆ ಬರಲಿಕಂಜುವೆನೆನಲಿಕಗ್ರದಲಿ ।
ಕರೆದು ವಿನತೆಯು ತೋಱಲಾಗಳು
ಕಱಿದದಾಯಿತು ವ್ಯಾಳಮೋಹರ
ತುರಗವನು ತಾವೊತ್ತಿ ಹತ್ತಲು ಭೂಪ ಕೇಳೆಂದ ॥ ೫೦

ಬಳಿಕ ವಿನತಾದೇವಿಯರ ತಾ
ನಳುಕಿನಲಿ ಸೋಲಿಸಿಯೆ ಸವತಿಯು
ನೊಲಿದು ತೊತ್ತಾಗಿರಿಸಿಕೊಂಡಳು ತನ್ನ ಮಂದಿರಕೆ ।
ಲಲನೆ ಕದ್ರುವಿಗೆನಗೆ ತೊತ್ತಿನ
ಕೆಲಸ ತಾ ಕಡೆಯೆಂದಿಗೆಂದರೆ
ಎಲೆ ವಿನತೆ ನೀ ಸುಧೆಯನಿತ್ತೊಡೆ ನಿನಗೆ ಕಡೆಯುಂದು ॥ ೫೧

ಗರುಡನು ತಾಯಿಯ ಅಪ್ಪಣೆಯಿಂದ ಕದ್ರುವಿನ ಮನೆಗೆ ಹೋಗಲು
ಅಮೃತವನ್ನು ಅಪೇಕ್ಷಿಸುವಿಕೆ.

ಎನಲು ವಿನತಾದೇವಿ ತೊತ್ತಾ
ಗನಿಮಿಷರಿಗಾ ನೂಱುವತ್ಸರ

ತನಕ ವಿರಲಿಕೆ ತಾಯ ನೋಡುವೆನೆಂದು ಖಗರಾಜ ।
ವಿನತೆಯಿರ್ದಮನೆಗೈದಿ ಬಾಗಿಲು
ತನತನಗೆ ಮುಚ್ಚಿರಲು ಮಾತೆಯ
ಲನಿತು ದುಗುಡವ ಕೇಳಿ ಬಂದನು ಮನೆಗೆ ಕದ್ರುವಿನ ॥ ೫೨

ಬಂದು ಮಾತೆಯ ಕಂಡು ಚರಣ
ದ್ವಂದ್ವದಲಿ ಚಾಚಿದನು ಶಿರವನು
ಇಂದಿದೇನೌ ನಿಮಗೆ ಸವತಿಯ ದಾಸ್ಯವೆಂದೆನಲು ।
ಎಂದೊಡದಕಂಬುಜಾಕ್ಷಿ ನುಡಿದಳು
ಕಂದ ಕೇಳ್ಳ ಇಂದು ಹಿಂದಣ
ಛಂದವನು ನೆಱೆ ಹೇಳ್ವೆ ನಾಗರ ವೃಂದ ಮಾಡಿದುದ ॥ ೫೩

ಬಳಿಕ ಕರ್ಕೋಟಕನು ತನಗಾ
ಗೊಲಿದು ಮಾಡಿದ ಪರಿಯನಱುಹು
ತ್ತಲೆ ಮಗನೆ ತನಗಿಂದು ತೊತ್ತಿನ ಕೆಲಸ ಕೊಂಡಿಹುದ ।
ನಿಲಿಸುವೊಡೆ ಕದ್ರುವಿಗೆ ಕೊಟ್ಟರೆ
ಯೊಲಿದು ಸುಧೆಯನು ದಾಸಿತನವದು
ತೊಳದು ಹೋಹುದು ತಂದೆ ಕೇಳೆನಲಾಗ ಖಗರಾಜ ॥ ೫೪

ಕನಲಿ ನಾಕಜಪತಿಯ ಮೇಲಕೆ
ವಿನತೆಯಾತ್ಮಜ ಧಾಳಿ ಮಾಡು
ತ್ತನಗೆ ಕೊಡುವುದು ಸುಧೆಯನೆನುತಿರಲಿಂದ್ರ ಕೋಪಿಸಿದ ।
ಕನಲಿ ಕಾಳಗಮಾಡಲಾಕ್ಷಣ
ಕನಿಮಿಷರ ನೆಱೆ ಗೆಲಿದು ಜಿಷ್ಣುವ
ತನುವ ನಪ್ಪಳಿಸಿದನು ಹೊಯ್ದನುದರವನೊಡೆಮೆಟ್ಟಿ ॥ ೫೫

ಕುಲಿಶವನು ತಾ ತೆಗೆದು ಕೊಂಡನು
ಬಲುಹಿನಲಿ ಬಳಿಕಮರಪತಿಯನು
ನೆಲಕೆ ಕೆಡಹುತ್ತಿದೆಯು ಮೆಟ್ಟುತ ಬೇಡಿದನು ಸುಧೆಯ ।

ಬಳಿಕ ಶಕ್ರನು ವಿಹಗರಾಜನ
ಬಲುಹ ಕಂಡನು ಬಾಯೊಳಗೆ ತಾ
ನಿಳುಹಿ ಬೆರಳನು ಬೇಡಿಕೊಂಡನು ಸುಧೆಯನೀಗಿಂತು ॥ ೫೬

ತರಿಸಿ ಕೊಡುವೆನೆನಲ್ಕೆ ಬಿಟ್ಟನು
ಸುರಪತಿಯು ನಾಕ್ಷಣದೊಳಮೃತವ
ಹರಿದು ತೆಗೆದನು ವಿಹಗನಾಗಲು ಹರಿವ ಠಾವಿನಲಿ ।
ವರಸುಧೆಯ ಹನಿಯೊಂದು ಯಮುನೆಯ
ಪರಿಯೊಳುಕ್ಕಿತು ತೀರಕಾಗಳು
ಧರಣಿಯಲಿ ತರು ಮೂಡಿತಾಕ್ಷಣ ಕಡಲು ಕಾಳಿಗನ ॥ ೫೭

ಅಮೃತವಂ ತಂದುಕೊಟ್ಟು ತಾಯ ದಾಸ್ಯವನ್ನು ಬಿಡಿಸುವಿಕೆ

ಮಡುವಿನಲಿ ತಳುತಿರಲಿಕಿಂದಿರ
ನಡಿಗೆಱಗಿ ಶ್ರೀಗರುಡದೇವರ
ಝಡಿತೆಯಲಿ ಕಳುಹಿದನು ಬಂದನು ಕದ್ರುವಿನ ಮನೆಗೆ ।
ತಡೆಯದೈದಿಯೆ ಸುಧೆಯನಿತ್ತಾ
ಗಡಿಗೆಱಗಿ ತನ್ನಾತ್ಮಜನನಿಯ
ಬಿಡಿಸಿದನು ತಾ ಸೆಱೆಯನಾಕ್ಷಣ ಭೂಪ ಕೇಳೆಂದ ॥ ೫೮

ಇನ್ನು ಹೇಱುವೆ ವ್ಯಾಳಜಾತಿಯ
ಕುನ್ನಿಗಳವದಿರೆಲ್ಲಿ ಯೆನುತಲೆ
ಪನ್ನಗಾರಿಯು ವಿತಳಕಿೞಿದನು ನಿಮಿಷಮಾತ್ರದಲಿ ।
ಪನ್ನಗರ ಮೋಹರವನೆಲ್ಲವ
ಮನ್ನಿಸದೆ ಲೇಸಾಗಿ ನುಂಗುತ
ತನ್ನ ಜನನಿಯ ಹುಸಿದು ತೊತ್ತನು ಮಾಡಿ ಕೊಟ್ಟುದಕೆ ॥ ೫೯

ಉರಗಜಾತಿಯನ್ನೈದೆ ನುಂಗಲು
ನೆರೆದು ನಾಗರು ಬಂದು ನಮಗಿ
ನ್ನರಿದು ಬದುಕಲು ನಿಮ್ಮ ಕೈಯೊಳಗೆಂದು ಬಿನ್ನವಿಸೆ ।

ಗರುಡದೇವರು ಬೆಚ್ಚಿಕ ನಾಗರ
ಸಿರಿಯುರೊಳು ಪರಿವಡಿಯು ನುಡಿದರು
ಸುರರ ದಿನಕ್ಕೊಮ್ಮೊಮ್ಮೆ ಕೊಡುವುದು ನಮಗೆ ಕಪ್ಪವನು ‖ ೬೦

ಎನಲು ಶ್ರಾವಣಶುದ್ಧ ಪಂಚಮಿ
ದಿನದಿ ಕೊಡುವೆವು ನಿಮಗೆ ಕಪ್ಪವ
ನೆನಲು ಬಿಟ್ಟನು ಕೊಲೆಯನಾಕ್ಷಣ ಗರುಡನಹಿಕುಲದ ।
ಮನವೊಲಿದು ಕರ್ಕೋಟಕನ ತಾ
ವಿನತೆಯಾತ್ಮಜ ಕರೆದು ಹೇಳಿದ
ನನುಜ ಕೇಳೈ ನಿನ್ನನಾವನು ಪೂರ್ವಕಾಲದಲಿ ‖ ೬೧

ನೆನೆದ ಮನುಜನ ಮನದೆ ತಾ ಕಲಿ
ತನಗೆ ಸೋಕದೆ ಪೋಗಲೆಂದೀ
ಘನತರದ ವರವಿತ್ತು ಕಳುಹಿಯೆ ತಾರ್ಕ್ಷ್ಯತಿರುಗಿದನು ।
ವಿನತೆಯಲ್ಲಿಗೆ ಬಂದು ಜನನಿಯ
ಮನವೊಲಿದು ಬೀಳ್ಕೊಂಡು ವೇಗದಿ
ವನಜಲೋಚನದುಗ್ಧರಾಶಿಗೆ ಬಂದ ಖಗರಾಜ । ೬೨

ಇಂದ್ರನು ಸಪರಿವಾರನಾಗಿ ಬರ-ವಾಗ ದೂರ್ವಾಸರ ದರ್ಶನ.

ರಾಯ ಕೇಳೈ ಬೆಚ್ಚಿಕ ನಾಕಜ
ರಾಯನಮರಾವತಿಯುಲಿರುತಿರ
ಲಾಯಿತೊಂದಿನ ಹರುಷದಲಿ ದಿವಿಜೇಂದ್ರ ಸುರಕರಿಯು ।
ಲಾಯದಿಂ ತರಿಸಿದನು ಸಿಂಗರ
ದಾಯವನು ಮಾಡಿಸಿದ ವರವ
ಜ್ರಾಯುಧನು ಸತಿಯೆ ಸಹಿತ ಗಜವನೇಱಿ ಬರುತಿರಲು ‖ ೬೩

ಮುಂದೆ ಸುರ ತೆತ್ತೀಸಕೋಟಿಯ
ವೃಂದ ಸಹಿತವೆ ನಾಕಜೇಂದ್ರನು
ಛಂದದಲಿ ಬರುತಿರಲು ವರದೂರ್ವಾಸನಿದಿರಾಗಿ ।

ಬಂದು ಮಂದರಮಾಲೆಯನು ಮುದ
ದಿಂದ ನೀಡಲು ಮುಂದುಗಾಣದ
ಲಂದು ತಾನಾಮುನಿಯ ಕಾಣದೆ ಶಿವನ ತನುವೆಂದು ॥ ೬೪

ದೂರ್ವಾಸರು ಕೊಟ್ಟ ಮಾಲಿಕೆಯನ್ನು ತಾನು ಧರಿಸದೆ ಐರಾವತಕ್ಕೆ ಹಾಕಲು ದೂರ್ವಾಸರ ಕೋಪ.

ಮರೆದು ವಜ್ರಾಯುಧದ ಕೊನೆಯಲಿ
ತುರುಗಿ ಯೈರಾವತದ ಮೇಲಕೆ
ತೆರನಱಿಯದಲೆ ಕೊಂಡು ಕುಂಭಸ್ಥಳಕೆ ಹಾಕಿದನು ।
ಕೆರಳಿ ಮಂದರಮಾಲೆಯನು ತರಿ
ದೊರಸಿ ಮೆಟ್ಟಲು ಭದ್ರಮದ
ಕರಿ ಬೆರೆತನಿವನೆಂದಾಗ ಮುನಿಪತಿಯಧಿಕರೋಷದಲಿ ॥ ೬೫

ಇಂದ್ರಸ್ಯೈಶ್ವರ್ಯವನದಾಕ್ಷಣ
ಚಂದ್ರಶೇಖರ ದೇವ ಮುನಿದಾ
ಚಂದ್ರಮನ ತಾಯ್ವನೆಗೆ ಕಳುಹಿದನಾಮಹಾಶ್ರೀಯ ।
ತಂದೆ[1] ಕೇಳ್ದ ದ್ವಿಜರ ಮಱಿದರೆ[2]
ಕುಂದುವುವು ರಾಜ್ಯಾದಿವಿಭವವು
ಹಿಂದು ಗಳಯದೆ ಛತ್ರ ಪ್ರಭುತನದಂದವೆವು ಕುಲಕೆ ॥ ೬೬

ಕುಂದು ಹೊದ್ದುವುದಾಗಮಜ್ಞಗೆ
ವಂದನೆಯ ತಾ ಮಾಡದಿರ್ದೊಡ
ದಂದು ಧನ ತಾ ಕೆಡೆಗು ಬ್ರಾಹ್ಮರ ಶಾಪ ಹೊಲ್ಲೆಯದು ।
ಅಂದು ಕ್ಷೀರಾಂಬುಧಿಯ ಮಧ್ಯಕೆ
ಕುಂದದೀಡಾಡಿದನು ಮುನಿಪತಿ
ಯಿಂದ್ರನೈರಾವತವ ಸುರತರು ಕಾಮಧೇನುವನು ॥ ೬೭

ಹೊಳವ ಚಿಂತಾಮಣಿಯನಾತನ
ಬಿಳಿಯ ಹಯವನು ಪರುಸದುಪಲವ

1 ಕಂದ, ಘ. 2 ಮರೆದಗೆ, ಗ. ಘ.

ನೊಲಿವ ಶಚಿಯನು ವಡ್ಡಲಿಕ್ಕಿದ ಚಂದ್ರತಾರೆಯರ |
ಹೊಳವ ವಜ್ರಾಂಕುಶವ ವಜ್ರವ
ಬಿಳಿಯ ಛತ್ರವನಿಂದ್ರದೇವರ
ನೆಲೆಯ ಸರ್ವೈಶ್ವರ್ಯ ಹೋದುದು ಬಿಸುಡಲಾಕ್ಷಣಕೆ ‖ ೬೮

ಇಂದ್ರಗೆ ದೂರ್ವಾಸಶಾಪದಿಂದ ದಾರಿದ್ರ್ಯ ಪ್ರಾಪ್ತಿ.

ಅಸುವುಟಿದು ವಿಬುಧೇಶನಾಲಿಂ
ಗಿಸಿದ ನಾ ದರಿದ್ರಾಂಗನೆಯನನಿ
ಮಿಷರ ವೃಂದದ ಸಹಿತವೆ ಹಲವುಕಾಲದಲಿ |
ಮಸುಳಿಸಲು ಕಾಳಿಕೆಯ ಮೋರೆಯ
ಮಸಿಯ ಕಪ್ಪಟದಿಂದ ಮಾಸಿದ
ಕುಸುಮಕೇಶಗಳೊಡನೆ ದೇವೋತ್ತಮರೊಳಪದೆಶೆಯ ‖ ೬೯

ಕೆಲವುಕಾಲ ಕಳೆಯಲು ದೇವತೆಗಳು ಹರಿಯನ್ನು ಪ್ರಾರ್ಥಿಸುವಿಕೆ.

ವಸಿಸಿ ಯಿರೆ ಹದಿನಾಱುಸಾವಿರ
ವಿಷಮವತ್ಸರವಾಗೆ ಸುರರು
ಬ್ಬಸದಿ ಹರಿಯನು ಸಾರೆ ಕರುಣಾಕರನು ತಾನಱಿದ |
ಬಿಸರುಹಾಕ್ಷನು ಸುರರ ಕರೆಸಿದ
ವಸುಧೆಯಮರರ ಶಾಪ ತಾಗಿರೆ
ಪಶುಪತಿಯ ಹವಣಿಲ್ಲ ಕಾವರೆ ಬ್ರಹ್ಮಧಿಕ್ಕಾರ ‖ ೭೦

ಎಂದು ಹರಿ ನಾಕಜರ ಖೇದವ
ನೆಂದು ಕಳವೆನೊ ಯೆಂದು ಮಂತ್ರವ
ನಂದು ಮಾಡಿದನಸುರರಮರರು ಕೂಡಬೇಕೆಂದು |

ಬೃಹಸ್ಪತ್ಯಾಚಾರ್ಯರಂ ಕರೆದು ಶೋಣಿತಪುರಕ್ಕೆ ಕಳುಹಿಸುವಿಕೆ.

ಮಂದರಧರನು ಗುರುವ ಕರೆಸಿದ
ನಂದು ನೀ ಹೋಗಸುರನಾಯಕ
ನಂಧಕಾಸುರವಾಸಶೋಣಿತನಗರಕೆಂತೆಂದು ‖ ೭೧

ನಿರುತ ನೀ ಹೋಗಸುಗನಾಯಕ
ರರಸನಂಧಾಸುರನು ಹೊರೆಗವೆ
ಕರೆದು ನೀನಾರೆನಲು ನುಡಿವುದು ನಮ್ಮ ಚರನೆಂದು ।
ಸುರಗುರುವ ಕಳುಹಿದನು ಶೋಣಿತ
ಪುರಕದಾಕ್ಷಣ ಕಪಟನಾಟಕ
ವರನಿರೂಪದಿ ಬಂದನಂಧಾಸುರನ ಪುರಕಾಗ ॥ ೩೦

ಧರಣಿಗದು ಹನ್ನೆರಡುಸಾವಿರ
ನಿರುತವಾಗಿಹುದರಸ ಯೋಜನ
ಸುರಗಿರಿಯು ತಪ್ಪಲಲಿ ಕಟ್ಟಿಹುದಾತ್ರಿಕಾಲದಲಿ ।
ಸುರವಿರೋಧಿಗಳಲ್ಲಿತುಂಬಿಹ
ರೆರಡುಶಂಖಮಹಾರಥರು ಮ
ತ್ತೆರಡುಪದ್ಮದೊಳಂಟುಕೋಟಿಯು ಸೈನ್ಯ ನೆರೆದಿಹುದು ॥ ೩೨

ಇರಲಿಕಲ್ಲಿಗೆ ಬಂದು ಸುರಗುರು
ಹರುಷದುಬ್ಬಿನಲಾಗಧೋತ್ರದ
ನೆರೆಯುಡಿಗೆ ತಾನಿಟ್ಟ ದ್ವಾದಶನಾಮತಿಲಕದಲಿ ।
ನಿರುತ ಕಂಕುಳಕುಶೆಯು ಕರಡಿಗೆ
ಬೆರಳ ದರ್ಭೆಯು ಭರದ ಗಮನದ
ಹರುಷದಲಿ ಗುರು ಬರಲು ಶುಕ್ರನು ಕಂಡು ಮನ್ನಿಸಿದ ॥ ೩೪

ಅಲ್ಲಿ ಶುಕ್ರಾಚಾರ್ಯರ ಆದರ.

ನಡೆಯಿ ಮನೆಗೆಂದವರ ಕೈಗಳ
ಹಿಡಿದು ತಂದನು ತನ್ನ ಭವನಕೆ
ತಡೆದಿರದೆ ಮಧುಪರ್ಕವಿಷ್ಟರದಿಂದ ಮಾನಿಸಿದ ।
ಎಡೆಯುಡುಗದಭ್ಯಂಗನಾದಿಯು
ಬಿಡದೆ ಮಾಡಿಸಿ ದೇವಪೂಜೆಯು
ಕಡು ರಹಸ್ಯದಿ ಮಾಡಿದಾತಗೆ ಭೋಜನೋತ್ತಮವ ॥ ೩೫

ನಡೆಸಿ ಷಡ್ರಸದನ್ನದಿಂದವೆ
ಕಡುರಸದ ಭಕ್ಷ್ಯಾದಿಘೃತದಿಂ
ತಡೆಯದಾವಧಿತಕ್ರದಿಂದವೆ ಯಾದರಣೆಮಾಡಿ ।
ಬಡಿಸಿ ಯುಷ್ಣ ಜಲಂಗಳನು ತಾ
ಹಿಡಿದು ಕೈಘಟ್ಟಿಗಳ ನೀಡಿದ
ನೊಡನೆ ಕರ್ಪುರವೀಳಯಂಗಳ ಶುಕ್ರ ತಾನಿತ್ತ ॥ ೨೬

ಏನು ಬಿಜಯಂಗೈದ ಹದ ತಾ
ನೇನಿದಾಣತಿ ಗೊಡುವುದೆಂದರೆ
ದಾನವಾಂತಕನಾಜೆ ದೇವಾಸುರರ ಮೇಳವಿಸಿ ।
ನೀನು ಶುಕ್ರನು ಗೂಡಿ ನಾಕಜ
ದಾನವಾಳಿಗೆ ಸಾಧಿಸಮೃತದ
ಪಾನ ಗಾಣಿಸಿವೆಂದೊಡಾನೈತಂದೆ ನಿಮ್ಮೆಡೆಗೆ ॥ ೨೭

ಲೇಸು ಲೇಸಿದು ಸುಧೆಯ ಮಥನವು
ವಾಸುದೇವನಿರೂಪ ನಾವಿ
ನ್ನೇಸು ಧನ್ಯರೊ ಶಿವಶಿವಾ ಯೆಂದಾತ ಬೆಱಗಾದ ।
ಏಸು ಘನವಿದು ನಮ್ಮ ರಾಕ್ಷಸ
ವಾಸದವಸರವಱಿದು ನಿಮ್ಮಾ
ಸುರದ್ವೇಷಿಯನು ಕಾಣಿಪೆನೆಂದನಾ ಶುಕ್ರ ॥ ೨೮

ನಿಲಿಸಿ ತನ್ನಯ ಮನೆಯುಲವರಿಗೆ
ಕಲಿಸಿದನು ಸಂಜೀವನೌಷಧ [1]
ನೆಲೆಯನಾಗಳು ದೇವಯಾನಿಯುನಾ ಬೃಹಸ್ಪತಿಗೆ ।
ಒಲಿದು ನಿರವಿಸಿ ತಾನು ರಾಕ್ಷಸ
ತಿಲಕನವಸರ ಹಾಱುತಿರ್ದನು
ಬೞಿಕ ತಾನೊಂದಱುದಕಾಯಿತು ದೈತ್ಯನವಸರವು ॥ ೨೯

---

1 ನಮೃತವ, ಕ. ಖ.

ದ್ಯೂತಮೃಗಯಾಸ್ತ್ರೀವ್ಯಸನವಿರ
ಲಾತ ತಾನುೞಿದಿರ್ದ ಕಾಲವೆ
ನಾತ ಹಾೞುತಲೊಳಗೆ ಹೊಕ್ಕನು ದೈತ್ಯಗುರು ಬೞಿಕ ।
ಓತು ಮೃತಸಂಜೀವವಿದ್ಯೆಯು
ಧಾತುವೆಲ್ಲವ ದೇವಯಾನಿಯು
ದಾತಗೞುಹುತ್ತಿರಲಿಕಂಧಕನ ಸಭೆಯೊಳಗಾಗ ॥ ೮೦

ಒಲಿದು ಭಾರ್ಗವಗಾಯಿತವಸರ
ಬೞಿಕ ದಾನವರಾಯನೋಲಗ
ಕೊಲಿದು ಶುಕ್ರನು ಬಂದು ಬಿನ್ನಹ ಮಾಡಿದನು ಪೊಸತ ।
ಎಲೆಯರಸ ಒಂದಮಳಕಾರ್ಯವ
ನೊಲಿದು ಕೇಳ್ಯ ಯಿಂದು ಹೊಸತಾ
ಗಿಳಯು ಮೇಲಮರತ್ವವಾಯಿತು ನಿಮಗೆ ನಿಶ್ಚಯದಿ ॥ ೮೧

ವೀರನಾರಾಯಣನ ಶಿಷ್ಯರು
ಕ್ಷೀರಸಾಗರದಿಂದ ಬಂದರು
ಹಾೞಯಿಸಿ ಕೊಂಡಿಹರು ನಿಮ್ಮಾಯುವಸರೋತ್ತಮವ ।
ಆರು ಬಂದೊಡನವರನಿಲ್ಲಿಗೆ
ಸೇೞಿಸುವುದೆನೆ ಶುಕ್ರ ಹರುಷದಿ
ವಾರಿಜಾಕ್ಷನ ನೆನೆವುತಲ್ಲಿಗೆ ಬಂದ ಸುರಗುರುವ ॥ ೮೨

ಇತ್ತಲವರಾದೇವಯಾನಿಯು
ಸತ್ತವರನೆಬ್ಬಿಸುವ ವಿದ್ಯೆಯು
ಚಿತ್ತವಿತ್ತಾ [1] ಕಲಿಸುತಿರಲಿಕೆ ವರುಷದೊಂದಾಯ್ತು ।
ವೃತ್ತವನು [2] ಗುರು ನೆನೆವುತಿರ್ದನು
ಇತ್ತ ದಿನ ಹಿರಿದಾದವೀಗಳು
ಹೊತ್ತ ಕಾರ್ಯದ ಹೊರಿಗೆಯಾವುದೊ ಹದನ ಹರಿ ಬಲ್ಲ ॥ ೮೩

---

1 ನತ್ತ್ರಿಯುಳಿ, ಗ. ಘ. 2 ಉತ್ತಮನು, ಕ. ಖ.

ಭರವಸದಿ ಹರಿತಂದು [1] ಶುಕ್ರನು
ಹಿರಿಯ ತಳುವಿದನೆಂದು ಚಿಂತಿಸು
ತಿರಲಿಕವಸರವಡೆಯು ದೈತ್ಯರ ಗುರುವು ತಾನಾಗ ।
ಹರುಷ ಮಿಗೆ ಹರಿತಂದು ಶುಕ್ರನು
ಸುರಗುರುವ ಕರೆದೊಯ್ದು ಬಾಗಿಲ
ಹೊರಗೆ ನಿಲಿಸಿಯೆ ದೈತ್ಯಗೆಂದನು ಗುರುವು ಬಾಗಿಲಲಿ ॥ ೮-೪

ಬಂದು ಹೊರಗಿಹನೆಂದೆನಲಿಕರ
ವಿಂದನಾಭನ ದೂತನನು ನೀ
ವಿಂದು ವೇಳಯಕೆ ಕರೆಯಿರೆನಲಿಕೆ ಶುಕ್ರನೈತಂದ ।
ಅಂದು ಹರುಷದಿ ಸುರವರಗುರುವ
ನಂಧಕಾಸುರನೆಡೆಗೆ ತರಲಿಕೆ
ಛಂದದಲಿ ನೋಡಿದನು ಭಯ ಮಿಗೆ [2] ರಾಜದ್ವಾರವನು ॥ ೮-೫

ಅಂದು ಬಾಗಿಲ ಪೊಗುತಲೀತನ
ನಂದು ಶುಕ್ರನು ವೇಳಯಕೊಯ್ಯಲು
ಬಂದು ಸುರಗುರುವೈದಿ ಕಂಡನು ದೈತ್ಯನೋಲಗವ ।
ವಂದಿತಾಮಳಮಕುಟವರ್ಧನ
ರಿಂದ ತುಂಬಿಹುದೆಂಟುಯೋಜನ
ದಂದವದು ಬಟಿಕಲ್ಲಿ ಮೆಱೆವನು ದೈತ್ಯನದ್ಭುತದಿ ॥ ೮-೬

ಓಲಗವಲಿರ್ದವರು ಮುನ್ನಿನ
ಕಾಲನೇಮಿಯು ವಿಪ್ರಚಿತ್ತಿಯು
ಆಳು ಶುಂಭನಿಶುಂಭಕೈಟಭಶಂಖಮಧುಮಯರ ।

ಅಂಧಾಸುರನ ಸಭಾ

ಆಳು ವೃತ್ರಾಸುರಪನೋಲಗ
ದಾಳುಗಳು ಸುಂದೋಪಸುಂದರು
ಮಾಳುವಂಧಾಸುರನಿಗೋಲಗ ಗೊಟ್ಟು ಕುಳಿತಿರಲು ॥ ೮-೭

---

1 ಮಿಗೆಹೋಗಿ, ಘ ಮನೆಗೈದಿ, ಗ   2 ಅಸುರನ, ಕ ಖ

ಕೇಳು ಜನಮೇಜಯ ಧರಿತ್ರೀ
ಪಾಲ ಅಂಧಾಸುರನ ರಾಜ್ಯದ
ಮೇಳವನನೇನೆಂಬೆ ಹೊಗಳುವೊಡೆನಗಳವಹುದೆ ।
ಏಳುವರೆಯೋಜನದಲೋಲಗ
ಶಾಲೆ ತುಂಬಿತು ಸುಭಟಸಮುದಯ
ದೋಳಿಯಲಿ ಕುಳ್ಳಿರ್ದನಂಧಾಸುರನು ಹರುಷದಲಿ ॥ ೮೮

ಲೀಲೆಯಲಿ ಗುರು ಬಂದು ನಾನಾ
ಮೇಲುವಸನದ ಪಾವುಡವ ಹರಿ
ನೀಲರತ್ನದ ಮಕುಟಗರುಡೋದ್ಗಾರದಲಗುಗಳ ।
ಸಾಲಭಂಜಿಕೆಗಳನು ಪಚ್ಚೆಯ
ಜಾಳಿಗೆಯ ಮರಕತದ ಸೂಸಕ
ಲೋಲರತ್ನದ ಚನ್ನಗರುಡೋದ್ಗಾರಮೌಕ್ತಿಕವ ॥ ೮೯

ಇರಿಸಿದನು ರುದ್ರಾಕ್ಷವೊಂದೇ
ವರಮುಖದ ಬಲಮುರಿಯ ಶಂಖವ
ಪರಸುರಾಶಿಯ ಮೃಗದ ನಾಭಿಯ ಬಿಳಿಯ ಚೌರಿಗಳ ।
ಹರಿಯ ಪಾವುಡವೆಂದು ದೈತ್ಯಗೆ
ಗುರು ನುಡಿದು ಮಂತ್ರಾಕ್ಷತೆಯ ತಾ
ವೆರಸಿ ಕಾಣಿಕೆಗೊಟ್ಟೊಡಾತನನಸುರ ಬೆಸಗೊಂಡ ॥ ೯೦

ಗುರುವು ಮಂತ್ರಾಕ್ಷತೆಕೊಡಲು ಹರಿಯು ಸ್ಥಿತಿಯನ್ನು ಕೇಳುವಿಕೆ

ಹರಿ ಸಮಾಧಾನದಲಿ ತಾ ವರ
ಶರಧಿಯಲಿ ಮಲಗಿಹನೆ ನಿಮ್ಮನು
ಪರುತವಿಸಿ ಕಳುಹಿದನದೇತಕ್ಕೆಂದು ಬೆಸಗೊಳಲು
ಹರಿಯು ಸುಸ್ಥಿರ ನಿಮ್ಮ ಕಯ್ಯಲು
ಸುರರ ವೆರಸಿಯ ಯಮೃತಮಥನವ
ನೊರೆಯೆ ನಿಮಗಮರತ್ವ ವೈದುವುದೆಂದು ನೇಮಿಸಿದ ॥ ೯೧

ಅಂಧಾಸುರನು ಹರಿಯ ಬಳಿ ಬರುವಿಕೆ.

ಎನಲು ಸಲೆ ಲೇಸೆಂದು ರಾಕ್ಷಸ
ನನುಕರಿಸಿ ಕರೆತರಿಸಿ ದೈತ್ಯರ
ಜನಪ ಹೊಱವಂಟೈದಿ ಬಂದನು ಕ್ಷೀರಸಾಗರಕೆ ।
ದನುಜ ದಳ ಮೇಳಾಪವುನ್ನೂ
ಱೆನಿಪುದಕ್ಷೋಹಿಣಿಯು ಸೇನೆಯು
ದನುಜನಾಯಕ ಕಟಕ ಬಿಟ್ಟುದು ಕ್ಷೀರಸಾಗರದಿ ॥ ೯೨

ಅಂಧಕಾಸುರನನುಜರೆಲ್ಲರ
ದೊಂದು ಮೋಹರವಾಗಿ ಯಣ್ಣನ
ಮುಂದೆ ನಡೆದಪರೇಕವಿಂಶತಿದೈತ್ಯರತಿಬಳರು ।
ಬಂದು ಕ್ಷೀರಾಂಬುಧಿಯ ತಡಿಯಲಿ
ನಿಂದು ಕರೆಸಲಿಕಮರಪತಿ ನಲ
ವಿಂದಲಾತೆತ್ತೀಸಕೋಟಿಯ ಕೂಡಿ ತಾ ಬಂದ ॥ ೯೩

ನೆರೆಯಿತಮರರ ವೃಂದ ಪಯಸಾ
ಗರದ ತಡಿಯಲ್ಲಿಂದ್ರ ಮೊದಲಾ
ಗಿರಲು ದಾನವರಾಯ ಸುರಪನ ಕರೆದು ಮನ್ನಿಸುತ ।
ಶರಧಿಯನು ಕಡೆದಮೃತಮಥನವ
ನೊರೆಯಲಿಕೆ ತಾನಮೃತವಹುದೆಂ
ದಱುಹಿದನು ತಮಗಂಬುಜಾಕ್ಷನು ಕೇಳು ನೀನೆಂದ ॥ ೯೪

ಹರಿಯು ಮಾತಿದು ಸತ್ಯ ಮಂದರ
ಗಿರಿಯನೇ ಕಡಗೋಲ ಮಾಡುತ
ದರಣಿಗಾತಿಹ ಸರ್ಪನಾಥನ ತಂದು ತೆಗೆ ನೇಣ ।
ಒರೆಯಬೇಕೆನಲಂಧಕಾಸುರ
ಹಿರಿದು ಮನ್ನಿಸಿ ಮಂದರಾಭಿಧ
ಗಿರಿಯ ಕೀಳಲು ದೇವದಾನವರೆರಡುಬಲ ನೆರೆದು ॥ ೯೫

ದೇವದೈತ್ಯರು ಕೂಡಿ ಮಂದರಪರ್ವತವನ್ನು ಕೀಳುವಿಕೆ.

ಗಿರಿಯ ಕಿತ್ತರು ಮೂಱುಸಾವಿರ
ವರುಷಪರಿಯಂತಗುಳಿ ಹೊತ್ತರ
ದೆರಡುಬಲವೊಂದಾಗಲಿಪ್ಪತ್ತೈದುಸಾವಿರದ ।
ನಿರುತ ಯೋಜನದುದ್ದ ಗಿರಿಯದು
ವರಸ ಭೂಮಿಯು ಸಾರಲೀಯದೆ
ಗಿರಿಯನಾಂತರು ಹತ್ತುಸಾವಿರವಿಬುಧರಾಕ್ಷಸರು ॥ ೯೬

ಸುರರಿಗಿತ್ತರು ಬುಡವನಾಗಳು
ಗುರುತರದ ಹದಿನೈದುಸಾವಿರ
ಧರಣಿಯೊಳಗಿಹುದರಸ ಈಪರಿ ಯುಭಯಪಕ್ಷಗಳು ।
ಗಿರಿಯ ಹೊತ್ತೈತರಲಿಕಾಗಳು
ಸುರರು ಬರ ಬೆಂಡಾಗೆ ವಾಲಿಯು
ಗಿರಿಯನಾಂತನು ತಮ್ಮ ಸಹಿತೊಂದಿವಸ ವೀಪರಿಯ [1] ॥ ೯೭

ಹೊತ್ತು ಸಾರಿದರಾನಿಶಾಚರ
ಮೊತ್ತದಲಿ ಹನ್ನೆರಡು ಯೋಜನ
ವತ್ತಲಾಂತರು ಬಳಿಕ ಲಕ್ಷ್ಮೀವರನ ಕರುಣದಲಿ ।
ಅತ್ತ ಬಿಜಯಂಗೈದುತಮರರ
ಚಿತ್ತವೃತ್ತಿಯನಱಿದು ರಾಕ್ಷಸ
ಮೊತ್ತಕೆಂದನು ನೀವು ದನುಜರು ಗಿರಿಯ ಕೊನೆಯದನು ॥ ೯೮

ಹೊತ್ತುದುಂಟೇ ಎನಲು ದೇವರ
ಮೊತ್ತವನು ಕಡೆನೂಂಕಿ ರಾಕ್ಷಸ
ಮೊತ್ತ ಹೊತ್ತುದು ಗಿರಿಯ ಬುಡವನು ಸುರರು ಗಿರಿಗೊನೆಯ ।
ಹೊತ್ತು ನಡೆದರು ಹರಿಯ ನೆನೆಯುತ
ಲತ್ತ ತೊಂಭತ್ತಾಱು ಲಕ್ಷದ
ವಿಸ್ತರಿಪಯೋಜನದಿ ಬಂದರು ಮೇರುಪರ್ವತದಿ ॥ ೯೯

---

[1] ವೊಬ್ಬನೊಂದು ಮುಹೂರ್ತ ಪರಿಯಂತ, ಕ. ಗ. ಘ.

ಗಿರಿಯು ಸಾಗರದೊಳಗೆ ಹಾಕಲು
ತರಹರಿಸಿ ಕೊಳಲಾರದಾಗಳು
ಗಿರಿಯು ತೂಕವೆನಿಪ್ಪ ಸರದಲಿ ಹಾಕೆ ಹರಿ ಬಳಿಕ ।
ಅಚ್ಯುತನಾಗಿರಿ ಶರಧಿಯಂತ್ಯಕೆ
ಸಚಿವ ಪರಿಯನು ಶರಧಿ ಮೂವ
ತ್ತೆರಡುಲಕ್ಷದ ಘಾತಕಿಟಿಯಲು ದೇವದೈತ್ಯರಿಗೆ ॥ ೧೦೦

ಅರಸ ಕೇಳ್ಳೈ ಹರಿಯ ಸತ್ವಕೆ
ಹಿರಿದು ಕೌತುಕವಲ್ಲ ಮಂದರ
ಗಿರಿಯನೆತ್ತಿದ ನೀಮಹಾಬ್ರಹ್ಮಾಂಡಕೋಟಿಯನು ।
ಧರಿಸಿಹನು ಪ್ರತಿರೋಮರೋಮದೊ
ಳರಸ ತಾನಾಹರಿಗೆ ಮಂಗಳ
ಪರಿಪರಿಯ ವರಕುಸುಮವರುಷವು ಸುಚಿಯೆ ನಾಕದಲಿ[1] ॥ ೧೦೧

ಬಳಿಕ ರಾಕ್ಷಸರಮರರಾಗಲು
ಬಳಲಿಕೆಯನಪಹರಿಸಿ ಗಿರಿಯನು
ನಿಲಿಸಿದರು ಕಡಲೊಳಗೆ ಸಿಂಧುರಸಾಗ ತಾಪ್ಪದೆ ।
ಸೆಳೆದು ತಂದರು ವಾಸುಗಿಯನಾ
ಕುಳಿಸಿ ಸುತ್ತಿದರಾಗ ಗಿರಿಯನು
ನೆಲೆಯನಿಪ್ಪತ್ತೈದುಸಾವಿರಸುತ್ತನಳವಡಿಸಿ ॥ ೧೦೨

ಮೇಲೆ ಮಂದರಕಾಗ ಲಕ್ಷ್ಮೀ
ಲೋಲನಾಜ್ಞೆಯು ಶಿಂಶುಮಾರನ
ಕೀಲ ತೆಗೆ ನೇಣಿಂಗೆ ತಂದರು ಭುಜಗವಾಸುಗಿಯ ।
ತಾಳುವಾಧಾರಕ್ಕೆ ಕರವನು
ವಾಲಿಯಾಂತನದೀಜಗತ್ತನು
ಮೇಲೆ ದೇವಾಸುರರು ಹೊಸೆವರು ನಿಮಿಷಮಾತ್ರದಲಿ ॥ ೧೦೩

---

[1] ನಾಕಜರು· ಗ. ಘ.

ನೆಲೆಗೊಳಿಸಿ ಸರ್ವೋತ್ತಮೋತ್ತಮ
ನೊಲೆಯುದಂತಿರೆ ಕಡೆವ ಕಂಭದ
ಕೆಳಗೆ ಧರಿಸಿದ ಕೂರ್ಮರೂಪದಿ ಮೇರುಮಂದರವ ।
ಒಲಿದು ಕೀಲಕ ಜ್ಯೇಷ್ಠ ಮಾಸದ
ಸುಳುವಿನಲಿ ಶುದ್ಧಾಷ್ಟಮಿಯುಲಂ
ದುಲಿದು ವಿಷ್ಣುತ್ರಯುದ ಮಧ್ಯದಲಾಧನಿಷ್ಠೆಯುಲಿ ॥ ೧೦೪

ಹೊಸೆದರೈ ಧರೆಗಗನ ನಡುಗಲು
ಮಸಗಿ ಮಂದರದಿಂದ ದುಗ್ಧದ
ರಸಗಡಲನಾದೇವದಾನವರಂದು ವಾಸುಗಿಯು ।
ಪಸರಿಸಿದ ಫಣೆವಿಡಿದು ನಾಕಿ
ಪ್ರಸರ ಹೊಸೆಯಿತು ದೈತ್ಯಗಾತನ
ನೆಸಗಿದರು ಬಾಲದಲಿ ವಾಸುಗಿ ಕಾದು ಕಾಖಿದನು ॥ ೧೦೫

ವಿಷವನಮರರ ಮೇಲೆ ನಾಕಿ
ಪ್ರಸರ ಕೂಗಿಡುತಿರಲಿಕಾಕ್ಷಣ
ಬಿಸರುಹಾಕ್ಷನು ಬಂದು ದೈತ್ಯರಿಗೆಂದ ವಿನಯುದಲಿ ।
ಎಸಕವುಳ್ಳರು ನೀವು ನಿಮಗನಿ
ಮಿಷರು ಸರಿಯೇ ಫಣವ ಹಿಡಿವುದು
ಮಿಸುಕಲಾಗದು ನೀವು ಬಾಲವನೆಂದೊಡವರುಗಳು ॥ ೧೦೬

ಸಮುದ್ರದಲ್ಲಿ ಮಂದರವಿಟ್ಟು ದೇವದೈತ್ಯರು ಕಡೆಯುವಿಕೆ.

ಅಮರರನು ಕೆಡೆನೂಂಕಿ ಫಣೆಯುನು
ತಮತಮಗೆ ಹಿಡಿದೈದೆ ಹೊಸೆಯುಲಿ
ಕಮರರಾಗಳು ಬದುಕಿದೆವು ನಾವೆನುತ ಬಾಲವನು ।
ಸುಮನದಿಂದಲೆ ಹಿಡಿದು ಹೊಸೆದರು
ಕಮಲನಾಭನ ಕೃಪೆಯು ಭಾರದಿ
ಸಮತಳಿಸಿ ತಾವೈದೆ ಮಂದರಮಥನ ಮಾಡಿದರು ॥ ೧೦೭

ಮೂಡಿದರು ಮುನ್ನೂಱು ವತ್ಸರ
ಕೂಡೆ ಸವೆದವು ಬೞಿಕಲಾಗಲು
ಮೂಡಿದವು ಕ್ಷೀರಾಬ್ಧಿ ಮಧ್ಯದೊಳರಸ ಕೇಳೆಂದ ।

ಅಲ್ಲಿ ಐರಾವತ ಮೊದಲಾದವುಗಳ ಜನನ.

ನೋಡಲಿಕೆ ಚೌದಂತ ಶ್ವೇತದ
ಗಾಢಹಯವುಚ್ಚೈಶ್ರವಸುಗಳ
ಜೋಡು ತಾ ವರಪರಶು ಚಿಂತಾಮಣಿಯು ಕಲ್ಪತರು ॥ ೧೦೮

ಕಾಮಧೇನುಗಳಲ್ಲದಲ್ಲಿಯೆ
ರಾಮಣೀಯಕವನಧಿಯುಪ್ಪರ
ಸ್ತೋಮ ಪುಟ್ಟಿತು ಮತ್ತೆ ಕುಲಿಶವು ಚಂದ್ರತಾರೆಗಳು ।
ಭೂಮಿಗಚ್ಚರಿಯೆನಿಸಲಮರರ
ಸ್ತೋಮ ಜೀವನದಂತೆ ಮೂಡಿದು
ದೀಮಹಾಸುಧೆ ಪೂರ್ಣಕಲಶದಿ ಶ್ರೀಯುನೊಡಗೂಡಿ ॥ ೧೦೯

ಹುಟ್ಟಿದವು ಪರಮೌಷಧಿಗಳವು
ಹುಟ್ಟಿದುದು ತಾ ವರವನಸ್ಪತಿ [1]
ನೆಟ್ಟನಾಗಲು ಸುಧೆಯ ಮಥನದಲವರ ಕಡೆಯಿಂದ ।
ಹುಟ್ಟಿಸಿದ ಹರಿ ತಾನು ದೈತ್ಯರ
ನಟ್ಟಿಸಲು ನಾರಯಣಿ ಎಂಬಳ
ಭೀಷ್ಟದಲಿ ಸುರವರರ ಕಾಯಲು ಭೂಪ ಕೇಳೆಂದ ॥ ೧೧೦

ಹುಟ್ಟಿದವು ಮಿಗೆ ವರಸುವಸ್ತುವು
ನೆಟ್ಟನಾಹದಿನಾಱುಸಾವಿರ
ಯಾಷ್ಟಿಕರುಮಿದಱೊಳಗೆ ನಾನಾವಿಧದ ಕಲ್ಪತರು ।
ಪುಟ್ಟಿದವು ವರಕಲ್ಪಲತೆಗಳು
ಪುಟ್ಟಿದವು ನೆಱೆ ಹವ್ಯಕವ್ಯಕೆ
ಶ್ರೇಷ್ಠವಾಗಿಹ ಕಂದಮೂಲಗಳಮೃತಮಥನದಲಿ ॥ ೧೧೧

---

[1] ಹುಟ್ಟಿದಳು ತಾನಿರದೆಯುತ್ಸ್ವರೆ

ಶಾಕಪತ್ರವು ನೂರು ವರಫಲ
ಶಾಕಗಳು ಮುನ್ನೂರು ಮಿಕ್ಕಿನ
ಶಾಕಗಳು ತಾ ಪೂಜ್ಯವಲ್ಲೈ ಭೂಪ ಕೇಳೆಂದ |
ವ್ಯಾಕುಳರು ತಾ ಮೆಲುವ ಫಲಗಳು
ಲೋಕವರ್ತನೆಯಲ್ಲ ಕೇಳೈ
ಜೋಕೆಗಳ ತಾ ಜಾತಿಜಾತಿಯೊಳವರ ಲೀಲೆಯಲಿ || ೧೧೨

ಎಳ್ಳು ಜವೆಗೋಧೂಮ ಮುನ್ನವೆ
ಉಳ್ಳವವು ತಾ ಗೂಡಿ ಹುಟ್ಟಿದ
ವೆಲ್ಲ ಮೂವತ್ತಾರು ಶಂಕರಗಂಡಮೊದಲಾಗಿ |
ಎಲ್ಲಧಾನ್ಯವ ನೆಣಿಸೆ ಹದಿನೆಂ
ಟಲ್ಲಿ ಪಡಿಯಿವರಂದದಿಂದವೆ
ಯೆಲ್ಲ ಮೂವತ್ತಾರು ಎನಿಸುಗು ಲೋಕ ಮೆಚ್ಚಲಿಕೆ || ೧೧೩

ಹುಟ್ಟಿದ ಅಮೃತವನ್ನು ದೈತ್ಯರು ಶಿವನ ಬಳಿ ಕೊಡುವಿಕೆ.

ಕ್ಷೀರಸಾಗರದಲ್ಲಿ ಹುಟ್ಟಿದ
ಸಾರವಸ್ತುವನೈದೆ ತ್ರಿಪುರರ
ವೈರಿಗಿತ್ತರು ದೇವ ನೀನಿದ ಕಾಯಬೇಕೆಂದು |
ಧೀರದೇವಾಧಿಪತ್ರಿಯಂಬಕ
ಗೋರಣಿಸದೊಂದಮಳವಸ್ತುವ
ನಾರಯಿದು ತಾವ್ ತಂದುಕೊಟ್ಟರು ಪರಮಹರುಷದಲಿ || ೧೧೪

ವಾರಿಜಾಸನಮುಖ್ಯನಾಕಜ
ರೋರಣಿಸಿ ಕುಳ್ಳಿದರು ಪಙ್ಕ್ತಿಯು
ನಾರಯಿದು ಪೂರ್ವಕ್ಕೆ ಪಶ್ಚಿಮಮುಖಕೆ ತಾಮಸುರು |
ಆರು ಪೂರ್ವದ ಮುಖದಲುಂಬರು
ಧಾರುಣಿಯೊಳೀವ್ರತವ ಮಾಳ್ಪರಿ
ಗೋರಣಿಪುದಾಯುಷ್ಯಭಾಷೆಯು ನಿತ್ಯವೃದ್ಧಿಯೆಂದ || ೧೧೫

ಗಾವಿಲರು ತಾವಾಗ ದಕ್ಷಿಣ
ಭಾವಕುಂಬವರೆಡರು ಬಡತನ
ನೋವಹುದು ವಾಯುಷ್ಯಭಾಷೆಯು ಪಶ್ಚಿಮದ ದೆಸೆಗೆ ।
ನೋವದಹುದಾ ಮತ್ತೆ ಬಡಗಲು
ಜೀವನಿಕರಕದೋತದಾಯುಷ
ವ್ಯೋವ್ಯೊ ಸಮನಿಪುದಿದನು ಬಲ್ಲರೆ ದೈತ್ಯನಿಕರಂಗಳು ॥ ೧೧೬

ಕುಳ್ಳಿದರು ತಾವಪರದಿಕ್ಕಿಂ
ಗಲ್ಲಿ ಮುಖವಾಗಿರಲು ದೇವರ
ದಲ್ಲಿ ಕುಳ್ಳಿದರಾಗ ಪೂರ್ವದ ಮುಖದ ಪಙ್ಕ್ತಿಯಲಿ ।
ನಿಲ್ಲದಿಹುದಾಪಙ್ಕ್ತಿ ನಿರ್ಣಯ
ವೆಲ್ಲರಲ್ಲಿದು ಪರಮಮತವಹು
ದಲ್ಲಿ ಕುಳ್ಳಿದರುಭಯಪಕ್ಷದ ಪರಿಯ ಕೇಳೆಂದ ॥ ೧೧೭

ಸುರರು ಕುಳ್ಳಿದರೊಂದುಪಙ್ಕ್ತಿಯೊ
ಳಿರಲು ದೈತ್ಯರದೊಂದು ಪಂಙ್ಕ್ತಿಯೊ
ಳಿರಲು ಶೂಲಿಯು ದೈತ್ಯರ ಕರೆದು ನಗುತಲಿಂತೆಂದ ।

ಅಮೃತವನ್ನು ಯಾರು ಬಡಿಸಬೇಕೆಂಬ ವಿಚಾರ

ವರಸುಧೆಯು ನಿಮಗಾರು ಬಡಿಸಲು
ನಿರವಿಸುವುದೈಯೆನಲು ನಾಕಜ
ರರಸವೊದಲಾಗೆಂದರಾಗಳು ಶಿವಗೆ ತಮ್ಮನುವ ॥ ೧೧೮

ದೇವ ದೈತ್ಯರಿಗಾರು ಬೇಕೈ
ನಾವವರ ಕೈಕೊಂಬೆವವರನು
ನೀವು ಕೇಳುವುದೆನಲು ದೈತ್ಯರು ಕರಗಳನು ಮುಗಿದು ।
ದೇವ ನೀನೇ ಶಂಭು ನಮ್ಮನು
ಕಾವ ನೀನೇ ನಮ್ಮ ಪಕ್ಷದ
ದೇವ ನೀ ಕೇಳಯ್ಯ ಮತವನು ಸುಧೆಯ ತಾ ಸಹಿತ ॥ ೧೧೯

ಪುಟ್ಟಿದಾಕೆಯು ಕೈಯ್ಯಲುಂಬುದ
ಭೀಷ್ಟವೆನೆ ಹರಿ ಯುವತಿರೂಪದಿ
ಪುಟ್ಟಿ ಗಂಟಲ ಕೊಯ್ವನೆಂಬುದ ದನುಜರಱಿಯದಿರೆ ।
ನೆಟ್ಟನಾಕೆಯ ನೋಟಸನ್ನೆಯ
ದಿಟ್ಟಗವದಿರು ಮರುಳುಗೊಂಡರು
ಕೆಟ್ಟ ಕೇಡಿಂಗೇನ ಹೇಳುವೆ ದೈತ್ಯಕೋಟಿಗಳ ॥ ೧೭೦

ದುಷ್ಟಜೀವರು ತಮ್ಮ ತನುವನು
ನೆಟ್ಟನಱಿಯದೆ ಕಷ್ಟಭಾವದಿ
ಕೆಟ್ಟರಲ್ಲದೆ ತಮಗೆ ಸುಧೆಯನು ದೇವ ಬಡಿಸುವನೆ ।
ನೆಟ್ಟನಾಸುಧೆ ತಾ ವಿಶಿಷ್ಟರ
ಭೀಷ್ಟವಲ್ಲದೆ ನಷ್ಟರಿಗೆ ತಾ
ಸೃಷ್ಟಿಯಲಿವರಿಗಮೃತ ದೊರಕುವುದೆಂತು ಹೇಳೆಂದ ॥ ೧೭೧

ಎನಲು ದೇವಾಸುರರು ನಾರಾ
ಯಣಿಯನೇ ಪತಿಕರಿಸೆ ಶಂಕರ
ಮನದಲುತ್ಸಾಹಿಸಿದ ಸಾಕ್ಷಾದ್ವಿನಯಪರನಾಗಿ ।
ವನಿತೆ ನಾರಾಯಣಿಯ ಕೋಮಲ
ವನಜಚರಣದಲುತ್ತಮಾಂಗವ
ನನುಕರಿಸಿ ಬಿನ್ನಹವ ಮಾಡಿದನಂದು ಕಮಲಜನು ॥ ೧೭೨

ದೇವದೈತ್ಯರಿಗೆ ಅಮೃತವಂ ಕೊಡಲು ಬ್ರಹ್ಮನ ಪ್ರಾರ್ಥನೆ.

ದೇವಿ ನೀವೀಯಮೃತಕಲಶವ
ನೀ ವಿಬುಧವೃಂದಕೆಯು ದೈತ್ಯ
ಸ್ತೋಮಕುಣಲಿಕ್ಕುವುದದೆಂದರೆ ದೇವಿ ನಸುನಗುತ ।
ಆವಿರಿಂಚಾದಿಗಳ ಮಾತನು
ದೇವಿ ಮನ್ನಿಸಿ ಬಳಿಕ ದೇವಿಯ
ಭ್ರೂವಿಲಾಸವನೇನ ಹೇಳುವೆ ನಯನವಿಭ್ರಮವ ॥ ೧೭೩

ಸುರರ ಶ್ಲಾಘ್ಯಂಗೊಳ್ಳದಸುರರ
ಹರಣವನು ಕೊಳಲವರ ನೋಡುತ
ಬರಬರಲು ವರಮಂದಹಾಸದಲವರ ಮೋಹಿಸುತ |
ಬರುತಿರಲಿಕವರನುವನಾಗಳು
ಪರಿಕಿಸಿದರಾ ರಾಹುಕೇತುಗ
ಳಱಿವರಾಕ್ಷಣ ಬಿಟ್ಟು ಬಂದರು ದೈತ್ಯಪಙ್ಕ್ತಿಯನು || ೧೨೪

ರಾಹುಕೇತುಗಳು ಸುರರ ಸಂಘದಲ್ಲಿ ಬರುವಿಕೆ

ನೋಟವಿದು ಲೇಸಲ್ಲ ದೈತ್ಯರ
ಕೋಟಿಗದು ಗಂಟಲನು ಕೊಯ್ಯಲಿ
ಕಾಟವಿದು ಪರಸತಿಯ ನೋಟವು ಸಲ್ಲದಿಹಪರಕೆ |
ನೋಟವಿಲ್ಲದ ಸುರರ ಪಙ್ಕ್ತಿಯ
ಗೋಟು ಸಾಕೆಮಗೆನುತ ಮೆಲ್ಲನೆ
ಯಾಟವಿಕಬುದ್ಧಿಯಲಿ ಕುಳ್ಳದರವರು ವಿನಯದಲಿ || ೧೨೫

ಚಂದ್ರಸೂರ್ಯರ ನಡುವೆ ಉಣಲಿಕೆ
ಬಂದು ಕುಳಿತಿಹ ರಾಹುಕೇತುಗ
ಳಂದವನುವಾಗಿರದದೆನುತಲಿ ನೆನೆದು ಮನದೊಳಗೆ |
ಬಂದುದನು ತಾವೆಱುಹಲಮ್ಮದೆ
ಇಂದು ರವಿ ತಮ್ಮೊಳಗೆ ಮನದಲಿ
ನೊಂದು ಬಳಲುತ ಬರಲು ನಾರಾಯಣಿಯು ಪಙ್ಕ್ತಿಯಲಿ|| ೧೨೬

ಬಂದು ಮೋದದೆ ಲಕ್ಷ್ಮಿದೇವಿಯು
ದ್ವಂದ್ವಶ್ರೀಚರಣವನು ಮನದಲಿ
ವಂದಿಸಲು ತಮ್ಮೊಳಗೆ ದೃಢಮನದಿಂದ ತಾವಾಗ |
ಮಂದರೋದ್ಧರಗಱುಹೆ ಸಂಜ್ಞೆಯ
ಲಂದು ಬೞಿಕದ ಕಂಡು ತಾ ಸುರ
ವೃಂದದವರಿಂಗಮೃತವೆಱೆವುತ ರಾಹುಕೇತುಗಳ || ೧೨೭

ಅಮೃತವನುಂಡ ರಾಹುಕೇತುಗಳ ಖಂಡನ

ಕರದಲಮೃತವನೆರೆಯೆ ದೈತ್ಯರು
ತರಹರಿಸದದ ನುಂಗೆ ಗಂಟಲ
ಹೊರೆಯು ಸೋಕದ ಮುನ್ನ ಕಡಿದನು ಕೊರಳ ಚಕ್ರದಲಿ ।
ಶಿರವನೊಬ್ಬನ ಎದೆಯನೊಬ್ಬನ
ತರಿದನಾಕ್ಷಣ ಪಙ್ಕ್ತಿದೂರರ
ಸುರರ ಪಂಙ್ಕ್ತಿಗೆ ಬರಲಯೋಗ್ಯರ ಕಡಿಯಲವರಾಗ ॥ ೧೨೮

ಅಮೃತ ಸೋಂಕಿದ ದೇಹವಾಕ್ಷಣ
ಸುಮನಸರ ಸಮವಾಯ್ತು ನವಗ್ರಹ
ಕ್ರಮದ ಪದವಿಗೆ ಸಂದವಮೃತವನುಂಡ ದೇಹಗಳು ।
ಅಮೃತಸೋಂಕದ ಕಾಯ ಕೆಟ್ಟುದು
ವಿಮಲಮತಿ ಕೇಳುತ್ತ ಕಥೆಯನು
ಕಮಲನಾಭನು ಪಙ್ಕ್ತಿಭೇದವ ಮಾಡಿದನು ಬಳಿಕ ॥ ೧೨೯

ಸುರರಿಗಮೃತವನೆರೆದು ಸಾಕಿದ
ಸುರೆಯನಸುರರಿಗಿರಿಸಿ ಕಳದಾ
ಪರಿಯ ಕೇಳೃ ಒಂದುಕಲಶದೊಳರಡನಳವಡಿಸಿ ।
ಹಿರಿದೆ ತಾನಿದು ಹರಿಯ ಮಾಯೆಗೆ
ಸರಸಿರುಹಗರ್ಭಾಂಡದೊಡಲಲಿ
ನಿರಿಸನೇ ಹರಿ ಜೀವರಾಶಿಯ ಪಂಚಭೂತಗಳ ॥ ೧೩೦

ಎನಲಿಕರಸನು ಮುನಿಪಗೆಂದನು
ವಿನಯದಲ್ಲೀಸಪ್ತಸಾಗರ
ಜನಿಸಿದಂದವ ತನಗೆ ಪೇಳುವುದೆಂದು ಬಿನ್ನವಿಸೆ ।
ಜನಪ ಕೇಳೃ ಪೂರ್ವಕಥನವ
ನಿನಗೆ ಹೇಳುವೆ ಮೊದಲ ಕೃತಯುಗ
ವಿನುತಸ್ವಾಯಂಭುವನ ಮನುವಿನ ರಾಜ್ಯದೊಳಗಲ್ಲಿ ॥ ೧೩೧

ಜನಿಸಿತೊಂದೇ ಕಥನವದನಾ
ನಿನಗೆ ಪೇಳುವೆನದನು ವಿಸ್ಮಯ
ವಿನುತಕರ್ಣಕೆ ಹೊಸತನಜುಪ್ರವೆ ಸಾಗರದ ಹವಣ ।
ವಿನಯದಲಿ ಋಷಿನಿಕರವಾದುದ
ನನಿತುವನು ಶಿವ ನೋಡ ಬಂದರೆ
ಘನತರದ ಕೋಪವನು ತಾಳ್ದುದ ಕೇಳು ಕೌತುಕವ ॥ ೧೩೭

ಐದನೆಯ ಸಂಧಿ ಮುಗಿದುದು.

ಆರನೆಯಸಂಧಿ.

ಸೂಚನೆ

ಕ್ಷಾರಕಬ್ಧಿನ ರಸಸುರಾಬ್ಧಿಗ
ಳೋರಣದಲಾವರಘೃತಾಬ್ಧಿಯು
ಕಾರಣವನಾ ದಧಿಪಯೋಬ್ಧಿಯು ಸ್ವಾದುಸಾಗರದ ॥

ಋಷಿಗಳ ಮನೆಗೆ ಶಿವನ ಬರುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಹಿಮಗಿರಿಯಲ್ಲಿ ಋಷಿಗಳ
ಲೋಲಪುಣ್ಯಾರಣ್ಯ ತಾನೆಸಿಸಿಪ್ಪುದಾಶ್ರಮವು ।
ಮೇಲೆ ನಿರ್ಮಿತವಾಗಿ ಶೋಭಿಸೆ
ಭಾಳಲೋಚನ ಬಂದು ಋಷಿಕುಲ
ದಾಲಯದ ವಿಭವವನು ನೋಡುತ ಬರಲು ಮನೆಮನೆಗೆ ॥ ೧

ಬೀಳಿಯಲಿ ನೋಡುತ್ತ ಬರಲಿಕೆ
ಕೇಳು ಋಷಿಗಳ ಬಳಗ ಸಂತತ
ಖೇಳಮೇಳಂಗಳೊಳಗಿರ್ದರು ತಮ್ಮಯಾಶ್ರಮದಿ ।

ಆಲತಾಂಗಿಯರೆಲ್ಲ ಋಷಿಗಳ
ಲೋಲದೇವಾರ್ಚನೆಯ ಪುಷ್ಪವ
ಕಾಲವೆಱಿದೊಯ್ಯುತಿರೆ ಹಿಂದೊಂದಾಯ್ತು ಕೇಳೆಂದ ॥ ೨

ಬಂದು ಶಿವ ನೋಡುತ್ತ ಹಿರಿಯರ
ಮಂದಿಯನು ಮಂದಿರದಿ ಕಾಣದ
ಲಂದು ಸುಮ್ಮನೆ ಹೋಗುತಿರಲಿಕೆ ನೆರೆದ ಬಾಲಕರು ।

ಶಿವನು ಹಿಂತಿರುಗಿ ಹೋಗೆ ಬಾಲರ ಕಾಟದಿಂದ ಶಿವನು ಶಪಿಸಲು ಆಶ್ರಮದಹನ

ಅಂದು ಕಾಡಲಿಕಾಯ್ತು ಕೋಪವು
ತಂದೆ ಕೇಳ್ಳೈ ನೃಪಶಿರೋಮಣಿ
ಯಿಂದುಧರ ಭಾಳಾಕ್ಷಿ ದೆಗೆಯಲು ಬೆಂದುದಾಶ್ರಮವು ॥ ೩

ಬೇಯಲಿಕೆ ಋಷಿವೃಂದವಾಕ್ಷಣ
ಬಾಯ ಬಿಡುತವರೈದಿ ಬಂದರು
ರಾಯಧೂರ್ಜಟಿಗಿತ್ತರಾಗಲು ದಿವ್ಯಶಾಪವನು ।
ದಾಯವಿಲ್ಲದೆ ಯಾಶ್ರಮಂಗಳ
ದಾಯವನು ಸುಟ್ಟುದಕೆ ನಿನ್ನಯ
ಕಾಯವುರಿಯಲಿ ಯೆನಲಿಕಾಕ್ಷಣಕುರಿಯ ಕೈಕೊಳಲು ॥ ೪

ಶಾಪದಿಂದ ಶಿವದೇಹವು ಉರಿಯುವಾಗ ಕಾಮಧೇನುವು ಹಾಲುಕರೆಯಲು ಕ್ಷೀರಸಮುದ್ರೋತ್ಪತ್ತಿ

ಕೊಂಡು ತಾನುರಿಲಿಂಗವಾದನ
ಖಂಡತೇಜೋಮಯನು ನಿಮಿಷಕೆ
ಹಿಂಡಿದನು ಹದಿನಾಲ್ಕು ಲೋಕವನುರುಹಿ ಘೋಳಿಡಿಸೆ ।
ಕಂಡು ದೇವರ ನೆರವಿ ವಿಶ್ವದ
ತಂಡ ಸರಸಿಜಸುತಗೆ ಪೇಳಲು
ಕಂಡು ಕ್ಷೀರಾಬ್ಧಿಯೊಳು ನಾರಾಯಣನು ಪರಿತಂದ ॥ ೫

ನಂದಿಸುವೆನುರಿಲಿಂಗವಾದುದ
ನೆಂದು ತಾ ಕಂಡದಕೆ ತಕ್ಷಣ
ದಿಂದುಧರಗತಿಶೈತ್ಯವಾಗಲಿಕಂದು ಸೃಜಿಸಿದನು ।
ತಂದು ತಾ ಹರಿ ಕಾಮಧೇನುವ
ಕುಂದದಾಶಿವನುತ್ತಮಾಂಗದೊ
ಳಂದು ಕಱೆಯಲಿಕಾಯ್ತು ದಿನಗಳು ಹಲವು ತೀರಲಿಕೆ ॥ ೬

ಕಱೆಯಲಾತನ ಪಾದಮಸ್ತಕ
ನೆಱೆ ಮುೞುಗೆ ನಾಲ್ವೆರಳುಗಳುೞಿಯೆ
ಕಱೆಯಿತೈ ಸುರಧೇನು ಪಾಲನು ಬೞಿಕ ಶಶಿಮೌಳಿ ।
ಕಱೆಯೆ ಪಾಲಿಂ ಕಡೆಗೆ ಸಾರಿಯೆ
ಪೆಱೆನೊಸಲ ಶಿವಗಾಯ್ತು ಶೈತ್ಯವು
ಕಱುಗೊರಳ ಕೋಮಳನ ಮಸ್ತಕದುಷ್ಣ ವಾಱಿದಿರೆ ॥ ೭

ಅದಕೆ ಗ್ರೀಷ್ಮಂ ಬರಲಿಕಾಕ್ಷಣ
ವಿಧಿಸಿದರು ಶ್ರೀಬ್ರಹ್ಮದೇವರು
ಮುದದಿ ಶ್ರೀಕೈಲಾಸವಾಸಿಗೆ ಶೈತ್ಯಧಾರೆಯನು ।
ಉದಕವನು ನೆಱೆ ಹತ್ತುಸಾವಿರ
ಸುದತಿಯರು ವರಪೂರ್ಣಕುಂಭದೆ
ಮುದದಲಭಿಷೇಕವನು ಮಾಡಿದರಗ್ರಜಲಗಳಲಿ ॥ ೮

ಆವನಭಿಷೇಕವನು ಮಾಡುವ
ಜೀವಿಗಾಗಲು ಭೂಮಿಸುರರೊಳ
ಗಾವನಗ್ನಿಷ್ಟೋಮಯಾಗವನೊಂದು ಕೋಟಿಯನು ।
ತಾವು ಮಾಡಿದ ಫಲವದೆಂದಾ
ದೇವರೆಲ್ಲರು ಹರಿಯು ಬೞಿಕಾ
ಠಾವಿನಲಿ ನೆಲೆಗೊಂಡ ದುಗ್ಧವು ಪಾಲುಗಡಲಾಗೆ ॥ ೯

ಶ್ವೇತದ್ವೀಪದಧಿಸಮುದ್ರಾದಿಗಳ ಜನನ.

ಅಲ್ಲಿ ಕೆನೆ ಮೇಳವಿಸೆ ಯಾದವ
ಮಲ್ಲಗಾಯಿತು ಶ್ವೇತದ್ವೀಪವ
ದಲ್ಲಿ ತಾ ದಧಿಯಾಯ್ತು ಮಂಗಳವೃಂದ ಮೇಳವಿಸೆ ।
ಅಲ್ಲಿ ಶ್ರೀವಧು ತಾನೆ ವಾಮನ
ನಲ್ಲಿ ದಧ್ಯೋದನವದಾಗಳು
ನಿಲ್ಲದಂತುಪಯೋಗಮಾಡಿದಳಖಿಳವಿಭವದಲಿ ॥ ೧೦

ಆಉಪೇಂದ್ರಂಗಾದ ಶೇಷವ
ಸೀವಿಧಾತ್ರನು ಧರೆಗೆ ಹಾಯಿಸ
ಲೀವಿಧದಿ ದಧಿಕಡಲು ಪುಟ್ಟಿದುದರಸ ಕೇಳಂದ ।
ಈಮಹಾಬ್ರಹ್ಮಾಂಡಸೃಷ್ಟಿಯ
ನಾಮಹಾಕಮಲಜನು ಮಾಡಲು
ಹೋಮಸಾಧನಕೋಸುಗರ ಸೃಜಿಸಿದ ಘೃತಾಂಬುಧಿಯ ॥ ೧೧

ಮೊದಲಲಸುರರು ಹುಟ್ಟಲವರಿಗೆ
ಪದುಮಜನು ಸುರೆ ಯೆಂಬ ಕಡಲನು
ವಿಧಿಸಿದನು ಬಳಿಕಮರನಿಕರಕಮಿಕ್ಷುರಸಗಡಲ ।
ಒದಗಿಸಿದ ಬಳಿಕಂದು ಮನುಜರ
ನೊದವಲೋಸುಗ ಪಾಯುಗಸ್ತ್ರ್ಯಾಸ
ದುದರದಲಿ ಮೂತ್ರಿಸಿಯೆ ಮಾಡಿದ ಲವಣಸಾಗರವ ॥ ೧೨

ಆಮಹಾಪ್ರಳಯದುದಲು ಮರಳಿಯೆ
ಆಮಹಾಜಲ ಶೇಷಭೂಮಿಗೆ
ತಾ ಮಹಾಸುಸ್ವಾದು ಜಲವಾಗಿದ್ದುದನವರತ ।
ಆಮಹಾಸಾಗರಗಳೆಲ್ಲಾ
ಭೂಮಿಯಲಿ ನೆಲೆಗೊಂಡವಾಗಂ
ತಾ ಮಹಾಹರಿ ಯಿರಿಸಿ ಮೆಚ್ಚಿದನು ಸಪ್ತಸಾಗರವ ॥ ೧೩

ಬರ್ವರೊಂದೊಂದುವನು ನಿರ್ಮಿಸ
ಉರ್ವಿಯಲಿ ಹದಿನಾಲ್ಕುಲೋಕವ
ಸರ್ವಜೀವರು ತುಂಬಿದೀಬ್ರಹ್ಮಾಂಡಮಂಡಲವ ।
ನಿರ್ವಿಘ್ನದಿಂದಿದನು ನಡೆಸುವ
ಸರ್ವಗನ ಶ್ರೀಹರಿಯ ಮಹಿಮೆಯ
ಶರ್ವಮೊದಲಾಗಖಿಯಲಸದಳ ಭೂಪ ಕೇಳೆಂದ ॥ ೧೪

ಒಂದು ಕಲಶದೊಳೆರಡು ರಸವನು
ಕುಂದಿಸದೆ ತಾ ಬೆರಸಿ ಸುಧೆ ಸುರ [1]
ವೃಂದಕೆಜವನು ಸುರೆಯ ದೈತ್ಯರಿಗಸುರಮರ್ದನನು ।
ಅಂದು ಮಂದರಮಥನ ಮಾಡಿಯೆ
ಹಿಂದು ಗಳೆಯದೆ ದೈತ್ಯನಿಕರವ
ಕೊಂದು ಬ್ರಹ್ಮಾದ್ಯಮರನಿಕರವ [2] ಕಾದು ಸಾಗರವ ॥ ೧೫

ದೇವದೈತ್ಯರನ್ನು ಕುರಿತು ಹರಿಹರಬ್ರಹ್ಮರ ಸಮಾಧಾನ.

ಇರಿಸಿದಾತಗದಾವ ಘನವಿದ
ನರಸ ಕೇಳ್ಳ ದೈತ್ಯರಾಕ್ಷಸ
ಸುರರು ಮತ್ಸರಿಸುತ್ತ ಸಂಗ್ರಾಮವನು ಮಾಡಿದರು ।
ಸರಸಿರುಹಸಂಭವನು ಹರಿಹರ
ರುರುವ ದೈತ್ಯರ ಕಳಕಳವ ಪರಿ
ಹರಿಸುತಿರೆ ಸಚಿ ದೇವಿ ಬಂದಳು ಸಿಂಹಪಾದಜೆಯು ॥ ೧೬

ತಾವಿನಲಿ ಜನಿಸಿದಳು ಛಾಯಾ
ದೇವಿಯೆನಲಿಕೆ ದೈತ್ಯನಿಕರಕೆ
ತಾವು ನುಡಿದರು ಶಿವವಿರಿಂಚಾದಿಗಳು ವಿನಯದಲಿ ।
ನೀವು ನಿಮ್ಮಭಿಮತದಿ ಕೆಟ್ಟರಿ

1 ಬೇರ ಬೇರಿವ, ಕ. ಖ. ಗ. 2 ದೇವರ, ಕ. ಖ.

ನೀವು ಮಾಯಾವರಕುಮಾರಿಯ
ಭಾವವನು ಕಂಡದಕೆ ಮರುಳಾಗಿಹರೆ ಹೇಳಿರೆನೆ ॥ ೧೭
ಯುವತಿಯರ ನಂಬಿದರಿಗೀಪರಿ
ಯುವಗಡವು ತಾನೆನಲು ದಾನವ
ನಿವಹವಾಗಲು ಮತ್ತೆ ಪುನರಪಿ ಯಮೃತಮಥನವನು ।

ತಿರುಗಿ ಸಮುದ್ರ ಕಡೆಯುವ ಪ್ರಯತ್ನ.

ಸಮತಳಿಸಿ ಮಥಿಸುವುದದೆಂದರೆ
ಕುಮತಿಗಳು ತಮತಮಗೆ ತತ್ಕ್ಷಣ
ಕಮರರನು ಕರೆತಂದು ಹೊಸೆದರು । ಮತ್ತೆ ಕೇಳೆಂದ ॥ ೧೮

ವಿಷವು ಹುಟ್ಟಲು ವಾಯು ನೀರಸಮಾಡಿ ಶಿವನಿಗೆ ಕೊಡುವಿಕೆ

ಹೊಸೆಯಲಿಕೆ ವಾಸುಗಿಯ ಹೊಟ್ಟೆಯು
ಹಸರ ಕಾಯ್ದುಂತುರಿಯನುಗುಳಿತು
ವಿಷವ ಹಾಲಾಹಲವನಮರಾಸುರರು ಬೇಯಲಿಕೆ ।
ವಿಷದ ಕ್ರೂರತೆ ಲೋಕವೆಲ್ಲವ
ಘಸಣಿಸುತ ಬರಲಾಸಮೀರಣ[2]
ಹೊಸೆದನಂಗೈತಳದಿ ಕೋಪದಿ ನೋಡಿ ಪಡಿಸಣವ ॥ ೧೯

ವಿಷವ ಬಿಟ್ಟನು ಬಳಿಕ ತಾನದು
ಪಸರಿಸಿತು ಪರಿಪೂರ್ಣವಾಗಿಯೆ
ವಿಷವು ಬರೆ ಬರೆ ಬೆಂಡಮಾಡಿತು ಲೋಕ ಹದಿನಾಲ್ಕ ।
ವಿಷದ ಕಡುಹನು ಧರಿಸಲಾರದೆ
ನುಸುಳಿದರು ತೆತ್ತೀಸಕೋಟಿಗ
ಳಸಮಬಲ ಹರಿ ಬಂದು ನಾಕಿಪ್ರಸರಕಿಂತೆಂದ ॥ ೨೦

ಅಂಜದಿರಿ ನೀವಂಜದಿರಿ ಸುರ
ರಂಜದಿರಿ ಯೆನೆ ದೇವ ತಮ್ಮಯು

---

[1] ಕಡೆದರು, ಘ. [2] ಬರೆಲೋಕವಾಕ್ಷಣ, ಕ. ಖ.

ನಂಜಿನಂಜಿಕೆಗಭಯ ಕೊಡುತಲು ಬಂದನಾಸುರರ |
ರಂಜಿಸಿದರಲ್ಲಲ್ಲಿ ನಾಕಜ
ರಂಜಿಕೆಯ ನೆಱೆ ಕಾಯ್ದು ಲೋಕವ
ಭಂಜಿಸುವ ವಿಷ ಗಳದೊಳಾಂತನು ಶಿವನು ನಿಮಿಷದಲಿ ॥ ೨೧

ಇಂದ್ರ ಯಮನು ಕುಬೇರ ನೈರುತಿ
ಚಂದ್ರ ಸೂರ್ಯ ಕೃಶಾನು ನದಿಪತಿ
ಬಂದು ಚಂದ್ರಕಳಾವತಂಸನ ಕೃಪೆಯ ಭಾರದಲಿ |

ಶಿವನು ವಿಷವನ್ನು ಕುಡಿದು ಸರ್ವರನ್ನು ಬದುಕಿಸುವಿಕೆ.

ಇಂದ್ರಮೊದಲಾಗುಳಿದರಾಕ್ಷಣ
ದಿಂದ ಸುಡು ವಿಷಕಡ್ಡವಿಸಲಾ
ಚಂದ್ರಮೌಳಿಯು ಕಾಯ್ದುಕೊಂಡನು ಭಕ್ತಜನರುಗಳ ॥ ೨೨

ಅಂದವರುಮಾ ವಿಷದಲುಱಿದರು
ಕಂದ ಕೇಳ್ಳ ಬೞಿಕ ಶಿವ ತಾ
ಬಂದು ವಿಷವನು ಧರಿಸಿದನು ವಾಮಾಂಘ್ರಿಕೊನೆಯಿಂದ |
ಅಂದು ಕಂಡರು ಶಿವನನದಿತಿಯ
ನಂದನರು ತಾವಾಗ ಶಿವನೇ
ದಂದಶೂಕೇಶ್ವರನೆನುತ ಹೊಗಳಿದರು ತಮತಮಗೆ ॥ ೨೩

ಬೆರಳಕೊನೆಯಲ್ಲಿದ್ದ ವಿಷವನು
ಧರಿಸಲಿಕ್ಕನ್ನಾವುದೆಡೆಯೆಂ
ದರಸಿ ಶಿವ ತಾ ಮನದಿ ಧ್ಯಾನಿಸಿ ತನ್ನೊಳಗೆ ತಿಳಿದು |
ಧರಿಸಲಿಕ್ಕಂಬಿಲ್ಲವೆಂಗದಿ
ನಿರುತ ರೋಮದಿ ಲೋಕವಿಹುದಿದ
ನಱಿದು ಶಿವಕಂಧರದೊಳಿಟ್ಟನು ಭೂಪ ಕೇಳೆಂದ ॥ ೨೪

ನಿರುತ ರೋಮದಿ ಲೋಕಲೋಕಾಂ
ತರಗಳಿಹವಿದಕೇನು ಹದನೆಂದಱಿದು ಶಶಿಮೌಳಿ ॥
ಕೊಂಡು ಕೊರಳೊಳು ಪೂಸಿದನು ತಾ

ಸಿಡಿದ ವಿಷದಿಂದ ದುಷ್ಟಜಂತುಗಳ ಜನನ.

ಖಂಡಿಸಿದ ವಿಷ ನೆಲಕೆ ಸಿಡಿಯಲು
ತಂಡ ಪುಟ್ಟಿತು ವ್ಯಾಳವೃಶ್ಚಿಕ
ಕೊಂಡಮುಸು ಕೇಸರಿಯುಮಿರುಹೆಯು ವ್ಯಾಘ್ರತೋಳಗಳು ।
ಚಂಡಸೂಕರಜಾಲ ಖರವಜ
ವೇಡಿ ಮೊಸಳೆಯು ನೆಗಳು ಖೇಚರ
ಮಿಂತು ಮಾಯುಸಮಾದವಾಕ್ಷಣ ಕೊರಳ ಖಂಡಿಯಲಿ ॥ ೭೫

ಭಂಜಿಸಿದ ವಿಷ ಕಾಳಕೂಟದ
ಲಂಜಿಕೆಯ ಬಳಿಕಾಗ ದೈತ್ಯರು
ರಂಜಿಸಿದರಲ್ಲಲ್ಲಿ ದೇವಾಸುರರು ಯುದ್ಧದಲಿ ।
ಮಂಜು ಮುಸುಕುವ ತೆಱದಿ ದೈತ್ಯರು
ಪಂಜರಿಸಿದರು ದೇವವೃಂದವ
ಕಂಜನಾಭನು ಕಂಡು ಕೈವೀಸಿದನು ಸುರಜನಕೆ ॥ ೭೬

ತಿರುಗಿ ದೇವ ದೈತ್ಯರ ಯುದ್ಧ.

ಅಸುರದ ಸಂಗ್ರಾಮವಾದುದು
ಭಾಸುರದಿ ಹದಿನೆಂಟು ವತ್ಸರ

ಗಂಡುಗಲಿ ಮೃಡಸುರರ ವಿಗ್ರಹ
ಚಂಡಿಯನು ಪರಿಹರಿಸಿ ತಳೆದನು ಬೆರಳ ಕೊನೆಯಿಂದ ।
ಖಂಡಿಸಿದ ವಿಷ ನೆಲಕೆ ಬೀಱಲು
ತಂಡ ಪುಟ್ಟಿತು ವ್ಯಾಳ ವೃಶ್ಚಿಕ
ಕೊಂಡಮುಸು ಕೇಸರಿಯು ಮಿರುಹೆ ವ್ಯಾಘ್ರತೋಳಗಳು ॥
ಚಂಡಸೂಕರಜಾಲಗಳು ಖರ
ಹಿಂಡು ವೃಶ್ಚಿಕ ನೆಗಳು ಖೇಚರ
ಮಿಂಡಿನಲಿ ಪಾಂಚಾಲಮಾಯುಸಕ್ರೌಂಚಮೊದಲಾದ ।
ತಂಡ ಹುಟ್ಟಿದುದಾಗ ಶೂಲಿಯು
ಕೊಂಡು ವಿಷವನು ಕೊರಳ ಪೂಸಲು
ಖಂಡಿಯಲಿ ಸಿಡಿಯಲಿಕೆ ತಿಗಣಿಗಳಾದವಾಕ್ಷಣಕೆ ॥ ಗ. ಘ. ಜ.

ಸೂಸಿದವು ಯುದ್ಧದಲಿ ದೈತ್ಯಸ್ತೋಮ ಬಯಲಾಗೆ ।
ಲೇಶಹಾನಿಯುಮಿಲ್ಲದಮರಾ
ವಾಸದಲು ಸುಧೆಯಿರಲು ದೈತ್ಯರು
ನಾಶವಾದರು ಮತ್ತೆ ತಾ ವೃಷಪರ್ವ ಮೊದಲಾಗಿ ॥ ೨೭

ವಾಸವನ ಕೈಯಿಂದ ಬಿದ್ದಾ
ಗಾಸುರವ್ರಜ ವೆಂಟುಕೋಟಿಗ
ಳೋಸರಿಸುತಿರಲೋಡಿತಾ ಹದಿನೆಂಟು ಕೋಟಿಗಳು ।

ದೈತ್ಯರು ಸೋತು ಬೇರೆ ಸ್ಥಳಗಳಿಗೆ ಹೋಗುವಿಕೆ

ಕಾಶಿಮೊದಲಾಗವಳಗಯೊಯನು
ವಾಸಗೊಂಡರು ಮೂಱುಗಯೊಯನು
ಮೂಸುರದಿ ಸೇಱಿದರು ಕಡಲನು ಕೋಟಿ ಹದಿನಾಲ್ಕು ॥ ೨೮

ಆಸೆಗೊಂಡರು ಕೆಲರು ಲಂಕೆಗೆ
ಸೂಸಿದರುಮಿೂರಾಱು ಕೋಟಿಯು
ದೇಶದೊಳು ತುಂಬಿದರು ನಾನಾತೀರ್ಥಕ್ಷೇತ್ರದಲಿ ।
ದೋಷಿಗಳು ತಾ ನಾಲ್ಕುಕೋಟಿಗ
ಳೀಸು ಬಯಲಾಗಲಿಕೆ ಮಿಕ್ಕಿನ
ಲಾಸುರರು ಸುರರಿಂದ ಬಿದ್ದರು ಹತ್ತು ಕೋಟಿಗಳು ॥ ೨೯

ನಾಶವಾಗಲು ಕಂಡು ಸುರರಿಗೆ
ರೋಷದಲ್ಲಿದಿರೆದ್ದನಾಗಲು
ನಾಶಗೊಂಡನು ಕಾಲನೇಮಿಯು ಚಕ್ರಧರನಿಂದ ।
ಈಸು ವೆಗ್ಗಳನಿವನು ಸುರರಿಗೆ
ಘಾಸಿಯುಹನೆಂದು ಮಿಗೆ ಸೆಣಸಿದ
ನಾಸುರದಿ ಬಟಕಂದು ಕಡಿದನು ತಲೆಯನಾಶೂಲಿ ॥ ೩೦

ಆವನ ತಲೆಯನು ಕಡಿಯೆ ಸ್ವರ್ಗವೆ
ಭವನವಾಗಲು ವೃಷಪರುವನಂ

ಬವಗೆ ಬೞಿಕಾ ವಿಪ್ರಚಿತ್ತಿಯು ತಾನು ಬರೆ ಜವದಿ |
ಅವನನಾಕ್ಷಣ ಕೆಡಹಿ ಕರುಳಿನ
ನಿವಹದಲಿ ತೋರಣವ ಕಟ್ಟಲು
ಭುವನದಲಿ ಪವಮಾನನಾಗಲದಂಧಕಾಸುರನು || ೩೧

ಎದ್ದು ಪರಿತಹ ದೇವವೃಂದವ
ನದ್ದಿಸುವೆನೆನೆ ಶಂಭು ದಾನವ
ನುದ್ಪುರುಟ ನೆಂದಱಿದು ನಿಂದಾ ದೈತ್ಯಗಿದಿರಾಗಿ |
ಅದ್ದರಕ್ಷೆಯೊಳವನನಾಕ್ಷಣ
ಕದ್ದಿದನು ಭಯರಸದಿ ಶಿವ ತಾ
ನುದ್ಧುರುಟನಪ್ಪಳಿಸಿ [1] ಕೆಡಹಿದ ಪಾದತಳದಿಂದ || ೩೨

ಮೃತರಾದ ದೈತ್ಯರ ಪುನರ್ಜನ್ಮ.

ಕೆಡಹಿ ನಾಟ್ಯವನಾಡಿ ನಾಕಜ
ರೊಡೆಯನಾಗಲೆ ಯವನು ಮುಂದಣ
ಪೊಡವಿಯಲಿ ಜನಿಸಿದನು ಬಾಣಾಸುರನು ತಾನೆನಿಸಿ |
ನುಡಿಯ ಕೇಳ್ಯ ಕಾಲನೇಮಿಯು
ಪೊಡವಿಯಲಿ ಕಂಸಾಭಿಧಾನದಿ
ಬಿಡದೆ ಹುಟ್ಟಿದ ವಿಪ್ರಚಿತ್ತಿಯುಮಾ ಜರಾಸಂಧ || ೩೩

ಹುಟ್ಟಿದನು ವೃಷಪರ್ವ ಮುಂದಣ
ಸೃಷ್ಟಿಯಲಿ ತಾ ನರಕನಾಗಿಯೆ
ಕೆಟ್ಟ ಕೇಡಿಂನಾರುಮಱಿಯರು ದೈತ್ಯಸಂತತಿಯ |
ಪಟ್ಟಗಟ್ಟಿತು ದೇವವೃಂದಕೆ
ಸೃಷ್ಟಿಯಲಿ ಶ್ರೀಮಾಘಮಾಸದ
ನೆಟ್ಟನಾ ಪೌರ್ಣಮಿಯ ದಿನದಲು ಭೂಪ ಕೇಳೆಂದ || ೩೪

---

1 ನುದ್ಧುರುಳುವಷ್ಟರಲಿ, ಖ.

ಭಂಜಿಸಿದ ನಾದೈತ್ಯರೆಲ್ಲರ
ಕಂಜನಾಭನು ಖತಿಯು ಭಾರದಿ
ಮಂಜು ಮಧ್ಯಾಹ್ನದಲಿ ಹರಿವಂತಾಯ್ತು ನಿಮಿಷದಲಿ ।
ಅಂಜದಾಸುರವೃಂದ ನೆರೆದಾ
ಕಂಜನಾಭನ ಕೃಪೆಯನೊಲುಮೆಯ
ರಂಜಕರು ಕೈಕೊಳಿಸಿ ವಸ್ತುವ ಕೊಂಬರೊಂದುವನು ॥ ೩೫

ಸಮುದ್ರದಲ್ಲಿ ಹುಟ್ಟಿದ ಪದಾರ್ಥಗಳನ್ನು ದೇವತೆಗಳಿಗೆ ಹಂಚುವಿಕೆ.

ಇಂದು ಭೋಗಿಸಲಾಗ ನಾಕಜ
ವೃಂದ ಕಮಲಜಗೆಂದುದಿದನಾ
ರಿಂದು ಕೊಂಬುದಕರ್ಹರೆಂವರೆ ಕಮಲಸಂಭವನು ।
ನಿಂದು ಲಸದುಚ್ಚೈಶ್ರವವ ತಾ
ನಿಂದು ಕೊಡವುದಕಿಂದ್ರ ಯೋಗ್ಯನ
ದೆಂದು ಯೋಚಿಸಿ ಕುಲಿಶಪೂರ್ವವ ಕಂಡು ಸುರನಿಕರ ॥ ೩೬

ಕುಂದದಿದ ಭೋಗಿಸುವನಾವನ
ದೆಂದೊಡಾಕ್ಷಣ ಕಮಳಸಂಭವ
ನಂದು ಬಿನ್ನಹ ಮಾಡೆ ಹರಿಗೆಯು ಮಧುರ ವಚನದಲಿ ।
ಎಂದನುಚ್ಚೈಶ್ರವವ ವಜ್ರವ
ಬಂದ ಮದಕರಿ ಕಲ್ಪವೃಕ್ಷವ
ನೆಂದು ಕಚಿವಾ ಕಾಮಧೇನುವ ಚಿಂತಮಣಿಸಹಿತ ॥ ೩೭

ವರವಧೂಸಪ್ತಕವ ಶಚಿಯುನು
ವರಪತಿವ್ರತೆಯುದಿತಿಕುಂಡಲ
ಸುರಪತಿಗೆ ಕೈವರ್ತಿಸೆಲ್ಲವಪೂರ್ವವಹ ಸುಖವ ।
ಗಿರಿಯು ಹೊತ್ತಿದ್ದಾತಗೀವುದು
ವರವಧುವ ತಾರೆಯುನು ಚಂದ್ರನ
ಶಿರದಲಿಡುವುದು ಶಂಭುಗಾಗಳದೆಂದು ಹರಿ ಯೆನಲು ॥ ೩೮

ಅಂದೊಡಿಂದ್ರಂಗವುಗಳೊಪ್ಪಿಸ
ಲಿಂದಿರಾಧರನೆಂದ ವಾಲಿಗ
ದಿಂದುಮುಖಿ ತಾರೆಯನು ಮುದದಲಿ [1] ಕೊಟ್ಟರಾತಂಗೆ ।
ಚಂದ್ರಮಸನನುಮೇಶಗಿತ್ತರು
ಕುಂದದಾಗಳೆ ಶಿವನು ಮೋದಿಸ
ಲಂದು ವರಜಪಮಣಿಯ ಪದ್ಮಜಗೀಯೆ ವಿನಯದಲಿ ॥ ೩೯

ಸಿಂಧುಮಥನದೊಳಾಗ ಬಹುವಿಧ
ದಿಂದ ಹುಟ್ಟಿದ ವಸ್ತುಗಳನಾ
ನಂದದಿಂ ಕಮಲಜನು ಕೊಟ್ಟ ಸುರರಿಗೆ ತಕ್ಕುದನು ।
ಮಂದರಾಚಲವದನು ಮೇರುವಿ
ಗಂದವಿಟ್ಟನು ಮರಳಿ ಮಾರುತ
ಬಂದನೊಬ್ಬನು ಬಳಿಕ ಶ್ರೀಪತಿಯೆಡೆಗೆ ಕೇಳೆಂದ ॥ ೪೦

ವರಸುರೋತ್ತಮರೈದೆ ಬಂದಾ
ವರಮಣಿಯನುರಗೇಂದ್ರಗಿತ್ತರು
ಮರಳಿ ಬಾಲೆಯ ತಂದು ಕೊಟ್ಟರು ಹರಿಯ ಚರಣದಲಿ ।

ಲಕ್ಷ್ಮಿ ವಿಷ್ಣುವನ್ನು ವರಿಸುವಿಕೆ.

ಸುರರು ಬಾಲೆಯ ನೆರೆದು ಬಂದಾ
ದರಿಸಿದರು ಶ್ರೀಪತಿಯನಾಗಳು
ಸರಸಿರುಹಸಂಭವನು ಬಿಂನಹ ಮಾಡಿದನು ಸಿರಿಗೆ ॥ ೪೧

ಎಲೆ ಜನನಿ ನೀನಿಂದು ಸುರಕುಲ
ಬಳಗದೊಳಗತ್ಯಧಿಕರಾದರ
ತಿಳಿದು ಮಾಲೆಯನಿಕ್ಕಿಕೊಂಬುದು ಲೋಕ ಮೆಚ್ಚಲಿಕೆ ।
ಬಲಿದು ವರಿಸುವುದೆನಲು ಲಕ್ಷ್ಮೀ
ಲಲನೆ ಸಾಕ್ಷಾತ್ಪರಮಪುರುಷನ
ನಿಲುವನಱಿದುಱೆ ಕಂಡು ಹರುಷೋತ್ಸವದಿ ಕೈಮುಗಿದು ॥ ೪೨

---

1 ಕೊಡಿಯೆನೆ, ಕ. ಖ.

ಸರಸಿರುಹಸಂಭವನು ಬರಹಿರ
ಹಿರಿಯನತಿವೃದ್ಧಾಪ್ಯದಾತನು
ಪುರಹರನು ಭಸ್ಮಾಂಗ ಭಿಕ್ಷುಕನುರಗಭೂಷಣನು ।
ಸುರಶಿರೋಮಣಿ ಗರ್ವಿಯೂಷ್ಮಾ
ಕರನು ದಿನಪತಿ ಯಿಂದು ಕ್ಷಯಕಳ
ತರಳ ವೈಶ್ವಾನರನುವಂತಕನೀತ ನಿಷ್ಕರುಣಿ ॥ ೪೩

ಆತ ರಾಕ್ಷಸಯೋನಿ ನಿರುರುತಿ
ಯೀತನೇ ಜಡರಾಶಿಗಧಿಪತಿ
ವಾತ ಮಿಗೆ ಚಂಚಲನು ಯಕ್ಷನು ನೀತಿಬಾಹಿರನು ।
ಈತ ಧನಪತಿ ಲುಬ್ಧಕನು ತಾ
ನೀತನುದ್ಧತನಾ ತ್ರಿಯಂಬಕ
ರೀತರೆಲೆ ಕಿಗ್ಗಿ ಜುಮುರಶ್ವಿನಿದೇವರಿವರೆಂದು ॥ ೪೪

ನಾಕಜರ ನೆರವಿಯುನು ಮನ್ನಿಸ
ದಾಕೆ ಕಂಡಳು ಭಕ್ತವತ್ಸಲ
ನಾಕಮಲಸಂಭವನ ತಾತನ ಶ್ರುತಿಸುಗೋಚರನ ।
ಆಕಡಲ ನಂದಿನಿಯು ಬಂದಾ
ಲೋಕಕಧಿಕನ ಕಂಡು ಹರುಷದಿ
ಜೋಕೆಯಲಿ ಸಂಭ್ರಮಿಸಿ ಸಾಕ್ಷಾದ್ವೇದಪಾಲಕನ ॥ ೪೫

ನೆಲೆಯ ನೋಡಲಿಕಾಕೆ ಬಂದಾ
ಬಟಿಕ ಕಮಲದ ಮಾಲೆಯಿಕ್ಕಿದ
ಳೊಲಿದು ಮಿಕ್ಕಿನ ಸುರರ ಲೆಕ್ಕಿಸದಾಕೆ ಮಾಧವಗೆ ।
ಎಳನಗೆಯು ಶಶಿರುಚಿಯು ಮುಖದಲಿ
ಬೆಳಗು ತೀವಿದ ಕಮಲನಾಭಗೆ
ಲಲನೆ ವೈಯ್ಯಾಳಿಸುತೆ ಬಂದಳು ಪರಮಹರುಷದಲಿ ॥ ೪೬

ಓತಳೈ ಶ್ರೀದೇವಿ ಹರಿಯು
ಲೊಲ್ಲೀತು ತೊತ್ತಾಗಿಹಳದೆನಲಿ
ಕ್ಗಾತನಿಂದತ್ಯಧಿಕಸಮಬಲರಿಲ್ಲ [1] ಕೇಳೆಂದ ।
ದಾತ ತಾ ನಾಕಜರ ಬ್ರಹ್ಮನ
ತಾತ ಶಂಕರಪ್ರೀತ ದಿನಕರ
ಶೀತಕರರಿಗೆ ಭಾವ ವರುಣನಿಗಳಿಯು ಕೇಳೆಂದ ॥ ೪೭

ಆತಗಿಕ್ಕಿದಳೊಲಿದು ಮಾಲೆಯು
ನೋತು ಕೇಳೈ ತನ್ನ ಕಡೆಗ
ಣ್ಣಾ ತುರಿಸಿ ಕಂಡವರು ಗಿರಿಶರು [2] ಕಮಲಸಂಭವರು ।
ಆತತುಕ್ಷ್ಣಣಕಪರದೆಂದರೆ
ಮಾತೆ ಬ್ರಹ್ಮಾದಿಗಳಿಗೊಬ್ಬಳು
ಭೂತಜಾತದ ಜನನಿ ಕ್ಷೀರಾಂಬುಧಿಯು ಮಗಳಾಗಿ ॥ ೪೮

ಹುಟ್ಟಿದಳು ಹರಿಪಾದಸೇವೆಯು
ನಿಟ್ಟೆಯಲಿ ಕೈವಲ್ಯಗೇಹದಿ
ತುಟ್ಟಿಸದೆ ತ್ರೈಮೂರ್ತಿಯಿಂದವೆ ಮುನ್ನ ಶಾಶ್ವತಳು ।
ಸೃಷ್ಟಿಯಿಂ ಪೂರ್ವದಲಿ ಶ್ರೀವಧು
ಹುಟ್ಟಿ ಶ್ರೀ ಭೂ ದುರ್ಗೆಯೆಂಬಾ
ನಿಷ್ಟೆಯಲಿ ಹರಿಯೊಡನೆ ನೆರೆದಳು ಬಳಿಕ ಸುರನಿಕರ ॥ ೪೯

ಬಳಿಕ ನಾರಾಯಣನಿಗೆ ತನ್ನ ಸ್ಥಾನಗಮನ.

ಬಂದು ಲಕ್ಷ್ಮೀಪತಿಯು ನಿಬ್ಬಣ
ವಿಂದುಧರಮುಖ್ಯಾಖಿಳಸುರರ
ವೃಂದ ಮಾಡಿದುದೊಲಿದು ಕ್ಷೀರಾಂಬುಧಿಯು ಮಧ್ಯದಲಿ ।
ಅಂದು ಮಧುಸೂದನನು ನಾಕಜ

---

1 ಸಮರಿಲ್ಲರಸಕೇಳೆಂದು, ಕ. ಖ. 2 ಹಿರಿಯರು, ಕ. ಖ.

ವೃಂದವನು ಸತ್ಕರಿಸಿ ಕಳುಹಿಯೆ
ಬಂದು ಹೊಕ್ಕನು ದೇವದಾನವಬಳಗವೆರಿದೆನಲು ॥ ೫೦

ಕೇಳು ಜನಮೇಜಯ ಧರಿತ್ರೀ
ಪಾಲ ಲಕ್ಷ್ಮೀಪತಿಯು ಕಮಲಜ
ಬೀಳುಕೊಂಡನು ಚಂದ್ರಮೌಳಿಯು ಸಹಿತ ಸುರವೃಂದ ।

ಇಂದ್ರನು ತನ್ನ ಪಟ್ಟಣಕ್ಕೆ ಹೋಗುವಿಕೆ.

ಬೀಳುಕೊಂಡುದು ತಮ್ಮ ಮಂದಿರ
ದಾಲಯುವನೈದಿದರು ಲಕ್ಷ್ಮೀ
ಲೋಲನಾಜ್ಞೆಯಲಾಗ ಸುರಪತಿ ತನ್ನ ಲೋಕವನು ॥ ೫೧

ವರಮಹಾಕೈವಲ್ಯಗೇಹವ
ಸರಸಿಜಾಕ್ಷನು ಪುಗಲು ನಾರದ
ನಿರುತ ಮಹಮುನಿಮುಖ್ಯ ಸನಕಾದಿಗಳು ಹರುಷದಲಿ ।
ಹಿರಿದು ಸಂತೋಷದಲಿ ನಾಕಜ
ರರಸ ಮುನ್ನಿನ ವರಮಹಾಪುರ
ಸುರಸಭೆಯನೈದಿತ್ತು ಷೋಡಶಸಹಸ್ರಸಂಖ್ಯೆಯಲಿ ॥ ೫೨

ವಿಷ್ಣುಮಾಹಾತ್ಮ್ಯಕಥನ.

ಪೊಕ್ಕನೈ ಶ್ರೀಹರಿಯ ಕೃಪೆಯಿಂ
ದೆಕ್ಕಸರದಲಿ ಯಂಧಕಾದ್ಯರ
ಠಕ್ಕಿಸಿಯೆ ಯಿಂದ್ರಾದಿದೇವರಿಗಿತ್ತನಾಸುಧೆಯ ।
ಮಿಕ್ಕನಮರರಿಗಹುದೆ ಯುದಧಿಯ
ಹೊಕ್ಕು ಮಂದರಗಿರಿಯ ಬೆನ್ನಲಿ
ಸೆಕ್ಕಸುವುದೆಲೆ ಕೂರ್ಮ[1] ಮಹಿಮೆಯನಾರು ಹೊಗಳುವರು ॥

[1] ಸೆಕ್ಕಿಸಿದ ಶ್ರೀಕೂರ್ಮ, ಕ. ಖ.

ಎಂದು ವೈಶಂಪಾಯನಾನೃಪ
ವೃಂದಮೌಳಿಯು ರತ್ನಪಾಂಡವ
ನಂದನಗೆ ಹೇಳಿದನು ನೀವಿದ ಕೇಳಿ ಮುನಿನಿಕರ ।
ಅಂದು ಶ್ರೀದೇವಿಯರಿಗಾಗೋ
ವಿಂದನೇ ಪತಿಯಾದನೆಂಬುದ
ಮಂದರಾಚಲಕಥೆಯನಿದ ತಾ ಹೇಳ್ವೆಕೇಳ್ವರನು ॥ ೫೪

ಎಂದು ಭಕ್ತರ ಕಾವ [1] ಯಾದವ
ನಂದಗೋಪನ ಕಂದ ಗೋಪೀ
ವೃಂದವಲ್ಲಭ ದೈತ್ಯಭಂಜನ ದೇವಕೀತನಯ ।
ಮಂದರೋದ್ಧರ ಕೈಟಭಾಸುರ
ವೃಂದಮರ್ದನ ನಮ್ಮ ರಕ್ಷಿಪ
ನೆಂದು ಗದುಗಿನ ವೀರನಾರಾಯಣನು ಮನಮುಟ್ಟಿ ॥ ೫೫

ಆರನೆಯ ಸಂಧಿ ಮುಗಿದುದು.

ಏಳನೆಯ ಸಂಧಿ.

ಸೂಚನೆ.

ಪರಮಋಷಿಯರ ಶಾಪಭಯದಲಿ
ಸರಿದರಾಜಯವಿಜಯರಿಬ್ಬರು
ಮರಳಿ ಜನಿಸಿದರವರು ದಿತಿಯಲಿ ಮುನಿಪಕಶ್ಯಪಗೆ ॥

ವಿಷ್ಣುವಿನ ವೈಭವವರ್ಣನ

ಕೇಳು ಜನಮೇಜಯ ಧರಿತ್ರೀ
ಪಾಲ ವೇದೋದ್ಧಾರ ಲಕ್ಷ್ಮೀ

[1] ಕುಂದದೇತಾ ಕಾವ, ಗ, ಘ.

ಲೋಲ ಕ್ಷೀರಾಂಬುಧಿಯಲಿದ್ದನು ಕೈಟಭಾಂತಕನು ||
ಹಾಲಸಾಗರವೇನೆಯು ಸೆಜ್ಜೆಯು
ಮೇಲೆ ಶೇಷನ ಹಾಸು ಕೌಸ್ತುಭ
ಲೋಲ ಶೃಂಗಾರದಲು ಶಂಖಗದಾರಿಪದ್ಮಗಳು || ೧

ಧರೆಯು ಗುಂಜಿಯು ಕಪ್ಪಿನಂತಿಹು
ದುರಗಫಣಿಯಲು ಜೀವರತ್ನದಿ
ಹರಿಯು ಹಾಸಿಗೆಯಾದನಂತನ ಮಹಿಮೆ ಗೋಚರವೆ |
ಎರಡುಸಪ್ತಕ ಜಗವ ಮಾಡಿದ
ಸರಸಿರುಹಸಂಭವನೆ ನಾಭಿಯು
ನಿರುತ ತೊಟ್ಟಿಲ ಕೂಸು ವಾಸೀವರ್ಗವಹೆ ಲಕ್ಷ್ಮಿ || ೨

ಇಳೆಯು ಮುಕ್ತಾಫಲದ ಹೊಸಮೇ
ಖಲೆಯುನಳವಡಿಸಿಕ್ಕಿದನು ಮಿಗೆ
ಜಲಧಿಯಲಮೃತಗಳುಱೆ ವೆಗ್ಗಳಿಸಿತ್ತು ಮೇದಿನಿಯು |
ಬಟ್ಟಿಕ ಬೆಳದಿಂಗಳಲಿ ಬೆಳಸಿದ
ಕಳಗಳಲಿ ಪಯಚಕ್ರವರ್ತಿಯು
ಜಲಧಿಯಲಿ ಕಲ್ಲೋಲ ಕವಿದುದು ಬೆಳಗು ಮೌಕ್ತಿಕದ || ೩

ನೆಲೆಗೆ ತಾ ದುಗ್ಧಾಬ್ಧಿಮಧ್ಯದೆ
ನಳಿನನಾಭನ ಶ್ವೇತದ್ವೀಪದ
ನಿಳಯದನುವದು ಸುತ್ತುವಳಯವು ಹತ್ತುಸಾವಿರವು |
ಬಳಗೆ ಹರಿಮಂಟಪದ ರತ್ನದ
ನೆಲೆಗೆ ಕನಕದ ರಚನೆ ಶ್ರೀಶನ
ಹೊಳಲಲನಿಮಿಷರುಗಳು ಸನಕಾದಿಗಳ ಮೇಳದಲಿ || ೪

ದೇವಿ ಲಕ್ಷ್ಮಿಯು ನಾಥನಿರುತಿಹ [1]
ತಾವೆಯಾಗಿಹಳು [2] ರಗರಾಶಿಯು

---

1 ದೇವ ಲಕ್ಷ್ಮೀನಾಥ ಕ್ಷೀರದ, ಕ. ಖ. ಗ. ಘ. 2 ನಾವೆಯಾಗಿಹನು, ಕ. ಖ. ಗ. ಘ.

ದೇವನಂಗದ ಮಂಚ ಶ್ರೀವಧುಬಾಹು ತಲೆದಿಂಬು [1] ।
ದೀಪಿಗೆಗಳವು ಶೇಷಫಣಮಣಿ
ಸಾವಿರಂಗಳು ಕೃಷ್ಣಕಾಂತಿಯು
ದೇವನಂಗಕೆ ಕೌಸ್ತುಭಾಮಳರುಚಿಯಲಂಕಾರ ॥ ೫

ಅಲ್ಲಿ ಹರಿಯಿರೆ ಶೇಷಶಯನದಿ
ವಲ್ಲಭೆಯು ತೊಡೆಗಳಲಿ ಪಾದವ
ಫುಲ್ಲನಾಭನು ನೀಡಿ ನಿದ್ರಾಂಗನೆಯ ಮೇಳದಲಿ ;

ಜಯವಿಜಯರಿಗೆ ಸನಕಾದಿಗಳ ಶಾಪ.

ಅಲ್ಲಿ ಯಿರುತಿರೆ ಬ್ರಹ್ಮಪುತ್ರರು
ನಿಲ್ಲದಾಗಲು ಕ್ಷೀರಸಾಗರ
ಕೆಲ್ಲ ಬರುತಿರೆ ಜಯವಿಜಯರುಱೆ ಚಾಚಿ ಬಾಗಿಲನು ॥ ೬

ನಿಲುಕಿ ಹೊಂಗಂಬಿಯಲಿ ಭೂಸುರ
ಬಳಗವನು ನೂಕಲಿಕೆ ಕೊಟ್ಟರು
ನಳಿನಸಂಭವಸುತರು ಜಯವಿಜಯರಿಗೆ ಶಾಪವನು ।
ಎಲೆಲೆ ದ್ವಾರ್ಬಾಹಿಕರೆ ತಮ್ಮನು
ನಳಿನನಾಭನ ಕಾಣಲೀಸಿರೆ
ಬಳಿಕೆನುತ ನೀವಿನ್ನು ದೈತ್ಯರ ಕುಲದಿ ಜನಿಸುವುದು ॥ ೭

ಅವರು ಬೆದರಿಯೆ ಹರಿಗೆ ಬಿನ್ನಹ
ಭವನವಳಯಕೆ ಹೋಗಿ ನುಡಿಯಲು
ಭುವನರಕ್ಷಕನೆಂದನಕಟಾ ನೀವು ಮರುಳಾಗಿ ।
ಭವಗೆ ಸರಿ ಸನಕಾದಿಮುನಿಗಳು
ನವಗೆ ಮತ್ತವರಧಿಕಪ್ರಿಯತಮ
ರವರ ಕರೆಕರೆ ಯೆಂದು ಲಕ್ಷ್ಮಿಯು ಕೈಯ್ಯ ಕರೆಸಿದನು ॥ ೮

---

1 ತಲೆಗಿಂಬು, ಕ. ಖ. ಗ. ಘ.

ತಾಯಿ ಮಕ್ಕಳ ಕರೆದು ತಂದೆಯು
ಕಾಯದಲಿ ಕುಳ್ಳಿರಿಸುವಂದದಿ
ಶ್ರೀಯು ತಂದಳು ಹರಿಯು ಹೊರೆಗಾ ದಿವ್ಯಯೋಗಿಗಳ |
ಕಾಯದಲಿ ತೆಗೆದಪ್ಪಿ ಕರುಣದಿ
ಬಾಯ ಚುಂಬನವಿಕ್ಕಿ ಬಾಗಿಲ
ಕಾಯುವರು ಕಡು ಮೂರ್ಖರಿಂತಿವ ನಮಗೆ ಮನ್ನಿಪುದು || ೯

ಎಂದೊಡವರುಗಳನ್ನು ನುತಿಯಿಸೆ
ಕುಂದು ಹೆಚ್ಚನು ನೀವು ಕಾಣ್ಬುದು
ಮಂದರೋದ್ಧರ ಎನಲು ದೇವನು ಕಂಡನದಕೊಂದ |
ಇಂದು ಸನಕಾದಿಗಳ ಶಾಪವು
ಬಂದುದೀ ಜಯವಿಜಯರಿಬ್ಬರಿ
ಗಿಂದು ನೀವಿದ ಹೇಗೆ ಕಳೆಯುವಿರೆಂದು ಬೆಸಗೊಳಲು || ೧೦

ಜೀಯ ನೀವೇ ಕಾಣ್ಬುದವರಿಗೆ
ನ್ಯಾಯ ಶಾಪವದೆಂದು ನುಡಿಯಲು
ವಾಯುವಾಹನ ಕರೆದು ನುಡಿದ ವಿಜಯಜಯರಿಗಂದು |
ನ್ಯಾಯದಲಿ ನಿಮಗೀಗ ದೈತ್ಯರ
ಕಾಯ ಬಂದುದದೇಳುಜನ್ಮದ
ನ್ಯಾಯದಲು ನೀವಿದನು ಕಳವಿರೊ ಭಕ್ತಿಭಾವದಲಿ || ೧೧

ಅಲ್ಲದಿದ್ದೊಡೆ ಮೂಱುಜನ್ಮದಿ
ಫುಲ್ಲನಾಭನ ವೈರದಿಂದವೆ
ಇಲ್ಲಿಗೈದುವಿರೊ ಎನಲವರುಗಳದನೆ ಕೈಕೊಂಡು |

ಅವರು ಹಿರಣ್ಯಾಕ್ಷ ಹಿರಣ್ಯಕಶಿಪುಗಳೆಂದು ಹುಟ್ಟುವಿಕೆ.

ಬಲ್ಲಿದರು ಜಯವಿಜಯರಾಗಳು
ಫುಲ್ಲನಾಭಂಗೆಱಗಿ ಬರುತಿರ
ಲಲ್ಲಿ ಕಶ್ಯಪ ದಿತಿಯು ಸಂಧ್ಯಾಸಮಯರತಿಯೊಳಿರೆ || ೧೨

ವರಮಹಾಜಯವಿಜಯರಂಶವು
ನೆರೆದು ತಾ ಕಲಿಯಂಶದಿಂದವೆ
ಬೆರಸಿ ಹುಟ್ಟಿದುವೀ ಹಿರಣ್ಯಹಿರಣ್ಯಲೋಚನರು ।
ನಿರುತ ನಾಮದಿ ಜನಿಸಲಾಕ್ಷಣ
ಧರೆ ನಡುಗೆ ಮಿಗೆ ಕಡಲು ತುಳುಕಲು
ಸುರರು ಹರುಷವ ಮರೆದು ಭಯದಲಿ ಕಱೆದು ಕಂಬನಿಯ ॥೧೩

ಹುಟ್ಟಿ ಶಿಶುಗಳು ಬಳೆದು ಕಾಲನ
ನಟ್ಟಿ ಹೊಯ್ದರು ಸುರರ ಮಕ್ಕಳ
ಕಟ್ಟಿದರು ಕೆಡೆ ಹೊಯ್ದು ತುಱಿದರು ಮೂಱುಲೋಕಗಳು ।
ಕೆಟ್ಟವವದಿರ ದೆಸೆಯೆ ನಾಕಜ
ಶಿಷ್ಟಜನ ಬೆಂಬೀಳೆ ದೈತ್ಯರು
ಕಟ್ಟಿ ಕೌಬೇರನನು ಯಮನನು ಸುರರ ನಾಯಕನ ॥ ೧೪

ಅವರ ಪರಾಕ್ರಮ ಕಥನ.

ಮುಟ್ಟುವರು ನೀರೊಳಗೆ ವಹ್ನಿಯ
ಕಟ್ಟುವರು ಕೈಮುಟ್ಟಿ ಯಮನನು
ಮುಟ್ಟಲೊಲ್ಲರು ನಿರುತಿ ತಮ್ಮಯ ಜಾತಿಯವನೆಂದು ।
ಬೆಟ್ಟವನು ಮೇಲಿಕ್ಕಿ ವರುಣನ
ನಟ್ಟಿ ಹಿಡಿಯುವರನಿಲರೂಪನ
ಕಷ್ಟರಿಗದಾರಿದಿರು ನಿಲಲಿಕೆ ದೇವದೈತ್ಯರಲಿ ॥ ೧೫

ಮತ್ತೆ ಕೇಳ್ ರಾಯ ಸುರಪನ
ಹಸ್ತಿಯನು ಹಿಡಿದೆಳೆದು ರಜಕರಿ
ಗೊತ್ತಿಯಿಡುವರು ತಗರನೇಱುವರನಲವಾಹನವ ।
ಒತ್ತಿ ಕೋಣನ ಕೊಂಡ ಕೊಱವರು
ಹಿತ್ತಿಲಲಿ ಕೆಡೆ ಕಟ್ಟಿ ನಿರುತಿಯ
ಹೊತ್ತಿಹಾತನ ವರುಣಮಕರದ ಕಿವಿಯ ಕೀಳುವರು ॥ ೧೬

ಆಮಹಾವಾಯುವ್ಯನೆರಳಿಯ
ದಾಮದಲಿ ಹಿಡಿದಾಡುತಿರ್ಪರು
ಕಾಮಿಸುವರೈ ಯಾವಿಮಾನವ ಧನಪನೇಱುವುದ ।
ಸೋಮಶೇಖರನೆತ್ತ ತಂದಾ
ಭೂಮಿಯಲಿ ನೊಗವಿಕ್ಕಿ ಯುೞುವರು
ತಾಮಸರು ಬೇಸರಿಸುತಿರ್ಪರು ಮೂಱುಲೋಕವನು ॥ ೧೭

ಏೞುಕಡಲಿನ ವೀರೆ ಮುಱುವರು
ಕೀಲ ಕಳೆವರು ರವಿಯ ಬಂಡಿಯ
ಬೀೞಲಿಡುವರು ಚಂದ್ರಬಿಂಬವ ಬ್ರಹ್ಮನಿದಿರಾಗಿ ।
ಕೀಳುಗೋಡಗವಾಡುತಿರ್ಪರು
ಕೀಳು ನುಡಿಯಲಿ ಸುರರನೆಲ್ಲರ
ಬೀಱುಗುಟ್ಟುವರಿದಿರ ಬಂದರೆ ಭೂಪ ಕೇಳೆಂದ ॥ ೧೮

ಸರಸಿಜಾಸನಹಂಸ ವರಶಿಖಿ
ಹರಸುತನ ವಾಯುವ್ಯನೆರಳಿಯು
ನರ ಕುಬೇರನ ವರುಣಯಮರಾ ಮಕರಮಹಿಷಗಳು ।
ಸುರಪತಿಯ ಕರಿ ಯನಲವಾಹನ
ಪುರಣ ಘನವಹ ಗೂಳಿ ಶೂಲಿಯ
ನೆರೆದು ಗುಜುಗುಜುಗೊಂಡು ತಮ್ಮೊಳು ಬೆದಱುತಡಿಗಡಿಗೆ ॥ ೧೯

ಪಾಪಿಗಳು ದಿತಿಸತಿಯ ಪುತ್ರರು
ಕೋಪಿಸಿಯೆ ಪಾರದಿಗೆ ಬಂದರೆ
ಲೋಪಿಸುತಲಾರಣ್ಯವ್ಯಗತತಿಗೊಂದಕುೞಿವಿಲ್ಲ ।
ವ್ಯಾಪಿಸಿದುದೈ ದೇವಲೋಕಕೆ
ತಾಪಸರ ಕೈಕೊಳ್ಳರಿವದಿರಿ
ಗಾಪವರದಾರುಂಟು ದೇವಾಸುರಭುಜಂಗರಲಿ ॥ ೨೦

ಹೀಗೆ ಮಾಡಬೇಡಿರೆಂದು ಕಶ್ಯಪರ ಬುದ್ಧಿವಾದ.

ಎಂದೊಡಿಂದ್ರಾದಿಗಳು ಕಶ್ಯಪ
ನಂದನರ ಕಡು ಬಾಧೆಗಾರದೆ
ಬಂದು ದೂರಲು ಸುತರ ಕರೆದನು ಮುನಿಪ ಕಶ್ಯಪನು ।
ನಂದನರ ಕರೆದೆಂದನಾಕಜ
ವೃಂದವನು ಭೇದಿಸಲು ಕೆಡುವಿರಿ
ಮುಂದನರಿಯದೆ ನಡೆಯಲಾಗದದೆನಲು ಖತಿಗೊಂಡ ॥ ೨೧

ಅದಕ್ಕೆ ವಿರುದ್ಧವಾಗಲು ಅವರ ಪರಿತಾಪ

ತಂದೆ ಕೇಳಾನಿನ್ನ ಮಕ್ಕಳ
ಕೊಂದು ಹೆಂಡಿರ ಹಿಡಿದು ನಾಕಜ
ವೃಂದಭವನವ ಸುಟ್ಟು ಕೊಂಬೆವು ಸುರರ ಪದವಿಗಳ ।
ಎಂದೊಡತಿದುಃಖಿಸುತ ಕಶ್ಯಪ
ನಂದನರ ದುರುಳುತನ ನಿಲಿಸುವ
ನಿಂದದಾರ್ಕೈ ಯೆನುತ ನೆನೆದನು ಮಂದರೋದ್ಧರನ ॥ ೨೨

ನೆನೆಯುತಿರಲಿಕೆ ದೈತ್ಯರಿಬ್ಬರು
ಜನಕನನು ಮಿಗೆ ಬೈದು ತೆರಳಲು
ಜನಪ ಕೇಳ್ಕೈ ಬಟ್ಟಿಕ ಹರಿದರು ಲೋಕ ನಡುಗಲಿಕೆ ।
ತನತನಗೆ ಬಾಯ್ಬಿಡಲು ಪರಿದರು
ದನುಜರಧಮರು ಧೂಳಿಗೋಟೆಯ
ಕ್ಷಣಕೆ ಕೊಂಡರದಿಂದ್ರನಮರಾವತಿಯ ವ್ಯಾಹೃತಿಯ ॥ ೨೩
ಗತಿಯನೊಂದಿಸಿ ಹಾಯ್ದು ವೈವ
ಸ್ವತನ ನೊರಸಿಯೆ ಮತ್ತೆ ಕೃಷ್ಣಾ
ವತಿಯ ನುಬುಹಿಯೆ ತಮ್ಮ ಗೋತ್ರದ ದೈತ್ಯನೂರೆಂದು ।
ಗತಿಯ ಗಂಗಾವತಿಯ ಶುದ್ಧಾ
ವತಿಯ ನಳಕಾವತಿಯ ಸವರಿಯೆ
ಯತಿಮುದದಿ ಮತ್ತಾಗ ರಜತಾವತಿಯ ಹೊಕ್ಕೊಳಗೆ ॥ ೨೪

ದಿತಿಯ ಮಕ್ಕಳು ಹರನ ಪೂಜಿಸಿ
ಗತಿಯ ಬೇಡಿಯೆ ಪ್ರತಿಯ ಕಾಣದೆ
ಕ್ಷಿತಿಯ ಸೂಱೆಯ ಗೊಂಡು ಬಂದಾರತ್ನಪುರಿಯೊಳಗೆ ।

ನಾರದರು ಬರಲು ಶೂರರು ಇದ್ಧಾರ ಎಂದು ಪ್ರಶ್ನೆ.

ಅತಿಮುದದ ನಾಯಿಗಳು ಹೊಕ್ಕರೆ
ಕ್ಷಿತಿತಳಕೆ ಸುರಮುನಿಪ ನಾರದ
ಯತಿವರನು ಬರೆ ಕಂಡು ಭಕ್ತಿಯ ಮತಿಯ ಮಾಡಿದರು ॥ ೨೫

ನೆಱೆ[1] ಹಿರಣ್ಯ ಹಿರಣ್ಯಲೋಚನ
ಶಿರದಲೆಱಗಿದರಾಗ ಚರಣಕೆ
ಹರಸಿ ನಾರದ ಬಂದು ಕುಳ್ಳಿದ ಹೇಮಪೀಠದಲಿ ।
ವರಮುನೀಶನೆ ತಂಮ ಸರಿಸಕೆ
ಧುರವ ತೊಡಗುವರುಂಟೆ ನೀವೀ
ಧರೆ ಮೊದಲು ಹದಿನಾಲ್ಕುಲೋಕಕೆ ಸುಚಿವಿರ್ರೈ ಯೆನಲು ॥ ೨೬

ಎಲ್ಲಿ ಯಾದರೆ ಸುಭಟನೊಬ್ಬನ
ಬಲ್ಲಿದನ ತಮಗಱುಪಿ ಯೆನಲಿಕೆ
ಮೆಲ್ಲನೆಂದನು ದೈತ್ಯರಿಬ್ಬರಿಗರಸ ಕೇಳಂದ ।

ಪದ್ಮನಾಭನನ್ನು ಹೇಳಲು ಆತನು ಯುದ್ಧಕ್ಕೆ ಬರುವ
ಉಪಾಯವನ್ನು ಚಿಂತಿಸುವಿಕೆ.

ಫುಲ್ಲನಾಭನದೆಂಬನೊಬ್ಬನು
ಬಲ್ಲಿದನಸುರವೈರಿನಿಕರದ
ಲಲ್ಲಿ ನಿಮ್ಮಯ ಭುಜದ ತಿಮಿರವು ಶೂನ್ಯವಹುದೆಂದ ॥ ೨೭

ಎಂದೊಡವದಿರು ತಮ್ಮಯುದ್ಧಕೆ
ಮಂದರೋದ್ಧರ ಬಪ್ಪಯನುವೆನ
ದಿಂದೊರೆವುದೆನಲಾಗ ಮುನಿಪತಿ ನುಡಿದ ದೈತ್ಯರಿಗೆ ।

[1] ಅರಿ, ಖ.

ಮಂದರೋದ್ಧರ ಧರಣಿಪಾಲಕ
ನೆಂದು ನಿಂದಿಹ ತಾಗಿ ಧರಣಿಯು
ನಿಂದು ಕದ್ದರೆ ಕಮಲಸಂಭವ ದೂಱುವನು ಹರಿಗೆ ॥ ೨೮

* ಧರೆಯು ಕಾರಣದಿಂದಲಾಗಳು
ನಿರುತದಲಿ ಸಂಗ್ರಾಮವಹುದೈ
ವರಭುಜಾಡಂಬರದ ತೀಟೆಯು ಕಳೆವ ಹರಿಯೆಂದು ।
ವರಮುನಿಪ ತಾ ಸರಿದನಿತ್ತಲು
ಸುರವಿರೋಧಿಗಳಿಬ್ಬರಿಗೆ ಭೂ
ಸುರರ ಮತದಿಂ ಮದುವೆಯಾದವು ವೈದಿಕೋಕ್ತಿಯಲಿ ॥ ೧

ವಿತಳದಲಿ ವಿಂಧ್ಯಾ ಹಿರಣ್ಯನ
ಸುತೆ ಕಯಾತಿಯು ಹಿರಿಯುಗಾದಳು
ವಿತತದಿಂ ಪ್ರಜ್ಞಾ ಹಿರಣ್ಯನ ಸುತೆಯು ಮಂಗಳಯು ।
ಸತಿಯುದಾಕೆಯು ಕಿಱಿಯುಗಾದಳು
ಪತಿತರಿಬ್ಬರು ಬಳಿಕ ಭೂಮಿಯು
ಮತಿಯುಳೇ ಬೆಂಡಾಗುತಿರ್ದರು ಮುನಿಯ ಹೇಳಿಕೆಗೆ ॥ ೨

ಅಂದು ಹದಿನೆಂಟಬುದವಾಗಲಿ
ಕಂದು ಹರಿಯೊಳು ಯುದ್ಧವದು ತಾ
ನೆಂದು ಹಿರಿಯನು ಕಿಱಿಯುಗುಸರಲಿಕಾಹಿರಣ್ಯಕನು ।
ಎಂದೊಡಾಗ ಹಿರಣ್ಯಲೋಚನ
ನಂದು ತಾ ಭೂದೇವಿಯಾಯುತ
ವಿಂದ ತಾನುಱೆ ಸಪ್ತದ್ವೀಪದೊಳಗಧಿದೇವತೆಯು ॥ ೩

ಬಂದು ತಾ ಕದ್ರೊಯುದ್ಧ ಕೆಳಗಣ
ಗೊಂದಿಯುಳಿ ಯಾಧಾರಶಕ್ತಿಯು

* ಇಲ್ಲಿಂದ ೯ ಪದ್ಯಗಳು ಅಧಿಕಪಾಠವು ಗ ಘ ಙ.

ಮಂದಿರದ ಹೊಱಕಡೆಯಲಾಡುತ್ತಿರಲು ಕನ್ಯೆಯನು ।
ಅಂದು ತಾನೆಳೆದೊಯ್ಯಲಾಕ್ಷಣ
ಮಂದಮತಿ ನೆಲೆಗೆಟ್ಟು ಮೇಗಣ
ಕುಂದದಾಡುವ ವಾಯುಪಾಶದ ಬಲೆಯೊಳಡಗಿರಲು ॥ ೪

ಧರೆಯಲೀಪರಿ ಧರ್ಮದೂರರು
ನರಕಕೀಟವಂದದಲಿ ಭೂಮಿಯ
ಶಿರವ ಕೊಂಕುಬಿಲಿಕ್ಕ ದೈತ್ಯನು ಧರೆಯ ಕ್ಷೋಭೆಯಲಿ ।
ಸುರನರೋರಗನಿಕರವಾಕ್ಷಣ
ನೆರೆದು ತಮತಮಗೆಲ್ಲ ದುಃಖದಿ
ಹಿರಿದು ಬೆಂಬಳಿಯಾಯ್ತು ಸಪ್ತದ್ವೀಪನವಖಂಡ ॥ ೫

ಭೂಮಿದೇವಿಯು ಸೆಱೆಯಲಿಕ್ಕಲು
ತಾ ಮಹಾಭೂಲೋಕ ಜಲಮಯ
ವ್ಯೋಮವಾಗಲಿಕಜಸುರಾದ್ಯರು ನೆರೆದು ಚಿಂತಿಸುತ ।
ಈಮಹಾದುರ್ಧರವ ತಮ್ಮಲಿ
ನೇಮಿಸನು ಶ್ರೀಲೋಲಗಱುಪುವ
ಭೂಮಿದೇವಿಯನೆನುತಲಾಗಳು ಸುರರು ಬಾಯ್ಬಿಡುತ ॥ ೬

ಬಂದು ಕ್ಷೀರಾಂಬುಧಿಯ ಬಾಗಿಲ
ಲಂದು ಶೋಭೆಯ ತಳಿರ ಮಱೆಯಲಿ
ನಿಂದು ಕಮಲಜರಾದಿಶಕ್ರಾದ್ಯಖಿಳನಾಕಜರು ।
ಇಂದು ಕಾಯ್ಯೈ ತಮ್ಮ ನಿನಿಬರ
ನಿಂದು ಕಾಯ್ಯೈ ಭೂಮಿದೇವಿಯ
ನಿಂದು ಕಾಯ್ಯೈ ಯೊಱಚತುರ್ದಶ ಭುವನವಾದುದನು ॥ ೭

ಸುರರ ಮೊಱೆಯನು ಕೇಳಿ ಕರೆಸಲು
ಸುರಪನಾಬ್ರಹ್ಮಾದಿದೇವರು
ಬರಲು ನಾರಾಯಣನು ಮನ್ನಿಸಿ ಸೆಜ್ಜೆಯಂತಿರುವ ।

ಉರಗ ರಾಜನ ಮೇಲೆ ಕುಳಿತಿಹ
ಸರಸಿಜಾಸನಮುಖ್ಯದಿವಿಜರ
ನಿರುತ ಬೇಗದಿ ಕಂಡು ನುಡಿದನು ನಗೆಯ ಕೃಪೆಗಳಲಿ ॥ ೮

ಏನು ಪೇಳೆನೆ ಸಕಲಸುರಜನ
ರಾಣಿವಾಸಕೆ ಬಂದು ಲಕ್ಷ್ಮೀ
ಮಾನಿನಿಯ ಮರುಳಾಟ ಮಾಡುವ ನಿತ್ಯಪುರುಷನನು ।
ಯೋನಿರಹಿತನ ಯೋಗಸಿದ್ಧನ
ನೇನ ಹೊಗಳಲಿಕರಿಯದಾಗಳು
ವಾನಿರೂಢಿಯ ದೇವವೃಂದವು ಬಂದು ಹರಿಪದಕೆ ॥ ೯

ಎಂದು ಮುನಿಪತಿ ಹೇಳೆ ಯಾಕ್ಷಣ
ಸಂದನಿತ್ತ ಹಿರಣ್ಯಲೋಚನ
ಮಂದಮತಿ ತಾನಾಗ ಕದ್ದನು ಧರೆಯ ತಳಕಿಳಿದು ।
ಸಂದ ಸುರರುರುದುಃಖವಾರ್ತೆಯ
ನಂದವಾಗಿಯೆ ಸತ್ಯಲೋಕದೊ
ಳಂದು ಕಮಲಜಗೆಱಗಿ ಬಿನ್ನಹ ಮಾಡಿದರು ಹದನ ॥ ೧೯

ದೇವತೆಗಳು ಹರಿಯನ್ನು ಮರೆಹೋಗುವಿಕೆ.

ಕೇಳಿ ಕರ ಕರನೊಂದು ಸುಮನಃ
ಪಾಲ ನಾಕಜವೃಂದವೆಲ್ಲವ
ಲೋಲಮತಿ ತಾ ಕೂಡಿ ಕೊಂಡೈದಿದನು ವಾರಿಧಿಯ ।
ಶ್ರೀಲತಾಂಗಿಯ ರಮಣ ನಿರುತಿಹ
ವೇಳೆಯಱಿದಾ ಸುರರು ಹರ ದಿಕ್
ಪಾಲಕರ ಸಹಿತೈದಿ ಕಂಡರು ಕಮಲಲೋಚನನ ॥ ೨೦

ಶಿರಗಳನು ಚಾಚಿದರು ಕರುಣಾ
ಕರನಿಗಾಗಲು ಸೈಗೆಡದು ನಿಂ
ದಿರುತ ಕೈಮುಗಿದೆದ್ದು ಬಿನ್ನಹ ಮಾಡಿದರು ಹರಿಗೆ ।

ವರಮುನಿಪಪರ್ಯಂಕಹೃದಯನೆ
ಸುರನಿಕರವರಸುಖಕೆ ಕಾರಣ
ಪರಮಭಕ್ತರಿಗೊಲುವ ಕಾರಣ ದೇವದೇವನುತ ॥ ೨೧

ಸಕಲಜೀವಚರಾಚರಾತ್ಮನೆ
ಸಕಲ ವೇದಾತೀತಮಹಿಮನೆ
ಭಕುತವತ್ಸಲ ಚಿತ್ತಗೊಡುವುದು ಧರೆಯ ರಾಕ್ಷಸನು ।
ಯುಕುತಿಯಿಲ್ಲದೆ ಕದ್ದನು ದಿತಿಯ
ವಿಕಳಸುತನು ಹಿರಣ್ಯಲೋಚನ
ಸಕಲಲೋಕವನುಳಿದು ಹೊಕ್ಕನು ವಿತಳದಿಂ ಕೆಳಗೆ ॥ ೨೨

ಹೊಕ್ಕನೈವತ್ತೆಂಟುಸಾವಿರ
ಲಕ್ಷಸಂಖ್ಯನುಲಬುದ ಸಂದವು
ರಕ್ಕಸನ ಕೈಯೊಳಗಿಳೆಯಿರಲಿಕತ್ತ ಲೋಷಧಿಯು ।
ತಕ್ಕ ವಾನಸ್ಪತ್ಯಫಲಗಳ
ಮೆಕ್ಕತುಳದಲಿ ಲೋಕವೆಲ್ಲವ
ಮಿಕ್ಕು ತಾವ್ ಬಯಲಾಗಿ ಹೋದವವನ್ನವಿಲ್ಲವೆನೆ ॥ ೨೩

ವರಾಹಾವತಾರ

ಸಿರಿಧರನು ಕೇಳಿದನು ಬ್ರಹ್ಮನ
ಸುರರ ಬಿನ್ನಹ ಹೊಸತು ಕುಳ್ಳಿರಿ
ಧರೆಯ ಕದ್ದ ಹಿರಣ್ಯಲೋಚನನೆಂದು ಮನ್ನಿಸುತ ।
ಚರಣದಲಿ ಪಾತಾಳನಾಭಿಯ
ನಿರುತದಲಿ ಭೂರ್ಭುವನ ಮೇಲಣ
ವರಸುರಾಲಯ ಮಕುಟದೆಡೆಯಲಿ ಹಾಯ್ದು ನಿಂದಿರಲು ॥ ೨೪

ವ್ಯಾಪಿಸಿಯು ಹರಿ ರುದ್ರನಾಗಿಯೆ
ಲೋಪಿಸುವೆ ನಿನಗೆನುತ ದೈತ್ಯನ
ಟೋಪವನು ಕಡಿಖಂಡ ಮಾಡಿಯೆ ತಹೆನು ಮೇದಿನಿಯ ।

ಈಪುರಂದರಗೀವೆನೆನುತಾ
ಕೋಪದಲಿ ನೋಡುತ್ತ ಗಗನವ
ರೂಪ ಹಿಡಿದನು ಯಾದಿವರಹನ ಸುರರು ಬೆದರಲಿಕೆ ॥ ೩೫

ಕಿಡಿಗಳನು ಕಂಗಳಲಿ ಕಾಱುತ
ದಡಿಗಿರಿಗಳನು ದಾಡೆಯಿಂದವೆ
ಕೆಡಹುತಾಗಳೆ ಹರಿದ ರಾಕ್ಷಸಗಾಗಿ ಹರಿ ಬೞಿಕ ।

ವರಾಹಹಿರಣ್ಯಾಕ್ಷರಯುದ್ಧ

ನಡೆದು ವಿತಳಕ್ಕಿೞಿದು ರಾಕ್ಷಸ
ದಡಿಗನತ್ತಲು ಹರಿದು ಮೊಱೆವುತ
ಘುಡುಘುಡೆನುತ ವರಾಹನಬ್ಬರ ಬರಲು ಬೊಬ್ಬಿಡುತ ॥ ೩೬

ರಕ್ಕಸರು ತಾವೆಲ್ಲ ಭಯದಲಿ
ಮುಕ್ಕುಱಿಕ್ಕದರಾದಿವರಹನ
ದಿಕ್ಕಲನು ತಾ ಬಂದನಲ್ಲಿಗೆ ನಮ್ಮ ಭಾಗ್ಯದಲಿ ।
ಸಿಕ್ಕಿತೇನವಗೀಗಲಡವಿಯ
ಮೆಕ್ಕಲನು ಕಪಿ ಯೆನುತ ದೈತ್ಯರು
ಕಕ್ಕಡೆಯ ಮುಂಕೊಂಕುಗತ್ತಿಯ ಸಬಳಮುದ್ಗರವ ॥ ೩೭

ಕೊಂಡು ಬಂದಾ ದೈತ್ಯಗಣವನು
ದಿಂಡು ಗೆಡಹಿಯು ತುೞಿಯೆ ರಾಕ್ಷಸ
ಹಿಂಡು ಬೊಬ್ಬಿಡೆ ಹೊಕ್ಕು ಪಡೆಯನು ಕೆಡಹಿ ಜೇವಿಗೆಯ ।
ಕೊಂಡಿಗಾನೆಯ ಹಂತಿ ಗಟ್ಟಿದ
ಚಂಡಬಲ ನುಗ್ಗಾಯ್ತು ಬಲಮುಂ
ಕೊಂಡು ಬರೆ ಬೈರಗಿಯಿನಱಿದಂತಾಯ್ತು ನಿಮಿಷದಲಿ ॥ ೩೮

ಆಮಹಾರಕ್ಕಸರ ಸಾಗರ
ಸ್ತೋಮಕಾಗಲು ಬಡವಸೂಕರ

ಕಾಮರೂಪನು ಕಡಿಯೆ ಕೋಪಿಸಿ ಬಂದು ದೈತ್ಯೇಶ |
ಭೂಮಿಚೋರ ಹಿರಣ್ಯಲೋಚನ
ಕಾಮುಕನು ಮೊದಲಿಸಿ ಕೊಂಡಾ
ಕ್ಷೇಮಕಾರಿಯು ಕೊಂದಪೆನೆನುತ್ತೊಡನೆ ಬರುತಿರ್ದ || ೩೯

ಎಂದು ರಾಕ್ಷಸನೊದಱೆ ನಾಕಜ
ವೃಂದವು ನಡುಗಿತಾ ವರಾಹನು
ಸಂದ ನಾಗಸದೊಳಗೆ ಕುಳ್ಳಿರ್ದಮರಗಣವಾಗ |
ಅಂದು ಬೆದಱಲಿಕಾಗ ರಾಕ್ಷಸ
ನೊಂದು ಕತ್ತಿಯುಲಿಡಲು ನುಂಗಲು
ಬಂದನವನಱೆಯಟ್ಟಿ ಹೊಯ್ಯುತ ದೈತ್ಯಗರುವಣಿಸಿ || ೪೦

ಬಂದು ಮಕುಟವ ಮುಱಿದು ದೈತ್ಯನ
ಮಂದಿಯನು ಸೀಳಿದ ವರಾಹನು
ಕೊಂದು ಕೊಂಡೆತ್ತಿದನು ಭೂಮಿಯ ದೈತ್ಯರನು ವಧಿಸಿ |
ಮಂದಮತಿ ತನ್ನಂಗಬಲವೆಂ
ತೆಂದು ನೆರಹಿದ ದೈತ್ಯಬಲವನ
ದೊಂದು ಶಂಖದ ಚಾತುರಂಗವನೆರಹಿ ಕಾಳಗಕೆ || ೪೧

ಆಳ ಸಂಹರಿಸುತ್ತ ರಾಕ್ಷಸ
ಕಾಳಗತ್ತಿಯ ತಿರುಹಿ ಯಿಡಲಾ
ಮೇಲೆ ತಾ ಸುರನಿಕರ ಬೊಬ್ಬಿಡಲಶನಿಯುಬ್ಬರದಿ |
ಬೀಳಲವಕಂಜಿದರು ವರಹನ
ಮೇಲೆ ಕತ್ತಿಯ ಮಟೆಯು ಕಱೆಯಲು
ಜಾಳಿಸದ ದಾಡೆಯಲಿ ದೈತ್ಯನ ಕೈದುವೆಲ್ಲವನು || ೪೨

ಬಡಗಲಿಸಿ ಕಾದಿದರದಿಬ್ಬರು
ಬಿಡದೆ ಹನ್ನೆರಡಬುದ ಸವೆಯಲು

ಪೊಡವಿ ನಡುಗಲು ಕಡಲು ಕಂಪಿಸೆ ಯುದ್ಧದದ್ಭುತಕೆ ।
ನಡುಗಿದರು ದಿಗಧಿಪರು ಹಗಲಿರು
ಳೊಡೆಯರಿಬ್ಬರು ಸುರರು ಕಂಪಿಸೆ
ಮೃಡನು ಕಣ್ಣನು ಮುಚ್ಚೆ ಬ್ರಹ್ಮನಱಿಯದು ತನಗೆನಲು ॥ ೪೩

ಹಿರಣ್ಯಾಕ್ಷಸಂಹಾರ.

ಈ ಧುರಕೆ ಸರಿಯಾಗಿ ವೀರರು
ಕಾದುವರು ಹುಸಿಯೆನುತಲಿದ್ದೊಡ
ಮಾದಿರೂಪ ವರಾಹದೇವನು ಹಿರಣರಾಕ್ಷಸನ ।
ಭೇದಿಸಿದ ದಾಡೆಯಲಿದಾಕ್ಷಣ
ಮೇದಿನಿಯ ಕಂಟಕನು ಬೀೞಲಿ
ಕಾದಿವಿಜರುಘೊಯೆಂದು ಗುಡಿಯನು ಕಟ್ಟಿ ತಮತಮಗೆ ॥ ೪೪

ಹಿರಣ್ಯಾಕ್ಷನಿಗೆ ಪುತ್ರಜನನ.

ಇತ್ತಲಾಗ ಹಿರಣ್ಯಲೋಚನ
ನತ್ತಮಾಂಗಿಯು ವಿತಳರಾಜನ
ಪುತ್ರಿ ಮಂಗಳೆ ಪೆತ್ತಳೈ ತಾನೊಬ್ಬ ಪುತ್ರನನು ।
ಅತ್ಯಧಿಕಬಲನವನು ರಾಕ್ಷಸ
ಮೊತ್ತದಲಿ ಬಲುಗೈಯದೆನಿಸುವ
ನತ್ತ ನರಕಾಸುರನು ಪುಟ್ಟಿದ ರತ್ನಪುರದೊಳಗೆ ॥ ೪೫

ಬಲುಭುಜನು ತಮ್ಮಯ್ಯನಳಿಯ
ಲ್ಕಲಿದು ತೊಟ್ಟಲಿಸಿಂದ ಕೆಳಯಿಕೆ
ಘಟಿಲನಿೞಿದನು ಮಾತೆ ಪೊಗ ನೋಡಲಿಕೆ ಬೆಸಗೊಂಡ ।
ಇಳೆಯ ಕದ್ದರೆ ಪಿತನನಾವನೊ
ಯುಳುಕಿಸಿದನವನೊಡನೆ ಯುದ್ಧವ
ನೊಲಿದು ಮಾಡುವೆನೆನಲು ಶಿಶುವನು ಬೇಡಿಕೊಳಲಿತ್ತು ॥ ೪೬

ಶ್ರೀಪತಿಯು ತಾನಖಿಳಜಗಗಳ
ತಾಪಹರ ಭೂವನಿತೆ ಯೊಡಲನು
ಲೋಪಿಸಿದುದಾಕ್ಷಣಕೆ ದಾಡೆಯ ಕೊನೆಯಲೆತ್ತಿದನು ।
ಆಪುರಂದರಮುಖ್ಯದಿವಿಜರು[1]
ಪಾಪರಹಿತರು ಪಾರಿಜಾತವ
ನೋಪಿನಲಿ ಹರಿಯ ಮಕುಟಕೆ ಸುರಿಯುಬವರೊಲಿದು ॥ ೪೭

ದೇವದುಂದುಭಿ ಮೊಳಗಲಾಗಲು
ದೇವನಾಕ್ಷಣ ದಿವ್ಯರೂಪದಿ
ಭೂವನಿತೆಯನು ನೆರೆದ ಮಂಗಳರವದ ಘೋಷದಲಿ ।
ಭೂವಧುವು ವಲ್ಲಭನ ಕೊರಳ
ಲ್ಲಾ ವಿರಿಂಚೀಶಾನವಾಸವ
ದೇವತತಿಯಿರೆ ಹರಿಗೆ ಹೂವಿನ ಮಾಲೆ ಯಿಕ್ಕಿದಳು ॥ ೪೮

ಭೂದೇವೀಕೃತಸ್ತೋತ್ರ

ಜಯತು ನಾರಾಯಣನೆ ಶೌರಿಯೆ
ಜಯ ಜನಾರ್ದನ ಚಕ್ರಪಾಣಿಯೆ
ಜಯ ಜಗತ್ತ್ರಯಜೀವನನೆ ಶ್ರೀವಾಸುದೇವೇಶ ।
ಜಯತು ವರಹನೆ ಜ್ಞಾನಪಂಜರ
ಜಯತು ಶ್ರೀಪತಿ ಶ್ರೀಜಗತ್ಪತಿ
ಜಯತು ಜಯ ತ್ರಯಮೂರ್ತಿದೇವನೆ ಶ್ರೀಹೃಷೀಕೇಶ ॥ ೪೯

ಜಯ ಚತುರ್ಭುಜ ಶಂಕರಪ್ರಿಯ
ಜಯತು ಗರುಡಧ್ವಜನೆ ಜಯಜಯ
ಜಯ ನೃಕೇಸರಿ ಜಯ ಮಹಾದೇವೇಶ ವಿಶ್ವೇಶ ।
ಜಯತು ಭೂರ್ಭುವನೇಶ ಶ್ರೀಧರ
ಜಯತು ದೇವಕಿಪುತ್ರ ಪಾರ್ಥಗೆ
ಜಯತು ಸಾರಥಿ ಜಯತು ಯಚ್ಯುತ ಶಂಖಚಕ್ರಧರ ॥ ೫೦

1 ನಾಕಜ. ಗ. ಘ. ಜ,

ಜಯ ಪರಂಜ್ಯೋತಿಸ್ಸ್ವರೂಪನೆ
ಜಯತು ಆತ್ಮಜ್ಯೋತಿ ಜಯಜಯ
ಜಯ ಚರಾಚರ ಜೀವ ಶ್ರೀವತ್ಸಲನೆ ಜಗದೀಶ ।
ಜಯತು ಸರ್ವಗ ಸರ್ವಲೋಕನೆ
ಜಯತು ಭೂರ್ಭುವ ಜಯ ತ್ರಿವಿಕ್ರಮ
ಜಯತು ಕಾಲಜ್ಞಾನಿಧಾಮನೆ ಜಯತು ಹರಿಹರನೆ ॥ ೫೧

ಜಯತು ಕರುಣಾಕರನೆ ಸರ್ವಗ
ಜಯ ಜಯತು ಸರ್ವಜ್ಞ ಸರ್ವನೆ
ಜಯತು ಸರ್ವಗ ಸರ್ವಸಾಕ್ಷಿಯೆ ಸರ್ವತೋಮುಖನೆ ।
ಜಯ ಜಯ ಹಯಗ್ರೀವ ಹರಿಹರ
ಜಯತು ಶಾರ್ಙ್ಗಿಯೆ ಸರ್ಪಶಯನನೆ
ಜಯ ಹಲಾಯುಧ ಕರಸಹಸ್ರನೆ ಬಾಹುಸಾಹಸ್ರ ॥ ೫೨

ಜಯ ಜಯ ಸಹಸ್ರಾಕ್ಷಧೋಕ್ಷಜ
ಜಯ ಗಜೇಂದ್ರವಿಮೋಕ್ಷಣಾರ್ಥಿಯೆ
ಜಯತು ಕೇಶವ ಕೇಶಿಮರ್ದನ ಕೈಟಭಾಂತಕನೆ ।
ಜಯತು ವಿದ್ಯಾತ್ಮಕನೆ ಕಾವ್ಯನೆ
ಜಯತು ಕಮಲೇಕ್ಷಣನೆ ಜಯ ಜಯ
ಜಯತು ಕಂಸಾರಾತಿ ಜಯಜಯಯಘದವಾನಳನೆ ॥ ೫೩

ಜಯತು ಕಾಕುಸ್ಥಕನೆ ಖಗಪತಿ
ಜಯತು ವಾಹನಗರುಡರೂಢನೆ
ಜಯತು ಪೀತಾಂಬರನೆ ಯದ್ವಯನಿತ್ಯನೇ ಜಯತು ।
ಜಯ ನಿರವಯವ ನಿತ್ಯತೃಪ್ತನೆ
ಜಯ ನಿರಾಶ್ರಯ ನಿತ್ಯನದ್ವಯ
ಜಯ ಸುರಾಧ್ಯಕ್ಷಕನೆ ನಿರ್ವೈಕಲ್ಯನೇ ಜಯತು ॥ ೫೪

ಜಯ ನಿರಂಜನ ಜಯ ಜಗತ್ಪತಿ
ಜಯತು ಬ್ರಹ್ಮನೆ ಪೃಥಿವಿನಾಥನೆ
ಜಯತು ಲಕ್ಷ್ಮೀವಾಸ ಜಯ ಜಯ ಜಯತು ಮಾಧವನೆ ।
ಜಯತು ನಾನಾವೇದಗರ್ಭನೆ
ಜಯ ವಿಭುವೆ ಜಯ ವಿಷ್ಣುವೇ ಜಯ
ಜಯತು ನೀತ್ರೈಲೋಕ್ಯಭೂಷಣ ಯಜ್ಞಮೂರ್ತಿಕನೆ ॥ ೫೫

ಜಯ ಜಯತು ಶ್ರೀಕರದಮೂರ್ತಿಯೆ
ಜಯತು ವಾಸವರಕ್ಷ ವಾಮನ
ಜಯ ಜಿತೇಂದ್ರಿಯ ದುಷ್ಟಶಮನಕ ಜಯ ಜಿತಕ್ರೋಧ ।
ಜಯ ಸನಾತನಭಕ್ತವತ್ಸಲ
ಜಯ ಜಗತ್ಪೂಜಿತನೆ ಪರತರ
ಜಯತು ಪರಮಾತ್ಮಸ್ವರೂಪನೆ ಸರ್ವಲೋಕೇಶ ॥ ೫೬

ಜಯತು ಅಂತಕಸರ್ವದುರಿತಕೆ
ಜಯ ಅನಂತಯನಂತವಿಕ್ರಮ
ಜಯತು ಮಾಯಾಧಾರ ಜಯಪತಿ ಜಯ ನಿರಾಧಾರ ।
ಜಯತು ಸರ್ವಾಧಾರ ನಿಷ್ಕಳ
ಜಯ ನಿರಾಭಾರಕನೆ ಸಂತತ
ಜಯ ಪ್ರಪಂಚಾತೀತ ನಿರಮಯ ಭಕ್ತಸೇವಿತನೆ ॥ ೫೭

ಜಯತು ಪುಣ್ಯಪಾತ್ರಕೀರ್ತಿಯೆ
ಜಯ ಜಯ ಮಹೋದಾರಸಾಗರ
ಜಯ ಪುರಾಣಪುರಾಣರೂಪನೆ ಯೆಂದು ಹೊಗಳುತಲು ।
ನಿಯತಮತಿ ಭೂದೇವಿ ಹರಿಯನು
ಜಯ ಮತಿಯುಲತಿಸ್ತುತಿಸಿ ನಿಂದಿರೆ
ದಯಮಹಾಂಬುಧಿ ಭೂಮಿದೇವಿಯ ಧರಿಸಿ ನಿಂದಿರಲು ॥ ೫೮

ನರಕಾಸುರನಿಗೆ ಪ್ರಜ್ಞಾತಿಪುರದಾನ.

ಅಂದು ಜನಿಸಿದ ನರಕದಾನವ
ನಂದನಗೆ ಪ್ರಜ್ಞಾತಿಪುರವನು
ಮಂದರೋದ್ಧರನೋತು ಕೊಟ್ಟನದೊಂದು ದಾಡೆಯನು ।
ಬಂದಬಳಿ ಭೂರ್ಭುವನವೆತ್ತಿದ
ನಂದನಗೆ ಪ್ರತಿ ಸುಪ್ರತೀಕವ
ನಂದು ಕೊಟ್ಟನದರ ನಿಲವು ಹದಿನೈದುಯೋಜನವು ॥ ೫೯

ಇನಿತು ನೀಳದಿಯುದ್ದವದು ತಾ
ನನುಕರಿಸಿ ಮೇಲೇಳುಯೋಜನ
ಜನಿಸಿಹುದು ನೋಡುವೊಡದೈದೇ ಯೋಜನದಯುಗಲ ।
ಮನದ ಬಲುಹನನರಿವರಾರದ
ರಿನಿತು ಸತ್ವಕದಷ್ಟಕರಿಯುದು
ಗುಣಿಸಿಕೊಡಲು ಸಮಕೆ ಬಾರವು ಭೂಪ ಕೇಳೆಂದ ॥ ೬೦

ಅದರಿನಾತನು ವರಕುಬೇರನ
ಬೆದರಿಸಿಯೆ ಸರ್ವಸ್ವವೆಲ್ಲವ
ನದಟಿನಲಿ ಕೊಳೆ ಬಟಕ ತನ್ನಯ ವಿತ್ತದೇಶ್ಗೆಯಲಿ ।
ಉದಯಿಸಿದ ಭಗದತ್ತನಾತನ
ಹದನ ಕೈಕೊಳಲೆಂದು ಜನಿಸಿದ
ಮೊದದಿ ಕೇಳೈ ಮುಂದೆ ಕಥೆಯನು ರಾಯ ನೀನೆಂದ ॥ ೬೧

ಹರಿಯು ತನ್ನ ಮನೆಗೆ ಬರುವಿಕೆ.

ದೇವ ವೃಂದವು ಬೆರಸಿ ನಾನಾ
ದೇವ ಋಷಿಯರು ಕೂಡಿ ಭೂಮಿ
ದೇವಿಯನು ಸಂತೈಸಿ ಕಮಲಜಮುಖ್ಯಸುರರೊಡನೆ ।
ದೇವದೇವನು ಬಂದು ತನ್ನಯ

ಪಾವನ ಕ್ಷೀರಾಬ್ಧಿಗೆರಮಾ
ದೇವಿಯರಸನು ಹರುಷದಿಂದವೆ ಹೊಕ್ಕನರಮನೆಯ ॥ ೬೦

ದೇವತೆಗಳಿಗೆ ಅಭಯದಾನ.

ಸುರರ ಮನ್ನಿಸಿ ಕಳುಹುತೆಂದನು
ನಿರುತ ನಿಮ್ಮಯ ಬಾಧೆ ತನ್ನದು
ಥರಥರದ ದಟ್ಟಿಗೆಯ ದೈತ್ಯರ ಹವಣು ತನಗೆಂದ ।
ಸರಸಿಜಾಸನ ಮುಖ್ಯದಿವಿಜರು
ಹರಿಗೆ ನಮಿಸಿಯೆ ತಾವು ಹೊಕ್ಕರು
ನಿರುಪಮಿತಸ್ವರ್ಗಾದಿಭೋಗವನರಸ ಕೇಳೆಂದ ॥ ೬೩

ಕಾದನೈ ಹರಿ ಲೋಕಪಾಲರ
ಕಾದನೈ ಹರಿ ಸ್ವರ್ಗಭೋಗವ
ಕಾದನೈ ಹರಿ ಭೂಮಿದೇವಿಯ ತನ್ನ ನೆನೆವವರ ।
ಆದುದೈ ಶ್ರೀವರಹದೇವನು
ವೇದವತಿಯಲು ಯಜ್ಞ ರೂಪನ
ನಾದಿಪುರುಷನು ನಿಮ್ಮ ರಕ್ಷಿಪನೆಂದನಾಮುನಿಪ ॥ ೬೪

ಮೇದಿನಿಯ ಮೇಲಿದನು ಕವಿಗಳ
ಲಾದರಿಸಿ ತಾವ್ ಕೇಳ್ದ ನರರಿಗೆ
ಬಾಧೆ ತಪ್ಪುವುದಾಕೃತಾಂತನ ವರಹಚರಿತೆಯಲಿ ।
ಮೇದಿನಿಯ ಪತಿ ಯಿನ್ನು ಮುಂದಣ
ಸಾಧುದೂರ ಹಿರಣ್ಯಲೋಚನ
ಸೋದರನ ವಧೆ ವರನೃಕೇಸರಿಚರಿತ ಕೇಳೆಂದ ॥ ೬೫

ಏಳನೆಯ ಸಂಧಿ ಮುಗಿದುದು.

ಎಂಟನೆಯ ಸಂಧಿ.

ಸೂಚನೆ

ವರನೃಕೇಸರಿ ಕಂಭದೊಳಗವ
ತರಿಸಿಯಾಹಿರಣ್ಯಕನ ಸೀಳಿಯೆ
ಕರುಳಮಾಲೆಯನಿಕ್ಕಿ ಪ್ರಹ್ಲಾದ ಗಿತ್ತನತಿಮುದವ ||

ಕೇಳು ಜನಮೇಜಯ ಧರಿತ್ರೀ
ಪಾಲ ಲಕ್ಷ್ಮೀಲೋಲ ತಾ ಪಾ
ತಾಳದೈತ್ಯರ ಸೀಳಿ ಬಿಸುಟನು ಕೋಟಿಸಂಖ್ಯೆಯಲಿ ||

ಹಿರಣ್ಯಕಶಿಪುವಿನ ತಪಸ್ಸು.

ಮೇಲೆ ಕೇಳಿದನಾಹಿರಣ್ಯಕ
ಕಾಲಗಂಡನು ತಮ್ಮನೆಂಬುದ
ಕಾಲನೆರಹಿದನಾತತುಕ್ಷಣ ಹರಿಯ ಸಂಗರಕೆ || ೧

ಬೇಗದಲಿ ವರಕಾಯ ಸಿದ್ಧಿಯ
ಲಾಗಿನಲಿ ಶಂಭುವನು ಮೆಚ್ಚಿಸು
ತೀಗ ಮಾಡುವೆನೆಂದು ಕಶ್ಯಪತನಯ ಶೂಲಿಯನು |
ಲಾಗಿನಲಿ ಪೂಜಿಸಿಯೆ ಬೇಡುವೆ
ಸಾಗರಾಂತ್ಯದ ಕೈಟಭಾರಿಯ
ಲಾಗಿಸಿಯೆ ನಾಕಜರ ಹೆಂಡಿರ ಕಡಗಪತ್ರವನು || ೨

ತೆಗಿಸಿ ಲೋಕವ ತನಗೆ ನಿತ್ಯವ
ನಗಿದು ಮಾಡುವೆನೆನುತಲಿದಿರಲಿ
ಸೊಗಸಿ ತಾನೇ ಯೊಶನೆನಿಸುವೆ ಸರ್ವಕಾಲದಲಿ |

ಮಿಗಿಸುವೆನು ಶಿವನಾಣೆ ಯೆನುತಲಿ
ಸೊಗಸ ಧೂರ್ಜಟಿ ಗಿರಿಯನೈದಿದ
ವಿಗಡತಪವನು ಮಾಡತೊಡಗಿದನಸುರಕರ್ಮದಲಿ ॥ ೩

ಬ್ರಹ್ಮನ ಬಳಿಗೆ ಹೋಗೆಂದು ಹರನ ಅಪ್ಪಣೆ

ಮಾಡಲಿಕೆ ಹರನೆಂದ ತನ್ನಲಿ
ಕಾಡದೀವರವೆಂದು ದೈತ್ಯನ
ನೋಡಿ ಕಳುಹಿದ ಸತ್ಯಲೋಕದ ಪತಿಯು ಹೊರೆಗಾಗಿ ।
ಮಾಡಿದನು ಬ್ರಹ್ಮಗೆ ಹಿರಣ್ಯಾಕ
ರೂಢಿಯಲಿ ಹದಿನಾಱುಸಾವಿರ
ತೀಡಿದಬ್ದದಿ ತಪವ ಮೈಯ್ಯಲಿ ಪುತ್ತು ಜನಿಸಲಿಕೆ ॥ ೪

ಬಳಿಕ ವಾಣೀರಮಣ ಬಂದನು
ಕಲಿ ಹಿರಣ್ಯಾಕ ಮಾಡಿದದಟನ
ಹುಳುಕತಪಸಿಗೆ ವರವ ಕೊಟ್ಟನು ಬೇಡು ನೀನೆನುತ ।

ಆವ ರೀತಿಯಿಂದೂ ತನಗೆ ಮರಣ ಬಾರದಂತೆ ಪ್ರಾರ್ಥನೆ

ನಳಿನಸಂಭವನೆನೆ ಹಿರಣ್ಯಾಕ
ನುಲುಹುಗೆಟ್ಟುವುಸುರುಮಾತ್ರದಿ
ತಲೆಯ ಬಾಗಿಸಿ ಕಮಲಪುತ್ರನ ವರವ ಬೇಡಿದನು ॥ ೫

ತನಗೆ ಕೊಡುವೊಡೆ ಯಿಂದು ನೀವಿದ
ಜನಕ ಲೋಕಕೆ ಸರಸಿಜಾಸನ
ಯನಿಮಿಷರ ದಿತಿಸುತರ ಮನುಜರ ಪಕ್ಷಿಮೃಗಗಳಲಿ ।
ತನುವಿಗುಹಪತಿ ಯಿಲ್ಲದಂತಿದ
ಕನಕಗರ್ಭನೆ ಮತ್ತೆ ಕೇಳಿದ
ವನಗಳಲಿ ಮಿಗೆ ಸರ್ವಜಾತಿಯಲಿರುಳು ಹಗಲೊಳಗೆ ॥ ೬

ಮರಣ ಬಾರದ ಪರಿಯ ಮಾಡೈ
ಧರೆಯೊಳಂಬರದಲ್ಲಿ ಯಗ್ನಿಯ
ನಿರುತಯಾಪದಿ ಮರುತಶಿಡಿಲ ಳ ಲೂರಲಡವಿಯಲಿ ।
ಶಿರವು ಹರಿಯದ ಪರಿಯನೀವುದು
ವರಮಹಾಸ್ತ್ರದಿ ಶಸ್ತ್ರ ಚಾಪದಿ
ವರವ ಕೊಡುವುದದೊಳಗು ಹೊರಗೂ ಮರಣಬಾರದುದ ॥ ೭

ಮತ್ತೆ ಮೃತ್ಯುಯ ಈವುದೆನಗಿದ
ಮೃತ್ಯುವಿಲ್ಲದ ಲೆಕ್ಕ ಹಸಿಯಲಿ
ಮತ್ತೆ ತೃಣದಲಿ ವೃಕ್ಷಜಾತಿಯ ಕಾಷ್ಠದೊಣಗಲಲಿ ।
ಇತ್ತು ಕಳಯ್ಯೆತನಗೆ ಮರಣವ
ನುತ್ತಮದ ಪಂಚೇಂದ್ರಿಯಂಗಳ
ಲಿತ್ತಲಾನಾಲ್ಕಿಂದ್ರಿಯಂಗಳಿ ಮೂಱಲಿಂದ್ರಿಯದ ॥ ೮

ಉಱದ ಯೆರಡಿಂದ್ರಿಯದೆ ಬೞಕಾ
ನೞಿಯದಂತಿರೆ ಯೇಕದಿಂದ್ರಿಯ
ಕೊಲಲು ಬಾರದ ಪರಿಯ ಮೊೞ್ವುದು ಪಂಚಭೂತದಲಿ ।
ಬೞಿಕ ನಂದಾಭದ್ರಜಯತಿಥಿ
ಯುೞಿದರಿ ಕ್ತಾಪೂರ್ಣದಿನತ್ರಯ
ದೊಳಗೆ ಮರಣವು ಬಾರದಂತಿರೆ ಕರುಣಿಸುವುದೆನಲು ॥ ೯

ಹಿರಣ್ಯಕಶಿಪುವಿಗೆ ವರಲಾಭ

ಎಂದೊಡಾಕ್ಷಣ ನಳಿನಭವ ತಾ
ನಂದು ಕೊಟ್ಟನು ಕಶ್ಯಪಾತ್ಮಜ
ನೆಂದ ವರಗಳ ಕೇಳು ಜನಮೇಜಯಮಹೀಪಾಲ ।
ಹಿಂದೆ ಯಿಂದ್ರನ ಧಾಳಿ ರಾಕ್ಷಸ
ಮಂದಿರಕೆ ತಾನೈದಿ ದೈತ್ಯನ
ಯಿಂದುವದನೆಯ ಸೆಱೆಯ ಹಿಡಿದರು ಪುರವನುರುಹಿದರು ॥ ೧೦

ಅಂದು ವರಪ್ರಹ್ಲಾದದೇವನ
ಮಂದಹಾಸದ ಗರ್ಭವಾಗಿರೆ
ಮಿಂದು ಮಾಸತ್ರಯಗಳಾಗಿರಲಾ ಕಯಾತಿಯಲಿ ।
ಬಂದು ನಾಕಜವೃಂದದೂತರು
ಸಂದ ಗರ್ಭದ ದನುಜರಮಣಿಯ
ನಂದು ಹಿಡಿದರು ಹಿರಣಿಕಾಸುರ ತಪಕೆ ಪೋದಲ್ಲಿ ॥ ೧೧

ಸಂದುಕಟ್ಟನು ನೋಡಿ ಯಮರರು
ಬಂದು ದನುಜನ ಸತಿಯನೊಯ್ದರು
ತಂದರಮರಾವತಿಯೊಳಿರಿಸಿದರಾಕಯಾತಿಯನು ।

ನಾರದರು ಗರ್ಭದಲ್ಲಿದ್ದ ಶಿಶುವಿನ ಲಕ್ಷಣವನ್ನು ಹೇಳುವಿಕೆ.

ಬಂದನಲ್ಲಿಗೆ ಮುನಿಪ ನಾರದ
ನಂದು ಕರೆಸಿದನಾಕಯಾತಿಯ
ತಂದರಾಸುರದೂತರಾಗಲು ಮುನಿಯ ಸಂನಿಧಿಗೆ ॥ ೧೨

ನಿಂದು ಮುನಿಪನ ಚರಣಕಮಲ
ಕ್ಕಿಂದುಮುಖಿ ನಮಿಸಲಿಕೆ ನಾರದ
ನೆಂದ ಕೇಳೌ ತಾಯೆ ನಿನಗೀಗರ್ಭವೇಸುದಿನ ।
ಎಂದು ಕೇಳಲಿಕಾಱುಮಾಸವು
ಹಿಂದು ಗಳೆದವವೆಂದೊಡಾಯತಿ
ಛಂದವನು ನೋಡಿದನು ಗರ್ಭದ ಜೀವಲಕ್ಷಣವ ॥ ೧೩

ಇಂದಿವನು ಹರಿಭಕ್ತ ಯೋಗ್ಯನು
ಮಂದಱಿಯುತೇಕಾಂತಕಾಮುನಿ
ಬಂದು ವೈಷ್ಣವಮಂತ್ರನೇಮವ ಶಿಶುವಿಗಱುಹಿದನು ।
ಅಂದು ತಾ ಮೊದಲಾಗಿ ವೈಷ್ಣವ
ವೃಂದಕುಲಗಳ ಜನಕೆ ಸಂದನು
ನಂದನನು ತಾ ವರಕಯಾತಿಯ ಜಠರದೊಳಗಿರಲು ೧೪

ವರಗುರುವಿನುಪದೇಶದಿಂದವೆ
ಹರಿಯು ಸಾಕ್ಷಾತ್ ಜ್ಞಾನವಾಯಿತು
ನಿರುತದಿಂದಜ್ಞಾನವೆಲ್ಲವ ಹರಿಸಿ ರಾಜಿಸುವ ।
ಬರಸಿ ಸಾತ್ವಿಕಗುಣವನಂಗೀ
ಕರಿಸಿ ಯಿದ್ದುದರಿಂದಲಾತಗೆ
ಸುರನರೋರಗಜನವು ಸರಿಯೇ ರಾಯ ಕೇಳೆಂದ ॥ ೧೫

ಸುರನಿಕರ ಹೆಸರಿಟ್ಟು ಹರುಷದ
ಲಿರಲಿಕತ್ತಲು ಸೆಱೆಯಲಾಸತಿ
ಹಿರಿದು ಬಳಯುತ್ತಿರಲು ಕಂಡನು ದೇವಮುನಿ ಸತಿಯ ।

ಸೆಱೆಯಿಂದ ಬಿಡಿಸಿ ಆಕೆಯನ್ನು ರತ್ನಪುರಿಗೆ ಕಳುಹಿಸುವಿಕೆ

ವರಮುನಿಪನಾಸತಿ[1] ಯನಾಗಲು
ಸುರಪನಿಂದವೆ ಬಿಡಿಸಿ ಯಾಕೆಯ
ಕರಿಯನೇಱಿಸಿ ಕಳುಹಿದನು ತಾ ರತ್ನಪುರವರಕೆ ॥ ೧೬

ವರವನ್ನು ಪಡೆದು ನಾರಾಯಣನ ಬಳಿ ಯುದ್ಧಕ್ಕಾಗಿ ಬರುವಿಕೆ

* ಇತ್ತ ರಾಕ್ಷಸ ವರವ ಪಡೆದನು
ಮತ್ತೆ ತಿರುಗಿದ ದುಗ್ಧರಾಶಿಗೆ
ಮೊತ್ತದಲಿ ರಾಕ್ಷಸರು ಸಹಿತಾಹರಿಯ ವೈರದಲಿ ।
ಇತ್ತ ಬಂದೊಳಪುಗಲಿಕಾರದೆ
ನಿತ್ಯನನು ನೋಡುತ್ತಲಂಬರ
ಹತ್ತಿ ವೀಕ್ಷಿಸಿ ನೋಡುತಿರ್ದನು ಹಲವು ಕಾಲದಲಿ ॥ ೧೭

---

[1]ನಿರುತದಿಂ ಮುನಿಸತಿ, ಗ. ಘ. ಜ

*ಇತ್ತ ಕೇಳು ಹಿರಣ್ಯಕಾಸುರ
ಮುತ್ತಯನ ಬೀಟೊಕ್ಕಡು ಸಾಗರ
ದತ್ತ ತಿರುಗಿಯೆ ದುಗ್ಧರಾಶಿಗೆ ಹರಿಯು ವೈರದಲಿ ಗ. ಘ. ಜ.

ಆಮಹಾಲಕ್ಷ್ಮೀಶನಹಿಪನ
ರಾಮಮಂಚದ ಮೇಲೆ ಮಲಗಿರೆ
ಪ್ರೇಮದಲಿ ತಾ ಲಕ್ಷ್ಮಿಯೊತ್ತುತ ಚರಣಕಮಲವನು ।
ಸೋಮಸನಕಾದಿಗಳು ತತ್ವದ
ನಾಮನಿರ್ಣಯದಿಂದ ಹರಿಯನು
ವಾಮಹಾಶ್ರುತಿಕೋಟಿ ಹೊಗೞಲು ವರವಿಚಾರದಲಿ ॥ ೧೮

ಪರಮಪುರುಷನ ನಾಮಕೀರ್ತಿಯು
ಪರಿಯ ಕೇಳಿಯೆ ದೈತ್ಯನಡಿಯಿಡ
ಲರಿದೆನುತ್ತಂಜುತ್ತಲಿರ್ದನು [1] ತನುವು ನಡುನಡುಗೆ ।
ಪರಮಮಂತ್ರದ ದುರ್ಗಯಂತ್ರದ
ಬರಹವೇ ತಾನುಪನಿಷತ್ತುಗ
ೞಿದು ನಾನಾಪೂರ್ವದೇವರು ಹೊಗಲು ಗಂಡಿಲ್ಲ ॥ ೧೯

ಬೞಿಕ ಮಿಕ್ಕಿನ ಕಾಕುದೈತ್ಯರ
ಬಳಗಕಳವೇ ಹರಿಯ ನಾಮವು
ಹುಳುಕುನಂಜಿನ ಹರಿಯ ನಾಮದ ಘೋಷದಾರ್ಭಟಕೆ ।
ತಲೆಯ ಬೀೞಿಸಿಕೊಂಡು ಬಳಲಿಯೆ
ಕಳವಳಿಸೆ ಸ್ವಾತನ್ತ್ರ್ಯಮಹಿಮನ
ಬಳಕೆಗದು ಯೋಗ್ಯವೇ ಜನನಾಥ ಕೇಳೆಂದ ॥ ೨೦

ವೇದರಾಶಿಯು ಶ್ರುತಿಪುರಾಣದ
ಮೋಧೆ ನೀತಿಯು ಪಂಚಮಶ್ರುತಿ
ಯಾದಿರಾಮಾಯಣವು ಪೊಗೞುವ ಹರಿಯ ಮಹಿಮೆಯನು ।
ಮೇದಿನಿಯ ಕಂಟಕ ಹಿರಣ್ಯಾಕ
ನಾದಿಸಿದ್ಧನ ಮಹಿಮೆಯೆಲ್ಲವ
ನಾದಿಯಂತವ ಕೇಳಿ ಮರಳಿದ ಹೊಗುವೊಡರಿದೆನುತ ॥ ೨೧

1 ನುತು ಬೆಂಬೀಳುತಿರ್ದನು, ಗ. ಘ. ಜ.

ಹರಿಯು ಪುರದಾ ಹೊಱಗೆ ಚಕ್ರವು
ಘರವಟಿಗೆ ಮಾಡುವುದು ಬಲುವಿಂ
ದುರವಣಿಸಿ ನಾ ಹೊಕ್ಕೆನಾದೊಡೆ ಮರಳಲಲ್ಲೆಂದು ।
ಮರಳಿಸದು ತಾ ಚಕ್ರವಾಗಲು
ಹರಿಯು ಹಗೆಯಿದು ಹಳಸಿ ಕೆಡುವುದು
ನಿರುತವೆನ್ನಿದ್ದೆಡೆಗೆ ಬರಿಸುವೆ ಕಾದಿ ಮರಳಿಸುವೆ ॥ ೧೧

ಹಿರಣ್ಯಕಶಿಪುವಿಗೆ ಸ್ವಪುರಾಗಮನ.

ಎನುತ ರತ್ನದ ಪುರಿಯು ಹೊಕ್ಕನು
ದನುಜ ಚಿಂತಾತುರನವಸ್ಥೆಯ
ನನುಕರಿಸಿ ತಾ ವರಕಯಾತಿಯು ಮನೆಗೆ ಬರುತಿರಲು ।
ಇನಕಳಗೆ ಸರಿಯಾದ ಕಂದನ
ನನಿಮಿಷಾಂತಕ ಕಂಡು ಪುತ್ರನ
ವನುಜಕುಲ ಸಂತೋಷದಿಂದಿರೆ ಕರೆಸಿ ಜೋಯಿಸರ ॥ ೧೨

ಹೇಳಿ ನೀವಿಂದೀತನಂಶವ
ಕಾಲಫಲವನು ಜನಿಸಿದಂದವ
ಕೇಳುವೆನು ತಾನೆನಲು ಹೇಳಿದನಾಗ ಭೃಗುತನಯ ।

ತನ್ನ ಮಗನನ್ನು ಹರಿಭಕ್ತನೆಂದು ತಿಳಿಯುವಿಕೆ.

ಕೇಳು ದನುಜನೃಪಾಲ ನಿನ್ನಯ
ಬಾಲಕನು ಜನಿಸಿದನು ಶ್ರೀಮುಖ
ಕಾಲದಲ್ಲಾಶ್ವೀಜಶುದ್ಧದ ದಶಮಿ ಹರಿತಾರೆ ॥ ೧೩
ಜನನವಾಯಿತು ನಿನ್ನ ಪುತ್ರಗೆ
ಜನಕನಾಜ್ಞೆಯ ಮೀಱಿ ಲಕ್ಷ್ಮೀ
ವನಿತೆಯರಸನ ಭಕುತ ಸಂತತನೀತನತಿಬಳನು ।
ಎನಲು ಬಗೆಯದೆ ಭೀತಿಪಡೆಯದೆ
ತನುಜನಲಿ ಭಯವುಂಟೆ ಯೆನುತಲಿ
ದನುಜ ಭೃಗುಸುತಗಿತ್ತನುಡುಗೊಱೆಯಧಿಕಹರುಷದಲಿ ॥ ೧೪

ಆತನಿಂ ಕಿಗ್ಗಜೆಯುರೇಜ್ವರು
ತಾತ ಬರಲಿಕೆ ಜನನ ಗಂಡರು
ಭೂತಳದಿ ಮುನ್ನವರು ಲೋಕವ ವರಮುರುದ್ಗಣರು |
ಭೀತಿಯಿಂದೂರ್ವಶಿಯು ಶಾಪದಿ
ಭೂತಳದಿ ಜನಿಯಿಸಿದರಿಂದಿರ
ನಾತಳೋದರಿಯೊಡನೆ ನೆರೆದಿರಲಿವರು ಬರುತಿರಲು ‖ ೭೬

ಶಾಪವಾಯಿತ್ತೆರಡುಜನ್ಮಕೆ
ಭೂಪ ಕೇಳ್ಯ ವಧು ಹಿರಣ್ಯಾಕ
ನೋಪಳಿಗೆ ಜನಿಸಿದರು ಮುಂದಕೆ ದ್ವಾಪರಾಂತ್ಯದಲಿ |
ಗೋಪನಂದನನಿಂದು ಮುನ್ನವೆ
ಯಾಪುರಂದರಶಾಪಭಯದಲಿ
ಪಾಪರಹಿತರು ದೇವಕಿಯುಲಾ ಯೇಬುವೂನಿಸರು ‖ ೭೭

ಜನಿಸುವರು ಬಳಿಕವರ ಕಂಸನು
ದನುಜವೈರಿಯು ವೈರಬಂಧದ
ಲನುಜೆಯಾತ್ಮಜರೇಬುಶಿಶುಗಳ ಕೊಲುವನುಱ ಮುಱದು |
ಜನಿಸಿದಾಗಳ ಮರಣಗಾಣಿಸಿ
ಯನಿಮಿಷೇಶ್ವರನಿತ್ತ ಶಾಪದಿ
ಪುನರಪಿಯು ತಾನೊಬ್ಬ ಹುಟ್ಟಿದ ಶಲ್ಯನಾಮದಲಿ ‖ ೭೮

ಪ್ರಲ್ಲಹಾದಾದಿಗಳು ಪೂರ್ವದಿ
ಬಲ್ಲಿದರು ದೈತ್ಯೋತ್ತಮಾವಳಿ
ಯಲ್ಲಿನಿಚ್ಚಳರಾಕರೂಷಕರೆಂಬರತಿಬಳರು |
ಪುಲ್ಲನಾಭಂಗಧಿಕಪ್ರೀತರು
ಬಲ್ಲಿದವರು ಹಿರಣ್ಯಗುದಯಿಸ
ಲೆಲ್ಲ ಯಾತಂಗಷ್ಟಪುತ್ರರದಾಗಿ ಪೂರ್ವದಲಿ ‖ ೭೯

ಹುಟ್ಟಿದ ಎಂಟುಜನಗಳ ಹೆಸರುಗಳು

ಜನಿಸಿದರು ತಾವಷ್ಟಪುತ್ರರು
ದನುಜನಾಯಕನಂದದವರಿಗೆ
ಮನವೊಲಿದು ತಾ ನಾಮಕರಣವ ಮಾಡತೊಡಗಿದನು ।
ದನುಜಗುರುವಿನ ಮಾತಿನಿಂದವೆ
ತನುಜರಿಗೆ ಹೆಸರಿಟ್ಟನಾಗಲು
ವಿನುತಹರುಷೋತ್ಸವದಿ ವೃದ್ಧಕ್ರಮದಿ ಬಾಲರಿಗೆ ॥ ೩೦

ಈತ ತಾ ಪ್ರಹ್ಲಾದದೇವನು
ಈತ ತಾ ಸಹ್ಲಾದದೇವನು
ಈತ ತಾನುಹ್ಲಾದನೀತನು ಮತ್ತೆ ಬಲ್ಲಾದ ।
ಈತನೆ ತಲ್ಲಾದ ನೆಂಬವ
ನೀತನೇ ಲಲ್ಲಾದನಾಮಕ
ನೀತನೇಜಲ್ಲಾದ ನೀತನುವರ ಸುಸಲ್ಲಾದ ॥ ೩೧

ಬಟುಕ ಪುತ್ರರಿಗಂದು ವೈದಿಕ
ಕಳಯು ಕಟ್ಟಿಯೆ ಸ್ವಾಧ್ಯಯನದಾ
ಬಳಿಯುಲಿರಿಸಿದನಲ್ಲಿ ಶುಕ್ರಾಚಾರ್ಯವರ್ಯರಲಿ ।
ನಲಿನಲಿದು ಪ್ರಹ್ಲಾದದೇವರು
ತಿಳಿದು ಗುರುಗಳಿಗಗ್ನಿಮೊಳಯು
ಬಳಿಗೊಡಲು ಪುನರಪಿಯು ನುಡಿದನು ಗುರುವಿಗಿದಿರಾಗಿ ॥ ೩೨

ಪ್ರಣವ ಪೂರ್ವಕದಿಂದ ನಾರಾ
ಯಣನ ನೆನೆದನು ದನುಜಪುತ್ರನು
ಕ್ಷಣಮನನ್ಯವ್ಯಸನಕಿಕ್ಕದೆ ಹರಿಯ ಮಹಿಮೆಯನು ।
ಎಣಿಸತೊಡಗಿದ ವೇದಶಾಸ್ತ್ರದ
ಭಣಿತಿ ಬಣ್ಣಿಸುವಂತೆ ನೆನೆದನು
ಯಣುಗ ನಾನಕದೇವದುಂದುಭಿಯುಮರನಂದನನ ॥ ೩೩

ಈಪರಿಯಲಾ ಶುಕ್ರಭಟ್ಟರು
ತಾ ಪರೀಕ್ಷಿಸಿ ಯುವರ ಶಿಷ್ಯಗೆ
ವ್ಯಾಪಿಸಿದ ವರತತ್ತ್ವಬೋಧೆಯ ಸಾರದುನ್ನತಿಯು ।
ಆಪರಿಯೆ ತನಗಿಹಪರಂಗಳ
ತಾಪವನು ಕಡಿಯುವುದದೆಂದೇ
ಯಾಪವಿತ್ರೋತ್ತಮನು ನುಡಿದನದೆಂದರಾದ್ವಿಜರು ॥ ೨೪

ಹರಿಯನ್ನು ನೆನೆಯಬೇಡವೆಂದು ತಂದೆಯ ಅಪ್ಪಣೆ

ಅದನು ರಾಕ್ಷಸ ಕೇಳಿ ಮಗನನು
ಸದನದೊಳ ಸಲೆ ಕರೆದು ಕೋಪಿಸಿ
ಮುದದಿ ನೆನೆವರೆ ಹರಿಯ ಯೆನ್ನಯ ಹಗೆಯ ನೀನಿಂದು ।

ಹರಿಯೇ ಸಂರಕ್ಷಕನೆಂದು ಮಗನ ಉತ್ತರ.

ಕದನ ತಮಗಿಂದಾತನೊಳಗೆಯು
ಮುದದಿ ನೀನೇ ಭಜಿಸೆ ತಮ್ಮಯ
ವಿದಿತಕರ್ಮವನೆಂದರಾತನು ಜನಕಗಿಂತೆಂದ ॥ ೨೫

ಕರ್ಮಫಲದಾಯಕನು ಹರಿ ತಾ
ಬೊಮ್ಮರೂಪನು ಸರ್ವಲೋಕದ
ಕರ್ಮವನು ನಿರ್ಮಿಸಿದನಾಹರಿ ದೈತ್ಯವನದಹನ ।
ತಮ್ಮಕಾವನು ನಿಗಮರಾಶಿಯ
ಕರ್ಮದುದ್ಧಾರಕನು ನಾಕಜ
ಬೊಮ್ಮಮುಖ್ಯರಿಗಧಿಕನಾಹರಿ ಯೆಂದು ನೆನೆದಿಹುದು ॥ ೨೬

ಮಗನ ಮಾತಿಗೆ ಬೆಗಡುಗೊಂಡನು
ಸೊಗಸ ಬೇಡೆಲೆ ತಂದೆ ಹರಿಯನು
ಜಗಗಳಂತರ್ಯಾಮಿ ಯಾತನು ಯಿಲ್ಲದೊಂದಿಲ್ಲ ।
ಜಗದ ಜೀವರ ದೇವನಾಹರಿ

ಜಗದ ಜಾಣರು ಬಲ್ಲರಾತನ
ಬಗೆಯುದಾತನು ದುಷ್ಟಜೀವಪ್ರಕರ ಕೇಳೆಂದ ॥ ೩೭

ಮಗನನ್ನು ಸಂಹರಿಸಲು ನಾನಾವಿಧೋಪಾಯ

ಎನಲು ಬೆದಱಿದನಸುರ ತನುಜನೆ
ಜನಿಸಿದನು ಹಗೆಯಾಗಿ ಯೊಗಳು
ಮನಕೆ ಭಯ ಹಿರಿದಾಗೆ ಪುತ್ರಗೆ ಘಾತಕವ್ರಜವ ।
ದನುಜ ಮಾಡಲು ತೊಡಗಿ ನಾನಾ
ಘನತರದ ಘಾತಕವ ಮಾಡಿಸೆ
ಜನಪ ಕೇಳೈ ಯೊಂದುಪಾಯದಿ ನೋಯಿಸಲು ಶಿಶುವ ॥ ೩೮

ಏಸು ಪರಿಯಲಿ ಘಾಸಿಮಾಡಿದೊ
ಡೈಸುವನು ಹರಿ ಸೂಸಿ ಬಿಸುಟನು
ವಾಸುದೇವನ ನಾಮ ಕಾಯಿತು ವೈಷ್ಣವೋತ್ತಮನ ।
ಆಸುರದ ಕರಿ ಕೈಯ್ಯಸಿಕ್ಕದು
ಭಾಸುರದ ಜಲ ಮುಳುಗಲೀಯದು
ಕೇಶವನ ಸಿರಿನಾಮ ಕಾಯಿತು ದುಃಖದುನ್ನತಿಯ ॥ ೩೯

ಹೂಳಿದರೆ ಭೂ ನುಂಗಲೊಲ್ಲದು
ಕಾಲಕೂಟಗಳಂಜಿ ಕೊಲ್ಲವು
ಕಾಳಕಿಚ್ಚು ಱಿಮುಟ್ಟಲಮ್ಮದು ವುರಗ ವಿಷಗೊಳದು ।
ಮೇಲೆ ಬೆಟ್ಟವ ಕಟ್ಟಿ ಹಾಕಲು
ಜಾಳಿಸದು ಹುಲುರೋಮ ವೈಯ್ಯಲ
ದೇಟಿಗೆಯ ಬಱಸಿಡಿಲು ಹೊಡೆಯಲಿಕುಗುರು ಕಂಪಿಸದು ॥ ೪೦

ಇಂತು ನಾನಾಪರಿ ಯುಪದ್ರವ
ಕಂತುಪಿತನಾ ಸ್ಮರಣೆ ಕಾಯಿತು
ಸಂತತ ಪ್ರಹ್ಲಾದದೇವನನರಸ ಕೇಳೆಂದ ।
ಚಿಂತಿಸುತ ಕಶ್ಯಪನ ತನಯನ

ದೆಂತು ಮಾಡುವೆ ನಿಮಗೆ ವಧೆ ಯೆನು
ತಂತರಿಕ್ಷವ ನೋಡಿ ಶುಕ್ರನ ಕರೆದನಾಕ್ಷಣಕೆ ॥ ೪೧
ಬಂದು ಭೃಗುವೇನೆನಲು ರಾಕ್ಷಸ
ನೆಂದನೆಲೆ ಗುರುತನಯ ಮರಣಕ್ಕ
ದೊಂದು ಹೋಮವ ಮಾಡಿ ಕೊಡುವುದು ಮಗನು ಸಾಯಲಿಕೆ।
ಹಿಂದು ಗಳೆಯದಿರಾಭಿಚಾರದಿ[1]
ಮಂದಮತಿಯನು ಕೊಂದು ಕಳೆಯನ
ಲಂದು ಶಿಷ್ಯರ ಕೊಟ್ಟನಿಬ್ಬರ ಶುಕ್ರ ಹರುಷದಲಿ ॥ ೪೨

ಮಗನ ಮರಣಕ್ಕಾಗಿ ಹೋಮವನ್ನು ಮಾಡುವಿಕೆ

ಬಂತ್ರಿಕ ಹೋಮವ ಮಾಡಲಾಗಳು
ತಲೆಗಳೆರಡಱ[2]ತೋಳ್ಗಳಾಱಱ
ನೆಲೆಯೊಳಾಗಲು ಕಾಲ್ಗಳೈದಱ ಕೃತ್ಯೆ ಪೊಱಮಡಲು[3] ।
ಕಳವಳಿಕೆ ಮಿಗೆ ತಂದು ಕಂದನ
ಕೊಲಲು ಕೆಡಹಿದ ಕುಱಿಯ ಚಂದದಿ
ತಲೆಯ ಕಾಲೊಳಗಿಕ್ಕಿ ಕೈಯ್ಯನು ಬಿಗಿದು ಕೆಡಹಿರಲು ॥ ೪೩
ಪರಮಭಾಗವತೋತ್ತಮನ ನರ
ಹರಿಯ ನಾಮ ಸ್ಮರಣೆ ಕಾಯ್ದುದು
ಶಿರವನಾಗಲು ವಜ್ರಪಂಜರದಂತೆ ಹರಿನಾಮ।
ವರಕುಮಾರೋತ್ತಮನು ನೆನೆದನು
ಮಱೆದಿರದೆ ತಾ ನಾಮಸುಧೆಯನು
ಹರಿ ಹರಿಯೆ ಗೋವಿಂದ ದೇಶಿಗರೊಡೆಯ ನೀನೆನುತ ॥ ೪೪
ಮರಣ ಬಂದಿದೆ ಹರಿಯೆ ತನ್ನಯ
ಹರಣ ನಿನ್ನಾಧೀನವೀಗಳು
ಹರಿಯೆ ನಿನ್ನಯ ನಾಮ ಬಾಯಿಗೆ ಬರಲಿಕಂಜುವೆನೆ।

1ದೆಯಾಭಿಚಾರದಿ ಗ ಘ. ಜ 2ತಲೆಗಳೆಂಟಱ ಕ,ಖ,
3ಚಲಿಪ ಕಾಲೈದಱ ಕುಮೂರ್ತಿಯ ಕೃತ್ತಿ ಪೊಱಪುಡಲು, ಗಘ.ಜ.

ನಿರುತ ಭೂತವ್ರಾತಕೋಟಿಯು
ಕೊಱಗಿ ಕೊಂಕಿದೊಡಲ್ಲ ಭಕ್ತನು
ಪರಮಕರುಣಾಸಿಂಧು ಯೆನುತಲಿ ನೆನೆವನನವರತ ॥ ೪೫

ನಾರಸಿಂಹನೆ ದಿವ್ಯಸಿಂಹನೆ
ಸಾಱಿದರ ಸಂಸಾರದುಃಖದ
ಬೇಱ ಕೀಳುವ ನಿನಗೆ ಯಂತ್ರದ ಮಂತ್ರತಂತ್ರಗಳು ।
ಹೋರಲಾಪವೆ ನಿನ್ನ ನಾಮಕೆ
ಧೀರನಧ್ಭುತನೀಮಹಾಬಲ
ಭೂರಿಭೂತದ ಯಂತ್ರಭಂಜಕ ನೋಡು ನೀನಿದನು ॥ ೪೬

ಓಯೆನಲು ಗೋವಿಂದ ಕೇಶವ
ನಾಯೆನಲು ನರಹರಿ ಜನಾರ್ದನ
ಮಾಯೆನಲು ಮಧುಸೂದನಾಯುತಿವಿಕ್ರಮಾಯೆನಲು ।
ಶೀಯೆನಲು ಶ್ರೀವಿಷ್ಣು ಜಿಷ್ಣು ವೆ
ವಾಯೆನಲು ವಸುದೇವನಂದನ
ಯಾಯೆನಲು ಯಾದವಕುಲೋತ್ತಮ ರಕ್ಷಿಸುವುದೆಂದ ॥ ೪೭

ಎನಲು ಹೂಂಕರಿಸಿತ್ತು ಕೃತ್ಯೆಯು
ತನಗೆ ಬೇಡಿತು ತುತ್ತನಾಕ್ಷಣ
ಕನಲಿ ಶಂಡಾಮರ್ಕರಿಬ್ಬರು ಬೇಡೆಯುವರಾಗ ।
ದನುಜಸುತನನು ಕೊಡಲು ಕೋಪದಿ
ಯನಿಮಿಷರು ಬೆದಱಲಿಕೆ ನಿಂದುಱೆ
ತೊನೆದು ಕತ್ತಿಯ ತಿರುಹುತಿರಲಿಕೆ ಸುತನ ನುಂಗೆನಲು ॥ ೪೮

ಅದನು ವನಿಮಿಷವೃಂದ ಕಂಡಾ
ಮೊದದಿ ಹರಿಯ ಸ್ಮರಣೆಯಿರಲಿಕೆ
ವಿಧಿವಿಧಾತ್ರರು ಕೊಲಲು ನೆರೆಯರು ಮಿಕ್ಕ ಭೂತಗಳು ।

ಹದನವಾವುದು ನಾರಸಿಂಹನ
ವಿದಿತದಲಿ ಬೆಚ್ಚಿ ಗದಾಯುಷ
ವಿದಿತಕಂಜಿಕೆ ಯುಂಟೆ ಭುವನದೊಳರಸ ಕೇಳೆಂದ ॥ ೪೯

ಮುನಿಗಳನಲಿಕೆ ನೋಡಿತಾಗಳು
ವನಜನೇತ್ರನ ನಾಮಭಜಕನ
ತನಗೆ ನುಂಗಲು ಶಕ್ಯವಲ್ಲದೆ ಶಂಡಮರ್ಕರನು ।
ಕನಲಿ ಮಿಗೆ ಮುಳಿದೊಗೆಯೆ ಮುನಿಗಳು
ತನುಜಮಾರಣಹೋಮ ತಮ್ಮನ
ನನುಕರಿಸಿ ಬಯಲಾಗಿ ಹೋದರು ಕೃತ್ಯೆಯೊಡಗೂಡಿ ॥ ೫೦

ಯಾವಉಪಾಯದಿಂದೂ ಸಾಯದೇ ಯಿರಲು ಸಮುದ್ರದಲ್ಲಿ ಹಾಕುವಿಕೆ

ನಿಲುಕಲಾಪರೆ ಭೂತಗೀತದ
ಬಳಗವೆನುತಿರೆ ಸುರರು ಹಿರಣಕ
ಕಳವಳಿಸಿ ಪ್ರಹ್ಲಾದದೇವನ ನೊಯ್ದು ಪಶ್ಚಿಮದ ।
ಜಲಧಿರಾಶಿಯೊಳಿಕ್ಕಿ ಬೆಟ್ಟವ
ನಿಲಿಸಿದನು ನೀರೊಳಗೆ ಬಾಲಕ
ತಲೆಯ ತಾ ಚೋಟ್ಟಕ್ಕಿ ನೆನೆದನು ಭಕ್ತವತ್ಸಲನ ॥ ೫೧

ಆಗಳಾರವಿ ನೋಡಲಾರದೆ
ಬೇಗದಲಿ ಮೆಱೆಗೊಂಡ ಮೇರುವ
ನೀಗಳಾಯಿತೆ ತನ್ನ ಸಂಧ್ಯಾವಂದನೆಗೆ ಹಾನಿ ।
ಸಾಗರದೊಳದ್ದಿದನು ಜನಕನು
ಮೇಗೆ ಬೆಟ್ಟವನಿಕ್ಕಿ ಹೋದನು
ಲಾಗಿ ಮಷ್ಟಾತ್ಮ ರಾಕ್ಷಸನೆನುತ ಚಿಂತಿಸಿದ ॥ ೫೨

ಕಾಯಲಾಪವರುಂಟೆ ತನ್ನಯ
ನ್ಯಾಯಭೂಸುರಕರ್ಮವೀಗಲು
ಬೀಯವಾಯಿತೆ ದೇವಬ್ರಹ್ಮನೆ ಸಂಜೆ ತನಗೆನುತ।

ಬಾಯು ಬಿಡುತವೆ ನಾರಸಿಂಹನ
ಧ್ಯಾನವಮಾಡುತ ನೆನೆದನಾಗಲು
ವಾಯುವಾಹನ ದಿವ್ಯಮಂತ್ರವ ಹಿರಣ್ಯಕಾತ್ಮಜನು ॥ ೫೩

ವರ ನಮೋ ಬ್ರಹ್ಮಣ್ಯದೇವನೆ
ಪರಮಜೀವನ ಗೋವು ದ್ವಿಜರಿಗೆ
ಸರಸಿಜಾಕ್ಷನೆ ಧರೆಯ ಪಾಲಕ ಕೃಷ್ಣ ಗತಿ ಯೆನುತ ।
ವರಯಶೋದಾತನಯ ನೀನೇ
ಹರಣವನು ಕಾಯಲು ಸಮರ್ಥನು
ನಿರುತ ವೇದಾತೀತ ಯೂತ್ಮಾನಿ ರಾಮ ಕೇಳೆಂದ ॥ ೫೪

ಎಂದೊಡಾಕ್ಷಣ ಬೆಟ್ಟ ಖಂಡಿಸಿ
ಮಂದಿ ನೋಡಲು ಮಾಯವಾಯಿತು
ದಂದುಗದಿ ಕಡಲಿಂದ ಹೊರಬಿಯಿಕೆ ಸಾರ್ದು ಬೇಗದಲಿ ।
ಬಂದ ವರಪ್ರಹ್ಲಾದದೇವನ
ದಂದು ಮೆಲ್ಲನೆ ತನ್ನ ಸಂಧ್ಯಾ
ವಂದನೆಯ ನೆಱೆ ಮಾಡಿ ದೇವನ ನೆನೆಯುತಡಿಯಿಟ್ಟ ॥ ೫೫

ಕಾಲದಲಿ ಮಾಡಿದರೆ ಕರ್ಮವ
ದೆತ್ತೀಗೆಯ ಸತ್ಕರ್ಮಸಿದ್ಧಿಯು
ಮೇಲೆ ಕರ್ಮವ ತಾನಕಾಲದ ತಲಹಿನಲಿ ಮಾಡೆ ।
ಕೀಳು ಫಲವಹುದರಸ ಸಂಧ್ಯಾ
ಕಾಲ ತಪ್ಪಿದ ಸಂಜೆ ಸ್ತ್ರೀಯಳ
ಕಾಲಿಗೆಱಗಿದ ಪರಿಯ ಫಲವಹುದರಸ ಕೇಳೆಂದ ॥ ೫೬

ಅಂತು ಕಾರಣವಾತ ಮಾಡಿದ
ನಂತರಿಸದಾಸಂಜೆ ಕರ್ಮವ
ನಂತದಕೆ ಫಲವಾಯ್ತು ಸಂಧ್ಯಾಕಾಲ ಮೀಱಿದಿರೆ ।

ಚಿಂತಿಸದೆ ತ್ರೈಲೋಕ್ಯವಿಜಯದ
ಸಂತತಿಯ ನೆಱೆ ಮೆಚ್ಚಿ ಸತ್ವಕೆ
ಕಂತುಪಿತ ಕರುಣಿಸಿದನಾತಗೆ ನಿತ್ಯವಿಜಯವನು ॥ ೫೭

ಸಮುದ್ರದಿಂದೆದ್ದು ರಾಜಗೃಹಕ್ಕೆ ಬರುವಿಕೆ.

ಇಟ್ಟ ದ್ವಾದಶನಾಮ ವೈಯ್ಯಲು
ತೊಟ್ಟನಾ ಯಜ್ಞೋಪವೀತವ
ಬೊಟ್ಟನಲಿ ಕುಶೆ ಯಿಱುಕಿ ಬಂದನು ರಾಜಮಂದಿರಕೆ ।
ಕಟ್ಟಿಕೊಂಡನು ತಾನು ತುಲಸಿಯ
ನಿಷ್ಠೆಯಲಿ ತಾ ಹರಿಯ ನಾಮದ
ದಟ್ಟಣೆಯ ಬಿಡದಾಗ ನೆನೆಯುತ ರಾಜಬೀದಿಯಲಿ ॥ ೫೮

ಕಂಡ ಪಾತಕರಾಶಿ ಬೇವುದು
ದಿಂಡುಗೆಡುವುದು ಸಾಧುನಿಕರವು
ತಂಡ ತಂಡದ ಪತಿತರೆಲ್ಲರ ದೋಷ ಹಾಱಿದವು ।
ಕಂಡರಾತನ ಗೆಳೆಯರೆಲ್ಲರು
ಚಂಡಿ ಮಾಡಿದರಾತನನು ತಾ
ವಂಡಲೆದು ನಿಮ್ಮ ಯ್ಯಮತವನು ಮಾಡು ನೀನೆಂದು ॥ ೫೯

ಎಂದೊಡಾಪ್ರಹ್ಲಾದದೇವನು
ತಂದೆಯರ ಮತವಲ್ಲ ತಮಗದು
ನಿಂದಿತವು ಗೋವಿಂದನಾಮಕೆ ತಮ್ಮ ಮತವೆಂದ ।
ಇಂದಿರಾಪತಿ ದೂತನನು ನೀವ್
ತಂದೆಯೆಂಬರೆ ನಿಮಗೆ ತಾನರ
ವಿಂದಲೋಚನ ಪಕ್ಷವಾದರೆ ನುಡಿರಿ ತನ್ನೊಳಗೆ ॥ ೬೦

ಅಲ್ಲದಿದ್ದೊಡೆ ಸುಮ್ಮನಿರಿ ನೀ
ವಲ್ಲ ನಮ್ಮಯ ಮಾತ ಕೇಳೆಯ

ಫುಲ್ಲನಾಭನ ಚರಣಕಾನತರಾಗಿ ನೀವೆಂದ ।
ಮೆಲ್ಲಮೆಲ್ಲನೆ ಸರಿದರಥಮರು
ಫುಲ್ಲನಾಭನ ಭಕ್ತಿಲೋಲುಪ
ದಲ್ಲಿ ಯಿದ್ದರು ತತ್ತ್ವಬೋಧೆಯ ಘನವ ಕೇಳ್ದರು ॥ ೬೧

ಹರಿಯೇ ತನಗೆ ಬಂಧುವೆಂಬ ಪ್ರಹ್ಲಾದನ ವಚನ

ಹರಿಯೆ ತಮ್ಮಯ ಯಾತ್ಮಬಂಧುವೆ
ಪರಮಜೀವವಿದೆಲ್ಲ ಲೋಕದ
ಹರಣವಾತನು ಸರ್ವಜೀವರ ಹೊರೆವ ತನ್ನೊಡೆಯ ॥ ೬೨

ಆತನನು ಮಱೆದವರು ಪಾಪದ
ಖ್ಯಾತಿ ತಮಸಿಗೆ ಕೆಡುವರಲ್ಲದೆ
ಭೂತಳದ ಮೇಲುಂಟೆ ಯುತ್ತಮಜನ್ಮ ಹರಿಪದವ ।
ನೋತು ಮಱೆಯದೆ ವೇದಶಾಸ್ತ್ರದ
ನೀತಿಯಲಿ ನಡೆವವರದಾರೀ
ಭೂತಳದ ಮೇಲುಂಟೆ ಯೆನಲಿಕೆ ಯಾತನಿಂತೆಂದ ॥ ೬೩

ಸುರರು ಧರ್ಮಂಗಳಲಿ ನಡೆವರು
ಸುರರ ಧರ್ಮದೊಳರ್ಥವಾದುದ
ನಿರತ ನಡೆವರು ಋಷಿಜನಂಗಳು ವವರದರ್ಥವನು ।
ಧರಣಿಯಲಿ ವಿಪ್ರೋತ್ತಮರು ತಾ
ವುರವಣಿಸಿ ತಾವ್ ನಡೆಯುತಿರ್ಪರು
ಪರಮ ವೇದಪುರಾಣಧರ್ಮದಿ ನಡೆವರವರೆಂದ ॥ ೬೪

ಎಂದು ತತ್ವಜ್ಞಾನವೆಲ್ಲವ
ನಂದು ವರಪ್ರಹ್ಲಾದ ತನ್ನಯ
ತಂದೆಗಹಿತಂಗಱುಹಿ ನೆನೆದನು ನಡೆದನರಮನೆಗೆ ।

ಹರಿಯನ್ನು ಪ್ರಹ್ಲಾದನು ಸ್ತುತಿಸುತ್ತಾ ಬರುವಿಕೆ.

ನಂದನಂದನ ಯಿಂದಿರಾಪತಿ
ತಂದೆ ಬ್ರಹ್ಮನ ಸರ್ವನಾಕಜ
ವೃಂದರಕ್ಷಕ ವರನೃಕೇಸರಿ ಭಕ್ತಸುರಧೇನು ॥ ೬೫
ಇಂದು ತನ್ನನು ತಂದೆ ಕೊಲುವನು
ಮಂದರೋದ್ಧರ ಕಾವುದೆನುತಲಿ
ಬಂದು ಕಂಡನು ತನ್ನ ಜನಕನ ಕಡೆಯು ಸಂಜೆಯಲಿ ।
ಅಂದು ಕುಣಿಯುತ ಸಕಲಶಿಷ್ಯರ
ಮುಂದೆ ನೃತ್ಯಂಗಳಲಿ ಪಾಡುತ
ಮುಂದೆ ವೈಷ್ಣವಮಂದಿ ಕೂಡಿಯೆ ಹರುಷದುಬ್ಬಿನಲಿ ॥ ೬೬
ಎಳೆಯ ತುಳಸಿಯ ಮಾಲೆ ಕೊರಳಲಿ
ನಳಿನನಾಭನ ನಾಮ ಬಾಯಲಿ
ನಲಿದು ಹರಿ ಹರಿ ಯೆನುತ ಹರುಷದಿ ನೃತ್ಯವಾಡುತಲಿ ।
ಗೆಳೆಯರೆಲ್ಲರ ಕೂಡೆ ಯೋಡುತ
ವೊಲಿದು ನಾರಾಯಣನ ನಾಮದ
ಉಲುಹ ಮಾಡುತ ಬರಲಿಕಿದಿರಲಿ ಕಂಡ ಜೀವರಿಗೆ ॥ ೬೭
ಪಾಪ ಹರಿಯಲಿಕಾಯ್ತು ಲೋಕದ
ತಾಪಸರ ವರಬಂಧು ಬರಲಿಕೆ
ಕೋಪಿಸಲು ತಮ್ಮಯ್ಯನೋಲಗದಖಿಳದಿತಿಸುತರು ।
ಆಪುರಂದರವೈರಿಗಾಗಲು
ಭೂಪನೆನುತ ನಡೆತಂದು ತಂದೆಗೆ
ಪಾಪರಹಿತನು ಗೋತ್ರನಾಮದಿ ಬಂದು ಪೊಡವಟ್ಟ ॥ ೬೮
ಎಱಗಲಿಕೆ ಪಿತನಿತ್ತ ಪೀಠವ
ನೆಱೆಕೆಯಲು ಕುಳ್ಳಿರುತ ಹರಿ ಹರಿ
ಶರಣೆನಲು ಕಿವಿಯೊಳಗೆ ಕಾಸಿದ ತೈಲ ಹೊಕ್ಕಂತೆ [1] ।

1 ಸೀಸಹೊಯ್ದಂತೆ, ಗ. ಘ. ಙ.

ಹರಿಯ ನೆನೆಯಬೇಡೆಂದು ತಂದೆಯ ಅಪ್ಪಣೆ.

ಜುರುಜುರಿಸಲೆಲೆ ಕಂದ ತನ್ನಯ
ಶಿರಕಸಹ್ಯವ ನೆಸೆವರೇ ನಿಂಗೆ
ಹರಿ ಯೆನಗೆ ಛಲದಂಕನಾತನ ನೆನೆಯಬೇಡೆನಲು ॥ ೧೯

ಮಾಣದಾತನ ನೀನು ನೆನೆದೊಡೆ
ಗೋಣ ಕೊಯ್ದಪೆನೆನ್ನ ನೀಗಲು
ತ್ರಾಣದಲಿ ನೀ ನೀಗುವೆಂಬೀ ಮಾತ ನೆನೆಯದಿರು ।
ಮಾಣು ನೀನೆಂದೆನಲು ತಂದೆಗೆ
ಜಾಣಿನಲಿ ಪ್ರಹ್ಲಾದ ನುಡಿದನು
ಗೋಣ ಕೊಯ್ದರೆ ನೆನೆಯಲಾಹರಿಯೆನ್ನ ಪ್ರಾಣಿಸುವ ॥ ೨೦

ನೀವು ನೆನೆಯದೆ ಹರಿಯನೀಗಳು
ಸಾವಿಗಂಜುವಿರೆನಲಿಕನಿಮಿಷ
ಭಾವದಲಿ ನೋಡಿದನು ಕಂದನ ದೈತ್ಯ ಕೋಪಿಸುತ ।

ಹರಿಯ ವಿಷಯದಲ್ಲಿ ತಂದೆ ಮಕ್ಕಳ ವಿವಾದ.

ದೈವ ವುಂಟೇ ಮತ್ತೆ ತಾನಿರ
ದೈವ ತಾನೇ ಯೆಂಬ ಶ್ರುತಿಗಳು
ತಾವು ಹಲವುಂಟೇಗಲನ್ಯಥ ದೈವವಿಲ್ಲೆಂದ ॥ ೨೧

ವೇದ ತಾನೇ ದೈವವೆಂದರೆ
ಮೇದಿನಿಯು ಜಡಜೀವರೆಲ್ಲರು
ವೇದ ಹೊಗಳುವ ದೈವವಾಗುವರಿಹಪರಂಗಳಲಿ ।
ವೇದ ಸಾಕ್ಷಾದ್ಬ್ರಹ್ಮವೆಂಬೊಡೆ
ಹಾದಿ ಯಿಹುದೇ ಯಿಹಪರತ್ರಕೆ
ಭೇದವಱುಹುವ ಹಲವು ಶ್ರುತಿಗಳವುಂಟು ತತ್ತ್ವದಲಿ ॥ ೨೨

ಕೇಳದೈ ಶ್ರುತಿವಾಕ್ಯವಾದುದ
ಜಾಳು ಜೀವರು ಹಲರು ಹರಿಯಲಿ
ಕೀಳುಗಳು ಬ್ರಹ್ಮಾದಿದೇವಪರಂಬ ಶ್ರುತಿಕೋಟಿ ।

ಕೀಳಗಾಕಳು ತೊರೆವುದಲ್ಲದೆ
ಮೇಲು ಬೊಂಬಿನಲಾವ ಬಿಡಿಯಕೆ
ಲಾಲಿಸುತವಾಗದಕೆ ತೊರೆವುದೆ ಯೆಂಬ ನೀತಿಯನು ॥ ೨೩
ಕೇಳದೇಕಕಟಕಟ ನೀ ಮರು
ಳೋಳಿಯಲಿ ಮೊದಲಿಗನದಾದರೆ
ಕೀಳುಗಂಡಿರಬೇಕು ಹರಿಯಲಿ ಸರ್ವಕಾಲದಲಿ ।
ಲಾಲಿಸುವೊಡದ್ವೈತಪಕ್ಷಕೆ [1]
ಕಾಳು ನಿಮ್ಮಯ ಕರ್ಮಕಾಂಡವು
ಮೇಲೆ ನೀನಿದನೊದೆದು ಕಳೆಯೈ ಸರ್ವಗತ ಹರಿಯು ॥ ೨೪
ಭೂಮಿಯೊಳಗಾಕಾಶವಾಪ
ಸ್ತೋಮದಲಿ ಶಿಖಿಯಲ್ಲಿ ಯನಿಲನ
ಧಾಮದಲಿ ಗಿರಿಯಲ್ಲಿ ಕಾಷ್ಟದಲಿಹನು ಹರಿ ಯೆಂದು ।
ನೇಮಿಸಲು ಹರಿಭಕ್ತರಂದದಿ
ಪ್ರೇಮಪುಳಕದಿ ಹರಿಯ ನಂಬದೆ
ಕಾಮಲೋಭದ್ವೇಷಮತ್ಸರದಿಂದ ತುಂಬಿಹುದು ॥ ೨೫

ಕೋಪದಿಂದ ಹರಿಯನ್ನು ತೋರಿಸೆಂದು ತಂದೆಯ ವಚನ.

ಎಂಬವನು ತಾ ದೈತ್ಯನೆಂದೊಡೆ
ತುಂಬಿ ತಾ ಕೆಕ್ಕರಿಸಿ ನೋಡಿದ
ತಿಂಬೆನೀಗಳೆ ನಿನ್ನ ಬಕುತಿಯು ವಾದ ಬೇಡೆನುತ ।
ಅಂಬುಜಾಕ್ಷನ ನನ್ನ ಮುಂದಣ
ಕಂಭಮಧ್ಯದಿ ತೋಱಿಸಾದೊಡೆ
ನಂಬಿದವ ನೀನೆನಲು ವಿಶ್ವಕದಂಬರಕ್ಷಕನ ॥ ೨೬
ತೋಱುವೆನು ತಾನಿನ್ನು ಹಿಂದಕೆ
ಸಾರು ನೀತನ್ನಾಳ್ದ ದೇವನ
ಮಾರಪಿತ ಬಾ ಯೆನಲು ಹಬ್ಬಿದನಾಗ ಕಂಭದಲಿ ।

1ಲಾಲಿಸುವರಾದ್ವೈತ್ಯಪಕ್ಷವು, ಖ.

ತೋಱಿಸೈ ಕರುಣಾಳುತನವೆನು
ಮಾಱುಗೊಳ್ಳೈ ತನ್ನನೀಗಲು
ತೋಱಿಸದೆ ನೀನಿದ್ದ ಡಾದೊಡೆ ಭಕ್ತ ತಾನಲ್ಲ ॥ ೭೭

ಎಂದು ತಂದೆಗೆ ನುಡಿದನಾಗಲೆ
ಯಿಂದಿರಾಪತಿ ವರನೃಕೇಸರಿ
ಯೆಂದು ಕರೆ ಕರೆ ಯೆನಲು ಕರೆಯೆನು ನಿನ್ನವನನೆಂದ ।
ಇಂದು ಕರೆವೆನು ನನ್ನ ಯಾಳ್ದನ
ತಂದೆ ಕೇಳೈ ನೀನು ತಡೆ ತಾ
ಛಂದವನು ಕೇಳನುತ ಪಿತಗೆಯು ನುಡಿಯೆ ಘುಡಿಘುಡಿಸಿ ॥ ೭೮

ಹೋ ಯೆನುತ ಹಲ್ಕಡಿದು ರಾಕ್ಷಸ
ಕೈಯ್ಯನೆತ್ತಿಯೆ ಹರಿದು ಕಂಭವ
ಹೊಯ್ದು ಕರೆಯೋ ನಿನ್ನವನನೀ ಕಂಭಮಧ್ಯದಲಿ ।
ಹೊಯ್ಯೆನುತ ವರವೈಷ್ಣವೋತ್ತಮ
ಜೀಯ ಬಾರೈ ಸರ್ವಲೋಕದ
ಪ್ರಿಯ ಬಾರೈ ಯೆನಲು ದೈತ್ಯನು ನೋಡುತಿಂತೆಂದ ॥ ೭೯

ಎಲವೊ ತರುವಲಿ ತರಳ ಮತಿಯಲಿ [1]
ಬಲಿದೆ ನೀವಾಗ್ವಾದಿಂದವೆ
ತಲೆಯ ಕಾವನ ನೀನು ತೋಱಿದರೀಜಗತ್ತಿನಲಿ ।
ಇಳಗೆ ನೀನೇ ಗುರುವು ಯೆಂಬೆನು
ಬಳಿಕ ವೈಷ್ಣವನೆಂಬೆ ನಿನ್ನನು
ವುಲುಕದೀ ಕಂಭದಲಿ ತೋಱಿಸು ನಿನ್ನವನನೆಂದ ॥ ೮೦

ನೂಕಿದನದೋಲಗದ ಮಧ್ಯದೊ
ಳಾಕುಮಾರನ ಕೋಪದಿಂದವೆ
ವ್ಯಾಕುಲಾಂತಃಕರಣವಾದುದು ಸರ್ವಸುರನಿಕರ ।

---

1 ತರಳತನದಲಿ, ಗ. ಘ. ಜ.

ಹೋ ಕಳಕಳವಿದೇತಕೀಗೆನು
ತಾಕುಮಾರಕ ಕರವನೆತ್ತಿಯೆ
ಯೇಕಕಟ ತಾ ಕರೆದ ಬಚಿಕವೆ ಹರಿಯು ಬರದಿಹನು ॥ ೮೧

ಕರೆವೆನೇ ತಾ ನೆನಲು ಬಗುಳದೆ
ಕರೆ ಯೆನುತ ಕಿವಿ ಚಪ್ಪಿಯೊಯ್ಯಲು
ವರಕುಮಾರಕನಳುತ ಕರೆದನು ಜಗದ ವಲ್ಲಭನ ।
ವರಹರೂಪನೆ ಜೀಯ ಕರುಣಾ
ಕರನೆ ಹರಿ ಹರಿ ಭಕ್ತವತ್ಸಲ
ತರುವಲಿಯ ಪತಿಕರಿಸಿ ಕೊಂಬುದು ದೇವ ನೀನೆನುತ ॥ ೮೨

ಮುರಳಿಯಾಚಮನೀಯ ಮಾಡಿಯೆ
ವರಯಮಾದ್ಯಷ್ಟಾಂಗಯೋಗದಿ
ನಿರತನಾದನು ವೀಬೃಹಸ್ಪತಿ ಶ್ರುತಿಯ ಕರ್ಮದಲಿ ।
ವರಯಶೋದಾನಂದನನ ತಾ
ಸುರಹೃದಯಪರಿಯಂಕಪೀಠನ
ವರಕುಮಾರನು ಮನಕೆ ಗೋಚರವಾಗಿ ಕರೆಯಲಿಕೆ ॥ ೮೩

ಹುಂಕೃತಿಯು ತಾ ಹುಟ್ಟೆ ನೆಲನೆಲ
ದಾಕೃತಿಯ ತವೆ ನೆಲಸಿ ಮೊಳೆಯಲು
ಯಾಕರಿಸುತಿದೆ ಕೇಳು ದೈತ್ಯರ ಮಾರಿದೇವತೆಯು ।
ಲೋಕರಕ್ಷಕ ಮಂತ್ರಕಾರಣ
ನಾಕಜಾಧಿಪಮುಖ್ಯಸುರರಿಗೆ
ತೀಕರೆಯ ಮಾಡಿದರು ನುಂಗುವ ಮೃತ್ಯು ಕೇಳನಲು ॥ ೮೪

ಇದಕೆ ತಾನಂಜುವೆನೆ ಮೊಳೆದರೆ
ತಿದಿಯು ನುಚ್ಚುವೆ ನಿನ್ನ ದೇವರ
ಹೃದಯಕಂಪನವೇಕೆ ಬಗುಳದಿರೀಗ ತೋಳಿನಲು ।

ಸದರವಾದೊಡೆ ನಿನ್ನ ಮಾತಿಗೆ
ಹದನ ಬಲ್ಲೆನು ತಮ್ಮ ಕೇಳೋ
ಯಿದಿರದಾವನು ಮೂಱುಲೋಕದೊಳನಗೆ ಹೇಳೆನಲು ॥ ೮೫
ಎನಲು ತಾ ಪ್ರಹ್ಲಾದದೇವನು
ಜನಕಗೆಂದನು ಹೊಲ್ಲದೈವವೆ
ನಿನಿತು ನೀನೋಡುವೆನದೆಂದರೆ ಕರವೆನಾನೀಗ ।
ಮನಕೆ ಗೋಚರವಾದ ದೇವನು
ನೆನೆಯಲಿಕೆ ತಾ ಬಪ್ಪನಿನಿತನು[1]
ದನುಜನಿಕರವು ನೀವು ಪೇಳೀತಂಗೆ ಬುದ್ಧಿಯನು ॥ ೮೬
ಎನಗದೇತಱ ಬುದ್ಧಿಯೆಂದೊಡೆ
ತನಯನಾಚಮನೀಯ ಮಾಡಿಯೆ
ನೆನೆವನಾಸಾಕ್ಷಾತು ದೇವನ ನಿತ್ಯವಸ್ತುವನು ।

ಪ್ರಹ್ಲಾದಕೃತಸ್ತುತಿ

ಮನದಿ ಧ್ಯಾನವ ಮಾಡಿ ದೇವನ
ವನಜಚರಣವನಲ್ಲಿ ನೆನೆವುತ
ದನುಜಹರ ಸುರರಕ್ಷ ವೇದಾತೀತ ಬಹುದೆಂದು ॥ ೮೭
ದೇವ ಭಕ್ತರ ಕಾಮಧೇನುವೆ
ದೇವ ಭಕ್ತರ ಕಲ್ಪವೃಕ್ಷವೆ
ದೇವ ಭಕ್ತರ ಭಾಗ್ಯನಿಧಿಯೋ ವೈಷ್ಣವೋತ್ತಮರ ।
ಆವ ಬಲ್ಲವ ನಿನ್ನಮಹಿಮೆಯ
ನಾವ ದೇವರು ನೆನೆಯ ಬಲ್ಲರು
ಜೀವರಾಶಿಯೊಳೊಂದು ಹುಳು ತಾನೇನ ಬಲ್ಲವನು ॥ ೮೮
ಭಾವಶುದ್ಧಿಯೊಳಪ್ಪ ಜೀವರ
ಕಾವದೇವನೆ ತನ್ನ ರಕ್ಷಿಸು
ಗಾವಿಲರೊಳತ್ಯಧಿಕ ತಾನೇ ನಿನ್ನ ನಂಬಿಹೆನು ।

---

[1] ವಿನಯದಲಿ ತಾ ಕರೆದು ತೋಱು ವೆ. ಗ. ಘ.

ದೇವ ನಿನ್ನನು ನಂಬಿದಮರ
ಸ್ತೋಮಕಭಯವನಿತ್ತು ತಮನನು
ದೇವ ಕೊಂದಿರಿ ಮತ್ಸ್ಯರೂಪದಿ ನಿಗಮರಕ್ಷಕನೆ ॥ ೮೯

ದೇವ ದೈತ್ಯರುವಮೃತಮಥನವ
ತಾವು ಮಾಡಿಯೆ ಸುಧೆಯನು ಜನಿಸಲು
ಯಾವಿಬುಧರ ತತಿಗೆಱೆದಮರರ ಮಾಡಿದೈ ನೀನು ।
ದೇವದಲ್ಲಣರೆನಿಪ ದೈತ್ಯರಿ
ಗೋವಿ ಸುರೆಯನದೆಱೆದು ಸೊಕ್ಕಿಸಿ
ಹಾ ವಿಭುವೆ ಕೂರ್ಮಮೂರ್ತಿಯೆ ಸುರರ ರಕ್ಷಿಸಿದೆ ॥ ೯೦

ಬೞಿಕ ಸುರರನು ನಮ್ಮ ಜನಕನ
ಬಳಿಯ ಜನಿಸಿದ ಕಾಡತೊಡಗಲು
ತಲೆಯ ನೀಳಿಯೆ ಬಿಸುಟು ಭೂಮಿಯ ಧರಿಸಿ ರಕ್ಷಿಸಿದೆ ।
ಇಳೆಯ ಕಾದೈ ವರಹರೂಪದಿ
ನಳಿನಸಂಭವಮುಖ್ಯಸುರರಿಗೆ
ಪ್ರಳಯಕಾಲನು ತಮ್ಮ ತಾತನು ತನಗ ಬಲು ಗರವು ॥ ೯೧

ಈತ ತಾನಾಗಿರಲು ತನ್ನಯ
ಭೀತಿಯನು ಬಿಡಿಸಲಿಕೆ ಬಲ್ಲಿದ
ತಾತ ನಿಲ್ಲೈ ನೀನು ತಪ್ಪದೆ ಯೆನಲು ಕಂಭದಲಿ ।
ವಾತ ಪ್ರಳಯದಿ ಬೀಸುವಂದದಿ
ಭೂತನಾಥನ ರೌದ್ರಡಮರು
ಖ್ಯಾತಿ ಕೋಟಿಗಳಂತೆ ಮೊಱಗಲು ರೂಢಿ ಬಿಱಿಯಲಿಕೆ ॥ ೯೨

ಖಳನನು ಭಟರ ನೆರದು ಕೈದುವ
ಕೊಳಲು ರಾಕ್ಷಸ ತಾನು ಝುಮ್ಮನೆ
ಸಲಿಲ ನೋಡಿದನೆದ್ದು ನಿಂದಿದ ಕಂಭ ಮೊಱೆಯಲಿಕೆ ।

ಹುಳಿತಕಂಭವು ತಮ್ಮೆತಾ ಜ
ಕ್ಕಲಿಸಿತೆನುತಲಿ ಬಂದು ತಾ ಕರ
ತಳದೊಳಱಗಿದನಬ್ಧಿ ಕದಡಲು ದೈತ್ಯ ಕಂಭವನು ॥ ೯೩

ಹೊಯ್ದು ಹೊಱವಡು ಬೇಗ ಯಜ್ಞವ
ಸಾಧಿಸುವೆನಿದು ಯೂಪಕಂಭವು
ಯಿಾದುರಾಗ್ರಹವುಳ್ಳ ನಿನ್ನನು ಪಶುವ ಮಾಡುವೆನು ।
ಆದೊಡಹೆ ದೀಕ್ಷಿತನು ತನ್ನಯ
ಕ್ರೋಧಶಿಖಿಗಾಯಿತ್ತು ವೇದಿಕೆ
ಮೇದಿನಿಯೊಳಹ ಪರಿಜನಗಳುದ್ಗಾತೃಹೋತೃಗಳು ॥ ೯೪

ಹಿರಣ್ಯಕಶಿಪುವಿನ ಕೋಪ

ಕ್ರೋಧದಲಿ ಬಂದೆಱಗಿ ದೈತ್ಯ ವಿ
ಷಾದದಲಿ ಘುಡಿಘುಡಿಸಿ ಮೀಸೆಯ
ನಾದುರಾಗ್ರಹಿ ಮುಱಿದು ಕೊಳುತಲಿ ಚೀರಿ ಬೊಬ್ಬಿಡುತ ।
ಆ ದಿತಿಯ ಮಗನೆದ್ದು ತನ್ನನು
ವಾದ ಬಲವನುಕರಿಸಿ ಸಿಂದುದು
ಮೇದಿನೀಕಂಟಕಹಿರಣ್ಯಕ ಕಂಭದಿದಿರಾಗಿ ॥ ೯೫

ಧಗಧಗಿಲು ಭುಗಿಭುಗಿಲು ಛಿಳಯೆಂ
ದೊಗೆದು ಕಿಡಿಗಳು ನೆಗೆಯೆ ಛಿಟಛಿಟಿ
ನೊಗೆದು ಕಬ್ಬೊಗೆ ಸೂಸಿತಾ ಕಿಚ್ಚೊಗೆದುದಾಸಭೆಯು ।
ಬಗೆಯುಡುಗಿತಾ ಸಭೆಯು ರಾಕ್ಷಸ
ರಗಡುತನ ಬೆಂಡೇಳೆ ದಿಕ್ಕಿನ
ದಿಗಿಭ ಘೀಳಿಡೆ ಶರಧಿ ತುಳುಕಲು ಸರ್ವತಾಪಿನಲಿ ॥ ೯೬

ಬೆಗಡು ಬೀಳಲು ಪುಳಕು ಸುಱಿದವು
ಹಗಲು ಕಂಪಿಸೆ ಸೃಷ್ಟಿ ಸರ್ವವು
ಬಗೆದರಗ್ಗದ ಬ್ರಹ್ಮ ರುದ್ರರದಿಂದು ಕಡೆಗಾಲ ।

ಪಗಲಿರುಳಿಗೆನುತಿರಲಿಕಾಕ್ಷಣ
ಕೊಗೆದ ಕಿಚ್ಚಿನ ತೇಜಮಧ್ಯದಿ
ನಿಗಮ ಹೊಗಳುವ ವರ್ಣದಂದದೊಳರಡುಷೋಡಶವ ॥ ೯೭

ನೃಸಿಂಹಾವತಾರ.

ಮಿಗುವ ಕರ್ಣದ ಹೇಮವರ್ಣದ [1]
ತಗಡಿನುಡಿಗೆಯು ಹೇಮಕೊರಳಿನ
ಸೊಗಸು ಮಿಗಲರವಿಂದಲೋಚನ ರೌದ್ರತೇಜದಲಿ ।
ಜಗಕೆ ಬೆಳಗುವ ಸೂರ್ಯಕೋಟಿಯು
ಬಗೆಯುದಾತನ ನಖದ ಕಾಂತಿಯು
ಯೊಗೆದ ಪಾಣಿಯು ಶಂಖಚಕ್ರಗದಾಸಿತೋಮರದ ॥ ೯೮

ದನುಜಮಾರಣಶಾರ್ಙಚಾಪವು
ಘನತರಶ್ರೀವೈಷ್ಣವಾಸ್ತ್ರವು
ವಿನುತ ಬತ್ತೀಸಾಯುಧಂಗಳು ಮೆಱೆವಕರಗಳಲಿ ।
ತೊನೆವ ಶ್ರೀಮೂರ್ತಿಯನು ನರಹರಿ
ದನುಜಗಾಗಳೆ ತೋಱುತಿರಲಾ
ಜನಜಸಿತವಾಯ್ತುರಸ ಕಂಭಸ್ಥಾನದೇವತೆಯು ॥ ೯೯

ನರಸಿಂಹಮೂರ್ತಿಯು ಮೃಗವೆಂದು ಹಿರಣ್ಯಕಶಿಪುವಿನ ಅಪಹಾಸ.

ಪರಿಯ ರೌದ್ರದ ಕೋಪಶಿಖಿಯನು [2]
ವರಹಿರಣ್ಯಕ ಕಂಡು ಬಗೆಯದೆ
ತರಹರಿಸಿ ಬಿಗಿದಿಕ್ಕಿ ತಳುಕನು ಬಿಸುಟು ಕೈದುವನು ।
ಕರವನುದ್ಧತ ನಗುತ ನುಡಿದನು
ಸುರರು ಹೊಗಳುವ ಬೊಮ್ಮ ತನ್ನಯ
ವರಕುಮಾರನು ಸೃಷ್ಟಿಮಾಡಿದ ಮನೆಯ ಕಂಭದಲಿ ॥ ೧೦೦

---

1 ಮಿಗುವ ಕರಗಳ ಪೀತವರ್ಣದ, ಗ. ಘ.

2 ಹರಿಯ ರೌದ್ರಾಟೋಪಕೋಪದಿ, ಗ. ಘ.

ಮಗನು ಮಾಡಿದ ಮೃಗದ ಮೋಡಿಯು
ಝಗೆಯುದೀರವಿಕೋಟಿತೇಜದಿ
ಜಗಕೆ ಸೋಜಿಗವಾಯ್ತು ಬೇಡಿನ್ನೇಕೆ ಪಗರಣವು ।
ನಗುತ ತಂಬುಲ ಸೂಸೆ ನುಡಿದನು
ಮಗನೆ ನಿನ್ನಯ ದೇವನೆಂಬನ
ನಿಗಮವರಿಯುವುದೆಂಬೆ ತನ್ನಯ ಬೆಂಬೆ ಬಲದೊಳಗೆ ॥ ೧೦೧

ಬಲ್ಲರೀಗಳು ಬುಧರೆಲ್ಲರು
ನಿಲ್ಲದೀತನ ನೀನು ಬಣ್ಣಿಪೆ
ಬಲ್ಲನೇ ಹುಲುಮೃಗವನೆನಲಿಕೆ ನುಡಿದ ಪ್ರಹ್ಲಾದ ।
ಇಲ್ಲಿ ಯಿಂದುದಯಿಸಿದ ರೂಪಿದು
ಬಲ್ಲಿದರು ಮಿಗಿಲೆಂಬ ನಿನ್ನಯ
ಯೆಲ್ಲರಾಯುಷಕಿಂದು ಕಡೆ ಯಹುದೀತನುಗುರಿಂದ ॥ ೧೦೨

ಈತನಿದಿರೇ ತಂದೆ ಲೋಕ
ವ್ರಾತ ತಾನಿದಿರಲ್ಲ ನೀನಿರ
ದೇತರತಿಶಯವೆನೆ ಹಿರಣ್ಯಕ ಚೀರಿ ಬೊಬ್ಬಿರಿದ ।

ನರಸಿಂಹ ದೇವರು ಮತ್ತು ಹಿರಣ್ಯಕಶಿಪುಗಳ ಸಂವಾದ

ಭ್ರಾತನನು ನುಂಗೀಗ ಭೂಮಿಯು
ದಾತನೆನಿಸಿದ ವರಹನೆಂಬೀ
ಮಾತ ಮಱೆಯದಿರೀಗ[1] ಕೆಡಹುವೆ ನಿನ್ನ ರಣದೊಳಗೆ ॥ ೧೦೩

ಇಲ್ಲಿ ಸಿಕ್ಕಿದೆ ಯಿನ್ನು ಬಿಡುವೆನೆ
ಬಲ್ಲಿದನು ನೀನೆಂಬ ಸತ್ವವ
ನಿಲ್ಲಿ ತೋಱು ಬೇಗ ಕಳಚುವೆ ನಿನ್ನ ಸತ್ವವನು ।

---

1 ಮಾತನುಱೆಯಿಂದೀಗ, ಗ, ಘ.

ಬಿಲ್ಲು ನಿನಗೇಕೆನುತ ರಾಕ್ಷಸ
ನಲ್ಲಿ ಖಡ್ಗವ ಕೊಂಡು ನಡೆಯಲಿ
ಕೆಲ್ಲರಿದ್ದರು ದೈತ್ಯನಾಯಕರರಸುಬಾಹಯಲಿ ॥ ೧೦೪

ಇದ್ದರಱುವತ್ತಾಱುಕೋಟಿಯು
ದೊಡ್ಡಿಗರು ಮುನ್ನಮೃತಮಥನದ
ಲಿದ್ದವರು ಮತ್ತಲ್ಲಿ ದೇವಾಸುರರ ಕದನದಲಿ ।

ಯುದ್ಧಕ್ಕಾಗಿ ದೈತ್ಯಾಗಮನ

ಇದ್ದವರು ತಾ ವೃತ್ರದೈತ್ಯನ
ಹೊದ್ದಿ ವೋಲಗಿಸಿದ್ದರೀತನ
ಬುದ್ಧಿಯಲೊಡ್ಡೆಯರುಗಳೆಲ್ಲರ ನೀಗ ಬಂದವರು ॥ ೧೦೫

ಕಾಲನೇಮಿಯು ತಾರಕಾಕ್ಷನು
ಮಾಲೆಯಂಥಾಸುರ ಸುಮಾಲಿಯು
ಕಾಲಯವನನೆನಿಸಿದ ಹಿರಣ್ಕಲೋಚನನ ಮನೆಯ ।
ಕಾಲಸುಭಟರು ದೋಣಿದಲೆಗಳ
ತೋಳಖಂಡಿಯ ಜಾಳುವಲೆಗಳ
ವೋಲಿಯೋರಿನದೋರಿವಲೆಗಳಲ್ಲೈದೆ ಕೂಡಿದರು[1] ॥ ೧೦೬

ವೀರರಿದ್ದರು ಸ್ವಾಮಿದ್ರೋಹರು
ನಾರಸಿಂಹನ ಮೇಲೆ ರೌದ್ರಾ
ಕಾರದಲಿ ಮಂಡಿಸಿಮದಾರ್ಭಟ ಘೋರಘೋಷದಲಿ ।
ಆರುತ್ತೈತಂದೈದೆ ದೇವನ
ನೋರಣಿಸಿ ಯಸಿಚಾಪಮಾರ್ಗಣ
ಕೂರಲಗು ಮುಂಕುಂಕು ಗತ್ತಿಯ ಭಟರು ಮೇಳಪಿಸೆ ॥ ೧೦೭

[1] ಮುತ್ತಿದರು, ಗ, ಘ.

ಓರಣದಲೈನೂಱುಕೋಟಿಯು
ಭೇರಿ ಹೊಡೆಯಲು ಸೆಳವೆಸಿಂಧದ
ಧೀರರಱುವತ್ತಾಱುಕೋಟಿಯು ಕಾಳರಕ್ಕಸರು ।
ಧೀರರೆಚ್ಚರು ಶರವನಂಧಾ
ಕಾರ ಕವಿಯಲು ದಿಗಧಿಪಾಲರು
ಮಾರಿಯಾಯ್ತೆಂದೆನಲು ಪಳಚಿತು ನಾರಸಿಂಹನಲಿ ॥ ೧೦೮

ಕೆಳಗೆ ವಾಸುಕಿ ಬಳಲೆ ಯಂಬರ
ದೊಳಗೆ ನಾಕಜರ್ಬೆದೆ ಬದಱಲು
ಕಳವಳಿಸಿ ದಿತಿಸುತನ ಸೇನಾನೀಕವಡಿಗಡಿಗೆ ।
ಉಲಿದು ತಿಂತಿಣಿ[1] ಗೊಂಡು ಸಿಂಹನ
ಮೊಳೆಯ ನರಿಗಳು ಕೆಣಕುವಂದದಿ
ತಲೆಯ ಬರಹವ ತೊಡೆಯ ಪಳಚಿದರಾಗ ಹರಿಯೊಡನೆ ॥ ೧೦೯

ಆಗ ಬಚ್ಚದೆ ದೇವನಾಲಿಸಿ
ಲಾಗಿನಲಿ ಘುಡಿಘುಡಿಸಿ ಮೂಱಿಯುತ
ಬಾಗಿಸುತ ಕಣ್ಡೆಱೆದು ನೋಡಿದ ದೈತ್ಯನಾಯಕರ ।

ದೈತ್ಯರಸಂಹಾರ.

ಬೇಗದಲಿ ಹರಿ ತಂದು ಹಾಱುತ
ಲಾಗಿಸುತ ಬಳಸಿದನು ಪಾದದಿ
ಲಾಗಿನಲಿ ಘಟ್ಟಿಸುತ ಸಜ್ಜನೆ ಸೀಳಿ ತುಱಿದ್ಯೆದೆ ॥ ೧೧೦

ಕೆಲರ ತುಱಿವುತ ಕೆಲರನಂಗೈ
ತಳದಲೊಱಸುತ ಕೆಲರನಂಬರ
ದೊಳಯುಕಾಗಲು ಸೀಳಿ ಬಿಸುಟನು ದೈತ್ಯಬಲದೊಳಗೆ ।

1 ಟೆಂಟಣಿ ಕ, ಖ

ನಲಿದು ದೈತ್ಯರ ಪಡೆಯನೆಲ್ಲವ
ಬಲಿಹರಣ ಮಾಡುತಲು ನೋಡುತ
ಬಲುಹು ಗುಂದದ ರಿಪುಹಿರಣ್ಯಕಶಿಪುವ ನರಹರಿಯು ||

ಎಲವೊ ನಿನ್ನಯ ಬಲವನೆಲ್ಲವ
ತುಱಿದು ಬರಿಗೈವಂನಬರ ನೀ
ನುಱಿದು ನೋಡಾ ಯೆನುತಲಗಲಕೆ ಚರಣಪತಿ ಮಾಡೆ |
ಕೆಲರು ರುಧಿರವ ಕಾಱುತಿರ್ದರು
ಕೆಲರು ಕಾಲನ ಪುರಿಗೆ ಸಂದರು
ಕೆಲರು ಜೀವವನಗುಱುತಿರ್ದರು ದೈತ್ಯಬಲದೊಳಗ || ೧೧೧

ಮಚ್ಚರಿಸಿ ಬಂದವರ ಗಂಟಲ
ನುಚ್ಚುಗುಟ್ಟುತ ಖಳರನೆಲ್ಲರ
ಕೊಚ್ಚಿ ಯೊಂದೆಡೆ ಸಿಕ್ಕಿ ತಳದಲಿ ಬಡಿದು ಜೀವಗಳ |
ನುಚ್ಚಿ ನಂದದಲಾಯ್ತು ತುಱಿಯಲು
ಸಚ್ಚಿದಾನಂದೈಕದೇವನ
ಸಚ್ಚರಿತ್ರವ ಕಂಡು ನಾಕಜರೈದ ಹೊಗೞಿದರು || ೧೧೨

ಅಸುರರೆಲ್ಲರನೊಕ್ಕಲಿಕ್ಕುತ [1]
ಹೊಸಮದೇಭನು ಸೀಳಿ ನಡೆವಂ
ತೆಸಿಗದಾನಾರಾಚಲಗುಡದ ಮಡೆಯು ಸುಱಿಯುತಿರೆ |
ಬಿಸರುಹಾಕ್ಷನು ಕಂಡು ರಾಕ್ಷಸ
ರಸುಗೆಗಂಜದೆ ವರನೃಕೇಸರಿ
ಯಸುರರನು ನಿಃಕ್ಷೇತ್ರಮಾಡಿದನೊಂದುನಿಮಿಷದಲಿ || ೧೧೩

ಮಾಡಲಿಕೆ ನಲವಿಂದ ಸೂರ್ಯನು
ನೋಡಿ ಪಶ್ಚಿಮಗಿರಿಯ ಸಾರಲು
ಕೂಡಿತೈ ಕಮಲಜನ ವರಗಳು ಹಲವುಕಾಲದಲಿ |

1 ನೊತ್ತುತಲ್ಲಿಯ ಕ, ಖ.

ಬಾಡಿದುದು ಸರಸಿರುಹ ಸಂಧ್ಯಾ
ರೂಢಿಯುವತಿಯು ಮದುವೆಯಾಗಲು
ನೋಡಿ ಕೊಟ್ಟರು ಮೌನಿಕರು ಗೋಧೂಳಿಲಗ್ನವನು ‖ ೧೧೪

ಆ ಮಹಾಗೋಧೂಳಿಲಗ್ನದೊ
ಳೀಮಹಾಸುರವೈರಿ ಸಂಧ್ಯಾ
ಕಾಮಿನಿಗೆ ಕೈಯಿಕ್ಕಬಂದಪನಪರಸಂಜೆಯಲಿ ।
ಕಾಮುಕರು ಲಯವಾಯ್ತು ದೈತ್ಯರ
ತಾಮಸನು ಕಯ್ಯಿಕ್ಕಲಾತ್ಮಾ
ರಾಮನಿದಿರಾಗೆದ್ದು ಖಡ್ಗವ ತಿರುಹುತೈತಂದ? ‖ ೧೧೫

ಹಿರಣ್ಯಕಶಿಪುಸಂಹಾರ.

ಬರಲು ದೈತ್ಯನ ಹಿಡಿದು ತೊಡೆಯಲಿ
ತಿರುಹಿ ಮೇಲೆಡೆಗೆಡಹಿ ಸಂಜೆಯು
ಸಿರಿಯು ಮಧ್ಯದೊಳಿರಲು ನಾಕಜರೈದೆ ಹರುಷದಲಿ ।
ಮೂಜಗವ್ರುತಾಗಲು ದೇವ ಹುಂಕೃತಿ
ಕರದ ನಾಸಾಪುಟದಲಾಗಲು
ವರಹಿರಣ್ಯಕನುರವ ಬಗೆಯಲು ದೇವ ಕೈಕೊಂಡ ‖ ೧೧೬

ಬಸುಱ ನಖದಲಿ ಸೀಳಿ ಕರುಳನ
ಮೆಸಕವನು ಜೋಲಿಸುತ ಕೊರಳಲಿ
ಬಸಿವ ರಕುತದ ದೊಂಡೆಗರುಳನು ಹಾಕಿ ತಾ ಕೊಂಡ ।
ಹೊಸರಣವ ಮಾಡಿದನು ಕಾಳ
ಪ್ರಸರಕಾಗಲು ನೋಡಿ ದೇವನ
ವಸತಿಗಂಜಿತು ಬ್ರಹ್ಮರುದ್ರಾದ್ಯಮರಗಣವೈದೆ ‖ ೧೧೭

ಬ್ರಹ್ಮಾದಿಗಳ ಸ್ತುತಿ.

ಹಿಂದೆ ನಿಂದುದು ಹರಿಯ ನಾನಾ
ಛಂದದಲಿ ಹೊಗಳುತ್ತಲೆಂದರ
ದಿಂದು ಕಂಡೆವು ಬಲವನಾಸುರಮಹಿತಮಹಾಬಲನ ।

ಮುಂದೆ ವೀಕ್ಷಿಸಲಂಜಿ ಹಿಂದಣ
ದಿಂದ ಹೊಗಳ್ದಿದ ಸರಸಿಜಾಕ್ಷಜ
ಮುಂದೆ ವರಪ್ರಹ್ಲಾದ ಕಂಪಿಸಿ ದೇವಿ ವಾಮದಲಿ॥ ೧೧೮

ಒಮ್ಮೆ ನೋಡುವಳೊಮ್ಮೆ ಸುಮ್ಮನ
ಲಮ್ಮ ತಾನೆನುತಿಪ್ಪಳಾಶ್ರೀ
ರಮ್ಯನಾಮವ ನೆನೆವಳೊಮ್ಮೆಯು ಹಿಂಗಿ ನಾಚುವಳು।
ಪಮ್ಮದೇನೈ ತಾವು ನೋಡಲಿ
ಬೊಮ್ಮಕೋಟಿಗಳದಿರಿಗಂಜಿಯೆ
ಸುಮ್ಮನಾತನ ನೋಡುತಿರ್ದನು ವೊಮ್ಮ ಕಶ್ಯಪನ॥ ೧೧೯

ವರವ ಬೇಡು ಎಂದು ನರಹರಿಯು ಅಪ್ಪಣೆ

ಓಪನೊಬ್ಬಗೆ ಕೋಪದೋರದೆ
ಶ್ರೀಪತಿಯು ಕೃಪೆಯಿಂದ ನುಡಿದನು
ಪಾಪಿಗೀಹದನಾಯ್ತು ಮುಚ್ಚದೆ ವರವ ಬೇಡೆನಲು।
ಪಾಪರಹಿತನು ನೀನು ನುಡಿದುವ
ಲೋಪಿಸೆನು ಬೇಡೆಂದೊಡಾತನು
ತಾಪಸರ ವರದೈವಕೆಂದನು ಕೊಡುವೊಡೆನಗೀಗ॥ ೧೨೦

ತಾತನಂಗವ ನಿಮ್ಮ ತೊಡೆಯಿಂ
ಭೂತಳಕೆ ಬೀಳಿಕಿಯಿಹುದೆನಗಿವ
ನೋತು ಕೊಡುವುದು ವರವನಿಂತಿದು ನಿತ್ಯವಾಗಿರಲು।
ಕಾತರಿಸದಿರು ಕೊಟ್ಟೆನಿದನೆಂ
ದಾತತುಕ್ಷಣ ವರನೃಕೇಸರಿ
ಯೋತು ನುಡಿದನು ವರವ ಪುನರಪಿ ಬೇಡು ನೀನೆಂದು॥ ೧೨೧

ಎಂದೊಡಾಪ್ರಹ್ಲಾದದೇವನು
ಮಂದಹಾಸದಿ ದೇವಗೆಂದಪ
ನಿಂದಿರಾಪತಿ ಕೃಪೆಯ ಮಾಡಿದೆ ಸತ್ಸಂಗವನು।

ಎಂದು ಪ್ರಹ್ಲಾದಂಗೆ ವರವ ಮು
ಕುಂದ ಕೊಟ್ಟನು ಬೇಡಿದಂದವ
ಕಂದ ಕೇಳೈ ರಾಯ ಜನಮೇಜಯ ಮಹೀಪಾಲ ॥ ೧೨೨

ಕೊಟ್ಟನೈ ಪ್ರಹ್ಲಾದದೇವನ
ಭೀಷ್ಟವನು ಹದಿನಾಲ್ಕು ಲೋಕದ
ದುಷ್ಟನನು ನೆಱೆ ಕೊಂದು ಕಾಯ್ದನು ಶಿಷ್ಟಸೇವಕರ ।
ಕೆಟ್ಟು ಹೋಯಿತು ತಾನು ದುಷ್ಕೃತ
ನಷ್ಟವಾಯಿತು ಮಿಥ್ಯಬೋಧೆಯು
ಸೃಷ್ಟಿಗಾಪ್ರಹ್ಲಾದದೇವನ ಭಕ್ತಿ ದೃಢದಿಂದ ॥ ೧೨೩

ಸುರರು ತಮತಮಗಮಲಹರುಷದಿ
ಪರಿಯ ಹೊಗಳುತ ಹೋದರಿತ್ತಲು
ಸರಸಿಜಾಕ್ಷನು ಮತ್ತೆ ನುಡಿದನು ಹಿರಣಿಕಾತ್ಮಜಗೆ ।
ಧರಣಿಯಲಿ ನಿನಗಬ್ದಲಕ್ಷವು
ಪರಮರಾಜ್ಯೈಶ್ವರ್ಯ ಕಡೆಯಲಿ
ನಿರುತವೆನ್ನಯ ಪುರವು ನಿನಗದು[1] ನಿತ್ಯಶಾಶ್ವತವು ॥ ೧೨೪

ಅನ್ನಬರ ನೀನಿಹುದು ಬ್ರಹ್ಮನ
ಭಿನ್ನವಿಲ್ಲದ ತಪದ ಲೋಕವ
ದುನ್ನತೋನ್ನತಭೋಗದಿಂದಿಹುದೆಂದು ಕರುಣಿಸಿದ ।
ಇನ್ನು ಸಿನ್ನನು ಬಿಡೆನು ಲೋಕಕೆ
ನಿನ್ನ ಭಕ್ತಿಯನಱಿದ ಮನುಜರ
ನಿನ್ನ ಕಾಂಬಂತೈದೆ ಕಾಣುವುದೆನಲು ಮೆಚ್ಚಿದೆನು ॥ ೧೨೫

ಮೆಚ್ಚಿ ಸಿಕ್ಕಿದನಲ್ಲಿ ಯಾತಗೆ
ಹಚ್ಚಿ ಕೊಟ್ಟನು ಮೂರ್ತಿಮೂಲವ
ಸಚ್ಚಿದಾನಂದೈಕದ್ವಾದಶನಾಮಮೂರ್ತಿಯನು ।

1 ಸರಸಿಜಾಸನ ಹೊರೆಯು ಸಂಗಡ ನಿನಗೆ, ಕ, ಖ.

ಅಚ್ಚರಿಯಲಾ ಪರಪಿದಾರಣ
ಸಚ್ಚಿದಾನಂದೈಕರೂಪನು
ವಚ್ಚಿದನು ಪ್ರಹ್ಲಾದದೇವಗೆ ರತ್ನಪುರಿಯೊಳಗೆ ॥ ೧೦೬

ಮೊದಲ ಮೂರ್ತಿಯು ಪರಪಿದಾರಣ
ವಿದಿತದಲಿ ಪರಬ್ರಹ್ಮ ನರಹರಿ
ಸದನದಲಿ ಶ್ರೀರೌದ್ರನರಹರಿ ನಾಲ್ಕುತಾಪಿನಲಿ ।
ತ್ರಿದಶನರಹರಿ ಯಾಜುಹಸ್ತದ
ಪದುಮನರಹರಿ ಪಂಚನರಹರಿ
ಯುವಟ ಯೋಗಜ್ವಾಲೆ ನರಹರಿ ಪಂಮುಹಾನ್ಯಹರಿ ॥ ೧೦೭

ಯೋಗನರಹರಿ ಲಕ್ಷ್ಮಿನರಹರಿ
ರಾಗದಲಿ ಪರಪೀಪಹೋಬಲ
ಕಾಗಿ ನೆಲಸಿದ ವೀರನರಹರಿ ಪರಕೃಪಾಂಬುಧಿಯು ।
ಆಗಳಲ್ಲಿಂ ಮಗುಳ ನೆಲಸಿದ
ಬೇಗದಲು ಸಿರಿಪ್ರೊಳಲ ನರಹರಿ
ಬೇಗ ಮನುಜರ ಪ್ರಾರ್ಥನಂಗಳ ಕೊಂಬ ನರಸಿಂಹ ॥ ೧೦೮

ಈಮಹಾಮೂರ್ತಿಗಳು ದ್ವಾದಶ
ನಾಮದೊಳು ಮಿಗಲಾವುದಾಗಲಿ
ಭೂಮಿಯುಲಿ ತಾ ಸತ್ಯಲೋಕಕೆ ಸರಿಯು ಸ್ವರ್ಗದಲಿ ।
ಸೋಮಶೇಖರನಾಣೆ ಭೂಪತಿ
ಭೂಮಿಯೊಳಹೋಬಲಕೆ ಸರಿಯುಹ
ಸೀಮ ಯಿಲ್ಲವು ದೇಪಿ ನೆಲಸಿಹಳಲ್ಲಿ ಹರಿಸವದಿ ॥ ೧೦೯

ಹರಿದಿಹಳು ಭವನಾಶಿ ಗಂಗೆಯು
ಬರುತ ಕೃಷ್ಣೆಯು ಕೂಡಿ ಧರೆಯೊಳು
ಬರಸಿತು ನಹಿ ಪ್ರತಿಯದಕೆನಿಸಿತು ಸುರರು ಮೆಚ್ಚಲಿಕೆ ।

ಪರಮಮುನೀಶ್ವರ ಶೈಲಮಹಿಮೆಯ
ನಿರುತವನು ಭೂಪತಿಗೆ ಪೇಳಿಯೆ
ಯರಿಹಿರಣ್ಯಕಸುತನ ಭಕ್ತಿಯ ಪರಕಥಾಮೃತವ ॥ ೧೩೦

ಪರಪರರಸನ ನಾರಸಿಂಹನ
ನಿರುತದಲಿ ಹನ್ನೆರಡುತಾಣದ
ಪರಿವಿಡಿಯ ವಿಸ್ತರಿಸಿ ಹೇಳಿದ ನಾರಸಿಂಹನನು ।
ಪರಕಥಾಮೃತ ಕೇಳಿ ಭೂಪತಿ
ಕರವ ಮುಗಿದಿಂತೆದ್ದು ಮುನಿಪಗೆ
ನಿರುತ ಮೋಕ್ಷಕ ಸಂದನೇ ಸುರರಿಪುಹಿರಣ್ಯಕನು[1] ॥ ೧೩೧

ಎಂಬುದನು ಕರುಣಿಪುದು ನೀವೆನೆ
ಹಂಬಲಿಸದಿರು ದೈತ್ಯರಂಬರಿ
ಗಿಂಬುಗೊಡದೀ ಮೋಕ್ಷ ಲಕ್ಷ್ಮೀಕಾಂತದೂರರಿಗೆ ।

ಹರಿದ್ವೇಷಿಗಳಿಗೆ ಮೋಕ್ಷಾಭಾವಕಥನ

ತುಂಬಿದೈ ಕೈವಲ್ಯವಾಸವ
ದಂಬುಜಾಕ್ಷದ್ವೇಷಿ ಹಿರಣಿಕ
ನೆಂಬವಗೆ ತಾ ನಿತ್ಯನರಕವು ಭೂಪಕೇಳೆಂದ ॥ ೧೩೨

ಅಂಬುಜಾಕ್ಷನ ನೆನೆದೊಡಾತನು
ಕೊಂಬ ಮೋಕ್ಷವನೆಂಬ ಶ್ರುತಿಗಳ
ವೆಂಬುದೇನಿದು ದಿಟವೊ ಹುಸಿಯೋ ಕರುಣಿಸುವುದೆನಲು ।
ಎಂಬ ಶ್ರುತಿಗಳು ಸತ್ಯ ಮೋಕ್ಷವ
ಕೊಂಬನೈ ಸಜ್ಜೀವಿ ನೆನೆದರೆ
ತುಂಬನೈ ಬ್ರಹ್ಮಣ್ಯದೇವನ ಬಗೆಯದವನೆಂದು ॥ ೧೩೩

---

1 ನಿರುತ ಮೋಕ್ಷಕ ಸಂದನೆಂತಾ ಹಿರಣ್ಯಕಾಸುರನು, ಖ

ಬಗೆಯೆ ಯೀಯಸುರಾಂತಕನೆನಲಿ
ಖಗಧರನು ಕೇಳ್ದಾಗ ನುಡಿದನು
ಬಗುಳದಿರೆಲವೊ ಯಿನ್ನು ಕೇಳುವ ಮುಂದಣಾಂತರದ ॥ ೨

ತ್ರೇತೆಯಂತ್ಯದೊಳೊಂದು ನೀನತಿ
ಪ್ರೀತಿಯಲಿ ಯಿಪ್ಪತ್ತುತೋಳಿನ
ದಾತನಾಗಿರು ನಾನು ಜನಿಸುವೆಸೆರಡುತೋಳಿನಲಿ ।
ಭೂತಳೇಶ್ವರಜಾತಿಯಲಿ ಯೆಂ
ದಾತನನು ಬೀಪ್ಕೊಟ್ಟು ಭೃತ್ಯನ
ಜಾತನನು ಕೊಂಡಾಡಿ ಪಟ್ಟವ ಗಟ್ಟಲನುಗೆಯ್ಯೆ ॥ ೩

ಭೂತಳದಲೇಕಾಧಿಪತ್ಯವ
ನಾತಗಿತ್ತುಜಿ ಬ್ರಹ್ಮದೇವ
ವ್ರಾತದಲಿ ಕೈವಲ್ಯನಾಥನು ಸ್ತುತಿಸಿ ಕೊಳುತಿರಲು ।

ಶಂಭುವು ಶರಭಾಕಾರನಾಗಿ ಯುದ್ಧಕ್ಕೆ ಬರುವಿಕೆ

ಆತತುಕ್ಷಣ ಕೇಳಿ ಕಂಸಾ
ರಾತಿಗೆಂದನು ಶಂಭುವರ್ಗದ
ಖ್ಯಾತಿಯಲಿ ಕೈಯಿಕ್ಕಬಂದನು ಶರಭರೂಪಿನಲಿ ॥ ೪

ಆ ಹಿರಣ್ಯಕನುರವ ಬಗಿದಾ
ಜೋಹವೆಟಿಯುದ ಮುನ್ನ ವೃಗುರಿನ
ಕೌಹುರದ ಕಡುಹಾರದಗ್ಗದ ಮಂತ್ರರಾಜನನು ।
ಆಹವಾಂಗಣಕೈದಿ ಬರೆ ಕಡು
ಕೌಹುರದಿ ಕೈಲಾಸವಾಸಿಯು
ದೂಹಿಸದೆ ಕೋಪದಲಿ ಮದನನ ದಹಿಸಿದಂದದಲಿ ॥ ೫

ಶರಭನ ಪರಾಜಯ.

ಬಡನೆ ಕಂಡಾಪ್ತದಲಿ ಕಮಲಜ
ನುಡಿದ ಶಾಪದಿ ಬಂದ ನಾಕಜ

ರೊಡೆಯನನು ಕೆಣಕಲ್ಕದಾಯಿತದಱ ನಿರ್ವಾಹ |
ಹಿಡಿದು ಕಂಠವ ತೊರೆದು ಶರಭನ
ಮಡುಹಿದನು ತಾನುಗುರ ಕೊನೆಯಲಿ
ತಡವಿರದೆ ಶರಭಾಂಗ ವೆಱಯಿತು ನಿಮಿಷಮಾತ್ರದಲಿ ‖ ೬

ರುದ್ರಕೃತಸ್ತುತಿ.

ಬಱಿಕ ಶಂಕರಮೂಲಮೂರ್ತಿಯು
ಕಳವಿಡಿದು ಕೈವಲ್ಯನಾಥನ
ನೊಲಿದು ಸ್ತೋತ್ರಂಗೆಯ್ದು ಹೊಗೞಿದ ದಿವ್ಯನಾಮದಲಿ |
ತಿಳಿಯಲದು ಶ್ರೀ ರುದ್ರನೀತಿಯು
ಬಳಗದಲ್ಲಿ ಸಹಸ್ರನಾಮವ
ನಳಿನನಾಭನ ಹೊಗೞಲಾಯ್ತು ಚತುರ್ದಶದಲೆಂದ ‖ ೭

ಜಗದ ಜೀವರ ಪಾಪಕರ್ಮವ
ಜಗುಳಿಸಿದ ಶ್ರೀಕಂಠನುಸುರಿದ
ಸೊಗಸಿ ಸಾವಿರನಾಮವಾಯಿತು ಪೂರ್ವನಾಮದಲಿ |
ನಿಗಮಗೋಚರದೇವನಾತನ
ಸೊಗಸಿ ಕೊಂಡಾಡಿದರೆ ನಿನ್ನಯ
ಬಗೆಯನೀವೆನೆನಲಿಕೆ ಬೇಡಿದನಾತ್ರಿಯಂಬಕನು ‖ ೮

ದೇವ ನೀನೆನಗಿತ್ತುದೊಂದೇ
ಭಾವದಲಿ ಭಜಿಸುವುದ ಕರುಣಿಸು
ಈ ವಸುಧೆ ಮೊದಲಾಗಿ ಚರಿಸುವ ದಿವ್ಯದೇಶದಲಿ |
ಈ ವಿರಿಂಚಾದಿಗಳಿಗಗ್ಗದ
ದೇವ ನೆನಿಸಿಯೆ ನಿನ್ನ ಚರಣವ [1]
ನೋವಿ [2] ಧ್ಯಾನಿಸುವಂತೆ ಕೃಪೆಮಾಡೆಂದ ಶಶಿಮೌಳಿ ‖ ೯

---

[1] ಭಾವದಲಿ ನಿನ್ನಂಘ್ರಿ ಕಮಲಕೆ, ಕ. [2] ತಾವ್ವ, ಕ.

ಎನಲಿಕಸುರಾಂತಕನು ಪೂರ್ವದ
ಮನುವಿನಲಿ ಮುನ್ನೊಬ್ಬ ಮಾನಿನಿ
ಘನತರದ ತಪವಿಡಿದು ಹುಟ್ಟಿದಳತ್ರಿವಧುವಾಗಿ ।
ವನಿತೆ ಯಿರುತಿರೆ ಬ್ರಹ್ಮರುದ್ರರು
ವನಜನಾಭನು ಸಹಿತ ವಿಪ್ರರ
ತನುಗಳಾಗಿಯೆ ಬಂದು ವಿಪ್ರಸತಿಯನು ಗ್ರಾಸಬೇಡಿದರು ॥ ೧೦

ಬೇಡಲಿಕೆ ವಧುವಿತ್ತಳವರಿಗೆ
ರೂಢಿಗಗ್ಗದ ಗ್ರಾಸವಾಕ್ಷಣ
ಮಾಡಲಿಕೆ ಕುಳ್ಳಿರುತ ನುಡಿದರು ಭೂಸುರೋತ್ತಮರು ।
ಪ್ರೌಢೆ ನೀನೆಮಗನ್ನವೀವೊಡೆ
ರೂಢಿಯಲಿ ವಸ್ತ್ರವನು ವರ್ಜಿಸಿ
ನೀಡೆನಲು ಮಿಗೆ ನೋಡಿ ತವರನು ನುಡಿದಳವಳಂದು ॥ ೧೧

ಲೇಸು ಲೇಸೆನುತಾಕ ಮೂವರ
ಯಾಸೆಯನು ಕಂಡಂತೆ ತನ್ನ ವಿ
ಳಾಸದಲ್ಲವರುತ್ತಮಾಂಗದ ಮೇಲೆ ಕರವಿಡಲು ।
ಭೂಸುರೋತ್ತಮರಾಗ ಮೂವರು
ಗ್ರಾಸಕೋಸ್ಕರ ಬಂದು ವರಲ
ಕ್ಷಿಪ್ರೇಶಸಹಿತವ ಶಿಶುಗಳಾದರು ಮೂಱುವತ್ಸರದ ॥ ೧೨

ಉಂಡವರ ಬೞಿಕವರ ಕೈಗಳ
ತಂಡವನು ತೊಳದೊರಸಿ ಭೂಸುರ
ಗಂಡುಗಲಿಗಳ ನಿಲಿಸಿ ಸೀಱೆಯನುಟ್ಟು ಹರುಷದಲಿ ।
ಮಂಡೆಯಲು ಕೈಯಿಡಲು ಮೂವರು
ಕೊಂಡರಾಕ್ಷಣ ತಮ್ಮ ರೂಪನು
ಕಂಡರಾಹರಿಹರಹಿರಣ್ಯಗರ್ಭಮೊದಲಾಗಿ ॥ ೧೩

ನುಡಿದರಾಕೆಗೆ ನೀನು ಬೇಡಿದ
ನುಡಿಯ ಸಲಿಸುವೆನೆನಲಿಕತ್ರಿಯ
ಮಡದಿ ನುಡಿದಳು ನೀವು ಮೂವರು ತನ್ನ ಸುತರಾಗಿ ।
ಪೊಡವಿಯಲಿ ಚಂದ್ರಾರ್ಕರುಡುಗಣ
ಕೆಡದಡೆಯು ನೀವ್ ಮಡಿಯಲಾಗದು
ಬಿಡದೆ ತನ್ನಯ ತನುಜರೆನಿಸಿಯೆ ಕೊಳುತಲಿಹುದೆನಲು ॥ ೧೪

ದತ್ತಾತ್ರೇಯಾವತಾರ.

ಆನೃಸಿಂಹಕನತ್ರಿಪುತ್ರನು
ತಾನೆನಿಸಿ ದತ್ತಾಖ್ಯನಾದನ
ದಾನಿರೂಢಿಯ ಶಂಭು ಜನಿಸಿದನತ್ರಿಯಂಗುಲದಿ ।
ಮಾನಸಿಧಿ ಕೇಳ್ ಕಮಲಸಂಭವ
ತಾನು ಜನಿಸಿದನತ್ರಿನೇತ್ರದ
ಲಾನಿಶೀಥಿನಿಪತಿಯು ತಾನಾಗಿರಲು ಶಶಿಮೌಳಿ ॥ ೧೫

ವರಚತುರ್ಥಾಶ್ರಮದಲಿರವನು
ಹರನು ತಾ ಕೈಕೊಂಡು ಬದರೀ
ವನವ ತಾನೆಡೆಗೊಂಡ ದೂರ್ವಾಸಾಭಿಧಾನದಲಿ ।
ಇರಲು ನಸೆದರು ಬಳಿಕಲಾತನ
ವರಯತೀಶರು ಹತ್ತುಸಾವಿರ
ಪರಿಣತರು ಸಹಿತೆಲ್ಲ ಗಂಗಾಜನಕಪೂಜೆಯನು ॥ ೧೬

ಮಾಡಿ ಸುಖದಿಂದಿರಲಿಕಿತ್ತಲು
ರೂಷಿಯನು ಪ್ರಹ್ಲಾದಗಿತ್ತನು
ಗಾಢವಲಿ ಶ್ರೀಯುವುಬಳೇಶನು ರತ್ನಪುರಿಯೊಳಗೆ ।
ಬೇಡಿದರ ಬೇಡಿಕೆಯನೀವುತ
ಕಾಡಿದರ ಕಾಡಿಕೆಯ ಕೊಡುತಲು
ನೀಡಿ ಗಡವರ ಮನದ ಬಯಕೆಯ ನೀವುತಿರುತಿರಲು ॥ ೧೭

ಜನಿಸಿದನು ಪ್ರಹ್ಲಾದದೇವಗೆ
ತನುಜವೈರೋಚನನು ರೂಢಿಯು
ಘನತರದ ಸದ್ಧರ್ಮಸಾರವ ಬಿಸುಟು ಪರಿಪದವ |
ನೆನೆಯೆ ಕವೋತ್ತರದ ಜಾಡ್ಯದ
ಮನೆಯುಲಿರುತಿರೆ ನಾಲ್ಕು ಸಾವಿರ
ಯನಿಮಿಷರ ವರುಷಂಗಳಾದವು ಲೋಕವಾಕರಿಸೆ ॥ ೧೮

ಬಲಿಚಕ್ರವರ್ತಿಯ ಜನನ.

ಜನಪನನು ಕೈಕೊಳ್ಳದೆಲ್ಲರು
ದನುಜಪರಣೋಪಾಸ್ತಿಗೆಯ್ಯಲು
ಮನವೊಲಿದು ವೈರೋಚನರಸಿಗೆ ಬೞಿಕ ಬಲಿ ಜನಿಸೆ |
ಜನಕಜನನಿಯರಿಂಗೆ ಬೞಿಕಾ
ಮನವೊಲಿದು ತಮತಮ್ಮ ಠಾವನು
ತನತನಗೆ ಯೈದಲಿಕೆ ಜನಿಸಿದ ವೈಷ್ಣವೋತ್ತಮನು ॥ ೧೯
ಅರಸಿಯಾದಳದಾತಗೊಬ್ಬಳು
ವರಪತಿವ್ರತೆಯೆನಿಪ ಸತಿಯುಳು
ಸುರತಸಂಧ್ಯಾದೇವಿಯೆಂಬಳು ಜನಪ ಕೇಳಂದ |
ವರಸತಿಯು ಜಠರದಲು ತಾನಾ
ಗಿರುತ ಕಾಲಾಂತರದಲಂಧಾ
ಸುರನು ಜನಿಸಿದ ಬಾಣನೆಸಿಸಿಯೆ ಸಹಸ್ರಭುಜಯುತನು ॥ ೨೦

ಬಲಿಚಕ್ರವರ್ತಿಯ ದಿಗ್ವಿಜಯ.

ಅರಸ ಕೇಳ್ಳೈ ಮತ್ತೆ ಬಲಿಗಂ
ದಿರುತ ಸುತ ಹುಟ್ಟಲಿಕೆ ಹರುಷದಿ
ಪರಮರಾಜ್ಯವನಾಳುತಲ್ಲಿಯು ದೇಶಭೂಮಿಪರ |
ಬರಸಿ ನಾನಾಭೂಮಿಪಾಲರ
ನಿರುತನಗರವ ಗೆಲಿದು ದಣಿಯದೆ
ಹಿರಿದು ಖತಿಯಲಿ ಸೂಱೆಗೊಂಡನು ಸ್ವರ್ಗಲೋಕವನು ॥ ೨೧

ಮಂದಿ ಕಾಣಲಿಕ್ಕೈದೆ ನಾಕಜ
ವೃಂದವನ್ನಿದಿರಾಗಿ ಗೆಲಿದುಱಿ
ಮಂದಿಯುಲ್ಲೊತ್ತೊತ್ತಿ ನೂಂಕಲು ಸಕಲಸೈನಿಕರ ।
ಬಂದು ಹುಡಿಹುಡಿಗುಟ್ಟಿ ದಿವಿಜರ
ವೃಂದವನು ಹೆರೆದೆಗೆಯೆ ಕೊಡೆದನು
ಮಂದಿಯುತಿರಭಸದಲಿ ಗರ್ಜಿಸಿ ನಡೆಯೆ ಕಾಳಗಕೆ ॥ ೭೨

ಬಂದ ತ್ರಿಭುವನಭೂಮಿಪಾಲಕ
ವೃಂದಪತಿ ತಾನಪ್ಪ ಬಲಿ ತಾ
ಬಂದನೆಂದಾಗೊದಱಿದರು ಗಂಧರ್ವನಾಯಕರು ।
ಬಂದು ಶತಮುಖಿಗಳುಹಲಾಯುತ
ದಿಂದ ತಾ ಪ್ರೊಬಮಡಲು ಮುಂದಣ
ಮಂದಿಯನು ಕೆಡೆ ನೂಂಕಿ ಗಂಧರ್ವಾದಿನಾಯಕರು ॥ ೭೩

ಅಂದುದಂಬರವಿಡಿದು ಬಲಿಯನು
ಬಂಧಿಸುವೆನೆಂದೆನುತ ಸುರಪನ
ಮುಂದೆ ವೀಳಯಗೊಂಡು ದಾನವಬಲವ ಕೆಣಕಿದರು ।
ಮಂದಿಯೊಳಗಣ ಚಿತ್ರಸೇನನು
ನಿಂದು ಸರಳನು ಕಱೆದು ರಾಕ್ಷಸ
ವೃಂದವನು ನೆಱೆ ಗೆಲಿದು ನಿಂದನು ನಿಮಿಷಮಾತ್ರದಲಿ ॥ ೭೪

ಬವರದಾಯತದಿಂದ ಬಲಿಯನು
ಪವನಮಾರ್ಗದಲಿರದೆ ಬಾಣದ
ನಿವಹದಲಿ ತಾ ಕೆಣಕಿ ಕಾದಲಿಕಾತನದ ಕಂಡು ।
ಅವನ ನೆಱೆ ಜವಗೆಡಿಸಿ ಶೋಣಿತ
ನಿವಹದಲಿ ಕೈಯ್ಯಾರೆ ಮುಳುಗಿಸಿ
ಪವನಮಾರ್ಗದ ರಥಿಯು ತಾ ಮನವೇಗದಲಿ ಗೆಲಿದ ॥ ೭೫

ಅಹಹ ಗೆಲಿದನು ಚಿತ್ರಸೇನನ
ಸಹಸಿ ದಾನವರಾಯನೆನುತಲಿ
ಬಹಳ ಸುರರಲಿ ಬಲವ್ರೊದಱುತಿರೆ ದಿವಿಜರಗ್ಗಳನು |
ಮಹಿಷದಾನವನಿದಿರಿಗೆಯ್ದಿಯು
ಯಹಿತ ನೆಱೆ ಕಂಪಿಸಲು ಪ್ರಜ್ಞಾ
ಸಹಸಿ ದಿವ್ಯಾಸ್ತ್ರದಲಿ ಶತಮಖ ಹೂೞಿದನು ರಥವ ‖ ೨೬

ಬಲ್ಲೆ ನಿನ್ನಯ ಬಿಲ್ಲ ಮಹಿಮೆಯ
ಬಲ್ಲಿದನು ನೀನೆಂದು ಪಲಕೆಲ
ರಲ್ಲಿ ಯಾಡುತ್ತಿಪರದನು ತಾನವನು ಕೇಳುತಲು |
ನಿಲ್ಲದಿದಿರಿಸಿ ಕೊಂಡು ಚಾಪಟ
ಮಲ್ಲತಿರುಗಿದ ಸೊಕ್ಕಿದನೆನು
ತ್ತಲ್ಲಿ ಕೀಲಿಸಿಶಸ್ತ್ರಶರವಲಿ ಬಲಿಯುನಮರೇಂದ್ರ ‖ ೨೭

ಸರಳ ಘಾಯದಿ ಬಳಲಿದಾತನ
ಸರಳಿನಲಿ ಬಲುಮಡೆಯುನೀತನ
ಹೊರಟಯಲಿ ಬೇಟರಿಸಿ ನಾರಾಯಣಪರಾಯಣನು |
ಹಿರಿದು ಸಂಹರಿಸಿದನು ಮನದೊಳು
ಹರಿಯ ನೆನೆಯುತ ನಿಮಿಷಮಾತ್ರಕೆ
ನೆಱೆ ವಿಭಾಡಿಸಿ ಒಲಿಯ ಕೊಣಕಿದ ದಿವಿಜರಗ್ಗಳನು ‖ ೨೮

ಹಿಂದೆ ನಾನಾದೇಶಪಾಲರ
ಬಂಧಿಸಿದಯುಗ್ಗಳಿಕೆ ಯೆಂಬೀ
ದಂದುಗವು ಕಿಱಿದುಂಟು ನೀನೀಗೆನ್ನನೊಬ್ಬನನು |
ಸಂದ ಬವರದಲೀಗ ಸರಿಗಾ
ಬಂದವನು ತಾ ಮೊದಲೆ ಹುಸಿಯೆಂ
ದಿಂದ್ರನನು ಮೊದಲಿಸಿ ಹಿಡಿದನು ಹಲಗೆಖಂಡೆಯವ ‖ ೨೯

ಬಲಿಚಕ್ರವರ್ತಿಯು ಇಂದ್ರನನ್ನು ಹಿಡಿಯುವಿಕೆ.

ಅರಸ ಕೇಳೈ ಹರಿಪರಾಯಣ
ನಿರುತರಾಗಿಹ ಭೂಮಿಪಾಲರ
ಗರಿವದಾವುದು ಬಲಿಯು ಬಗೆವನೆ ದಿವಿಜಗಣಗಿಣವ ।
ಹರಿಯ ನಾಮಸ್ಮರಣಬಲದಲಿ
ಹಲಿಗೆಯ ತಿರುಹಿ ಸುರರ ರಾಜನ
ವರರಥವ ನೆಱೆ ಗೆಲಿದು ಗಂಧರ್ವಾದಿನಾಯಕರ ॥ ೩೦

ವರರಥವ ಪುಡಿಮಾಡಿ ವೈಯಲಿ
ವರಮಹಾಘಾಯವನು ಕಾಣಿಸಿ
ಸುರಕುಲವ ಬೆಂಕೊಂಡು ಗೆಲಿದನು ಸಕಲಸೈನಿಕರ ।
ಪರುಷದಲಿ ದೇವೇಂದ್ರಮೊದಲಾ
ದರನು ಗೆದ್ದನು ಮೇಲೆ ಸ್ವರ್ಗವ
ನುರುಹಿ ಯೈರಾವತವ ಕೊಂಡನು ವಜ್ರಸುರತರುವ ॥ ೩೧

ಕೊಂಡು ಶೋಣಿತಪುರವ ಹೊಕ್ಕಾ
ಖಂಡಲನ ಲೆಕ್ಕಿಸದೆ ತಾನು
ದ್ದಂಡನಾದನು ದೇವದಾನವರೊಳಗೆ ಬಲುಪುಳ್ಳ ।
ಗಂಡುಗಲಿ ಯೀಱೇೞುಲೋಕದ
ತಂಡವನು ನೆಱೆಯಾಳಿ ದಾನವ
ದಂಡೆಯರು ತಡೆಗಡಿದು ರಾಜ್ಯಂಗೈವುತಿರುತಿರಲು ॥ ೩೨

ಒಂಬತ್ತನೆಯ ಸಂಧಿ ಮುಗಿದುದು

ಹತ್ತನೆಯ ಸಂಧಿ.

ಸೂಚನೆ

ಶ್ರೀಯುಪೇಂದ್ರನ ಚರಣಕಮಲಕ
ದಾಯದಲಿ ಮೂಜಡಿಗೆ ನೆರೆಯದೆ
ರಾಯ ಕೇಳ್ಯ ಯೀಮಹಾಬ್ರಹ್ಮಾಂಡವರಡಡಿಯು ॥

ಕೇಳು ಜನಮೇಜಯ ಧರಿತ್ರೀ
ಪಾಲ ಲಕ್ಷ್ಮೀಪತಿಯ ಕರುಣದ
ಲೀಲೆಯಲಿ ಪ್ರಹ್ಲಾದದೇವನು ಸುಖದಿ ರಾಜ್ಯವನು ।
ಆಳುತಿರ್ದನು ತನ್ನ ಬಂಧುಗ
ಳೊಳಿರುವನು ತಾ ಕೂಡಿಕೊಂಡುಜು
ಶ್ರೀಲತಾಂಗಿಯ ಪತಿಯ ಚರಣವ ನೆನೆವ ಬಲದಿಂದ ॥ ೧

ಬಳಿಕ ಶೋಣಿತನಗರಕಧಿಪತಿ
ಕೆಲವು ಕಾಲಾಂತರಕೆ ಬಲಿ ತಾ
ನೊಡೆಯನಾದನು ಮುನ್ನ ಮಾಡಿದ ಪುಣ್ಯಫಲದಿಂದ ।
ಇಳೆ ಸಹಿತ ಹದಿನಾಲ್ಕು ಲೋಕಗ
ಳೊಳಗದಾತನಯಾಣೆ ಘೋಷಣೆ
ಬೆಳಯಿತ್ತೆ ಶ್ರೀಲೋಲಲೋಚನವರಕಟಾಕ್ಷದಲಿ ॥ ೨

ಹುಲ್ಲುಗಳು ರಾಜಾನ್ನವಲ್ಲಿಯು
ಕಲ್ಲುಗಳು ಕನಕಂಗಳೆಂದರೆ
ಯಿಲ್ಲ ಸರಿ ದೂರ ಹಿಂದೆ ಮುಂದೀವರ್ತಮಾನದಲಿ ।

ಇಲ್ಲ ವೈರೋಚನಿಯು ಹೋಲುವ
ರಿಲ್ಲ ಭೂಪರು ಕೆಲವು ಕಾಲಕೆ
ಬಲ್ಲಿದನು ಗೋವಿಂದ ಜನಿಸಿದನದಿತಿಕಶ್ಯಪಗೆ ॥ ೩

ಅದಿತಿ ಕಶ್ಯಪರ ತಪಸ್ಸು.

ಅವರು ತಾವ್ ಮುನ್ನಾದಿಯಲಿ ತಪ
ನಿವಹದಲಿ ಶ್ರೀಹರಿಯ ಪೂಜಿಸಿ
ದವರು ಕೇಳ್ಯೆ ಸುತಪಪೃಶ್ನಿಗಳವರು ಕೃತಯುಗದ ।
ಅವರಿಗಸುರಾಂತಕನು ನುಡಿದಪ
ನಪಧರಿಸಿ ನೀವೇನು ಬೇಡುವ
ಹವಣ ವಿವರಿಸಿರೆಂದು ಸ್ವಾಯಂಭುವನ ಕಾಲದಲಿ ॥ ೪

ಎನಲು ಬೇಡುವುದೇನು ವರವನು
ವನಜಲೋಚನ ನಿಮ್ಮ ಹೋಲುವ
ತನುಜನನು ಕರುಣಿಪುದು ನಮ್ಮಯ ಮೂಱುಜನ್ಮದಲಿ ।
ಜನಿಸಲಿಕೆ ತಾವೆಂದು ಧನ್ಯರು
ದನುಜಹರ ನಮಗಿದನು ಕರುಣಿಪು
ದೆನಲು ಶ್ರೀವೈಕುಂಠನಾಥನು ಮತ್ತೆ ಬೇಡೆಂದ ॥ ೫

ನಾವು ಬೇಡುವುದೇನು ಮತ್ತೆಯು
ನೀವು ನಮ್ಮಯ ಮೂಱುಜನ್ಮಕೆ
ಕಾವುದೈ ಸುತನಾಗಿ ಯಂದರೆ ದೇವನಿಂತೆಂದ ।
ನಾವು ನೀವೆಂದುದನು ಕೈಕೊಂ
ಡಾವು ಜನಿಸುವೆವೆನಲು ದೇವರ
ದೇವರಾಯನ ಬೀಱುಕೊಂಡರು ತಮ್ಮ ಮಂದಿರಕೆ ॥ ೬

ವಾಮನಾವತಾರ.

ಇರುತಿರಲು ತಾವ್ ಮುಂದೆ ಬೇಡಿದ
ವರವ ಸಲಿಸಲಿಕಾಗಳವರನು

ಸುರನರೋರಗಗಳೊಳಗಧಿಕರ ಮಾಡಿ ಜನಿಸಿದನು ।
ನಿರುತದಲ್ಲಾಗದಿತಿ ಕಶ್ಯಪ
ವರಸುನಾಮದಲವರು ಪುಟ್ಟಲು
ಹರುಷದಲಿ ತಾನವಗೆ ಜನಿಸಿದ ವಾಮನಾಹ್ವಯದಿ ॥ ೭

ಕೆಲವುಕಾಲಾಂತರಕೆ ರಾಜ್ಯವು
ಬಲಿಯಿತ್ತೈ ತ್ರೈಭುವನಮಧ್ಯಮ
ದೊಳಗೆ ಮಲೆವವರಿಲ್ಲ ಯಮರಾಧೀಶಮೊದಲಾಗಿ ।
ಬಲಿಯು ಖರಘಟಿಕಾರದಿಂದ್ರನು
ತಲೆ ಬಿರಿದು ತಾ ನೋಡಿ ಹೋಗಲು
ಬಳಿಕ ತಾ ತ್ರೈಭುವನವಾಳಿದನಬ್ದಲಕ್ಷದಲಿ ॥ ೮

ಆಗತರ ಸುಖ ಸ್ವರ್ಗಭೋಗವ
ನಾಗ ಮೆಚ್ಚಿಸಿತು ದೇಹಿಯೆಂಬರ
ನಾಗತರ ತಾ ಕಾಣದೊಂದಿನವಾಗ ಭಿಕ್ಷುಕರ ।
ಜಾಗರಸ್ವಪ್ನದಲಿ ಯಾಚಕ
ಭೂಗತರದಾವಲ್ಲಿ ಕಾಣದೆ
ಯಾಗ ಬಲಿ ಮಾಡುವನು ಬ್ರಾಂಹ್ಮರ ಕಾಣದನವರತ ॥ ೯

ವೇದ ಕಂಪದೊಳಿದ್ದು ತಾ ಮಧು
ಸೂದನನನಡಿಗಡಿಗೆ ನೆನೆನೆನೆ
ದಾದರಿಸಿ ಯೆಲೆ ದೇವ ಬೇಡುವ ದ್ವಿಜರ ತೋಱೆನುತ ।
ಮೇದಿನೀಸುರರಿಲ್ಲದಿರ್ದೊಡೆ
ಮೇದಿನೀಶ್ವರರೇಕೆ ಧೇನುಗ
ಳಾದರೆಯು ತಾ ಪೂಜಿಸದ ಮಾನವರು ಜನಿಸಿದರೆ ॥ ೧೦

ಮೇದಿನೀಸುರವರ್ಗಕಿಕ್ಕದ
ಮೇದಿನೀಶರ ಧನಗಳೇತಕೆ
ವೇದವಿದ್ವರ ಓದುವಾದ್ವಿಜನಿಕರವಿಲ್ಲದಿರೆ, ಗ ಘ

ಧೇನುವೇತಕೆ ದಾನಗೊಂಬ ಮ
ಹಾನುಭಾವರು ದೊರಕದಿದ್ದರೆ
ಮಾನವೇಂದ್ರನ ರಾಜ್ಯವೇತಕೆ ವ್ಯರ್ಥವೆನುತಿರಲು ।
ದಾನವಾಂತಕನಱಿದು ತತ್‌ಕ್ಷಣ
ತಾನು ಜನಿಸಿದನದಿತಿಕಶ್ಯಪ
ಸೂನುವಾಗಿಯೆ ಶ್ರವಣಋಕ್ಷದೊಳರಸ ಕೇಳೆಂದ ॥ ೧೧

ಜನಿಸಿದನು ವೈರೋಚಿನಿಯ ಘನ
ಮನದ ಬಯಕೆಯ ಕೊಡಲು ಹರಿ ತಾ
ನನಿಮಿಷರ ಹರಿಬವನು ತೆಗೆಯಲ್ಕುದಿಸಿ ಭವನದಲಿ [1] ।
ಜನಕಜನನಿಯು ಗುಡಿಯ ಕಟ್ಟಿಸಿ
ವಿನಯದಲಿ ತಾ ಜಾತಕರ್ಮವ
ನನುಕರಿಸುತುತ್ಸವದಿ ನೋಡುತ್ತಿರಲು ಬಳಿಕಾತ ॥ ೧೨

ವಾಮನಗೆ ಚೌಲೋಪನಯನವ
ತಾವು ಮಾಡಿದ ಕ್ರಮದಿ ಕರ್ಮವ
ಸಾಮವೇದಾದ್ಯಮಳನಿಗಮವ ಸುತಗೆ ಕಶ್ಯಪನು ।
ಪ್ರೇಮದಲಿ ಪರಿಕ್ರಮಿಸಿ ದಾನ
ಸ್ತೋಮಯೋಗ್ಯನ ಮಾಡಿ ನುಡಿದನು
ಭೂಮಿಕನ್ಯಾದಾನವಿದ್ಯೆಯ ಕೊಳಲು ಕೊಡಬಹುದು ॥ ೧೩

ಕೊಟ್ಟ ತಾನತ್ಯಧಿಕಪುಣ್ಯಾಪ್ರ
ನೆಟ್ಟನವ ಕೊಂಡಾತನುತ್ತಮ
ಸೃಷ್ಟಿಯಲ್ಲೀ ಮೂಱುಬಗೆಗಳ ಕಾಣೆನಜಗೆಂದ ।

ಬಲಿಚಕ್ರವರ್ತಿಯ ನಗರಿಗೆ ವಾಮನದೇವರ ಆಗಮನ

ನೆಟ್ಟನಲ್ಲಿಂದಿೞಿದು ಬಂದನು
ಪಟ್ಟಣಕೆ ಬಲಿಚಕ್ರವರ್ತಿಯ
ಭೀಷ್ಟವನು ತಾ ಕೊಡುವೆನೆಂಬೀ ಹರುಷಪುಳಕದಲಿ ॥ ೧೪

[1] ದಿಸಿದನುವಮನ್ನ, ಖ.

ಕೌಪು ಕೃಷ್ಣಾ ಜಿನವು ವರಯ
ಜ್ಞೋಪವೀತದ ದಂಡಮುಂಜೆಯು
ನಾಪವಿತ್ರೋತ್ತಮನು ಕೊಡೆ ವಿಡಿದಲ್ಲಿಗೈತಂದ |
ಮಾಪತಿಯು ವರಕರಕಮಂಡಲ
ದಾಪುರುಷ ಬರುತಿರಲು ಕಡೆವೊಲ
ಗೋಪರಾಗಲು ಬಂದು ವೈರೋಚನಿಗೆ ಹೇಳಿದರು || ೧೫

ದೇವ ಬಿನ್ನಹ ವಿಂದು ತಾ ಭೂ
ದೇವನಾತ್ಮಜನೊಬ್ಬ ವಟು ಬರೆ
ತಾವು ಕೇಳಲಿಕಾತನೆಂದನು ಭೂಪ ಕೇಳೆನುತ |
ನಾವು ದಾನಾರ್ಥಿಗಳಹೆವೆನಲು
ದೇವ ಯಿದು ಹೊಸತೆನುತ ನಿಮ್ಮಡೆ
ಗಾವು ಹೇಳಲು ಬಂದೆವೆಂದರೆ ಬಲಿಯು ಹರುಷಿಸಿದ [1] || ೧೬

ಕಟ್ಟಿ ಗುಡಿತೋರಣವನೆಂದಾ
ಪಟ್ಟಣಕೆ ನಿರವಿಸಿಯೆ ತಾನತಿ
ಹೃಷ್ಟರೋಮಂಗಳಲಿ ಬಂದನು ದೇವಸಿದಿರಾಗಿ |
ಹುಟ್ಟಿ ಬಂದನು ಯಾಚಕನು ತಾ
ಹುಟ್ಟಿದನೆ ಹರಿಯೆನುತಲಿರಲಿಕೆ
ಪಟ್ಟಣವೆ ಬಂದಾತನೈದಲಿಕೀತ ಕಣ್ಣಾರೆ || ೧೭

ಕಂಡು ವೈಯ್ಯಿಕ್ಕಿಸಿದನತಿಥಿಗೆ
ದಿಂಡು ಗೆಡೆದನು ನಮ್ಮ ಪಿತೃಗಳ
ಹಿಂಡಿಗಾಯಿತು ಸತ್ಯಲೋಕವು ನಿಮ್ಮ ದರುಶನದಿ |
ಕಂಡುದಿಲ್ಲಾನೀಸುದಿನಗಳ
ತಂಡದಲ್ಲತಿಥಿಗಳನೆನುತಲಿ
ಕೊಂಡು ಬಂದನು ತನ್ನ ಭದ್ರಾಸನಕೆ ವಾಮನನ || ೧೮

1 ನೆಂದರುಚರರು ಕೈಮುಗಿದು, ಖ.

ತಂದು ತಾನರ್ಘ್ಯಾಸನಂಗಳ
ಛಂದದಲಿ ವಿಸ್ತರಿಸಿ ಬಿನ್ನಹ
ವಿಂದು ನಿಮ್ಮಯ ಬರವದಾವುದು ಬಯಸಿ ಬಂದುದನು ।
ಇಂದೆನಗೆ ಕರುಣಿಸುವುದೆಂದರೆ
ಮಂದರೋದ್ಧರನೆಂದನೆನಗಿದ
ನಿಂದು ಕೊಡುವುದು ಮೂಱುಪಾದದಲಿಳೆಯ ಸೀನಿಂತು ॥ ೧೯

ಮೂರಡಿ ಭೂಮಿಯು ಕೇಳಿದುದಕೆ ಪಶ್ಚಾತ್ತಾಪ.

ಎನಲು ಬಲಿ ಬೆಂಡಾಗಿ ಯಿಾಬಡ
ಮನದ ವಿಪ್ರನದೇನ ಬೇಡಿದ
ನೆನುತ ಸುಯ್ದನು ತನ್ನ ಪುಣ್ಯದ ಫಲವು ಕಿಱಿದೆನುತ ।
ನಿನಗೆ ಬುದ್ಧಿಯನಾರು ಕಲಿಸಿದ
ಜನರು ತನ್ನನು ಕೆಡಿಸ ಬಗೆದರು
ಕನಕದಗಣಿತವಸ್ತುಚಯವನು ಬೇಡನೀದ್ವಿಜನು ॥ ೨೦

ಮನಮುಱುಗಿ ದೈನ್ಯದಲಿ ದಾನದ
ಘನತೆಗೈದಿದ ವ್ರತಿಯು ಬಯಸಲು
ತನಗೆ ಹರಿ ಕರುಣಿಸಿದನಲ್ಪವನೀತ ಬಂದೀಗ ।
ಧನವ ಬೇಡದೆ ಬರಿಕಿಱುಕುಳದ
ವನಿಯ ಬೇಡಿದನೀಗ ಕೊಡುವೆನು
ಮನವೊಲಿದು ಬೇಡಿದರೆ ರಾಜ್ಯವನೆನ್ನಸಹಿತೆನುತ ॥ ೨೧

ಎಲೆ ಮರುಳ ಭೂಸುರರೆ ಯೆನ್ನಯ
ಹೊಳಲಿಗೈತಂದಿಲ್ಲಿ ನೀವಿಂ
ಮೊಳನ ಭೂಮಿಯ ಬೇಡಿದಿರಿ ನೀವಿದನಱಿಯರಿನ್ನು ।
ಇಳೆಯ ಮೇಲಿದಕೆನ್ನ ಕೀರ್ತಿಯ
ಬೆಳಕವಾಗದೆ ಹೋಯಿತೆನುತಲಿ
ಕಳವಳಿಸಿ ತನ್ನರ್ಥ ಜಾಣಿಸದೆಂದು ದುಗುಡದಲಿ ॥ ೨೨

ತರಿಸಿದನು ಪೊಂಗಳಸವಾರಿಯು
ಪರುತವಿಸಿ ತನ್ನಾತ್ಮಸತಿಯುಳ
ಪರಮಹರುಷದಿ ಹರಿಯು ಚರಣವ ತೊಳದು ಸತ್ಕರಿಸಿ |
ಧರಣಿಯುಲಿ ಮೂಱಡಿಯು ನಿನಗಾ
ದರಿಸಿದೆನು ಶ್ರೀಹರಿಗೆ ತಾನಿದು
ವರಸಮಾರಾಧನೆಯದೆನುತಲಿ ಪೂರ್ಣಕಲಶವಲಿ || ೨೩

ಧಾರೆಯೆಱೆಯುಲಿಕಲ್ಲಿಗಾತನ
ಧಾರೆಯನು ಗುರು ಬೇಡಬೇಡೆನೆ
ವಾರಿಜಾಕ್ಷನು ಶುಕ್ರದೇವರ ಕಣ್ಣ ದರ್ಭೆಯುಲಿ |
ತೂರಿಸಲು ಕಣ್ಣೊಡೆದು ಪೋಯಿತು
ಧಾರುಣೀಸುರರಡ್ಡಬೀೞಲು
ಮಾರಿಯಾಯಿತು ಶುಕ್ರದೇವರ ಕಣ್ಣಿಗಂದಾಗ || ೨೪

ಶುಕ್ರದೇವರ ಕಣ್ಣು ಹೋಗಲಿ
ಕೆಕ್ಕಸರದಲು ಕಡೆಗೆ ಸಾಱಿದ
ರಕ್ಕ ದೂರ ಬಲೀಂದ್ರನಾಕ್ಷಣ ದೇವಗಾಯಂಗೆ |
ಇಕ್ಕಿದನು ಮೂಱಡಿಯು ಭೂಮಿಯು
ನಿಕ್ಕಲಿಕೆ ವಾಮನನು ತತ್ಕ್ಷಣ
ಕಕ್ಕಜವ ಶ್ರೀಮೂರ್ತಿಯಾದನು ತಾ ಚತುರ್ದಶದ || ೨೫

ಲೋಕ ವಿಕ್ರಮನಾತ್ರಿವಿಕ್ರಮ
ನಾಕೆವಾಳಸಿದೆಂತುಟೋ ಹರಿ
ಯಾಕಶಕೆ ನಿಂದಿರ್ದ ತಪ್ಪದೆ ಯಿಕ್ಕೆ ಯೆರಡಾಯ್ತು |
ಲೋಕ ಮೂಱಲಿ ಸತ್ಯಲೋಕವ
ನೂಕಿ ಮೇಲಣ ಕಮಲಜಾಂಡದ
ಜೋಕೆಯುಕು ನಖಸೋಕೆ ಬಿರಿಯಿತ್ತಾಕಟಾಹವದು || ೨೬

ಆಮಹಾಕೌತುಕವ ಕಂಡನು
ತಾ ಮಹೋತ್ಸಾಹದಲಿ ಕಮಲಜ
ನಾ ಮಹಾಚರಣವನು ತೊಳೆದನು ಶ್ರೀ ತ್ರಿವಿಕ್ರಮನ ।
ಆಮಹಾಪಾದದಲಿ ಪುಟ್ಟಿದ
ಳಾಮಹಾಗಂಗಾಭಿಧಾನದಿ
ಭೂಮಿಯನ್ನಾಕುಳಿಸಿ ಬಾರದೆ ಯಾಮಹೀತಳಕೆ ॥ ೭೭

ಬಲಿಚಕ್ರವರ್ತಿಯ ವಿತಳ ಪ್ರವೇಶ.

ಬರಬರಲು ಹದಿನಾಲ್ಕು ಲೋಕದ
ಸುರನರೋರಗನಿಕರ ಬಾಯ್ಬಿಡೆ
ಹರಿಯು ಖರ್ಪರದಿಂದ ಸಾಕ್ಷಾದ್ಧನ್ಯ ತಾನೆನುತ ॥
ಸರಸಿಜಾಂಡವನೈದೆ ನುಂಗುವ
ವರಜನಕ ತಾನಾತ ಮಂಗಳ
ಪರಮಕರುಣಾಸಿಂಧು ಪಾರ್ವತಿಯರಸ ಜಡೆಗಳಲಿ ॥ ೭೮

ಧರಿಸಿದನು ಗೀರ್ವಾಣಗಂಗೆಯ
ಪರಮಹರುಷದಿ ಶಂಭುಗಾದಿನ
ಸುರರು ಸೇಸೆಯನಿಕ್ಕಿ ಶಿವ ಶಿವ ಯೆಂದು ತಾವೈದೆ ।
ಧರೆಗಳವು ಹದಿನಾಲ್ಕು ನಿರುತದಿ
ಪರಮಕರುಣಾಸಿಂಧುನಾಮದಿ
ಹರುಷದಿಂದವೆ ಹರ ಹರೆನುತಲಿ ಸುರರು ತುತಿಸಲಿಕೆ ॥ ೭೯

ಹರುಷದಲಿ ಶಿವನಾತ್ರಿವಿಕ್ರಮ
ನಿರವ ಕಂಡು ಮಹಾನುಭಾವದಿ
ಶಿರವ ತೂಗಲು ಜಡೆಯೊಳದ್ದಾ ಗಂಗೆ ತಾ ತುಳುಕಿ ।
ಭರದಿನಾಗಳು ಮೂಱುಮುಖದಲಿ
ಹರಿದಳೈ ತ್ರಿಭುವನಕ ಕಂಡಾ
ಸುರರು ಹೊಗಳಿದರಲ್ಲಿ ಗಂಗೆಯ ಹಲವು ತುತಿಯಿಂದ ॥ ೮೦

ಬಳಿಕ ತ್ರಿವಿಕ್ರಮನದೆಂದನು
ಬಲಿಯನೇ ಕುಳಿತಾಗ ನಮ್ಮಯ
ನೆಲನ ಕೊಡು ಮತ್ತೊಂ[1]ದು ಪಾದವನೆನುತ ಕಡೆಗಟ್ಟಿ |
ಬಲಿಯು ಘಾಡಿಸಿ ಯಾತನಂಗನೆ
ಬಲಿಗೆ ಬುದ್ಧಿಯ ಹೇಳಿ ಯಿಾಜಗ
ಬಳಗವೆರಡಕೆ ಸಂದುದಾದೊಡೆ ನಿನ್ನ ತನುವಿದನು || ೨೧

ಉಳಿದ ಪಾದಕ್ಕಿಕ್ಕು ನೀನೆನೆ [2]
ನಳಿನಲೋಚನಗಾಗ ಬಿನ್ನಹ
ಬಲಿಯು ಮಾಡಿದ ಕೇಳು ಜನಮೇಜಯಮಹೀಪಾಲ |
ಎಲೆ ತ್ರಿವಿಕ್ರಮ ನಿನ್ನ ಕೌರತೆಯ
ನೆಲಕೆ ಯಿದೆ ಯೆನ್ನುತ್ತಮಾಂಗದ
ತಳವೆನಲು ನಸುನಗುತ ಗಂಗಾಜನಕನಿಂತೆಂದ || ೨೨

ನಿನ್ನ ಸತಿಮತಿಗಾನು ತುಷ್ಟಿಯ
ಮನ್ನಿಸಿದೆ ಕೇಳೆಂದು ಬಲಿಯನು
ತನ್ನ ಸಂಗಡ ಹೊಯ್ದನಾತನ ಪಿತಳಮಂದಿರಕೆ |
ಇನ್ನುವಾಗಲಿ ಪರಮಸುಖದಲಿ
ತನ್ನ ಪುತ್ರಕಳತ್ರದಿಂದವೆ
ಪನ್ನಗಾಶನದೆಡೆಯೊಳಿರ್ದನೆ ಕಲ್ಪಪರಿಯಂತ || ೨೩

ಇದನರಿದು ಭೂಸುರರ ದಾನದ
ಪದನ ಕೊಳ್ಳದಿರೆಂದು ನಾನಾ
ವಿದಿತಲೋಕವನೈದಲಾಪತಿ ದ್ವಿಜರ ಭಜಿಸೆಂದ |
ಇದು ಕಣಾ ಯದಿತಿಯನು ಮನ್ನಿಸಿ
ಮುದದಿ ಬೇಡಿದ ವಸ್ತುವೀಯಲಿ
ಕದಕೆ ತಾ ಕೈವಲ್ಯವಾಯಿತು ಬಲಿಗೆ ಕೇಳೆಂದ || ೨೪

1 ಯಿಂನೊಂ, ಕ. ಖ 2 ವೆಂದರೆ, ಕ. ಖ.

ಇದು ಪರಮಮಂಗಳಮಹೋದಯ
ವಿದುಪೆ ಸಕಲವ್ಯಾಧಿಹರ ವಿಂ
ತಿದುಪೆ ಶತ್ರುಕ್ಷಯ ಸಮಾಹಿತಿಪರಿಭಕಾಂತಿಮತಿಯು ।
ಒದವಿಪನು ಸಂತೋಷಸುಖಸಂ
ಪದವ ಕೇಳ್ದವರಿಂಗೆ ಬಟಿಕಾ
ಯುಗುಶಿರೋಮಣಿ ವೀರನಾರಾಯಣನು ಕರುಣದಲಿ ॥ ೩೫

ಹತ್ತನೆಯ ಸಂಧಿ ಮುಗಿದುದು.

ಹನ್ನೊಂದನೆಯ ಸಂಧಿ.

ಸೂಚನೆ.

ಹೇಳಿದನು ಕೌತುಕವ ಲಕ್ಷ್ಮೀ
ಲೋಲನಡಿಗಳಗಾಯ್ತುದೆರಡಕ
ಮೇಲುಜಗವೈನೂಱುಕೋಟಿಯುಮತಳಸಹಿತೆಯ್ದೆ ॥

ಕೇಳು ಜನಮೇಜಯ ಧರಿತ್ರೀ
ಪಾಲ ಬರೆ ಬಲಿಚಕ್ರವರ್ತಿಯು
ಪಾಲಿಸಿದ ಪರಿವಿಡಿಯ ನಾ ಹರಿ ತ್ರಿವಿಕ್ರಮಾಕೃತಿಯ ।

ಲೋಕವಿಸ್ತಾರ ಪ್ರಶ್ನೆ ಮತ್ತು ಉತ್ತರ

ಕೇಳನಲು ಮುನಿಪತಿಯುನಾ ನೃಪ
ಕೇಳಿದನು ಬ್ರಹ್ಮಾಂಡದಗಲವ
ಹೇಳು ವಿಸ್ತರವಾಗಿ ನೀ ಹದಿನಾಲ್ಕು ಲೋಕಗಳ ॥ ೧

ಕೂಡೆ ಸಪ್ತದ್ವೀಪಸಾಗರ
ಗೂಡಿ ನವಖಂಡಂಗಳನಗೆ
ನಿರೂಢಿಗಣಿತವನಿನ್ನು ಹೇಪೆನೆ ಮುನಿಪನಿಂತೆಂದ ।

ರೂಢಿಯಗಲವೆ ಕೇಳು ನೀನೀ
ರೂಢಿಪತಿ ಮುಂದಹೊಡೆ ನೀನಿದ
ನೋಡಿ ಕೇಳ್ವ ಸಾಂಗದಿಂದವೆ ನಾನು ಹೇಳುವೆನು ॥ ೨

ಎಸೆವ ತಾನೈನೂಱುಕೋಟಿಯ
ಮಿಸುಪ ಯೋಜನವಲಯವೆನು ತಾ
ನುಸುರುವೆನು ತಾ ಕೆಳಗಿದಹುದಾಹರಿಯ ನಿಜಗೃಹಕೆ[1] |
ಎಸೆದಿಹುದದೊಂಬತ್ತು ಲಕ್ಷದ
ಪಸರದಲಿ ಪರಿಪೂರ್ಣನಾಗಿಹ
ಬಿಸರುಹಾಕ್ಷನನಂತಶಯನನು ಭೂಪ ಕೇಳೆಂದ ॥ ೩

ಅದಱ ಮೇಲಿಂತತಳ ಲಕ್ಷದ
ತುದಿಗೆ ತಾನಾಕಾಶವೆರಡಂ
ತದಱ ಮೇಲುಂ ವಿತಳನಾಲ್ಕೇ ಲಕ್ಷ ಕೇಳೆಂದ |
ಅದಱಲಾಯಾಕಾಶವಿಪ್ಪುದು
ಯುದಱ ಯಿಮ್ಮಡಿ ಸುತಳ ಬಳಿಕಾ
ವಿದಿತ ಹದಿನಾಱರದು ಮೂವತ್ತೆರಡಱಾಕಾಶ ॥ ೪

ಅದಱ ಮೇಲಿಮ್ಮಡಿ ಮಹಾತಳ
ವದಱ ಯಿಮ್ಮಡಿ ಶೂನ್ಯ ಮೇಲಣ
ವಿದರದಲಿ ಪರಿಪೂರ್ಣವಾಗಿಹುದಾತಳಾತಳವು |
ಅದಱ ಯಿಮ್ಮಡಿ ಮೇಲೆ ಶೂನ್ಯವು
ಯುದಕೆ ತಾಸೀಗೆರಡು ಮಡಿಯ್ಯ
ವಿದಿತಕಿಪ್ಪುದು ವರರಸಾತಳ ಶೂನ್ಯ ತದ್ವಿಗುಣ ॥ ೫

ಮೇಲೆ ತಾ ಪಾತಾಳವಿಪ್ಪುದು
ಕೇಳು ನಾಲ್ವತ್ತೆಂಟು ಕೋಟಿಯ
ಮೇಲೆ ತೊಂಬತ್ತಾಱುಲಕ್ಷದಲಿಹುದು ಕೇಳೆಂದ[2] |

1 ಹದಿನಾಲ್ಕು ಲೋಕದ ಕೆಳಗ ಹರಿಭುವನ, ಗ. ಘ. 2 ತದ್ವಿಗುಣ, ಖ.

ಹೇಳಲೇನಿನ್ನಾನು ಕೆಳಗಣ
ದೇಳುಪಾತಾಳಂಗಳಳತೆಯು
ಕೇಳದೆಂಭತ್ತೆರಡುಕೋಟಿಯು ವಳಯುಕಾಯ್ತೆಂದ ॥ ೬

ಮೇಲೆ ಮೇದಿನಿ ಪುಟ್ಟಿಯಂತಿಹು
ದೇಳುಪಾತಾಳಷ್ಟರಗಲಕೆ
ಚಾಲಿಸಿಹುದೆಂಬತ್ತಯೆರಡೇ ಕೋಟಿ ಪರಿಯಂತ ।
ಕೇಳು ತಾ ಭೂವಳಯು ತಾ ವರ
ಲೋಲಜಂಬೂದ್ವೀಪ ಲಕ್ಷವು
ಚಾಲಿಸಿಹುದದಕರಸ ಯೆರಡೇಲಕ್ಷ ಲವಣಾಂಬು ॥ ೭

ಅದನು ತಾ ಸುತ್ತಿಹುದು ದ್ವೀಪವು
ಯುದಱ ಯಿಮ್ಮಡಿ ಪ್ಲಕ್ಷದ್ವೀಪವು
ಯುದಱ ಹೊಱವ್ಯ ಸ್ವಾದುಜಲವೆಂದದಱಿನಾಚೆಯಲಿ ।
ವಿದಿತವಾಕುಶದ್ವೀಪವದಱಿಂ
ತುದಿಗೆ ತಿರುಗಿಹುದಿಕ್ಷು ವಿಕ್ಷುವ
ಹೊದಿಸಿಹುದು ತಾ ಕ್ರೌಂಚದ್ವೀಪವದನು ಮಧುಸುರಭಿ ॥ ೮

ಅದಕೆ ಬಳಸಾಗಿಹುದು ಕೇಳಾ
ಯುದಕೆ ಶಾಲ್ಮಲಿದ್ವೀಪದ್ವೀಪವ
ನದನು ಸುತ್ತಿಹುದಾಜ್ಯನಿಧಿ ತಾನರಸ ಕೇಳೆಂದ ।
ಅದಕೆ ಚಕ್ರಾಕಾರದಲಿ ತಾ
ವಿದಿತ ಪುಷ್ಕಳ ದ್ವೀಪ ದ್ವೀಪಕೆ
ದಧಿಸಮುದ್ರವು ಸುತ್ತಿ ತಾಸಿಹುದರಸ ಕೇಳೆಂದ ॥ [1] ೯

ಅದಕೆ ಸ್ವರ್ಣದ್ವೀಪದುಡುಗೆಯು
ವದಕೆ ತಾ ಪಯರಾಶಿ ರಾಶಿಗೆ
ವಿದಿತವೃತ್ತಾಕಾರದಲಿ ಸುತ್ತಿರ್ಪ ಪರ್ವತವು ।

---

1 ಶ್ವೇತಮಯವಾಗಿ, ಗ.ಘ.

ಅದಱಗಲ ಪದಿನೇಳುಲಕ್ಷವು
ಯದಱುದಯು ತಾನೊಂದುಲಕ್ಷವೆ
ದಿದನು ಲೋಕಾಲೋಕಪರ್ವತವೆಂಬರೈ ಭೂಪ ‖ ೧೦

ಇಂತು ತಾ ಭೂಗೋಳದಗಲವೆ
ದಂತದಿಂದೊಂದೊಂದಱವ್ಮಡಿ
ಕಂತುಪಿತ ಪ್ರತ್ಯಕ್ಷವಾಗಿಹ ಕಡಲ ಪರಿಯಂತ ।
ಅಂತು ಸಪ್ತದ್ವೀಪದ್ವೀಪದ
ಪಂತಿಯಲಿ ಹರಿದಿಹ ಸಮುದ್ರದ
ಯಂತವಗಲವ ಕೇಳು ನೂಱುವೆತ್ತುನಾಲ್ಕ ‖ ೧೧

ಕೋಟಿಯೋಜನವಲಯು ಭೂಮಿಯು
ಮೂಟ ಕೆಳಗಣ ಕೂಟ ಕೂಟದ
ಕೋಟ ಮುನ್ನೂಱಪ್ಪತ್ತೆಂಟುಕೋಟಿಯೋಜನವು ।
ಕೋಟಿಯೊಂದೇ ಭೂಮಿ ಭೂರ್ಭುವ
ದಾಟ ಯೆಡೆಯಾ ಭುವನದಿವ್ಮಡಿ
ಕೋಟಿ ಯೆಂಟೇ ಸ್ವರ್ಗ ತಾನದು ಕೋಟಿ ಪದಿನಾಲ್ಕು ‖ ೧೭

ಮೇಲೆ ತಾ ಮಹರ್ಲೋಕವಿವ್ಮಡಿ
ಕೇಳುವೆದಱಿಂ ಮೇಲೆ ತಾಳ್ದಿಹು
ದಾಲಯದ ಜನಲೋಕ ಲೋಕದ ಮೇಲೆ ತಪಲೋಕ ।
ಆಲಯದ ಮೇಲಿಹುದು [1] ಕಮಲಜ
ನಾಲಯವು ಶ್ರೀಸತ್ಯಲೋಕವು
ಮೇಲೆ ಮುಸುಕಿಹುದಾಕಟಾಹವು ಬ್ರಹ್ಮಗೋಳಕದ ‖ ೧೩

ಇಂತು ಮೇಲಣಲೋಕವಾಱಱ
ಪಂತಿಯೋಜನ ದ್ವಿಗುಣ ದ್ವಿಗುಣದ
ಲಿಂತು ಕೇಳರು ಕೆಳಗೆ ಮೂಱೇಕೋಟಿಯೋಜನವು ।

---

[1] ಮೇಲೆಯಿವ್ಮಡಿಸಿಹುದು, ಗ, ಘ.

ಅಂತರಂತರದೆಡೆಯು ಲೋಕಗ
ಳಂತರದ ಬಯಲೆಂತುಟೈ ತಾ
ನಂತು ಯೋಜನವಾಯ್ತುದಿಪ್ಪತ್ತಾಱುಕೋಟಿಗಳು ॥ ೧೪

ಆಮಹಾಕಮಲಜನ ಲೋಕದ
ಲಾಮಹಾಬ್ರಹ್ಮಾಂಡಭಾಂಡದ
ಸೀಮೆಯೇ ಜನಕೋಟಿ ನಾಲ್ವತ್ತೆರಸ ಕೇಳೆಂದ ।
ಆಮಹಾಬ್ರಹ್ಮಾಂಡಖರ್ಪರ
ಭೂಮಿಯುಗಲದ ಮದವು ತಾನುವಿ
ರಾಮಿಸಿದನವಧಾರು ಕೋಟಿಯು ವೆಳಯು ಕೇಳೆಂದ ॥ ೧೫

ಅಂತರಿತಮಹರಾದಿಲೋಕದ
ಲಂತರವು ನೆಱಿಯಾಯ್ತು ಯೋಜನ
ವಂತು ನೂಱಱ ಮೇಲದಿಪ್ಪತ್ತೆರಡುಕೋಟಿಗಳು ।
ಅಂತು ತಾ ಬ್ರಹ್ಮಾಂಡಭಾಂಡದ
ಅಂತರವು ಐನೂಱುಕೋಟಿಯು
ಪಂತಿಯೋಜನ ಮೂಱುಲೋಕವದೆನಿಸಿಕೊಂಡಿಹುದು ॥ ೧೬

ಈಮಹಾಬ್ರಹ್ಮಾಂಡ ಯಿಮ್ಮಡಿ
ತಾ ಮಹಾಜಲಮುಸುಕಿಕೊಂಡಿಹು
ದಾಮಹಾಜಲವದನು ಮುಚ್ಚಿಯೆ ಶಿಖಿಯು ತಾನಿಹನು ।
ಆಮಹಾತೇಜವನು ಮಾರುತ
ತಾ ಮಹಾದ್ವಿಗುಣದಲಿ ಬಳಸಿಹ
ನಾಮಹಾಮಾರುತನ ಸುತ್ತಲು ತೀವಿತಾಕಾಶ ॥ ೧೭

ಬಂದಱಿಮ್ಮಡಿ ಯೊಂದು ತಾನಿಂ
ತೆಂದು ಸುಮಹಾಭೂತಪಂಚಕ
ದಿಂದ ಹೊಱಗಿಹುದಾಮಹಾವೈಕುಂಠವೆಂತೆಂದ ।

ತಂದೆ ಕೇಳೈ ಯಿವನದೆಲ್ಲವ
ನೊಂದು ಗೂಡಿಯು ಮೂಱುಲೋಕಗ
ಳೆಂದದೆಂಬರು ಸ್ವರ್ಗನರಪಾತಾಳಮೇಳಾಪ ॥ ೧೮

ಸುರಗಿರಿಯು ಬಳಸುತ್ತಲಿಹುದಾ
ಸುರವರರಿಳಾವೃತವು ಕೇಳಾ
ಗರಿದು ಸಾವಿರನವಸಹಸ್ರವು ನೀಲಪರ್ವತವು ।
ಎರಡುಸಾವಿರದಗಲವಾಚೆಯು
ವರವರುಷವಾರಮ್ಯವೆಂಬುದು
ಯೆರಡುಸಾವಿರಯೋಜನಂಗಳ ಶ್ವೇತಗಿರಿಯಿಹುದು ॥ ೧೯

ಮತ್ತೆ ತಾನೊಂಬತ್ತುಸಾವಿರ
ಬಿತ್ತರದಲಾ ಹಿರಣವರುಷವ
ವತ್ತಲಿಹುದಾನಿಷಧಗಿರಿಯುದಱೀಚೆಯಲಿ ಹರಿವರ್ಷ ।
ಒತ್ತಿಹುದು ತಾ ನೀಲಪರ್ವತ
ವತ್ತಲಿಹುದಾ ವರುಷಕಿಂಪುರು
ಷೋತ್ತಮವು ಮದಱಿಂದ ತೆಂಕಲು ವರಹಿಮಾಚಲವು ॥ ೨೦

ಅರಸ ಕೇಳೈ ಮೇರುಗಿರಿಯಾ
ಸರಸಿಜದ ಕರ್ಣಿಕೆಯ ಪೋಲಿರೆ
ಪರಿಧಿಯೆಸಳಂದದಲಿ ಭಾಸ್ಕರಕೇತುಮಾಲಾಖ್ಯ ।
ಕುರುವರ್ಷ ಭದ್ರಾಶ್ವ ವೆಂಬಿವು
ಶರಧಿಯೊತ್ತಿನಲಿಹವು ನಾಲಕು
ವರುಷಗಳು ಗಿರಿಗಂಧಮಾದನಮಾಲ್ಯವಂತಗಳು ॥ ೨೧

ಇಂತವೆಂಬತ್ತೊಂದುಸಾವಿರ
ಪಂತಿಯಲಿ ನವಖಂಡ ಪೊಂದಿಹು
ದಿಂತು ಪರ್ವತವವಕೆ ಯುಷ್ಟಾದಶಸಹಸ್ರಗಳು ।

ಇಂತು ತೊಂಬತ್ತಾಱುಸಾವಿರ
ವೆಂತು ವೊಂಬತು ಸಹಸ್ರಸುರಗಿರಿ
ಯಂತರಕೆ ನೆಲೆಯಾಯ್ತು ಜಂಬೂದ್ವೀಪ ತಾ ಲಕ್ಷ ॥ ೨೨

ಎಂಬುದಿದು ನೆಱೆ ಕಾಣಬಂದುದು
ವೆಂಬುದಕೆ ತಾ ಭರತವರುಷವ
ದಂಬುರುಹಜಾಂಡಕ್ಕೆ ತಾ ಕಾರಣವದಕೆ ಕಾರಣವು ।
ಶಂಬರಾರಿವಿರೋಧಿ ತಾನಿಹ
ಜಂಬುವಿನ ವರಜಾಂಡವೆನಿಸಿದ
ಯಿಂಬು ಪಡೆದಲ್ಲಿರ್ದ ನಾಗಿರಿಮಧ್ಯದಲಿ ಶಿವನು ॥ ೨೩

ನಂಬಿದರನುದ ರಿಪೆನೆಂದು ವಿ
ಡಂಬವಿಲ್ಲದೆ ಮಲ್ಲಿಕಾರ್ಜುನ
ನೆಂಬುವಭಿಧಾನದಲಿ ವರಶ್ರೀಶೈಲವೆಂದೆನಿಸಿ ।
ಎಂಬುದೈ ತ್ರೈಜಗದ ಲೋಕಗ
ಳಂಬಿನೊಳು ನೆಱೆ ಶುಭಗಳೀವುತ
ಲಂಬುಜಾಕ್ಷಿ ಮೃಡಾನಿಯರಸನು ಶಿವನು ನೆಲಸಿರ್ದ ॥ ೨೪

ಸಕಲತೀರ್ಥಕ್ಷೇತ್ರವೆಲ್ಲವ
ದಖಿಳಬಲ ವಾಮನನ ಚರಣದಿ
ಪ್ರಕಟದಲಿ ಬ್ರಹ್ಮಾಂಡಲಕ್ಷವದಡಗಿದಪವೆಂದ ।
ಸಕಲಜನರಕ್ಷಕನನಱಿಯದ
ಕುಟಿಲನು ಬಲಿ ತಾನು ಮೂಱಡಿ
ಚಕಿತ ಭೂಮಿಯ ಕೊಡೆ ತ್ರಿವಿಕ್ರಮಪಾದಕೀ ಜಗವು ॥ ೨೫

ನೆರೆಯದೆಂದರದಿನ್ನು ಶ್ರೀಸತಿ
ವರನ ಮಹಿಮೆಯ ಹೊಗೞಲಾಪನೆ
ಹರಿಯ ವೊಂದವತಾರ ವೊಂದಕದೊಂದು ಮಿಗಿಲೆಂದ ।

ಧರಣಿಪತಿ ಕೇಳ್ಮತ್ಸ್ಯ ಕೂರುಮ
ವರವರಹ ನರಸಿಂಹ ವಾಮನ
ಪರಶುಧರ ಶ್ರೀರಾಮ ಕೃಷ್ಣನು ಬೌದ್ಧ ಕಲ್ಕಿಗಳ ॥ ೨೬

ವರಮಹಾಮಹಿಮೆಯನು ಹೊಗಳುವೊ
ಡಚಿಯಿದ್ಯೆ ಶ್ರುತ್ಯರ್ಥವೆಂದರೆ
ನರರ ಪಾಡೇ ಹರಿಯ ಹೊಗಳುವೊಡರಸ ಕೇಳೆಂದ ।
ಸರಸಿರುಹಬ್ರಹ್ಮಾಂಡವಾಮನ
ಚರಣದಳತೆಗೆ ನೆರೆಯದೆಂದರೆ
ಹಿರಿದು ಹರಿಗಿಂದಿಲ್ಲ ನೋಡಲಿಕಧಿಕಸಮರೆಂದ ॥ ೨೭

ಆಹರಿಯೆ ನಿನ್ನವರ ಸಾರಥಿ
ಯಾಹರಿಯೆ ನಿನ್ನವರ ಭಾವನ
ದಾಹರಿಯೆ ನಿಮ್ಮವರಿಗಿಹ ಪರಪೆರಡ ಕೊಡುವಾತ ।
ಆಹರಿಯೆ ತಾನಾದಿನಿಗಮ
ವ್ಯೂಹದೂರನು ಪಾಂಡುಪುತ್ರರ
ಗೇಹದಲಿ ಸಿಲುಕಿದನು ಗದುಗಿನ ವೀರನಾರಯಣ ॥ ೨೮

ಹನ್ನೊಂದನೆಯ ಸಂಧಿ ಮುಗಿದುದು.

ಹನ್ನೆರಡನೆಯ ಸಂಧಿ

ಸೂಚನೆ.

ಸೋಮಕುಲಸಂಭವರು ಗಂಗೆಗೆ
ಕಾಮಿಸಿಯೆ ಪರಿಪೂರ್ಣರಾಗದೆ
ಭೂಮಿಯಲಿ ಶಂತನುಗೆ ಮಕ್ಕಳು ಜನಿಸಿ ಮರಳಿದರು ||

ಜನಮೇಜಯನ ಪೌರ್ವಿಕರ ವೃತ್ತಾಂತ

ಕೇಳು ಜನಮೇಜಯ ಮನೋಹರ
ದೇಳಿಗೆಯಲೇ ನಿಮ್ಮ ಪೂರ್ವನೃ
ಪಾಲಕಥನವನೆಂದು ವೈಶಂಪಾಯ ಹೇಳಿದನು |
ಶ್ರೀಲತಾಂಗೀ ಪ್ರಾಣನಾಥನ
ಲೋಲಭಾರತಭಾಷ್ಯಕಾರರ
ಲಾಲಿಸುತ ಜೈಮಿನಿಸುಮಂತುವ ನೆನೆದು ಕೈಕೊಂಡ || ೧

ಮೇಲೆ ಹೇಳಿದ ಭಾರತಾಖ್ಯದಿ
ಕಾಲರೂಪಮುಕುಂದ ಮುಚು ವ
ನೇಳುಜನ್ಮವ ಬಯಸಿದಲ್ಲದೆ ಯೀಮಹಾಕಥೆಯ |
ಹೇಳಬಾರದು ಕೇಳಬಾರದು
ಮೇಲೆ ಕೈವಲ್ಯಾದಿಗತಿಗಿದು
ಬಾಳಿಕೆಗೆ ಕಾರಣವು ಕೇಳೈ ರಾಯ ನೀನೆಂದ || ೨

ಆದಿಸೃಷ್ಟಿಯೊಳುದಿಸಿದರು ದ
ಕ್ಷಾದಿವಿಮಳನವಪ್ರಜೇಶ್ವರ
ರಾದರಂಬುಜಭವನ ಲೀಲಾಮಾತ್ರಸೂತ್ರದಲಿ |

ಆದನವರೊಳಗತ್ರಿಮುನಿಯುಂ
ದಾದನವನಿಂದೊಬ್ಬ ಸುತ ಚೆಲು
ವಾದನೈ ಹಿಮಕಿರಣನಾತನ ಕಣ್ಣ ದೆಸೆಯಿಂದ ॥ ೩

ಆತನಿಂದವೆ ಬಳಿಕ ತಾ ಶಶಿ
ಜಾತರಾದರು ಲೋಕದೊಳು ವಿ
ಖ್ಯಾತರೇ ಜನಿಸಿದರು ನಾನಾವರನೃಪೋತ್ತಮರು ।
ಜಾತನಾದನು ಬುಧನು ಚಂದ್ರಮ
ಸೋತು ತಾ ಗುರುಸತಿಯು ಜಠರದ
ಲೀತಗಾಯಿತು ಶಾಪ ಗುರುಗಳಿನಂದು ಚಂದ್ರಮಗೆ ॥ ೪

ಎಲವೊ ಯತ್ರಿಯು ಸುತನೆ ನಿನ್ನಯು
ಕಳೆಯು ನೊಂದುಗುವೆಂದು ಸುರಗುರು
ನಳಿನವೈರಿಗೆ ಶಾಪವಿತ್ತನು ಭೂಪ ಕೇಳೆಂದ ।
ಬಳಿಕ ಸುರತತ್ತೀಸರೆಲ್ಲರು
ನಳಿನಸಂಭವಗಱುಹೆ ಪುನರಪಿ
ತಿಳಿದು ತಾ ಸಂಪೂರ್ಣಕಳನಾಗೆಂದು ವರವಿತ್ತ ॥ ೫

ಎಂದು ಪಂಕಜಸುತನು ಚಂದ್ರಗೆ
ಬಂದ ಶಾಪವ ನಿಲಿಸಿ ಕಳುಹಿದ
ನಿಂದು ಕುಲ ತಾನಾತನಿಂದವೆ ಯಾಯ್ತು ಶಶಿವಂಶ ।
ಒಂದುದಿನ ಬುಧನಿಳೆಯನುಱಿ ತಾ
ಬಂದು ರಮಿಸಲ್ಕಲ್ಲಿ ಪುಟ್ಟಿದ
ನಂದು ಪೌರೂರವನುಮವನಿಂದಾಯು ಕೇಳೆಂದ ॥ ೬

ಆಮಹೀಶಗೆ ನಹುಷ ನಹುಷಂ
ಗಾಮಹಾತ್ಮ ಯಯಾತಿ ಬಳಿಕೀ
ಸೋಮಕುಲವೆರಡಾಯ್ತು ಯದುಪೂರುಗಳ ದೆಸೆಯಿಂದ ।

ಆಮಹಾಯದುವಿಂದ ಯಾದವ
ಭೂಮಿಪರು ಜನಿಸಿದರು ಮತ್ತಾ
ಸೋಮಕುಲವರತಿಲಕರಾದರು ಪುರುಮಹೀಶನಲಿ ॥ ೭

ಯದುಪರಂಪರೆಯಿಂದ ಯಾದವ
ರುದಿಸಿದರು ಪೂರುವಿನ ದೆಸೆಯಿಂ
ದದುವೆ ಪೌರವವಂಶವೆನಿಸಿದುದಾದಿಪಙ್ಕ್ತಿಯಲಿ ।
ವಿದಿತಪೂರ್ವಾನ್ವಯದ ಜಾತದೊ
ಳುದಿತವರ ನೃಪಕಥೆಯ ವಿಸ್ತರ
ವದನು ತಾ ಹೇಳಿದನು ರಾಯಂಗೇಕದೇಶದಲಿ ॥ ೮

ಪೂರುವಿಂಗಾ ಭರತ ಭರತಗು
ದಾಂಪಾರ್ಥಿ ಸುಹೋತ್ರ ನಾತಗೆ
ಧೀರನಾತನು ಸೋಮವಂಶಲಲಾಮ ನೃಪತಿಲಕ ।
ಧಾರುಣೀಪತಿ ಕೇಳು ನಿಮ್ಮಯ
ಪೂರುವಿನ ಸಂತಾನದತಿಶಯ
ವಾರು ಹೊಗಟಿಲಿಕಳವದೆಂದನು ಭೂಪತಿಗೆ ಮುನಿಪ ॥ ೯

ಭರತನಾದುಶ್ಯಂತಸಿಂದವ
ತರಿಸಿದನು ತತ್ಪೂರ್ವನೃಪರಿಂ
ಹಿರಿದು ಸಂದುದು ಬಟಿಕ ಭಾರತವರುಷವಾಯ್ತಲ್ಲಿ ।
ಭರತಸೂನು ಸುಹೋತ್ರನಾತನ
ವರಕುಮಾರಕ ಹಸ್ತಿ ತಾನಿಭ
ಪುರಿಯ ರಚಿಸಿದ ಹಸ್ತಿನಾಪುರವೆಂದು ಹೆಸರಿನಲಿ ॥ ೧೦

ಆಕುಮಾರಕನಿಂದ ಜನಿಸಿದ
ಲೋಕದೊಳು ವಿಖ್ಯಾತಕೀರ್ತಿಯು
ನಾಕಿಯೋಗ್ಯನು ಸೂರ್ಯಪುತ್ರಿಗೆ ಮರುಳುಗೊಂಡಿರಲು ॥

ಆಕೆಯನು ಸೇರಿಸಿದನಾತಗೆ
ನಾಕಿಯೋಗ್ಯವಸಿಷ್ಠಶಿಷ್ಟನು
ಲೋಕಲೋಚನ ತಂದು ಕೊಟ್ಟನು ತನ್ನ ನಂದನೆಯ ॥ ೧೧

ಅರಸ ಕೇಳ್ಳೈ ಸೂರ್ಯಪುತ್ರಿಕೆ
ಗರಸನಾದನು ಬಳಿಕ ತಾ ಸಂ
ವರಣನವನಿಂ ಕುರುಕುಲವು ತಾನಾಯ್ತು ಕುರುವಂಶ ।
ವರಪರಂಪರೆಯಾ ಪ್ರತೀಪನು
ಧರಣಿಪತಿಯಾತನಲಿ ಶಂತನು
ಧರೆಗಧೀಶ್ವರನಾಗಿ ಜನಿಸಿದನರಸ ಕೇಳಂದ ॥ ೧೨

ಸರಸಿಜಾಸನ ಕೊಟ್ಟಶಾಪದ
ಲರಸಿಯಾದಳು ಗಂಗೆ ಬಳಿಕ
ಬ್ಬರಲಿ ಮಕ್ಕಳು ವಸುಗಳಂಟು ವಸಿಷ್ಠಶಾಪದಲಿ ।
ನಿರಪರಾಧಿಗಳೀೞುಜನ್ಮಾಂ
ತರಕೆ ಮರಣವೆ ಕಂಡರೊಬ್ಬಂ
ಗಿರಲು ಭೂಲೋಕದಲಿ ದೇವವ್ರತನು ತಾನೊಬ್ಬ ॥ ೧೩

ನಾಮದಲಿ ಜನಿಯಿಸಿದನೆನಲಿಕೆ
ಭೂಮಿಪತಿ ಕೇಳಿದನು ಶಾಪವೆ
ದೇನದಾರಿಂದಾಯ್ತುದೆಂದರೆ ಮುನಿಪನಿಂತೆಂದ ।

ಅಷ್ಟವಸುಗಳಿಗೆ ಶಾಪ ಕಾರಣ.

ಭೂಮಿಪತಿ ಕೇಳ್ಮುನ್ನ ವಸುಗಳ
ಸ್ತೋಮದಲಿ ಕಿಗ್ಗಱಿಯನಂಗನೆ
ಭೂಮಿಯೊಳು ತಾನೊಬ್ಬ ನೃಪತಿಯ ವಧುವನೊಡಗೂಡಿ ॥ ೧೪

ಆಡುತಿರಲೊಂದಿನದೊಳಂದಳು
ನೋಡು ನಿನಗಾನಮೃತವೆಱೆವೆನು
ರೂಢಿಯಲಿ ನಾನಿನ್ನನಮರೆಯ ಮಾಡಿ ಬದುಕಿಸುವೆ ।

ನೋಡೆನುತ ತನ್ನರಸನಲ್ಲಿಗೆ
ಬೇಡ ಬಂದಳು ಸುಧೆಯನಾಗಲು
ಬೇಡಿದರೆ ತಾನರಸಿಯಾಜ್ಞೆಯನಾಗ ಕೈಕೊಂಡ ॥ ೧೫

ಎಲೆ ವರಾಂಗಿಯೆ ಯಮೃತವೇಕೆಂ
ದೆಳಸಿ ಕೇಳದೆ ಯಮೃತವೆಱೆವನು
ಬೞಿಕ ಲಲನೆಯ ಮಾತ ಗೇಳಿಯೆ ತನ್ನ ಪಿತೃಸಮರ ।
ನಿಳಯಕೈತಂದೆಂದ [1] ಜ್ಯೇಷ್ಠರ
ಬಳಗಕಾಗಲೆ ಯೆನಗದಮೃತದ
ಕಳಸ ಬೇಕನೆ ವಸುಗಳಾಗಲು ತಮ್ಮನಾಜ್ಞೆಯನು ॥ ೧೬

ಪತಿಕರಿಸಿಯೆ ವಸಿಷ್ಠನಾಶ್ರಮ
ಕ್ಷಿತಿಗೆ ಬಂದಿಹ ಕಾಮಧೇನುವ
ಮತಿಮಱೆದು [2] ತಾವೆಂಟುಜನಗಳು ಬಿಟ್ಟು ತಸ್ಕರದಿ ।
ಗತಿಯ ಮಾಡಲಿಕಾಕೆ ಮುನಿಪನ
ಕ್ಷಿತಿಯು ಬಿಡದಿರೆ ಯರಲಮುಳ್ಳಿನ
ತತಿಗಳಲಿ ಸದೆಬಡಿಯೆ ನೋಯಲಿಕಱಿತನಾಮುನಿಪ ॥ ೧೭

ಬಂದು ವಸುಗಳ ಸ್ತೋಮಕಾಗಲ
ಗೊಂದು ಶಾಪವ ಕೊಟ್ಟನೊಬ್ಬನಿ
ಗಿಂದುವದನೆಯು ಕೂಟ ರೂಢಿಗೆ ಘಟಿಸಬೇಡೆಂದು ।
ಇಂದುವದನೆಯು ಕೈಯ್ಯ ಮರಣವ
ದಿಂದುವದನೆಯು ಮಾತ ಕೇಳಿದ
ತಂದೆಗಾಗಲಿ ಯೆಂಟುನೂಱು ಸಂವತ್ಸರಾಂತ್ಯದಲಿ ॥ ೧೮

ಕೋಲುಮಂಚದ ಮೇಲೆಯುಲಗಿನ
ಸಾಲಲೇ ಪವಡಿಸಲಿ ಬೞಿಕವ
ನೇಱುಮಾಸಂಗಳಲಿ ದೇಹವ ಬಿಡುವನೈ ಯೆಂದ [3] ।

1 ಖಳಿಗೆ ಬಂದಿಂತೆಂದ, ಗ, ಘ. 2 ನಟ್ಟವುದದಿ, ಗ ಘ. 3 ಕಳದೊಳಗೆ, ಖ

ಚೇಳುಗಳು ತಾವೆಂಟುಸಾವಿರ
ಮೇಳವಿಸಿ ಬಂದೂಱಿದಂದದಿ
ಮೇಲು ನೋವಹುದೆಂದು ಶಾಪವ ಕೊಟ್ಟನೊಬ್ಬಂಗೆ ॥ ೧೯

ಉೞಿದವರಿಗಿಂತೆಂದ ನೀವೀ
ಯಿಳೆಯೊಳಗೆ ಜನಿಸೆಂದು ನೇಮಿಸಿ
ಬೞಿಕ ಸಪ್ತಕ ನೀವು ಮರಣವ ಗಾಂಬುದಾಕ್ಷಣಕೆ ।
ಲಲನೆಗೆಂದನು ನಿನ್ನ ಭೂಮಿಯು
ವೊಳಗೆ ಪತಿ ತಾ ನಲ್ಲನೀನೀ
ಯಿಳಪತಿಯು ರಿಪುವಾಗಿ ಜನಿಯಿಸು ಷಂಢರೂಪಿಂದ ॥ ೨೦

ಎಂದು ಶಾಪವ ಕೊಟ್ಟು ತನ್ನಯ
ಮಂದಿರಕೆ ತಿರುಗಿದನು ಧೇನುವ
ನಂದು ಮರಳಿಚಿ ಮನೆಗೆ ಬಂದಪನಾವಸಿಷ್ಠಮುನಿ ।
ಅಂದು ವಸುಗಳಿಗಾಯ್ತು ಶಾಪವ
ದಿಂದುವದನೆಯು ಮಾತ ಕೇಳಲು
ತಂದೆ ಕೇಳೈ ರಾಯ ಜನಮೇಜಯ ಮಹೀಪಾಲ ॥ ೨೧

ನಿರುತ ತನ್ನಯ ಬುದ್ಧಿಕರ ಸುಖ
ವರಸ ಗುರುಗಳ ಬುದ್ಧಿಯಿಹಪರ
ತರಕೆ ಸಾಧನ ಪರರ ಬುದ್ಧಿ ವಿನಾಶಕಾರಣವು ।
ನಿರುತವದು ತಾ ಪ್ರಳಯಕಾರಣ
ಸರಸಿರುಹಮುಖಿಯರುಗಳಂಗೀ
ಕರಿಸಿದುದು ಕಡು ಕಷ್ಟ ವಸುಗಳ ಯುವತಿಮತವೆಂದ [1] ॥ ೨೨

ವಸುಗಳಿಗೆ ನಾರದರು ಗಂಗೆಯಲ್ಲಿ ಜನಿಯಿಸಿರೆಂದು ಹೇಳುವಿಕೆ.

ಅತ್ತ ಕೇಳೈ ರಾಯ ವಸುಗಳ
ಚಿತ್ತ ಕದಡಿತು ಕಾವುದಾರವ

---

[1] ಧರೆಯೊಳಂಗೈದಿಸಿರೆ ತಪ್ಪದು ಕೇಡು ತವ.ಗೆಂದ, ಗ ಘ.

ಮೃತ್ಯುಗಾಣಿಸಿ ಯೆನುತ ಚಿಂತಿಸುತಿರಲು ನಾರದನು ।
ಅತ್ತಲೈತಂದವರಿಗೆಂದನು
ಪುತ್ರರಹುದಾವರುಣನರಸಿಗೆ
ಪುತ್ರರಹುದಾವರುಣದೇವರಿಗೆಂದು ನೇಮಿಸಿದ ॥ ೬೩

ಗಂಗಾವರುಣರಿಗೆ ಮಾನುಷಜನ್ಮಕಾರಣಪ್ರಶ್ನೆ.

ಅವರು ಮಾನುಷಯೋನಿಗೈದುವ
ಹವಣದಾವುದು ಕರ್ಮವೆಂತಹು
ದವರಿಗಾವುದರಿಂದ ಮಾನುಷಯೋನಿ ಸಮನಿಸಿತು ।
ಅವರಿಗದ ಹೇಳಿದನು ನಾರದ
ನವರ ಪೂರ್ವದ ಶಾಂತಗಂಗೆಯ
ಭವಗಳನು ಕೇಳೆಂದು ವಸುಗಳಿಗೆಂದನಾಮುನಿಪ ॥ ೬೪

ಬ್ರಹ್ಮಸಭೆಗೆ ಭಾಗೀರಥಿಯ ಆಗಮನ.

ಒಂದುದಿನ ಸರಸಿರುಹಪುತ್ರನ
ಮಂದಿರಕೆ ಶಶಿಮೌಳಿಮುಖ್ಯರ
ವೃಂದ ವೋಲಗಗೊಟ್ಟು ಕುಳ್ಳಿರೆ ಗಂಗೆ ಬರುತಿರಲು ।
ಅಂದದೋಲಗಮಧ್ಯದೊಳಗಾ
ಯಿಂದುವದನೆಯ ವಸ್ತ್ರ ಸಡಿಲಲಿ
ಕಂಡು ಸರಸಿಜಸುತನು ಮೊದಲಾಗಖಿಳನಾಕಜರು ॥ ೬೫

ಗಂಗೆಯ ವಸ್ತ್ರವು ಜಾರಲು ವರುಣನು ನೋಡುವಿಕೆ.

ಕಂಡು ಕಣ್ಣನು ಮುಚ್ಚೆ ವರುಣನು
ಕಂಡು ನೋಡಲಿಕಾಗ ವಾಣಿಯು
ಗಂಡ ನೋಡಿಯೆ ದೃಷ್ಟಿಭೇದವನರಿದನಾಕ್ಷಣಕೆ ।
ಹೆಂಡಿರೊಳಗತ್ಯಧಿಕೆ ಯಾಕ್ಷಣ
ಗಂಡನಕ್ಷಿಗಳರಿತು ಬೇಗದಿ
ಕೊಂಡಳೈ ತಾ ಜಾರಿದುಡಿಗೆಯ ಮರಳಿ [1] ಸಂವರಿಸಿ ॥ ೬೬

---

1 ಜರಿದವಸ್ತ್ರವನಾಗ, ಗ, ಘ

ಬಂದು ಗಂಗೆಯು ವರುಣದೇವರ
ಮುಂದ ತೊಡೆಯುಲು ಮೆಚ್ಚಿಯೆ ಸರಸಿಜ
ನಂದನನು ತಾ ವರುಣಗೆಂದನು ನೀನು ಮಾನಿನಿಯು ।

ಆ ವರುಣನಿಗೆ ಮನುಷ್ಯನಾಗೆಂದು ಬ್ರಹ್ಮಶಾಪ.

ಸಂವ ವಸ್ತ್ರವು ಸಡಿಲೆ ನೋಡಿದೆ
ಯೆಂದೊಡೆಂದನು ನನ್ನ ಸ್ವಸ್ತ್ರೀ
ಯೆಂದು ನೋಡಿದೆ ದೇವ ತಾನಿದಕೇನು ಹೇಟೆಂದ ॥ ೨೭

ತನ್ನ ಯುವತಿಯು ಮಾನಹಾನಿಯು
ಮನ್ನಿಸುವುದೇ ತಾನೆ ಯೆಂದರೆ
ಭಿನ್ನಗಾಣಲಿಕಾಗದೆಂದನು ಮುಳಿದು ಕಮಲಜನು ।
ಇನ್ನು ನೀ ಜನಿಸಿಳಯು ನೃಪರಲಿ
ಜನ್ಮವಾಗಿಯೆ ಶಾಂತನಾಮದಿ
ಮುನ್ನ ನೀನಂದೆನ್ನ ಮಾತನು ಮೀಱಿ ನಡೆದಲ್ಲಿ ॥ ೨೮

ನಾವು ಪಶ್ಚಿಮಕಡಲ ತಡಿಯುಲಿ
ತಾವು ಕೃತಯುಗದಾದಿಯೊಳು ತಾ
ನೋವಿ ಮಾಯುತ್ತಿರಲು ನಿನ್ನಯು ತೀವ್ರತೆರೆಗಳಲಿ ।
ಓವೆನುತ ಹೊಯ್ಯಲಿಕೆ ನಿನಗೆಯು
ನಾವು ನುಡಿದೆವು ಶಾಂತನಾಗ್ರೈ
ಭಾವ ವಲ್ಲನೆ ಮೀಱಿ ಹಾಯ್ದಾನಮ್ಮ ತಾಣವನು ॥ ೨೯

ನೀನು ಕೆಡಿಸಿದೆ ಯಿದಕೆ ಶಾಂತನು
ನೀನದಹುದ್ದೈ ಯೆನಲು ಗಂಗಾ
ಮಾನಿನಿಯು ಬಿನ್ನೈಸಿ ಯನಗೇನೆಂಬುದಭಿಧಾನ ।
ನೀನು ಪಂಕಜನಾಭನ ಮಹಾ
ಮಾನಪದಗಳ ಜನಿತೆ ನಿನ್ನ
ಲ್ಲೇನು ತಾನಪರಾಧವಿಲ್ಲವು ದೇವಿ ಕೇಳೆಂದ ॥ ೩೦

ನಿನ್ನ ವಸ್ತ್ರವು ತಾನೆ ಸಡಲಿತು
ಬೆನ್ನಲೇ ಸಂವರಿಸಿ ಕೊಂಡಿರಿ
ನಿನ್ನಲೇನಪರಾಧ ಶಾಪಕೆ ತಾಯೆ ಹೇಪೆಂದ ।
ನಿನ್ನ ಪತಿಯನು ನೀನು ನಿನ್ನಯ
ಮುನ್ನಿನಂಗದಲೈಯ್ದು ವೆಂದನು
ಮನ್ನಣೆಯಲವರಿರ್ವರಿಗೆ ತಾ ಕಮಲಸಂಭವನು ॥ ೩೧

ವರುಣನು ಶಂತನುವಾಗಿ ಜನಿಸುವಿಕೆ.

ಎನಲು ಶಂತನುವಾಪ್ರತೀಪನ
ತನಯನಾದನು ಜನಪ ಕೇಳಿಂ
ದನಿತುವನು ವಸುಗಳಿಗೆ ನಾರದ ಹೇಳಿ ಕಳುಹಿದನು ।
ಜನಪ ಕೇಳೈ ಬಳಿಕ ವಸುಗಳು
ಮನದಿ ಹರುಷಿಸಿ ಯಿಳಿದು ಗಂಗೆಗೆ
ಮನದ ದುಗುಡವ ಹೇಳಿ ಬಿನ್ನಹ ಮಾಡಿದರು ಬಳಿಕ ॥ ೩೨

ನಿನ್ನಲ್ಲಿ ಹುಟ್ಟಿದೊಡನೆಯೇ ಕೊಲ್ಲೆಂದು ಗಂಗೆಯನ್ನು ಬೇಡುವಿಕೆ

ತಾವು ಜನಿಸುವೆವಮ್ಮ ನಿಮ್ಮಲಿ
ನೀವು ನಮ್ಮನು ಕೊಲುವುದಾಕ್ಷಣ
ದೇವಿ ಯೆಂದರೆ ಹರ ಹರಾಯಿದನಾರು ಮಾಡುವರು ।
ನೀವು ಹೇಳಿದೊಡಾವು ಮಾಡಲಿ
ಕಾವಪಾತಕ ಶಿಶುವಿನಾಶವು
ನೋವುದೆಮ್ಮಷ್ಟಕದೊಳೊಬ್ಬನ ಕೊಲ್ಲದುಳುಹುವುದು ॥ ೩೩
ಮಾತೆ ಭೂಮಿಯೊಳಂಟುಶತಕವ
ನಾತ ಬದುಕುವ ತೀವ್ರಪೌರುಷ
ದಾತ ತಾ ಕೈವಲ್ಯನಾಥನ ಮನಕೆ ಬಹನಾತ ।
ಆತ ನಿಮಗಿಹನೆನಲು ಹರಿಪದ
ಜಾತೆಯಂಗೀಕರಿಸಿ ಯಿರಲಿ
ಖ್ಯಾತ ಬಂದನು ಬೇಂಟೆಯಾಡುತ ಶಾಂತಭೂಪಾಲ ॥ ೩೪

ಶಂತನುವಿಗೆ ಗಂಗಾದರ್ಶನ

ಬಂದು ಗಂಗಾತೀರದಲು ತಾ
ನಿಂದಿರಲು ಸುರನದಿಯು ಮೆಲ್ಲನೆ
ಬಂದಳಲ್ಲಿಗೆ ಬರಲು ಕಂಡನು ಶಾಂತ ಹರುಷದಲಿ ।
ಬಂದಯುವತಿಯ ಸೆರಗ ಹಿಡಿದನು
ಮಂದಿರಕೆ ನಡೆ ಯೆನಲು ಸುರನದಿ
ಯೆಂದಳನಗೊಂದಿಹುದು ಭಾಷೆಯು ಸಲಿಸುವೊಡೆ ಬಹೆನು ॥ ೩೫

ಎಂದು ಸಲಿಸುವೊಡರಿದು ನಿಮಗಹು
ದೆಂದೊಡೇನೇನೆಂದು ಕೇಳಲಿ
ಕೆಂದಳೀ ಸತಿ ಶಾಂತರಾಜಗೆ ಭೂಪ ಕೇಳೆಂದ ।
ಇಂದು ನನ್ನನದಾರು ನೀ ಹೇ
ಳೆಂದು ಕೇಳಲು ಬೇಡ ನಮ್ಮಯ
ಚಂದವನು ನೀ ನೆನಿಸಲಾಗದಿದನುಜ್ಞೆ ಮಾಡದಿರಿ [1] ॥ ೩೬

ಎಂದು ತನಗಾಜ್ಞೆಯನು ಕೊಡುವಿರಿ
ಯೆಂದು ನೀವಿದ ಮರೆವಿರಾಗಲೆ
ಯುಂದು ನಿಮ್ಮನು ಬಿಟ್ಟು ಹೋಹೆನದೆನಲು ಕೈಕೊಂಡ ।

ಅದನ್ನೊಪ್ಪಿ ವಿವಾಹವಾಗುವಿಕೆ.

ತಂದನಾಕೆಯ ತನ್ನ ಮಂದಿರ
ಕಂದು ವೇದೋಕ್ತದಲಿ ಗಂಗೆಯ
ನಂದು ಶಂತನು ಮದುವೆಯಾದನು ಭೂಪ ಕೇಳೆಂದ ॥ ೩೭

ಆದಿನಂಮೊದಲಾಗಿ ಮಕ್ಕಳ
ಬಾಧಿಸುವಳಾಗಿಂತು ಹುಟ್ಟಿದ
ಯಾದಿಕಾಲದ ವಸುಗಳೇಳನು ಕೊಲುತ ಬರುತಿರಲು ।

---

[1] ನೋಡಿ ಮನವುಜ್ಞಿ, ಗ. ಫ.

ಮೇದಿನಿಗೆ ಕೌತುಕವ ಬೀಱುತ
ಸಾಧಿಸಿದಳೈ ತನ್ನ ಭಾಷೆಯ
ನಾದಯಾಂಬುಧಿ ಶಾಂತ ಕಂಡನು ಶಿಶುವನೆಂಟಱದ ॥ ೩೮

ಅದನು ಕೊಲ್ಲಿಸಬಾರದಾನೀ
ಸುದತಿಯಿಂದಾಕೊಲದೆ ಹೇೞುವ
ಹದನ ಕಂಡನು ಶಾಂತಭೂಪನು ಬಂದು ಗಂಗೆಯನು ।

ಈ ಶಿಶುವನ್ನು ಕೊಲ್ಲಬೇಡವೆಂದು ಶಂತನುವಚನ.

ಸುದತಿ ನೀನಾರೇಸುಮಕ್ಕಳ
ನೊದೆದು ನೂಕಿದೆ ಜಲಧಿಮಧ್ಯದಿ
ಹದನು ತಾನೇನಿದಱ ಯಿನ್ನೀ ಮಗನ ಕೊಲ್ಲದಿರು ॥ ೩೯

ಎಂದು ಜಱಿಯಲು ನೃಪನು ನಾರಿಯು
ಕಂದನನು ತಾ ಸೆಳೆದುಕೊಂಡನ
ದಂದು ಹುಟ್ಟಿದರಾಮುಹೂರ್ತದ ಸಮಯಮಧ್ಯದಲಿ ।
ಇಂದುಕುಲಗುರು ವೊಬ್ಬ ಮತ್ತಾ
ಗಂದು ದ್ರೌಪದಿಜನಕ ಗೌತಮ
ರಿಂದ ಹುಟ್ಟಿದರವರು ಕೃಪ ಕೃಪಿ ಭೀಷ್ಮಸಂಗಡಲು ॥ ೪೦

ಈಶರದ್ವಾನುವಿನ ವೀರ್ಯವ
ನಾಶರಸ್ತಂಬದಲದಿಬ್ಬರ
ನಾಶರತ್ಕಾಲದಲು ಕಂಡನು ಕೃಪನ ಕೃಪಿಸಹಿತ ।
ಆಶಿಶುಗಳಿಬ್ಬರನು ತಂದಪ
ನೀಶಿಶುಗಳಹುದೆನುತ ಶಾಂತಮ
ಹೀಶ ಸಲೆ ಕೃಪೆಯಿಟ್ಟನವರಿಗೆ ಹೆಸರ ಕೃಪಕೃಪಿಯು ॥ ೪೧

ಎಂದು ಹೆಸರಿಟ್ಟಾಗ ಗಂಗೆಯು
ನಂದನನ ಕೊಲಲೀಸದಿರಲಿ
ಕ್ಕಂದು ಕೋಪಿಸಿ ಗಂಗೆ ಹೋದಳು ಮಗನನೊಡಗೊಂಡು ।

ಅಂದು ಸುರಗುರುವಿಂದಲೋದಿಸಿ
ಕಂದನನು ಜಮದಗ್ನಿರಾಮನ
ಮಂದಿರಕೆ ಪರುಠವಿಸಿ ಶಸ್ತ್ರಾಭ್ಯಾಸ ಕಲಿಸಿದಳು ॥ ೪೦

ಬಳಿಕ ಯಿನ್ನೂ ಱಬುದಕಾತನ
ನೊಲಿದು ಗಂಗಾನದಿಗೆ ತಂದಳು
ಕೆಲವುದಿನಕಾಶಾಂತ ಬಂದನು ಬೇಂಟೆನೆವದಿಂದ ।

ಗಂಗೆಯು ಭೀಷ್ಮನನ್ನು ಶಂತನುವಿಗೆ ಒಪ್ಪಿಸುವಿಕೆ

ಬಳಲಿ ಗಂಗಾಜಲವನಱಸುತ
ಜಲವ ಕಾಣದೆ ಶಾಂತಭೂಭುಜ
ಬಳಿಕ ಕಂಡನು ಭೀಷ್ಮದೇವನ ಬಾಹುವಿಕ್ರಮವ ॥ ೪೩

ಸುರನದಿಯು ಶಸ್ತ್ರದಲಿ ಕಟ್ಟಿಯೆ
ಮರಳಿ ಹಿಂದಕೆ ನಡೆಸುತಿರ್ದನು
ತರಳನಿವನಾರೆನುತಲಿರಲಿಕೆ ಗಂಗೆ ನಡೆತಂದು ।
ಅರಸ ನಿನ್ನಯ ಪುತ್ರನೀತನು
ಪರಶುರಾಮನ ಶಿಷ್ಯ ನಿಮ್ಮಯ
ಪುರಕದೀತನನೊಯ್ಯುದೆಂದಳು ಗಂಗೆ ವಿನಯದಲಿ ॥ ೪೪

ಮಗನ ಕೊಟ್ಟಳು ಬಳಿಕ ಶಾಂತಂ
ಗಘಹರನ ನೆನೆಯುತ್ತ ಶಾಂತನು
ಜಗದ ಭೂಸುರತತಿಗೆ ದಾನವ ಬಿತ್ತಿ ಪೂಜಿಸುತ ।
ಮಗನ ಕೈಯ್ಯಲಿ ಕೊಂಡು ಗಂಗೆಯು
ನಗುತಲೇ ಬೀಱ್ಕೊಂಡು ಮಂಗಳ
ನಿಗಮಘೋಷದಿ ಬಂದು ಹೊಕ್ಕನು ಹಸ್ತಿನಾಪುರವ ॥ ೪೫

ಬಂದು ಭೀಷ್ಮನು ಕೃಪನು ಕೃಪಿಗಳ
ನೊಂದು ಮಂದಿರದಲ್ಲಿ ನಿಲಿಸಿಯೆ
ತಂದೆ ಸಾಕಿದ ಶಾಂತ ಮೂವರನರಸ ಕೇಳೆಂದ ।

1 ಸತ್ಕರಿಸು ಕ.ಖ

ಹಿಂದೆ ನೂಱಬ್ದವಲಿ ಶಂತನು
ಮಂದಿರದಿ ತಾ ಗಂಗೆ ಯಿದ್ದಳು
ಕಂದ ಭೀಷ್ಮನ ಹೆತ್ತು ಹೋದಳು ತನ್ನ ಮಂದಿರಕೆ ॥ ೪೬

ಬಳಿಕ ಯಿನ್ನೂಱಬುದಕಾತನ
ಕಳುಹಿದಳು ಶಾಂತಂಗದೆಂಬೀ
ಪೊಳಕಥೆಯ ತಾ ಹೇಳ್ವ ಕೇಳ್ವರ ದೇವನನವರತ ।
ಒಲಿದು ರಕ್ಷಿಪನವರಿಗಿಹಪರ
ನೆಲೆಗಳಲಿ ವರಶುಭವನೀಯಲಿ
ಬಳಿಕ ಗದುಗಿನ ವೀರನಾರಾಯಣನು ಮನಮುಟ್ಟಿ ॥ ೪೭

ಕರುಣಿಸಿದ ಶಶಿವಂಶಕಿಹಪರ
ವೆರಡದ್ವಾಪರದೊಳಗೆ ತನ್ನನು
ನಿರುತ ನೆನೆವರ ಕಾವನಾಮುರಮಥನ ದೆಸೆಯಿಂದ ।
ದುರಿತಗಳು ಪರಿಪೂರ್ಣನೆಂದೀ
ಹರಿಯುನಱಿತಗೆ ಹೊದ್ದವಾಗಳು
ಮರಸ ಗದುಗಿನ ವೀರನಾರಾಯಣನ ಕರುಣದಲಿ ॥ ೪೮

ಹನ್ನೆರಡನೆಯ ಸಂಧಿ ಮುಗಿದುದು.

ಪದಿಮೂರನೆಯ ಸಂಧಿ.

ಸೂಚನೆ.

ಸತ್ಯವತಿ ಜನಿಸಿದಳು ಶಾಂತಗೆ
ಚಿತ್ತವಲ್ಲಭೆಯಾಗಿ ಮೊದಲಲಿ
ಹೆತ್ತಳೈ ಶ್ರೀವರನ ವೇದವ್ಯಾಸರೂಪಿನಲ ॥

ಕೇಳು ಜನಮೇಜಯ ಧರಿತ್ರೀ
ಪಾಲ ಸೊರ್ಬಿನ ಮೇಗಳಾತ್ಮನ
ಮೇಲುನೋಟದಲಿನ್ನು ಹುಟ್ಟುವ ನೃಪರ ಸಡಗರವ ।
ಕಾಲಕಾಲಕೆ ಜನಿಸಿ ಮಂಗಳ
ಲೀಲೆಯಲಿ ಹರಿಯೊಡನೆ ಯಾಡುವ
ಖೇಳಮೇಳದ ಪರಿಯ ಚಿತ್ತೈಸೆಂದನಾಮುನಿಪ ॥ ೧

ಚಂದ್ರವಂಶದವರ ಮಹಿಮೆ.

ಕಾಲವವರಲಿ ಕೈಯ್ಯನಿಕ್ಕದು
ಮೇಲೆ ಕಯ್ಯಿಕ್ಕುವರ ಕಾಣೆನು
ಕೇಳು ನಿಮ್ಮಯ ಪೂರ್ವಪುರುಷರ ಜನನಮುನ್ನತಿಯ ।
ಬೀಳುಕೊಂಡಳು ಗಂಗೆ ಶಾಂತನ
ಮೇಲೆ ತಾನಿನ್ನೂಱುವತ್ಸರ
ಕಾಲ ಸವೆಯಲು ಬಳಿಕ ಸುತನನು ಕೊಟ್ಟು ವಹಿಲದಲಿ ॥ ೨

ಶಾಪ ಹಿಂಗಿತು ಸುರನದಿಗೆ ಬಳಿ
ಕಾಪರಾಕ್ರಮಿ ಭೀಷ್ಮ ಶಂತನು
ಭೂಪತಿಗೆ ಮಗನಾಗಿ ಬೆಳಗಿದನಖಿಳದಿಕ್ತಟವ ।

ಉಪರಿಚರವಸುವಿಗೆ ಪುತ್ರ ಮತ್ತು ಪುತ್ರಿಯ ಜನನ.

ಭೂಪ ಕೇಳ್ಳ ಯುಪರಿಚರವಸು
ಟೋಪದಲಿ ವಾರಿಧಿಯಲಾಡುತ
ಲಾ ಪುರಂದರಲೋಕವನಿತೆಯ ಕಂಡು ಮನಸಿಜನ ॥ ೩

ಬಾಣದಲಿ ಬಸವಳಿಯೆ ಬಿದ್ದುದು
ಕ್ಷೋಣಿಯಲಿ ರೇತಸ್ಸು ಬಳಿಕದ
ಕಾಣುತಲಿ ತನ್ನಾತ್ಮಪತ್ನಿಗದೈಯ್ದಬೇಕೆನುತ ।
ಘೂಣದಾ ಪಾಂಚಾಲನೊಂದಳಿ

ಗೋಣಿನಲಿ ತಾ ಕಮಲದೆಲೆಯೊಳು
ಕ್ಷೋಣಿಪತಿ ಯದ ಕೊಟ್ಟು ಕಳುಹಿದೊಡದನು ಬಿರುಗಾಳಿ ॥ ೪

ದಾಶರಾಜನು ಮೀನನ್ನು ತಂದು ಕಡಿಯಲು ಮಕ್ಕಳು ಸಿಕ್ಕುವಿಕೆ.

ಹೊಡೆಯಲಾಗದು ಕೆಡೆದು ಯಮುನೆಯ
ತಡಿಯ ಬಳಿಯಲಿ ಮೀನು ನುಂಗಿತ
ದೆಡೆಯಲಿದು ತಾನೊಬ್ಬ ಬಂದನು ಬೇಂಟೆಯಾಡುತಲು [1] ।
ಹಿಡಿದು ತನ್ನಾಲಯಕೆ ತಂದಾ
ಮಡದಿಗೀಯಲು ಬೆಚಿಕ ತಾನದ
ಕಡಿಯಲಿಕೆ ಸ್ತ್ರೀಪುರುಷರಿಬ್ಬರ ಕಂಡು ಬೆಱಗಾಗಿ ॥ ೫

ಗಂಡು ಮಗುವನ್ನು ಅರಸಗೆ ಕೊಟ್ಟು ಹೆಂಗೂಸನ್ನು ಮನೆಯಲ್ಲಿ ಸಂರಕ್ಷಿಸುವಿಕೆ.

ಮಡದಿ ತನ್ನಯ ಪತಿಗೆ ತೋಱಲು
ನಡುನಡುಗಿ ಯಾವರಕುಮಾರನ
ಪೊಡವಿಪತಿಗವನೀಯೆ ಯವನು ವಿರಾಟಪತಿಯಾಗೆ ।
ಮಡದಿ ಯಾತನ ಮನೆಯಲಿರಲಿಕೆ
ಪೊಡವಿಪತಿ ಕೇಳಾಗಲಾಯಿತ
ವಡಿಗಡಿಗೆ ಧನಧಾನ್ಯದಾಗಮ ಭೂಪ ಕೇಳೆಂದ ॥ ೬

ಮುನ್ನ ತಾ ದೇವಾಂಗನಾವಧು
ಭಿನ್ನವಿಲ್ಲದೆ ಹರಿಯ ಭಜಿಸಿದ
ಚನ್ನೆಗಾಯಿತು ಶಾಪ ನಾರದದೇವಋಷಿಯಿಂದ ।
ತನ್ನ ತಾ ಪೊಗಳಲಿಕೆ ಹೀನರ
ಕನ್ನೆತನದಲಿ ಸತ್ಯವತಿ ಯೆಂ
ದೆನ್ನ ಶಾಪದಲಿರಲು ಸಾಕ್ಷಾತ್ಪರಮಪುರುಷನಲಿ ॥ ೭

1 ಹಿಡಿದನು ಭೂಪ ಕೇಳೆಂದ, ಕ. ಖ.

ಸನ್ನಿಧಾನಕ್ಕೈದು ಯೆಂದಾ
ಕನ್ನೆಯನು ಪರುಠವಿಸೆ ಸೂತನ
ಕನ್ನಿಕೆಯು ತಾನಾಗಿ ಜನಿಸಿದಳರಸ ಕೇಳೆಂದ ।
ಕನ್ನಿಕೆಯು ಹೆಸರಾಯ್ತು ಲೋಕಕೆ
ಭಿನ್ನವಿಲ್ಲದೆ ಮತ್ಸ್ಯಗಂಧಿನಿ
ಯಿನ್ನು ಕೇಳ್ಕೈ ರಾಯ ವುತ್ತರಕಥೆಯ ನೀನೆಂದ ॥ ೮

ಆಕನ್ಯೆಯಲ್ಲಿ ಪರಾಶರರಿಂದ ವ್ಯಾಸೋತ್ಪತ್ತಿ.

ಆಕೆ ಕೃಷ್ಣಾತೀರದಲು ಪಿತೃ
ವಾಕುವೂತ್ರದಿ ನಾವೆಯಿಕ್ಕಿದ
ಳಾಕುಮಾರಿಯು ನಾವೆಯೇಱದನಾಪರಾಶರನು ।
ನೂಕು ನಾವೆಯನಾತಟಾಕಕೆ
ನೂಕೆನಲು ನೂಕಲಿಕೆ ಮುನಿಪತಿ
ಯಾಕುಮಾರಿಯ ಕಂಡು ಸೋತನು ಮತ್ಸ್ಯಗಂಧಿನಿಯ ॥ ೯

ಸೋತು ಹಿಡಿಯಲಿಕಂದಳಾವಧು
ವಾತಪೋನಿಷ್ಠಂಗೆ ನಮ್ಮನು
ವಾ ತಟದೊಳಿಹ ಜನರು ಕಾಣುವರೆಂದಳಾವನಿತೆ ।
ಈತ್ವರಿತವೇಕೆನಲು ಮುನಿಪತಿ
ಯಾತತುಕ್ಷಣ ಮಂಜ ಸೃಜಿಸಿಯೆ
ಕಾಂತೆಯನು ರಮಿಸಲ್ಕೆ ಸಾಕ್ಷಾದ್ಬ್ರಹ್ಮವಂದಿತನು ॥ ೧೦

ಇಱದನಂತರ್ಧಾನದಿಂದವೆ
ನಳಿನಲೋಚನ ವ್ಯಾಸರೂಪಿಂ
ದಿಳಗೆ ವೇದಾರ್ಥವನು ತೋಱಲಿಕೆಂದು ನಡೆತಂದ ।
ಒಲಿದು ಮಿಂದನು ಸತ್ಯವತಿಯೊಳ
ಫಲವು ತಪಸಿನ ಫಲವದಾಕೆಗೆ
ಜಲರುಹೋದರನೆಂದುಮುಱಯದೆ ಸತ್ಯವತಿಸುತನ ॥ ೧೧

ನೆಲೆಯನಱಿಯದೆ ವ್ಯಾಸನೆಂಬರ
ದಿಳೆಯ ಮನುಜರ ಪಾಪರಾಶಿಯ
ಬಳಗಕಿದ ಕೋ ತಾನು [1] ಸಾಧನ ಭೂಪ ಕೇಳೆಂದ |
ಬಳಿಕ ಕೃಪೆಯಲಿ ಮತ್ಸ್ಯಗಂಧವ
ಕಳೆದು ಯೋಜನಗಂಧಿ ಮಾಡಿದ
ಜಲರುಹಾಕ್ಷನು ನಳಿನವದನೆಗದೆಂದನೊಂದುವನು || ೧೨

ನೀವು ಜನನಿಗಳನಗದೆಂಬುದು
ದೇವಿ ಕೇಳೌ ಸತ್ಯವತಿಯೆಂ
ದಾವಿಭುವು ಬೇಡಿದನು ತಾ ಸಲೆ ವಿನಯಪರನಾಗಿ |
ಭೂಮಿಪತಿ ಚಿತ್ತೈಸು ನಿಮ್ಮಯ
ಭೂಮಿಪರ ಸಂಘಕ್ಕೆ ಲಕ್ಷ್ಮೀ
ಕಾಮಿನೀಶನು ಮೂಲವಾದನು ರಾಯ ಕೇಳೆಂದ || ೧೩

ವ್ಯಾಪಿಸಿದ ಸತ್ಕೀರ್ತಿ ನಿಮ್ಮಯ
ಟೋಪವನು ತಾನೇನನುಸುರುವೆ
ನಾ ಪುರಂದರಮುಖ್ಯನಾಕಜಜಾಲವೆಣಿಯಲ್ಲ |
ಭೂಪ ಕೇಳು ಪರೀಕ್ಷಿಸಲು ವಸು
ರೂಪುಗರ್ಭವು ಮೀನ ಬಸುಱಲಿ
ವ್ಯಾಪಿಸಲು ಜನಿಸಿದರು ಸ್ತ್ರೀಪುರುಷರಾಕ್ಷಣಕೆ [2] || ೧೪

ಬಳಿಕ ಮತ್ಸ್ಯದ ಬಸುಱುಲುದಿಸಿದ
ನಳಿನಲೋಚನೆ ಮತ್ಸ್ಯಗಂಧಿನಿ
ಬಳವುತಿರಲಿಕೆ ಸಂಗವಾಯ್ತು ಪರಾಶರವ್ರತಿಗೆ |
ನಳಿನನಾಭನು ಜನಿಸಿ ಯಾಕೆಯ
ಹಳೆಯ ಶಾಪವ ತಿಳಿದು ಶಾಪವ
ನಿಳೆಯಬಿಡಿದನು ನಿಮಿಷಮಾತ್ರಕೆ ಭೂಪ ಕೇಳೆಂದ || ೧೫

---

1 ನರಕ, ಖ. 2 ವ್ಯಾಪಿಸಿತು ಜನಿಸಿದುದು ಮಿಥುನವು ಮತ್ಸ್ಯಜಠರದಲಿ, ಚ.

ನಳಿನನಾಭನ ಕೃಪೆಯನಾಕ್ಷಣ
ತಳೆಯಲಾಯಿತು ಮತ್ಸ್ಯಗಂಧಿಗೆ
ಬಳಿಕಲಾಕೆಯ ವರಸುಗಂಧಿಯ ಮಾಡಿದನು ಮುನಿಪ |
ಇಳೆಯೊಳಾಕೆಯ ದೇಹ ಯೋಜನ
ವಳಯಪರಿಯಂತರ ಸುಗಂಧದ
ಬಳಗವಾಯಿತು ವ್ಯಾಸನಾಜ್ಞೆಯ ಕೃಪೆಯ ಭಾರದಲಿ ‖ ೧೬

ಬಳಿಕ ಯೋಜನಗಂಧಿಯಲ್ಲಿಂ
ದಿಳಿದನಭ್ರಶ್ಯಾಮನುರುಪಿಂ
ಗಳಜಟಾಪರಿಬದ್ಧ ವೇದವ್ಯಾಸಮುನಿರಾಯ |
ಬಲಿದು ಕಮಲದಳಾಯತಾಕ್ಷಕ
ನಿಳಿದು ಸತ್ಯವತೀಸುತನು ಮುನಿ
ತಿಲಕನಾದನದಾಕೆ ಮಾಡಿದ ಸುಕೃತಫಲದಿಂದ ‖ ೧೭

ಆಗ ಶಂತನುವಿಗೆ ಸತ್ಯವತಿಯ ದರ್ಶನ

ನೆನೆ ವಿಪತ್ತಿನೊಳಂದು ತಾಯನು
ತನುಜ ಬೇಡ್ಕೊಂಡನು ಪರಾಶರ
ಮುನಿಪ ಕನ್ಯಾತ್ವವನು ಪುನರಪಿ ಕೊಟ್ಟನಾಸತಿಗೆ [1]
ವಿನುತಕೃಷ್ಣಾ [2] ತೀರದಲು ಮಾ
ನಿನಿಯ ಕಂಡನು ಬೇಟೆಯಾಡುತ
ಜನಪ ಶಂತನು ಮರುಳುಗೊಂಡನು ಮದನನೆಸುಗೆಯಲಿ [3] ‖ ೧೮

ಆಕುಮಾರಿಯ ರೂಪಿನೇಳ್ಗೆಗೆ
ಲೋಕದಲ್ಲೆಣೆಯಿಲ್ಲ ಮಿಕ್ಕಿನ
ಕಾಕುಯುವತಿಯರೇಕೆ ಭಾಮಿನಿ ಸತ್ಯವತಿಯಿರಲು |

---

1 ಮುನಿಪುನಃ ಕನ್ಯಾತ್ವವನು ಕರುಣಿಸಿದನಾಸತಿಗೆ, ಚ.
2 ಯಮುನಾ, ಚ.   3 ಶರಹತಿಗೆ, ಕ. ಖ ಗ.

ಆಕುರುಕ್ಷಿತಿಗಧಿಪ ತಾ ಕಂ
ಡಾಕೆಯನು ಕೈವಿಡಿದು ಕರೆಯುತಿರ
ಲಾ ಕುವರಿಯಾದರಿಸದಿದ್ದಳು ನಾವೆಯೊಳಗಂದು ॥ ೧೯

ಎನ್ನ ತಾ ಬಂದೊಬ್ಬ ಮುನಿಪತಿ
ಕನ್ನೆತನವನು ಕೆಡಿಸಿ ಯೆನ್ನನು
ಭಿನ್ನಮಾಡಿದನೆಂದು ತನ್ನಯ ಮನದೊಳಗೆ ನೆನೆದು ।
ಇನ್ನು ತಾನೀಜನಪಸಂಗವ
ಮನ್ನಿಸಿದರೇನಪುದೊ ಯೆನುತಲಿ
ಕನ್ನೆ ತಾ ಬೆರಗಾಗಿ ಧರ್ಮವ ನೆನೆದಳ್ಯ ಮನದೆ ॥ ೨೦

ಜನಕ ಜನನಿಯು ಕೂರ್ತು ಕೊಟ್ಟರೆ
ಯೆನಗೆ ವಲ್ಲಭನಾಗುವೆನ್ನಯ
ಮನಕೆ ಬಂದುದನ್ಯದಲ್ಲಾಗದದೆನುತಲಾತರಳೆ ।
ವಿನುತಗಂಗಾತೀರದೆಡೆಯಲಿ
ವನದ ಮಧ್ಯದಲಿರಲು ಮಾನಿನಿ
ಮನವ ಸಂವರಿಸಿರಲು ಬಂದನು ಶಾಂತಭೂಭುಜನು ॥ ೨೧

ನಾಲ್ಕುಕೋಟಿಘಟಾಕದಂಬವು
ನೂಕಿ ನುಗ್ಗುವ ಪಾಯಿದಳ ಹದಿ
ನಾಕುಕೋಟಿಗಳಧಿಕ ಕುದುರೆಗಳೆಂಟುಕೋಟಿಗಳು ।
ಜೋಕೆಯಲಿ ರಥವಾಱುಕೋಟಿಯು
ಲಾಕೆಯಲ್ಲಿಗೆ ಬಂದು ಭೂಪತಿ
ವ್ಯಾಕುಲಾಂತಃಕರಣನಾದನು ಭೂಪ ಕೇಳೆಂದ ॥ ೨೨

ಪರಿಮಳದ ಪಥವಿಡಿದು ಬಂದೀ
ತರಳೆಯನು ಕಂಡಾರು ನೀನೆಂ
ದರಸ ಬೆಸಗೊಳುತಿಸುವ ಕಾಮನ ಶರಕೆ ವ್ಯಯ್ಯೋದ್ಧಿ ।

ಅರಮನೆಗೆ ನಡೆಯೆನಲು ತಂದೆಯ
ಪರಮವಚನವಲಂಘ್ಯವೆನೆ ಕೌ
ತರಿಸಿ ಭಗ್ನಮನೋರಥನು ಮರಳಿದನು ಮಂದಿರಕೆ ॥ ೭೩

ಸತ್ಯವತಿಯು ಒಪ್ಪದಿರಲು ಚಿಂತೆಯಿಂದಿರುವಿಕೆ.

ವಿರಹತಾಪದ ಬೇಗೆ ಭೂಪೂ
ಶ್ವರನ ಮುಸುಕಿತು ಬಱಿಯ ದೃಷ್ಟಿಯ
ನರಸ ಬಣ್ಣಿಸಲಱಿಯೆನೆಂಟೊಂಬತ್ತಱಲಿ ಪರಿಯ ।
ಮರಣವಿನ್ನೇನೆಂಬ ಜನದ
ಬ್ಬರದ ಗುಜಗುಜನಱಿದು ಯಮುನಾ
ವರನದೀತೀರಕ್ಕೆ ಬಂದನು ಭೀಷ್ಮ ವಹಿಲದಲಿ ॥ ೭೪

ಕರೆಯಿಸಿದ ಧೀವರನ ನಯ್ಯಂ
ಗರಸಿ ಯಾಗಲು ಬೇಕು ಕೊಡಿ ಯೆನೆ
ಯರಸಿಯಾದೊಡೆ ಮಗಳ ಮಕ್ಕಳು ರಾಜ್ಯವಾಳುವೊಡೆ ।
ಅಱಿದು ಸಲಿಸುವೊಡಿದನು ತನ್ನಯ
ವರಕುಮಾರಿಗೆ ರಾಜ್ಯವಿತ್ತದ
ನಿರುತ ಮಾತುವುದಾದರಾಕೆಯು ನಿನಗೆ ತಾಯಹಳು ॥ ೭೫

ಆದೊಡಿಲ್ಲಿಂ ಮೇಲೆ ನಾರಿಯ
ರಾದವರು ಭಾಗೀರಥಿಯ ಸರಿ
ಮೇದಿನಿಯ ಸಲಿಸುವೆನು ನಿನ್ನಯ ಮಗಳ ಮಕ್ಕಳಿಗೆ ।
ಈದಿವಿಜರೀ *ಮುಖ್ಯಮುನಿಜನ
ರಾದಿಯಾಗದಕಿನ್ನು ಸಾಕ್ಷಿಯು *
ಮೇದಿನಿಯ ಸಾಮ್ರಾಜ್ಯಲಕ್ಷ್ಮಿಗದೆನಲು ಕೈಕೊಂಡ ॥ ೭೬

* ಹರಿಹರಬ್ರಹ್ಮಾದಿದೇವರು ಸಾಕ್ಷಿಕಳೀ, * ಖ ಘ

ಬಟ್ಟಿಕ ದಾಶನು ಸತ್ಯವತಿಯುಳ
ನೊಲಿದಲಂಕೃತಿ ಮಾಡಿ ಗಂಗಾ
ಜಲತಟಾಕದಿ ತಂದು ಶಂತನುರಾಜಮಂದಿರಕೆ ।
ಲಲನೆಯನು ಮಾಂಗಲ್ಯವಿಭವದ
ಬಳಗದಲಿ ಶುಭರಭಸದಿಂದವೆ
ಯಿಳೆಸುರರ ವರಮಂತ್ರಘೋಷದಿ ತಂದನಾಭೀಷ್ಮ ॥ ೭೭

ಸತ್ಯವತಿಯನ್ನು ತಂದೆಗೆ ಭೀಷ್ಮನು ವಿವಾಹ ಮಾಡುವಿಕೆ

ತರಿಸಿದನು ದಂಡಿಗೆಯಲಾಕೆಯ
ಪರಮವಿಭವದಲಂದು ದಾಶನ [1]
ವರಸುತೆಯ ಶಂತನುಗೆ ಮದುವೆಯ ಮಾಡಿದನು ಭೀಷ್ಮ ।
ಉರವಣಿಪ ಮಗನುಡಿವ ಭಾಷೆಯ
ಸರಸ ಕೇಳಿಯೆ ಭೀಷ್ಮದೇವಗೆ
ವರವನಿತ್ತನು ಮರಣವದು ನಿನ್ನಿಚ್ಛೆ ಹೋಗೆಂದ ॥ ೭೮

ಎಂದು ಯೋಜನಗಂಧಿಸಹಿತಾ
ಯಿಂದುಕುಲಸಂಭವನು ಶಂತನು
ಮಂದು ಗಮಿಸಿದನರಸ ಹಸ್ತಿನಪುರಿಗೆ ಮಹಿಬಲದಲಿ ।
ಬಂದು ಭೂಸುರತತಿಯು ದಕ್ಷಿಣೆ
ಯಿಂದ ದಣಿಸಿಯೆ ಭೀಷ್ಮದೇವನ
ತಂದೆ ಹೊಕ್ಕನು ರಾಜಭವನವ ವರಮುಹೂರ್ತದಲಿ ॥ ೭೯

ಹೊಕ್ಕು ಸುಮುಹೂರ್ತದಲಿ ಪ್ರಜೆಗಳ
ರಕ್ಷಿಸುತ ನೃಪನೀತಿಯಿಂದವೆ
ತಕ್ಕರಸು ಪಾಲಿಸುತ ಶಂತನು ಕೆಲವುದಿನ ಸವೆಯೆ ।
ಮಕ್ಕಳಿಗೆ ಮನವಾಯ್ತು ವರಸತಿ
ಯೊಕ್ಕತನದಲು ಶಾಂತಪತ್ನಿಗೆ
ನಿಷ್ಕಳಂಕದ ಗರ್ಭವಾಯಿತು ದಕ್ಷಿಣೋತ್ತರದ ॥ ೮೦

[1] ಧೀವರ, ಗ, ಘ.

ಶಂತನುವಿಗೆ ಚಿತ್ರಾಂಗದವಿಚಿತ್ರವೀರ್ಯಜನನ.

ಆಯನದೇವರು ಜನಿಸಿದರು ತಾ
ವಯನದಲಿ ಯುವಳಾಗಿ ಯಿಬ್ಬರು
ನಯದಲವತರಿಸಿದರು ದಕ್ಷಿಣದುತ್ತರಾಯಣದ ।
ನಿರುತಕಾಲಂಗಳಲಿ ಹುಟ್ಟಲು
ನಿರುತವಾಯಿತು ಧರ್ಮವಾಗ ಜ
ಯುರಮಣಿಯುಗುತ್ಸಾಹವಾಯಿತು ಭೂಪ ಕೇಳೆಂದ ॥ ೨೧

ಬಳಿಕ ಯೋಜನಗಂಧಿಪುತ್ರರು
ಬಳವುತಿರ್ದರು ಸೂರ್ಯತೇಜದ
ವೊಲು ಕುಮಾರರು ಭೀಷ್ಮನನುಜರು ಹಿಮಕುಲಾನ್ವಯರು ।
ಲಲಿತಮಂಗಳಜಾತಕರ್ಮವ
ಬಳೆದು ಚಿತ್ರಾಂಗದನುಕುರುಕುಲ
ತಿಲಕನಾದ ವಿಚಿತ್ರವೀರ್ಯನು ನಾಮಕರಣದಲಿ ॥ ೨೦

ಇರಲಿರಲು ಶಾಂತಾವನೀಪತಿ
ಸುರರೊಳಗೆ ಬೆರಸಿದನು ಬಳಿಕೀ
ಧರಣಿಯೊಡೆತನವಾಯ್ತು ಚಿತ್ರಾಂಗದಕುಮಾರಂಗೆ ।

ಚಿತ್ರಾಂಗದನು ವೃತನಾಗಲು ವಿಚಿತ್ರವೀರ್ಯನ ರಾಜ್ಯಪರಿಪಾಲನ

ಅರಸ ಕೇಳ್ಕೆಲವು ಕಾಲಾಂ
ತರದೊಳಾತನು ಕಾದಿ ಗಂಧ
ರ್ವರೊಳು ಮಡಿದನು ಪಟ್ಟವಾಯ್ತು ವಿಚಿತ್ರವೀರ್ಯಂಗೆ ॥ ೨೨

ರಾಯ ಕೇಳೈ ಸಕಳರಾಜ್ಯ
ಶ್ರೀಯನಾತಂಗಿತ್ತು ಭೀಷ್ಮನು
ತಾಯ ಚಿತ್ತವ ಪಡೆದು ಮೆಚ್ಚಿಸಿದನು ಜಗತ್ತ್ರಯವ ।

ರಾಯಕುವರನ ಮದುವೆಗಬುಜಗ
ಳಾಯುತಾಕ್ಷಿಯರನು ವಿಚಾರಿಸಿ
ಹಾಯ್ದನಾ ದಬದುಬವೆನೊಂದು ವಿವಾಹಮಂಟಪಕೆ ॥ ೨೪

ವಿಚಿತ್ರವೀರ್ಯನ ವಿವಾಹ.

ಅಲ್ಲಿ ನೆರೆದಾ ಕ್ಷತ್ರವರ್ಗವ
ಚೆಲ್ಲಬಡಿದು ವಿವಾಹಶಾಲೆಯ
ಚೆಲ್ಲೆಗಂಗಳ ಕಮಲಮುಖಿಯರ ಮೂವರನು ಹಿಡಿದ ।
ಘಲ್ಲಣೆಯ ಪಟುಭಟರ ಘಲ್ಲಿಸಿ
ಮಲ್ಲಭೀಷ್ಮನು ಪುರಕೆ ತಂದವ
ರೆಲ್ಲರನು ತಮ್ಮಂಗೆ ಮದುವೆಯ ಮಾಡಲನುಗೈದ ॥ ೨೫

ಆಕಮಲಲೋಚನೆಯರೊಳು ಮೊದ
ಲಾಕೆ ಭೀಷ್ಮನೆ ಗಂಡನೆಂದೇ
ನೂಕಿ ಭಾಷೆಯ ಮಾಡಿ ನಿಂದಳು ಛಲದ ಬಲುಹಿನಲಿ।
ಆಕೆ ಮೊಣಲಿ ಮಿಕ್ಕವರು ಬರ
ಶ್ರೀಕುಮಾರಂಗೆಂದು ವೈದಿಕ
ಲೌಕಿಕೋತ್ಸವದಿಂದ ಮದುವೆಯ ಮಾಡಿದನು ಭೀಷ್ಮ ॥ ೨೬

ಅಂಬಾಭೀಷ್ಮರ ಕಲಹ.

ಅರಸ ಚಿತ್ರ್ಯಸಂಬಯೆಂಬಳು
ದುರುಳ ಭೀಷ್ಮನ ಕೂಟವಲ್ಲದೆ
ಮರಣದೊಡನೆಯೆ ಕೂಟದೆಡೆಯಲಿ ಪಂಥ ವಿಲ್ಲೆಂದು ।
ಕರೆಸಿದಳು ಭೀಷ್ಮನನು ಮುನ್ನಿನ
ಗರಸ ಸಾಲ್ವನದೆಂದು ನಮ್ಮಯ
ವರಜನಕ ಸಂಪ್ರತಿಯು ಮಾಡಿರ ನೀನು ಹಿಡಿತಂದೆ ॥ ೨೭

ತಂದು ಬಿಟ್ಟೊಡೆ ಮರಳಿ ಸಾಲ್ವನ
ದಿಂದು ತಾ ಪತಿಕರಿಸನೆನ್ನನು
ತಂದು ತಾ ಮರಳೊಬ್ಬಗೀವೊಡೆ ಯವರು ಕೈಕೊಳರು ।
ಇಂದು ನೀ ಹಿಡಿದಾಗ ಕೆಡಿಸಿದೆ
ತಂದುದಕೆ ತಾ ನರಸನಾದೊಡ
ದಿಂದುಮುಖಿಯರೊಳಾನೆ ಧನ್ಯಳದೆಂದೊಡಿಂತೆಂದ ॥ ೩೮

ಎನ್ನ ವ್ರತವೊಂದಿಪುದು ವನಿತೆಯ
ರೆನ್ನ ಮಾತೆಯ ರೂಪರೆಂಬುದ
ನಿನ್ನನಾ ಪತಿಕರಿಸಬಾರದು ಯುವತಿ ಕೇಳೆಂದ ।
ಮುನ್ನ ಕೇಳಾನಿನ್ನ ನೀಗಳು
ನನ್ನಣೆಗೆ ಮನವಿಕ್ಕಿದೊಡೆ ಸಂ
ಪನ್ನನಚ್ಯುತನಾಣೆ ಕೇಳೆನೆ ಕೋಪ ಕಿಡಿಯಿಡಲು ॥ ೩೯

ಮರಳಿದಳು ಲಲಿತಾಂಗಿ ಗಂಗಾ
ವರನದಿಯ ತಡಿಗಾಗ ಭೀಷ್ಮನ
ಶಿರವನರಿವೆನದೆನುತ ತಪದಲ್ಲಿರಲು ನಾರದನು ।
ಸರಸಿರುಹಸಂಭವನ ಸಭೆಯಿಂ
ಧರಣಿಗಿಳಿದಪನಂಬೆಯಲ್ಲಿಗೆ
ವರಮುಖಿಯೆ ತಪವೇತಕೆಂದರೆ । ನುಡಿದಳಾವನಿತೆ ॥ ೪೦

ಪರಶುರಾಮರನ್ನು ಪ್ರಾರ್ಥಿಸೆಂದು ಅಂಬೆಗೆ ನಾರದೋಪದೇಶ.

ಸುರನದಿಯ ಸುತನೆನ್ನ ಹಿಡಿತಂ
ದರಸನಾಗದೆ ಬಿಟ್ಟನದಕೀ
ವರತಪವ ನಾ ಮಾಡಿ ಭೀಷ್ಮನ ಕೊಲುವೆನೆಂದೆನಲು ।
ಸರಸಿರುಹಮುಖಿ ಕೇಳು ಬಱಿದೇ

ಸರಸಿಜಾನನೆ ತಪವಿದೇಕೆನೆ, ಖ

ಹರಿಸಲಾಗದು ಪುರುಷರಾದರ
ನಿರುತವಾದೊಡೆ ಪರಶುರಾಮಂಗಱುಹು ಹೋಗೆಂದ ॥ ೪೧

ಆತನೀತನ ಪರಮಗುರು ತಾ
ನಾತನಾಜ್ಞೆಯ ಮೀಱೆ ನಿರುತವಿ
ದಾತನನು ನೀ ಕೊಂಡು ಬಾ ಯೆಂದಾತ ಪೇೞಿದನು ।
ಆತನನು ಬೀಳ್ಕೊಂಡು ಮುನಿಪಿ
ಖ್ಯಾತರೊಡೆಯನ ಬನಕೆ ಬಂದಪ
ಳೋತು ಭಯಭಕ್ತಿಯಲಿ ಮೆಯ್ಯಿಕ್ಕಿದಳು ವರತರಳೆ[1] ॥ ೪೨

ಬರಲು ದೇವರ ದೇವನಾಕೆಯ[2]
ಪರಿಯ ಕೇಳಿದೊಡಾಕೆ ಹಿಂದಣ
ನಿರುತವನು ಬಿನ್ನೈಸೆ ಕರುಣಾಕರನು ಪೊಱವಂಟ ।
ವರಶರಾಸನ ಪರಶುಸಹಿತಾ
ಪರಶುರಾಮನು ತೇರನೇಱಿಯೆ
ವರಋಷಿಸ್ತೋಮದಲಿ ಬಂದನು ಪರಕುರುಕ್ಷಿತಿಗೆ ॥ ೪೩

ಪರಶುರಾಮನ ಭಜಿಸಿ ಹಸ್ತಿನ
ಪುರಕೆ ತಂದಳು ಬೞಿಕ ಗಂಗಾ
ವರಕುಮಾರನು ಕೂಡಿ ಮಾಡಿದ ಪರಿಯ ಕೇಳಂದ ।

ಅಂಬೆಯನ್ನು ಅಂಗೀಕರಿಸು ಇಲ್ಲದಿದ್ದರೆ ಯುದ್ಧಕ್ಕೆ ಬಾ
ಎಂದು ಪರಶುರಾಮರ ಅಪ್ಪಣೆ

ಕರೆಸಿದನು ಭೀಷ್ಮನನು ನೀನೀ
ವರಸತಿಯ ಪತಿಕರಿಸು ನೀ ಪತಿ
ಕರಿಸದಿರ್ದೊಡೆ ಕಾಳಗವ ಪತಿಕರಿಸು ನೀನೆಂದ ॥ ೪೪

---

1 ಲಲಿತಾಂಗಿ, ಗ.ಘ. ಭೃಗುಸುತಗೆ, ಖ. 2 ಬರವಿದೇನೆಂದಾಗಲಾಕೆಯ, ಖ.

ಸತಿಯನೊಲ್ಲೆನು ಬ್ರಹ್ಮಚರ್ಯ
ವ್ರತಕೆ ತಪ್ಪುವೆನಲ್ಲ ನೀನನು
ಚಿತವ ನೆನೆದೊಡೆ ನಡೆಯಿ ಕೊಟ್ಟೆನು ಕಾಳಗವ ನಿಮಗೆ।
ವ್ರತನಿಧಿ ಕುರುಕ್ಷೇತ್ರದಲಿ ಸಂ
ತತವದಿಪ್ಪತ್ತೊಂದುದಿನ ಭೃಗು
ಸುತನೊಡನೆ ಕಾದಲಿಕೆ ಕೇಳಯೆ ಬಂದರೊಲವಿನಲಿ [1] ॥ ೪೫

ಗಂಗೆಮೊದಲಾದಮಳನದಿಗಳು
ಜಂಗಮಶ್ರೀಯಷ್ಟವಸುಗಳು
ಹಿಂಗದಲ್ಲಿಗೆ ಬಂದು ಭೀಷ್ಮಂಗೆಂದರೊಂದುವನು ।
ಮಂಗಳಾಹ್ವಯನೀತನೇ ನರ
ಸಿಂಗನೀತನ ಕೂಡೆ ಮಲೆವರೆ
ಯಂಗವುಳಿವುದೆ ಬೇಡ ಮಗನೇ ಯೆಂಗೊಡಿಂತೆಂದ ॥ ೪೬

ಅಂಗವಳಿದೊಡದಳಿದು ಹೋಗಲಿ
ಹೆಂಗಸನು ಕೈಕೊಳನು ನಾನೆನ
ಲಂಗಜಾಸ್ತ್ರಕೆ ಬೆಚ್ಚಿ ದಾತಗೆ ಮೋಹನಾಸ್ತ್ರವನು ।
ಗಂಗೆಮೊದಲಾಗಖಿಳವಸುಗಳು
ಹಿಂಗಿದರು ಸಮ್ಮೋಹನಾಸ್ತ್ರದ
ಲಂಗವುಳುಹಿಸೆ ಮರಳಿ ಭೀಷ್ಮನ ಪರಿಯ ಕೇಳೆಂದ ॥ ೪೭

ಆಮಹಾಸಮ್ಮೋಹನಾಸ್ತ್ರವ
ನೇಮಿಸಿಯೆ ಕಲಿ ಭೀಷ್ಮ ಭಾರ್ಗವ
ರಾಮಚಂದ್ರಂಗಾಗ ಭುಗ ವನದಕೆ ನಾಭಿಯನು ।

ಆಗ ಯುದ್ಧವಾಗಲು ಪರಶುರಾಮರ ಪರಾಜಯ.

ಹೋಮಿಸಿವನದಜಕೊಳಗಣಸುರನ

---

1 ಕಾದಿದನು ವಿರಥನ ಮಾಡಿದನು ಭೀಷ್ಮ ಖ.

ಭೂಮಿಯೊಳು ಸೋತಂತೆ ಮಾಡಿದ
ರಾಮ ಭೀಷ್ಮಗೆ ವಿರಥನಾದುದ ನೇನ ಹೇಳುವೆನು ॥ ೪೮

ಮುನ್ನ ಸುರತತಿತ್ರೀಸವೃಂದವು
ಹುಣ್ಣಿವೆಯು ಪ್ರತಿ ಮಾಸಪೂಜೆಗೆ
ಭಿನ್ನವಿಲ್ಲದೆ ಲೋಕ ಹೋಗಲು ದೈತ್ಯನೊಬ್ಬವನು ।
ಜಿನ್ನಬಂದಪನವನು ಶೂಲಿಯು
ಚೆನ್ನೆಯನು ಕಂಡವನು ಮೋಹಿಸಿ
ಯಿನ್ನು ನಾ ಶಿವನಹೆನು ಪಾರ್ವತಿಯುವತಿಪತಿಯಹೆನು ॥ ೪೯

ಎಂದು ಭಾರ್ಗವರಾಮಚಂದ್ರಮ
ನಂದವನು ತಾನಱಿದು ನಾಭಿಯು
ಗೊಂದಿಯುಲಿ ಪುದುಗಿರ್ದ ಚೌಕಡಿಯೆಂಟುಪರಿಯಂತ ।
ಎಂದಿಗಾದರು ರಾಯ ಕೇಳೈ
ಯಿಂದುಧರ ನಾನೆಂಬ ಜೀವರು
ನಂದಿಹೋಗುವರೈಸೆ ಯುವದಿರಗಹುದೆ ಶಿವಪದವು ॥ ೫೦

ಬಳಿಕ ಭೀಷ್ಮನ ಬಾಣಕಸುರನ
ನೊಲಿದು ತಾ ಗುರಿಮಾಡಿ ಭಾರ್ಗವ
ಕುಲಶಿರೋಮಣಿ ಬೀಳುಕೊಂಡನು ಭೀಷ್ಮನುಪಟಳವ ।

ನೀನೇ ಭೀಷ್ಮನ ಪ್ರೀತಿಯ ಪಡೆಯೆಂದು ಹೇಳಿ ನಡೆಯುವಿಕೆ.

ಎಲೆ ಮಹಾಸತಿ ನಮ್ಮಮಾತನು
ಬಲುವಿಡಿದು ಕೈಕೊಳ್ಳ ನೀನಿಂ
ನೊಲಿಸಿಕೋ ವೊಲಿದಂತೆ ಯೆಂದನು ನಗುತ ಪರಶುಧರ ॥ ೫೧
ನುಡಿಯ ಕೆಡಿಸುವೆನೆಂದು [1] ಗುರುವವ
ಗಡಿಸಿ ಹೊಕ್ಕರೆ ಸರಳಮೊನೆ [2] ಯಲಿ
ಕೊಡಹಿ ಬಿಸುಟನು ಬಿಟ್ಟುದಿಲ್ಲ ಮಹಾವ್ರತಸ್ಥಿತಿಯ ।

---

[1] ಭಂಗಿಸಲೆಂದು, ಚ. [2] ಮಳೆ, ಜ.

ಪೊಡವಿಯಲಿ ಶುಚಿ ಸತ್ಯವಾಕ್ಯದ
ದೃಢತೆಯಲಿ ಕಲಿಭೀಷ್ಮದೇವಗೆ
ಬಿಡದೆ ನಿಲುವರ ಕಾಣೆ ಜನಮೇಜಯಮಹೀಪಾಲ ‖ ೫೨

ನುಡಿಯ ಮೀಱಿದ ನಮ್ಮ ಶಿಷ್ಯನ
ನೊಡಬಡಿಸಿಕೊಳ್ಳೆಂದು ನಾರಿಗೆ
ನುಡಿದು ತನ್ನಾಶ್ರಮಕೆ ತಿರುಗಿದ ಪರಶುರಾಮಮುನಿ ।
ಮಡದಿ ತಾ ಬಱಿಕಲ್ಲಿ ಭೀಷ್ಮನ
ಕೆಡೆನುಡಿದು ಬೀಳ್ಕೊಂಡು ಗಹ್ವರ
ದೆಡೆಯ ಹೊಕ್ಕಳು ತಪಕೆ ಮುಂದಣಕಥೆಯ ಕೇಳೆಂದ ‖ ೫೩

ಅಂಬೆಯು ಭೀಷ್ಮನನ್ನು ಶಪಿಸಿ ಹೋಗುವಿಕೆ.

ಅಂಬೆ ಭೀಷ್ಮನ ಬೈದು ಕಂಬನಿ
ದುಂಬಿ ಹೋದಳು ತಪಕೆ ಒಱಿಕೀ
ಯಂಬಿಕೆಯನಂಬಾಲಿಕೆಯ ರಮಿಸಿದನು ನೃಪಸೂನು ।
ಬೆಂಬಲಕೆ ಕಲಿ ಭೀಷ್ಮನಿರೆ ಚತು
ರಂಬುಧಿಯ ಮಧ್ಯದ ನೃಪಾಲಕ
ದಂಬವೀತಂಗಿದಿರೆ ಸಲಹಿದನಖಿಳಭೂತಳವ ‖ ೫೪

ತಪಸ್ಸಿನಿಂದ ಅಂಬೆಗೆ ಶಂಕರದರ್ಶನ ಮತ್ತು ಆಲಾಪ.

ಬಱಿಕ ಯಂಬೆಯ ತಪಕೆ ಶಂಕರ
ನಿಳಿದು ಬಂದನು ತತ್ಸಮೀಪಕೆ
ನಳಿನಲೋಚನೆ ತಪವಿದೇಕೆನೆ ತಾನು ಭೀಷ್ಮನನು ।

ಅಂಬೆಯ ದೇಹತ್ಯಾಗ.

ಕೊಲುವೆನೀ ದೇಹದಲದೆಂಬೀ
ಬಲುಹ ಕರುಣಿಪುದೆಂದೊಡೆಂದನು
ಲಲನೆ ನೀನಿನ್ನೊಂದು ದೇಹವ ಧರಿಸಿ ಕೊಲ್ಲೆಂದ ‖ ೫೫

ಎಂದು ತಿರುಗಿದ ಶೂಲಿ ಬಳಿಕರ
ಪಿಂದಲೋಚನೆ ತನ್ನ ದೇಹವ
ನಿಂದುಧರಗರ್ಪಿಸಲು ಹರಿದವಳಂಬೆ ನದಿಯಾಗಿ ।

ಮೊದಲು ಮಗಳಾಗಿ ಬಳಿಕ ಪುತ್ರನಾಗುವನೆಂದು ದ್ರುಪದಗೆ ಶಂಕರನ ವರ

ಅಂದು ದ್ರುಪದನು ಶಿವನ ಪೂಜಿಸಿ
ಯೆಂದನೆನಗೊಬ್ಬ ಮಳಪುತ್ರನ
ನಿಂದು ಕರುಣಿಪುದೆನಲು ಕೊಟ್ಟನು ಶಿವನು ಹರುಷದಲಿ [1] ॥ ೫೬

ನಿನಗೆ ಮೊದಲಲಿ ಮಗಳು ಜನಿಸುವ
ಳನಿತು ಷೋಡಶವರುಷವಾಗಲು
ತನುಜೆ ತಾನೇ ಪುತ್ರನಹಳ್ಳ ಯೆಂದು ವರವಿತ್ತ ।
ತನುಜನಾದರೆ ಸಾಕದೆಂದಾ
ಜನಪ ತಿರುಗಿದ ತನ್ನ ನಗರಕೆ
ವನಿತೆ ತಾ ಶ್ರೀಭೀಷ್ಮವಧೆಯನು ಮಾಡೆ ಜನಿಸಿದಳು ॥ ೫೭

ಮುಂದೆ ನಿನ್ನಭಿಧಾನ ದ್ರುಪದನ
ನಂದನನು ನೀ ವರಶಿಖಂಡಿಯು
ದೆಂದು ಜನಿಸುವುದೆಂದ ದೇವನು ಶ್ರೀಯುಮಾಪತಿಯು ।

ಅಂಬೆಯು ಸ್ತ್ರೀಯಾಗಿರಲು ವಿವಾಹವನ್ನು ನಡೆಸುವಿಕೆ.

ಎಂದು ತಿರುಗಿದ ತನ್ನ ಮೋಹರ
ಕೆಂದು ಶಂಕರ ಬಳಿಕ ದ್ರುಪದನ
ಯಿಂದುವದನೆಗೆ ಜನಿಸಿದಳು ತಾನಂಬೆ ಕೇಳೆಂದ ॥ ೫೮

ಜನಿಸಿದಳು ಹೆಣ್ಣಾಗಿ ಹೆಣ್ಣನು
ಜನಪನಾರಿಗೆ ತೋಱದಾಕೆಗೆ
ವಿನುತಮುಂಜಿಯ ಕಟ್ಟಿ ಮದುವೆಯ ಮಾಡಿದನು ದ್ರುಪದ ।

---

1 ಮನಮುಟ್ಟಿ, ಜ.

ವನಿತೆಯೊಂದಿನವಾಶಿಖಂಡಿಯು
ತನುವ ಕಂಡಳು ಕಂಡು ಹೆಣ್ಣೆಂ
ದೆನುತ ಗಂಡನ ಪರಿಯು ಹೇಳಿಯೆ ಕಳಹಿದಳು ಪಿತಗೆ ॥ ೫೯

ತನ್ನ ಸ್ತ್ರೀತ್ವವು ಪ್ರಸಿದ್ಧವಾಗಲು ಶಿಖಂಡಿಯು ವನಪ್ರವೇಶ.

ಕೇಳಯಾಕೆಯು ಜನಕ ದ್ರುಪದನ
ಮೇಲೆ ಬರಲಿಕೆ ಮಿಗೆ ಶಿಖಂಡಿಯು
ಕೇಳ ನಮ್ಮಾಮೂನ ಹೋಗುವುದೆನುತ ರಾತ್ರಿಯುಲಿ ।
ಆಲಯುವ ಬೀಡ್ಕೊಂಡು ಗಹ್ವರ
ದೊಳು ವನಕ್ಕೈತರಲು ತುಂಬುರು
ಬಾಳಕೆಯು ಕಂಡಂದು ದುಗುಡವಿದೇನು ಹೇಳೆಂದ ॥ ೬೦

ಹೇಳಬಾರದು ಕೇಳಬಾರದು
ಬಾಲೆಯನು ನನಗರಸಿಮಾಡಿದ
ಶೂಲಿವಾಕ್ಯವ ಕೇಳ ನಂಬಿದನೆಮ್ಮ ಪಿತನೆಂದು ।

ತುಂಬುರುವಿನ ಅನುಗ್ರಹದಿಂದ ಪುಂಸ್ತ್ವ ಪ್ರಾಪ್ತಿ.

ಹೇಳಿದಳು ತನ್ನಾತ್ಮಚಿಂತೆಯು
ಕೇಳ ತುಂಬುರು ಬಳಿಕ ತನ್ನಯು
ಲೋಲಪುರುಷತ್ವವನು ನೀಡಿದನರವನೆಂಟುದಿನ ॥ ೬೧

ಮರಳಿದನು ತನ್ನಾತ್ಮವಾಸಕೆ
ನೆರೆದನೈ ತಾನಾತ್ಮಪತ್ನಿಯು
ನಿರುಳು ತೋಱಲು ಕಂಡಳಂಗನೆ ತನ್ನ ವಲ್ಲಭನ ।
ಮಱೆದೆನೋ ತಾನೆಂದು ಪುನರಪಿ
ಜಱೆದು ಕಳದನು ಕನಸ ತಾನೆ
ಚ್ಚರಿಸಬೇಕೆಂದಾಗ ಹೇಳಿಯೆ ಕಳುಹೆ ಜನಕಂಗೆ ॥ ೬೨

ಎನ್ನ ಪತಿ ತಾ ಪುರುಷನನೆ ನಿ
ರ್ಭಿನ್ನಮಾನದಿನರಸ ತಿರುಗದ
ನಿನ್ನ ಮಕ್ಕಳ ಮಾತ ಕೇಳುವುದುಚಿತವಲ್ಲೆನುತ ।

ತನ್ನ ಪಟ್ಟಣಕ್ಕೈದೆ ದ್ರುಪದಜ
ತನ್ನ ಯುವತಿಯು ರಮಿಸಿ ಭಾಷೆಯು
ನಿನ್ನ ಸಲಿಸುವೆನೆಂದು ಬಂದಪನೆಂಟುದಿನದೊಳಗೆ ॥ ೬೩

ಬರಲು ಹಿಂದೊಂದಾಯ್ತು ಶಂಕರ
ವರವರಾಶ್ರಮದೊಳಗೆ ಯಕ್ಷೇ
ಶ್ವರನು ಕಂಡನು ತುಂಬುರನು ಸತಿರೂಪುಗೊಂಡಿರಲು ।
ವರಸತಿಯು ಕಂಡಾತ ಸೋತನು
ಸರಸಿಜಾಕ್ಷಿಯನೈದೆ ಹೋದನು
ನಿರುತ ಗರ್ಭಿಣಿಯಾದಳಾಕೆಯು ಮೋಘವೀರ್ಯದಲಿ ॥ ೬೪

ಬಳಿಕ ಬಂದು ಶಿಖಂಡಿ ತುಂಬುರ
ಗೆಲೆ ಮಹಾತ್ಮಕ ನಿನ್ನ ಕೃಪೆಯಲಿ
ಕುಲವುಳಿಯಿತಭಿಮಾನ ಹೆಮ್ಮೆಯಲಿನ್ನು ಕೊಳ್ಳೆಂದ ।
ಕೊಳಲು ಬಾರದದೆನಗೆ ಕೇಳನ
ಲೆಲವೊ ಹೇಪೈ ತಂದೆ ನೀನೆನೆ
ಲಲನೆಯಾಗಿರೆ ನಾನು ಕಂಡಾಗೊಬ್ಬ ಗಂಧರ್ವ ॥ ೬೫

ಬಳಿಕ ಯಕ್ಷೇಶ್ವರನು ಕಂಡನು
ನಿಳಯಕೈತಂದೆನ್ನ ರಮಿಸಿದ
ಬಳಿಕಲಾಯಿತು ಗರ್ಭವಾಕ್ಷಣ ಶಿವನು ನಡೆತಂದ ।
ನಿಳಯಕೈತರೆ ನಾನು ನಾಚಿಯೆ
ಯೊಳಗೆ ಯಿರುತಿರೆ ಬಂದು ಕಂಡನ
ದೆಲವೊ ನೀ ನಮ್ಮಾಜ್ಞೆಯಿಲ್ಲದೆ ಮಾಡಿದುದಕಿನ್ನು ॥ ೬೬

ನಿನಗೆ ಮಾನಿನಿತನವು ಹಿಂಗದೆ
ಜನಿಸಿರಲಿ ತಾನೊಂದು ಜನ್ಮಕೆ
ಪುನರಪಿಯು ನೀ ಪುರುಷನಾಗೆಂತೆಂದು ತೆರಳಿದನು ।

ಬಂದ ಪುಂಸ್ತ್ವವು ಸ್ಥಿರವಾಗುವಿಕೆ

ಎನಗೆ ಗರ್ಭಿಣಿತನವು ಸಮನಿಸಿ
ತೆನಗೆ ತಾನಿದು ನೈಜವಾಯಿತು
ನಿನಗೆ ನಿನ್ನಯ ಬಯಕೆ ಸಂದಿತು ಹೋಗು ನೀನೆಂದ ‖ ೬೭

ಎನೆ ಖಚರ ಲೇಸೆಂದು ವಂದಿಸಿ
ಮನದಲುತ್ಸಾಹಿಸುತ ಬಂದನು
ಜನಕಜನನಿಗೆ ಹೇಳಿ ತನ್ನಯ ಪುರುಷಸಂಗತಿಯ |
ಜನಪ ಕೇಳ್ದು ದ್ರುಪದನಾಗಲು
ವಸಿತೆಗೆಂದನು ನಮ್ಮ ಶೂಲಿಯ
ನಿರುತವಾಕ್ಯವು ಸತ್ಯವೆಮದ್ಯೆ ಯೆಂದು ಹರುಷಿಸಿದ ‖ ೬೮

ಎಂದು ದ್ರುಪದನು ವರಶಿಖಂಡಿಯ
ಛಂದದಲಿ ಪಾಲಿಸುತಲಿರ್ದಪ
ನಿಂದುಕುಲಸಂಭವರ ಪರಿಯನೆ ಕೇಳು ನೀನೆಂದ |
ಮುಂದು ದೊರೆ ವಿಚಿತ್ರವೀರ್ಯಗೆ
ಮಂದಮತಿಯಲಿ ತಾನು ಯೋಜನ
ಗಂಧಿಯಲಿ ಭೀಷ್ಮರಲಿ ಸಂಶಯ ಪುಟ್ಟೆ ಮನದೊಳಗೆ ‖ ೬೯

ವರವಿಚಿತ್ರ ವಿಚಿತ್ರವೀರ್ಯನು
ನಿರುತವಱಿಯದೆ ನಿಮ್ಮ ಭೀಷ್ಮನ
ಪರಿಯು ಯೋಜನಗಂಧಿ ಯಿಬ್ಬರ ಪರಿಯು ಹೊಸತೆನುತ |
ಧರಣಿಪತಿಗಱುಹಲಿಕೆ ತಾನಿದ [1]
ನಱಿಸಿ [2] ನೋಡುವೆನೆಂದು ನೃಪನಿರೆ
ಸುರನದೀಸುತ ತಾಯಿಗಾಗಲು ಹರಿಕಥಾಮೃತವ ‖ ೭೦

ಹೇಳುತಿರೆ ನೃಪನಾಗ [3] ನಡುಗಿಯೆ
ಕಾಲಿಗಿಕ್ಕಿದನುತ್ತಮಾಂಗವ

---

[1] ತಾನಾ, ಜ. [2] ದರಿಸಿ, ಜ. [3] ಕಂಡಾಗ, ಕ,

ಮೇಲೆ ಬಿನ್ನಹ ಮಾಡಿದನು ನೃಪ ಭೀಷ್ಮದೇವಂಗೆ ।
ಹೇಳಿರೈ ತನಗೊಂದು ಧರ್ಮವ
ಕೇಳುವೆನು ಹಿಸುಣನನು ಹೇಳುವ
ಕೇಳುವರಿಗಿನ್ನಾವುದೈ ಪ್ರಾಯಶ್ಚಿತ್ತ ವಿಧಿಯೆಂದ [1] ॥ ೭೧

ಎಂದೊಡಾತಗೆ ಹೇಳೆ ಮರಗಳ
ಮಂದಿರದಿ ಕುಳ್ಳಿರ್ದ ಗೊಬ್ಬರ
ದಿಂದ ಬೇವುದು ಹಿಸುಣನಾಡುವಕೇಳ್ವಗಿದುವಿಧಿಯು [2] ।
ಎಂದೊಡಾಕ್ಷಣ ನಮಿಸಿ ಗಂಗಾ
ನಂದನನ ಬೀಳ್ಕೊಂಡು ಹುಳುತಿಪ
ದೊಂದುಮರದಾ ಪೊಟ್ಟೆಯಲಿ ಕುಳ್ಳಿರ್ದ ಗೊಬ್ಬರದಿ ॥ ೭೨

ಅಂದು ತಾನೊಬ್ಬನನು ಕೇಳಿಸ
ದಂದು ಬೆಂದ ವಿಚಿತ್ರವೀರ್ಯನು
ಯಿಂದುಕುಲ ಕಡೆವರಿಯಿತಂದಿಗೆ ಭೂಪ ಕೇಳೆಂದ ।
ಮುಂದೆ ಬಂದುದನಿನ್ನು ಗೋಪೀ
ವೃಂದವಲ್ಲಭ ಮರಳೆ ಪರಿದುದ
ಸಂಧಿಸಿವನ್ನೈ ವೀರನಾರಾಯಣನು ಕರುಣದಲಿ ॥ ೭೩

ಹದಿಮೂರನೆಯ ಸಂಧಿ ಮುಗಿದುದು.

---

[1] ಹಿಸುಣತೆಯೊಳಣ್ಣನವೋಲಿಕಾಳಗಪಿಕ್ಕ ಪ್ರಾಯಶ್ಚಿತ್ತವೇನೆಂದ, ಘ.

[2] ವಿದಿತಪ್ರಾಯಶ್ಚಿತ್ತವದಕೆನಲು, ಖ.

ಹದಿನಾಲ್ಕನೆಯ ಸಂಧಿ.

ಸೂಚನೆ.

ಚಂಡಮುನಿ ದೂರ್ವಾಸ ಕುಂತಿಗೆ
ಚಂಡಮಂತ್ರವನೀಯೆ ಯಾದವ *
ಚಂಡವಿಕ್ರಮನವನಿಯಲಿ ಜನಿಸಿದನು ಕಲಿ ಕರ್ಣ ||

ವಿಚಿತ್ರವೀರ್ಯನ ಮರಣ

ಅರಸ ಕೇಳ್ಕೆಲವು ಕಾಲಾಂ
ತರಕೆ ನಿಮ್ಮ ವಿಚಿತ್ರವೀರ್ಯನು
ಸರಿದನಮರಸ್ತ್ರೀಯರಲಿ ಬಳಿಕೀ ನದೀಸುತನ |

ಭೀಷ್ಮನು ರಾಜ್ಯವನೊಪ್ಪದಿರಲು ವೇದವ್ಯಾಸರನ್ನು ಕರೆಯುವಿಕೆ.

ಕರೆದು ನುಡಿದಳು ಮಗನೆ ರಾಜ್ಯವ
ಧರಿಸು ನೀನಿನ್ನುತ್ತರದ [1] ಹಿಮ
ಕರಕುಲವ ಬೆಳಗೆಂದು ಯೋಜನಗಂಧಿ ಬೆಸಸಿದಳು || ೧

ತಾಯೆ ನಿಮ್ಮೋಪಾದಿ ರಾಜ
ಸ್ತ್ರೀಯರೆಂಬಾನುಡಿಯೊಳಗೆ ಗಾಂ
ಗೇಯ ಮುಳುಗನು ಭೀಷ್ಮವಚನಕೆ ಬೇಱೆ ಮೊಳೆಯುಂಟೇ [2] |
ಕಾಯದಲ್ಪಸುಖಕ್ಕೆ ಘನನಿ
ಶ್ರೇಯಸವ ಕೆಡಿಸುವನೆ ಯೆಲವದ
ಕಾಯಿಕೋಸುಗ ಕಲ್ಪವೃಕ್ಷವ ಕಡಿವನಲ್ಲೆಂದ || ೨

ಚಂಡಮುನಿ ಮಂತ್ರಾಹ್ವಯದಿಬರೆ ಚಂಡಕರಸತ್ತೇಜಸಾಹವ, ಚ.
..............................ಕರದಂಡನಖನಸತೇಜನಾಹವ, ಖ ಛ.

1 ನೀನಿನ್ನುತ್ತರಾಯಿ, ಖ. ಝ. 2 ಪಾತಿವ್ರತವ, ಕ.

ನಾನು ರೂಢಿಯ ಸತಿಯರೆಲ್ಲರ
ಸೂನುವಾಗಿಯೆ ಮತ್ತೆ ಪತಿಯುಹ
ಹೀನಬುದ್ಧಿಯ ಮಾಡಿ ನುಡಿದುದ ಬಿಡೆನು ಜನ್ಮದಲಿ ।
ತಾನು ನುಡಿದುದ ತಾನು ನಡಿಸದೆ
ಮಾನಿನೀಮೋಹದಲಿ ಪುನರಪಿ
ತಾನು ಬಿದ್ದೊಡೆ ನರಕಕದು ಘನ ತಾಯೆ ಕೇಳೆಂದ ॥ ೩

ಮಱುಗಿ ಯೋಜನಗಂಧಿ ಚಿಂತೆಯ
ಸೆಱೆಗೆ ಸಿಲುಕಿದಳೊಂದು [1] ರಾತ್ರಿಯೊ
ಳಱಿದು ನೆನೆದಳು ಪೂರ್ವಸೂಚಿತಪುತ್ರಭಾಷಿತವ ।
ಮುಱಿದ ಭರತಾನ್ವಯದ ಬೆಸುಗೆಯ
ತೆರನ ತೋಱಿತೆ ಪುಣ್ಯವೆನುತೆ
ಚ್ಚರಿತು [2] ನೆನೆದಳು ಮಗನೆ ವೇದವ್ಯಾಸ ಬಹುದೆಂದು ॥ ೪

ವೇದವ್ಯಾಸಾಗಮನ

ಕೆಂಜೆಡೆಯ ಕೃಷ್ಣಾಜಿನದ ಮೊನೆ
ಮುಂಜೆಱಗಿನುಡುಗೆಯ ಬಲಾಹಕ
ಪುಂಜಕಾಂತಿಯ ಪಿಂಗತರಮುಖಕೇಶದುನ್ನತಿಯ ।
ಕಂಜನಾಭನ ಮೂರ್ತಿಶೋಭಾ
ರಂಜಿತನು ಭವದುರಿತಶತಮದ
ಭಂಜಕನು ತಾಯ್ಗೆಱಗಿ ನಿಂದನು ವ್ಯಾಸಮುನಿರಾಯ ॥ ೫

ನೆನೆದೆ ಯೇನೌ ತಾಯೆ ಕೃತ್ಯವ
ನೆನಗೆ ಬೆಸಸೆನೆ ಮಗನೆ ಭಾರತ
ವಿನುತಕುಲಜಲರಾಶಿ ಯೆಡೆವರಿಯಿತು ವಿಚಿತ್ರನಲಿ [3] ।
ತನುಜ ನೀನೇ ಬಲ್ಲೆ ಯೆನೆ ಕೇ

---

1 ತೋಱಿಯೊಳಾಱ್ದಳದೊಂದು, ಖ. 2 ದೈವಗತಿಯಂದಿರುತ, ಖ.
3 ಯಾಯಿಂತಿಂದಿನಲ್ಲಿ, ಕ. ಖ.

ಳ್ಜನನಿ ನಿಮ್ಮಡಿಯಾಜ್ಞೆಯಲಿ ಸಂ
ಜನಿಯಿಸುವೆ ವೈಚಿತ್ರ್ಯವೀರ್ಯಕ್ಷೇತ್ರದಲಿ ಸುತರ ॥ ೬

ಎಂದು ಬಳಿಕೀಕಾಂತಭವನದೊ
ಳಂದು ಮುನಿ ಯಿರಲಂಬಿಕೆಯನರ
ವಿಂದಮುಖಿಯಟ್ಟಿದಳು ಸೊಸೆಯನು ಮುನಿಯ ಪೊರೆಗಾಗಿ ।
ಬಂದು ಮುನಿಪನ ದಿವ್ಯಮೂರ್ತಿಯ
ನೆಂದು ಭಾವಿಸುತಕ್ಷಿಗಳ ಭಯ
ದಿಂದ ಮುಚ್ಚಿದಳಾಕೆ ಗರ್ಭಿಣಿಯಾಗಿ ತಿರುಗಿದಳು ॥ ೭

ಬಳಿಕಲಂಬಾಲಿಕೆಯನಲ್ಲಿಗೆ
ಕಳುಹಲಾವಧು ಭಯದಿ ಮುಖದಲಿ
ಬಿಳುಪು ತೋಱಿತು ಮುನಿಯ ರೌದ್ರಾಕಾರದರುಶನದಿ ।
ಲಲನೆ ಮರಳಿದಳೊಬ್ಬ ಸತಿಯನು
ಕಳುಹಲಾವಧು ಚಪಲ ದೃಷ್ಟಿಯ
ಲಳುಕದೀಕ್ಷಿಸಲಾಯ್ತು ಗರ್ಭಾಧಾನವನಿಬರಿಗೆ [1] ॥ ೮

ಬಂದು ಮುನಿಪತಿ ತಾಯ್ಗೆ ಕೈಮುಗಿ
ದೆಂದನಂಬಿಕೆಯಲ್ಲಿ ಜನಿಸುವ
ನಂದನನು ಜಾತ್ಯಂಧನಂಬಾಲಿಕೆಗೆ ಪಾಂಡುಮಯ ।
ಬಂದು ಬಳಿಕಿನ ಚಪಳಗರೆಬಲ
ನೆಂದು ಹೇೞಿಯೆ ತನಗೆ ನೇಮವೆ
ಯೆಂದು ತನ್ನಾಶ್ರಮಕೆ ಸರಿದನು ಬಾದರಾಯಣನು ॥ ೯

ಧೃತರಾಷ್ಟ್ರಾದಿಜನನ.

ತುಂಬಿಮದು ನವಮಾಸ ಜನಿಸಿದ
ನಂಬಿಕೆಯ ಬಸುಱಿನಲಿ ಸೂನು ಗ

1 ಕಳುಹಲಾಗಲು ಭಯದ ದೃಷ್ಟಿಯು ಕಳೆಯಲಾಯಿತು ಗರ್ಭಶುದ್ಧಿಗೆ ಮುನಿಯ ದಷ್ಟಿಯಲಿ, ಕ.

ತಾಂಬಕನು ಮಗನಾದನಂಬಾಲಿಕೆಗೆ ಪಾಂಡುಮಯು ।
ಚುಂಬಿಸಿತು ಪರಿತೋಷನವಪುಳ
ಕಾಂಬುಗಳು ಜನಜನಿತವೇದನೇ
ನೆಂಬೆನುತ್ಸಾಹವ ಕುಮಾರೋದ್ಭವದ ವಿಭವದಲಿ ॥ ೧೦

ಜಾತಕರ್ಮಾದಿಯನು ಪಾರ್ಥಿವ
ಜಾತಿವಿಧಿವಿಹಿತದಲಿಗಂಗಾ
ಜಾತ ಮಾಡಿಸಿ ತುಷ್ಟಿಪಡಿಸಿದನಖಿಳಯಾಚಕರ ।
ಈತನೇ ಧೃತರಾಷ್ಟ್ರನೆರಡನೆ
ಯಾತ ಪಾಂಡು ವಿಲಾಸಿನೀಸಂ
ಜಾತನೀತನು ವಿದುರನೆಂದಾಯ್ತವರಿಗಭಿಧಾನ ॥ ೧೧

ಅರಸ ಕೇಳಿಂತಿವರು ಪೂರ್ವದ
ಸುರಪತಿಯು ಸದನದೊಳಗೊಮ್ಮೆಯು
ನೆರೆದು ಹಾಹಾ ಹೂಹು ಯೆಂಬವರಿವರು ಗಂಧರ್ವ ।
ನಿರುತರಾಗದ್ವೇಷದಲಿ ತಾ
ಧರೆಗೆ ಜನಿಸಿದರಿಂದುಕುಲದಲಿ
ಸುರಪತಿಯು ಶಾಪದಲಿ ಪಾಂಡುಕ್ಷಿತಿಪಧೃತರಾಷ್ಟ್ರ ॥ ೧೨

ಯಮನಿಗೆ ಮಾಂಡವ್ಯ ಶಾಪ.

ಪೂರ್ವದಲಿ ಮಾಂಡವ್ಯಮುನಿಪತಿ
ಯುರ್ವಿಯಲಿ ಶ್ರೀಬ್ರಹ್ಮಪದವಿಗೆ
ಸಾರ್ವತಪವನು ಮಾಡೆ ಬಟಿಕೊಂದಾಯ್ತು ಕೇಳೆಂದ ।
ಸಾರ್ವಭೌಮನ ಮನೆಯು ತುರಗವ
ನೋರ್ವ ತಸ್ಕರ ಕೊಂಡು ಬರಲಿಕೆ
ನೀರ್ವಹದಿ ಹುಯ್ಲಾಯ್ತು ಬೇಗದಿ ಭೂಪ ಕೇಳೆಂದ ॥ ೧೩

ಬಟಿಕ ತಸ್ಕರ ಹಯವನೊಯ್ಯುತ
ಕಳವಳಿಸಿ ಮಾಂಡವ್ಯಮುನಿಪನ

ಮೆಳೆಯೊಳಗೆ ತಾ ಕಟ್ಟಿ ಹೋದನು ಬೇಗ ಗತವಾಗಿ ।
ಹಳುವುದಗಲಕೆ ತುಂಬಿ ಪುಯ್ಯಲು
ವುಲಿವುತಲಿ ಬರಲಾಗ ಪಯುವನು
ಕಳುವದಲಿ ತಾವ್ಯೆದೆ ಕಂಡರು ಮುನಿಯು ಹಿಂದಿರಲು ॥ ೧೪

ಬಿಗಿದು ಹೊಡೆಗೈಗಟ್ಟಿ ಮುನಿಯನು
ನಗರದೊಳಯಿಕೆ ತಂದು ಭೂಪನ
ಮೊಗನ ಮುಂದಕೆ ಮುನಿಯ ನಿಲಿಸಲಿಕಾತ ಶೂಲದಲಿ ।
ತೆಗೆಸಿದನು ಮಾಂಡವ್ಯಮುನಿಯನು
ನಗುತಲಾಯುಪರಾಜನಾಕ್ಷಣ
ದುಗುಡದಲಿ ಮುನಿವರನು ಯಮನನು ತಾನು ಧ್ಯಾನಿಸಿದ ॥ ೧೫

ಬಳಿಕ ಯಮನೈತಂದು ಮುನಿಪನ
ತಿಳುಹಲಾತನು ತನಗೆ ಶೂಲದ
ಕೊಲೆ ಯಿದೇತಕೆ ಪೂರ್ವಜನ್ಮದ ಪಾಪವೇನೆನಲು ।
ನೆಲೆಯ ಹೇಳೆನೆ ನೀನು ತೊನಸೆಯ
ಕೊಲೆಯ ಮಾಡಿದೆ ಮುಳ್ಳುಮೊನೆಯಲಿ
ತಿಳಿದು ನೋಡೆನೆ ತಾನು ನೋಡಿದ ತನ್ನ ಕರ್ಮವನು ॥ ೧೬

ಅಲ್ಲಿ ನೋಡಲಿಕಾಗ ತೊನಸೆಯ
ಮುಳ್ಳುಮೊನೆಯಲಿ ಕೊಂದಪಾಪವ
ದಿಲ್ಲಿ ನಾಸ್ತಿ ಬ್ರಹ್ಮಪದವಿಗೆ ತಪವ ಮಾಡಿದುದ ।
ಹೊಲ್ಲಯಾಯಿತು ತನಗೆ ಕಮಲಜ
ನಲ್ಲಿ ಯೆನುತಲಿ ಬ್ರಹ್ಮಲೋಕವ [1]
ಬಲ್ಲರೇ ಶಿವಗರುಡಶೇಷರು ಯಿನ್ನು ಮೊದಲಾಗಿ ॥ ೧೭

ತಾನಯೋಗ್ಯವ ಬಯಸಿದೆನು ಹರಿ
ತಾನೆ ಬಲ್ಲನೆನಲಿಕೆ ಶೂಲದ

---

[1] ಪಾದವ, ಕ.

ಹಾನಿ ಯಾಯಿತು ಮುನಿಯು ಯಮನನು ಕುಱಿತು ಶಾಪಿಸಿದ |
ನೀನಸತ್ಯವ ನುಡಿದೆ ಮಾನುಷ
ಯೋನಿಯಲಿ ಶೂದ್ರಿತಿಗೆ ಜನಿಸೆನ
ಲೇನದೆನ್ನದೆ ಕೊಂಡ ಶಾಪವ ಯಮನು ದುಗುಡದಲಿ ‖ ೧೮

ಬಳಿಕ ಯಮನಾವಿದುರನಾಗಿಯೆ
ಯಿಳೆಗೆ ಜನಿಸಿದ ಪರಮವೈಷ್ಣವ
ತಿಲಕನಾಗಿಯೆ ಶೂದ್ರತನುಜೆಗೆ ವ್ಯಾಸಸುತನೆನಿಸಿ |
ಬಳೆವುತಿದ್ದರು ಹಸ್ತಿನಾಪುರ
ದೊಳಗೆ ಮೂವರು ಚಿತ್ರವೀರ್ಯನ
ಲಲನೆಯರ ಸುತರಾಗಿ ಪಾಂಡುಸವಿದುರ ಧೃತರಾಷ್ಟ್ರ ‖ ೧೯

ಬಳೆವುತಿರ್ದರು ಶುಕ್ಲ[1] ಪಕ್ಷದ
ನಳನರಿಪುವಿನವೋಲ್ಕುಮಾರರು
ಕುಲವಿಹಿತಚೌಲೋಪನಯನವ ನವರಿಗಳವಡಿಸಿ[2] |
ಬಳಿಕ ವೇದವನಱುಹಿ ತಾಯು[3]
ಮ್ಮಳಿಸದಂತಿರೆ ಸೋಮವಂಶದ
ಬಳವಿಗೆಯನೇ ಮಾಡಿ ಕೊಂಡಾಡಿದನು ಕಲಿಭೀಷ್ಮ ‖ ೨೦

ಧಾರುಣೀಪತಿ ಚಿತ್ತವಿಸು ಗಾಂ
ಧಾರದೇಶದ ಸುಬಲರಾಜಗೆ ವರಕು
ಮಾರಿಯು ಜನಿಯಿಸಿದಳು ಸಲೆ ಗಾಂಧಾರಿನಾಮದಲಿ |
ಧಾರುಣೀಪತಿ ಕೇಳ್ದನಾಕೆಯು
ದಾರದುಷ್ಟಮುಹೂರ್ತಜನಿವಿ
ಸ್ತಾರವನು ಬಳಿಕಾಕೆಗಹುದಾರಂಡೆತನವೆಂದು ‖ ೨೧

ಎನಲು ವಿಬುಧರು ಕೆಲವು ದಿವಸಕೆ
ತನುಜೆಯನು ಮೃಗಪತಿತಗೀಯಲು

1 ಹರಿಣ, ಜ. 2 ಕಾಲಕಾಲದಲಿ, ಕ. 3 ಬಳಿಕವೇದವನೋದಿತಾವು, ಕ.

ಜನಪ ಕೇಳ್ಳೈ ಗರ್ದಭನು ತಾ ಸತ್ತನಾಕ್ಷಣಕೆ ।
ವನಿತೆಯುನು ಬಟಿಕರಸ ಬೆಳಸಲು
ವಿನುತದೇವವ್ರತನು ಕೇಳಿಯೆ
ಜನಪತಿಯು ಕರೆತರಿಸಿ ಬೇಡಿದ ಸುಬಲನಂದನೆಯು ॥ ೨೦

ಧೃತರಾಷ್ಟ್ರವಿವಾಹ.

ಧಾರುಣೀಪತಿ ಚಿತ್ತವಿಸು ಗಾಂ
ಧಾರದೇಶದ ಸುಬಲರಾಜಕು
ಮಾರಿ ಕುಲವಧುವಾದಳಾಧೃತರಾಷ್ಟ್ರಭೂಪತಿಗೆ ।
ನಾರಿಯರೊಳುತ್ತಮೆಯೆಲಾಗಾಂ
ಧಾರಿಯೆನಿಸಿ ಪತಿವ್ರತಾವಿ
ಸ್ತಾರಗುಣದಲಿ ಮೆಱೆದಳಬಲೆ ಸಮಸ್ತಜನ ಹೊಗಳೆ ॥ ೨೧

ಬಟಿಕ ತಾ ಗಾಂಧಾರಿವಲ್ಲಭ
ನಿಳೆಯೊಳಾರುವ ಕಾಣನೆಂಬುದ
ನಳುಕಿ ಕಂಡಳು ತನ್ನ ಕಣ್ಣಿಗೆ ಪಾವುಡವ ಕಟ್ಟಿ ।
ನಳಿನಮುಖಿ ತನ್ನಾತ್ಮಧರ್ಮದ
ಕಳೆಯು ಕೆಡಿಸದೆ ನಡೆವುತಿಪ್ಪಳ
ದಿಳೆಯು ಯುವತೀಜನದ ಮಾತೆಯು ರೂಪು ಗಾಂಧಾರಿ ॥ ೨೨

ಕುಂತಿಯಪೂರ್ವವೃತ್ತಾಂತ.

ಇತ್ತ ಕುಂತೀಭೋಜನೆಂಬನ್ರ
ಪೋತ್ತಮನ ಭವನದಲಿ ಮುರಹರ
ನತ್ತೆ ಬಳೆವುತಿರ್ದಳಾವಸುದೇವನೃಪನನುಜೆ ।
ಹೆತ್ತವರಿಗೋಲೈಸುವವಗೆ ಮ
ಹೋತ್ತಮರಿಗುಳಿದಾದ ಲೋಕದ
ಚಿತ್ತಕಹುದೆನೆ ನಡೆವಗುಣದಲಿ ಮೆಱೆದಳಾಕುಂತಿ ॥ ೨೩

ದೂರ್ವಾಸರ ಆಗಮನ.

ಒಂದುದಿನ ದೂರ್ವಾಸಮುನಿ ನೃಪ
ಮಂದಿರಕೆ ಬರಲಾಮಹೀಪತಿ
ಬಂದ ಬರವಿನಂವರ ಮಱೆದನು ರಾಜಕಾರ್ಯದಲಿ |
ಇಂದು ಕುಂತೀಭೋಜನೊಡೆತನ
ಬೆಂದು ಹೋಗಲಿ ಯೆಂಬಶಾಪವ
ನಿಂದುಮುಖಿ ನಿಲಿಸಿದಳು ಹೊಱಳಿದಳವರ ಚರಣದಲಿ || ೧೦೬

ಕುಂತಿಯ ಉಪಚಾರ.

ತರುಣಿಯೊಡಗೊಂಡಯ್ದು ಮುನಿಯನು
ಪರಮವಚನದೊಳರಿಸಿ ತಾನುಪ
ಚರಿಸಿದಳು ವಿವಿಧಾನ್ನಪಾನರಸಾಯನಂಗಳಲಿ |
ಹರಹರಾ ನೋಡೀಮಗುವಿನಾ
ಚರಣೆಗೀವಿನಯೋಪಚಾರಕೆ
ಹಿರಿದು ಮೆಚ್ಚಿದೆನೆಂದು ತಲೆದೂಗಿದನು ದೂರ್ವಾಸ || ೧೦೭

ಕುಂತಿಗೆ ದೂರ್ವಾಸರ ಮಂತ್ರೋಪದೇಶ.

ಮಗಳೆ ಬಾ ಕೊಳ್ಳಿದುಮಂತ್ರ
ಳಗಳು ಸಿದ್ಧಿಸಲಿಕದಮೋಘವು [1]
ಸೊಗಸು ದಿವಿಜರೊಳಾರ ನೆನಪುಂ [2] ಟವರ ನೆನೆ ಸಾಕು |
ಮಗನು ಜನಿಸುವನೆಂದು ಮುನಿ ಕುಂ
ತಿಗೆ ರಹಸ್ಯದೊಳಱುಹಿ ಮುನಿನಾ
ಳಗಳ ಮಣಿ ಪರಿತೋಷದಲಿ ತಿರುಗಿದ ತಪೋವನಕೆ || ೧೦೮

ಕುಂತಿಯು ಮಂತ್ರವನ್ನು ಜಪಿಸಲು ಸೂರ್ಯಾಗಮನ

ಮಗುವುತನದಲಿ ಬೊಂಬೆಯಾಟಕೆ
ಮಗನನೀ ತಹೆನೆಂದು ಬಂದಳು
ಗಗನನದಿಯಲಿ ಮಿಂದಳುಟ್ಟಳು ಲೋಹಿತಾಂಬರವ |

---

1 ಳಗಳನಿವುಸಿದ್ಧಪ್ರಯೋಗವು, ಚ 2 ಮೇಲುಂ ಕ, ಚ.

ವಿಗಡಮುನಿಪನ ಮಂತ್ರವನು ನಾ
ಲಿಗೆಗೆ ತಂದಳು ರಾಗರಸದಲಿ
ಗಗನಮಣಿಯನು ನೋಡಿ ಕಣ್ಗಳ ಮುಚ್ಚಿ ನಿಮಿಷದಲಿ [1] ॥ ೨೯

ಅರಸ ಕೇಳೈ ಮುನಿಯ ಮಂತ್ರಾ
ಕ್ಷರದ ಕರ್ಷಣಕೆ ತಳುವಿದರೆ ದಿನ
ಕರನ ತೇಜವ ಕೊಂಬನೇ ದೂರ್ವಾಸ ವಿಗಡನಲ ।
ಸರಸಿಜದ ಸಖ ಬಂದನಲ್ಲಿಗೆ
ಕಿರಣಲಹರಿಯ ರಾಶಿಯಲಿ ತಾ
ಸರಸಿರುಹಮುಖಿ ಕಂಡು ಬೆದರಿಯೆ ಬಾರದಿರಿ ಯೆನಲು ॥ ೩೦

ಇನ್ನು ಹಿಂದಕೆ ಹೋಗಬಾರದು
ಕನ್ನೆ ಋಷಿಪನ ಮಂತ್ರ ಕಳುಹದ
ದಿನ್ನು ನೀನಂಜದಿರು ಸುತ ನಿನಗೊಬ್ಬ ಜನಿಸುವನು ।
ಕನ್ನಿಕೆಯ ಪ್ರೌಢಿಯಲಿ ನೋಡಿಯೆ
ಮನ್ನಿಸಿಯೆ ಮತ್ತಾಗಳಾಕೆಯ
ಕನ್ನೆತನದಲಿ ನಿಲಿಸಿ ತಿರುಗಿದ ದಿನಪನಾಕ್ಷಣಕೆ ॥ ೩೧

ಇನ್ನು ನಿಲ್ಲದು ಋಷಿಪತಿಯ ಸಂ
ಪನ್ನಮಂತ್ರವಮೋಘವಿದು ನಿನ
ಗೆನ್ನ ತೂಕದ ಮಗನಹನು ನೀನಂಜಬೇಡೆಂದ ।
ಕನ್ನೆಯನು ಕೂಡಿದನು ಮುನ್ನಿನ
ಕನ್ನೆತನ ಕೆಡದಿರಲಿ ಯೆನುತಲಿ
ತನ್ನ ರಥವಿದ್ದೆಡೆಗೆ ರವಿ ತಿರುಗಿದನು ವಹಿಲದಲಿ ॥ ೩೨

ಕುಂತಿಗೆ ಪುತ್ರಜನನ

ಅರಸ ಕೇಳಾಶ್ಚರ್ಯವನು ತಾ
ವರೆಯ ಮಿತ್ರನ ಕರುಪಿನೆರಕದ

---

1 ಯೋಗದಲಿ, ಚ.

ಲೇಸಿವಂತಿರೆ ತೊಳತೊಳಗಿ ಬೆಳಗುವ ತನುಚ್ಛವಿಯ |
ಕುರುಳದಲೆ ನಿಟ್ಟೆಸಳುಗಂಗಳ
ಚರಣಕರಪಲ್ಲವದ ಕೆಂಪಿನ
ವರಕುಮಾರನ ಕಂಡು ಬೆರಗಿನೊಳಿರ್ದಳಾ ಕುಂತಿ || ೩೩

ಅಳುವ ಶಿಶುವನು ತೆಗೆದು ತಳ್ಕೈಸಿ
ಪುಳಕಜಲದಲಿ ನಾದಿ ಹರುಷದ
ಬಳಿಯ ಲಜ್ಜೆಯ ಭರದ ಹೋರಟೆಗಳಲಿ ಬೆಂಡಾಗಿ |

ಹುಟ್ಟಿದ ಮಗುವನ್ನು ಗಂಗೆಯಲ್ಲಿ ಬಿಡುವಿಕೆ

ಕುಲದ ಸಿರಿ ತಪ್ಪುವುದಲಾ ಸಾ
ಕಿಲುಹಬೇಕೆಂದೆನುತ ಗಂಗಾ [1]
ಜಲದೊಳಗೆ ಹಾಯ್ಕಿದಳು ಜನದಪವಾದಭೀತಿಯಲಿ || ೩೪

ತಾಯೆ ಬಲ್ಲಂದದಲಿ ಕಂದನ
ಕಾಯಿ ಮೋಹೊಕ್ಕಲ್ಲೆ [2] ನುತ ಕಮಲದ
ಳಾಯತಾಕ್ಷಿ ಕುಮಾರನನು ಹಾಯ್ಕಿದಳು ಮಡುವಿನಲಿ |
ರಾಯ ಕೇಳ್ಕೈ ಸಕಲಲೋಕದ
ತಾಯಲಾ ಜಾಹ್ನವಿ ತರಂಗದಿ
ನೋಯಲೀಯದೆ ಮುಳುಗಲೀಯದೆ ಚಾಚಿದಳು ತಡಿಗೆ || ೩೫

ಕೆದರಿ ಕಾಲಲಿ ಮಳಲರಾಶಿಯ
ನೊದೆದು ಕೈಗಳ ಕೊಡಹಿ ಘೋಷಿಂ
ದೊದರುತಿರ್ದನು ಶಿಶುಗಳರಸನು ರವಿಯುಸೀಕ್ಷಿಸುತ |

ಆ ಮಗುವನ್ನು ಸೂತನು ಮನೆಗೊಯ್ದು ಹೆಂಡತಿಗೆ ಕೊಡುವಿಕೆ.

ಇದನು ಕಂಡನು ಸೂತನೊಬ್ಬನು

---

[1] ಮಡುವನೆಯ, ಕ ಖ   [2] ಕೊಳ್ಳಂದೆ, ಖ.

ಮದವ ಮುಖದಲಿ ತನ್ನ ಮನದಮು
ದವಳಿದೆತ್ತಣದೊ ದನಿಯೆನುತಡಿಗಡಿಗೆ ಹರುಷಿಸಿದ [1] ॥ ೩೬

ತರಣಿಬಿಂಬದ ಮರಿಯೊ ಕೌಸ್ತುಭ
ವರಮಣಿಯು ಖಂಡದ ಕಣಿಯೊ ಮ
ರ್ತ್ಯರಿಗೆ ಸುತನಿವನಲ್ಲ ಮಾಯಾಬಾಲಕನೊ ಮೇಣು ।
ಇರಿಸಿ ಹೋದವಳಾವಳೋ ಶಿಶು
ವರನ ತಾಯ್ನಿರ್ಮೋಹಿಯ್ಕೆ ಹರ
ಹರ ಮಹಾದೇವೆನುತ ತೆಗೆದಪ್ಪಿದನು ಹರುಷವಲಿ [2] ॥ ೩೭

ತೃಣವಲಾ ತ್ರೈಲೋಕ್ಯರಾಜ್ಯವ
ಗಣಿಸುವೆನೆ ತಾನಿನ್ನು ತನ್ನಲಿ
ಖುಣವಿಶೇಷವಿದೇನೊ ಮೇಣೀಬಾಲಕಂಗೆನುತ ।
ಕ್ಷಣದೊಳೊದಗುವ ಬಾಷ್ಪಲುಳಿತೇ
ಕ್ಷಣನು ಬಂದನು ಮನೆಗೆ ಹರುಷದ
ಕಣಿಯು ತಂದನು ರಮಣಿ ನೋಡೆಂದಿತ್ತನರ್ಭಕನ ॥ ೩೮

ತನಗೆ ಪುತ್ರಲಾಭವಾಯಿತೆಂದು ನಾನಾದಾನ.

ಆದರಿಸಿದನು ರಾಧೆಯಲಿ ಮಗ
ನಾದನೆಂದುತ್ಸವವ ಮಾಡಿ ಮ
ಹೀದಿವಿಜರನು ದಾನಮಾನಂಗಳಲಿ ಸತ್ಕರಿಸಿ ।
ಆದಿನಂಮೊದಲಾಗಿಯುದ್ಭವ
ವಾದುದವನೈಶ್ವರ್ಯವುನ್ನತ
ವಾದನೀರವಿನಂದನನು ರಾಧೇಯನಾಮದಲಿ ॥ ೩೯

ಹೊಳಹೊಳದು ಹೊಡೆಮರಳಿ ನಡುಹೊ
ಸ್ತಿಲನು ಮೆಲ್ಲನೆ ದಾಂಟಿ ಬೀದಿಗ

---

1 ಮದದ ಮುದದಲಿ ತನ್ನ ಮಜಿದುಬ್ಬಿದನಿದೆತ್ತಣನಿಧಿಯೊಶಿವ ಶಿವ ಯೆನುತ ನಡೆತಂದ, ಜ. 2 ಬಾಲಕನ, ಚ.

ಳೊಳಗೆ ಸುಜನವರ ಸನ್ನೆಯಲಿ ಕರೆಕರೆದು ನಸುನಗುತ ।
ಲಲಿತರತ್ನದ ಬಾಲದೊಡಿಗೆಯು
ಕಳಚಿ ಕೊಡುವನು ಹೆಸರು ಮಿಗೆ ತಾ
ಬಳೆವ್ರತಿರ್ದಾಪನವನ ಕೌತುಕಜನನ ಕರ್ಣದಲಿ ॥ ೪೦

ಅರಸ ಕೇಳ್ಳ ಕರ್ಣಪಾರಂ
ಕರೆಯೊಳೀತನ ಹೆಸರು ಜಗದಲಿ
ಹರಿದುದಲ್ಲಿಂ ಬೃಹತ್ಕಲೀತನ ನಾಮಕರಣವಲಿ ।
ಸುರನರೋರಗನಿಕರವೇ ವಿ
ಸ್ತರಿಸಿದುದು ಕರ್ಣಾಭಿಧಾನವ
ಗುರುಪರಾಕ್ರಮ ಬಳೆವ್ರತಿರ್ದನು ಸೂತಭವನದಲಿ ॥ ೪೧

ಆತ ತಾ ಮುನ್ನಾದಿಯಲಿ ಶ್ರೀ
ಗೌತಮಾಖ್ಯನ ಶಾಪದಿಂದವೆ
ಸೂತಭವನದಿ ಬಳೆಯಬೇಕೆಂದೆಂದು ಕಲ್ಪಿತವು ।
ಆತನಾಗಿರೆ ಮೊದಲು ಜನಿಸಿದ
ಭೂತಳಕೆ ಸುಗ್ರೀವನಾಗಿಯೆ
ಸೂತಸುತನೆಂದೆನಿಸಿ ಕೊಂಡನು ದ್ವಾಪರಾಂತ್ಯದಲಿ ॥ ೪೨

ಹದಿನಾಲ್ಕನೆಯ ಸಂಧಿ ಮುಗಿದುದು.

ಹದಿನೈದನೆಯ ಸಂಧಿ.

ಸೂಚನೆ

ಭರತವಂಶದೊಳ್ಗದು ಮಿಗೆ ನೂ
ರ್ವರು ಕುಮಾರರು ಪಾಂಡುಧೃತರಾ
ಷ್ಟ್ರರಿಗೆ ಜನಿಸಿದರಮಳಮುನಿಮಂತ್ರೋಪದೇಶವಲಿ ॥

ಪಾಂಡುವಿಗೆ ಕುಂತೀಮಾದ್ರಿಯರ ವಿವಾಹ.

ಕೇಳು ಜನಮೇಜಯ ಧರಿತ್ರೀ
ಪಾಲ ಕುಂತೀಭೋಜಭೂಪತಿ
ಯಾಲಯದೊಳಗೆ ಬಳೆವುತಿರ್ದಳು ಕುಂತಿ ವಿಭವದಲಿ ।
ಕೇಳಿದನು ಗಾಂಗೇಯನಾದರ [1]
ಬಾಲಿಕೆಯ [2] ಕುಲರೂಪಲಕ್ಷಣ
ಶೀಲವನು ಪಾಂಡುವಿಗೆ ಸತಿಯೆಂದು ರಾಗದಲಿ ॥ ೧

ಕರೆಸಿ ಕುಂತೀಭೋಜನನು ಸ
ತ್ಕರಿಸಿ ಕುಂತಿಯ ಪಾಂಡುವಿಗೆ ಭೂ
ಸುರರ ಮತದಿಂದಗ್ನಿಸಾಕ್ಷಿ ವಿವಾಹವಿಧಾನದಲಿ ।
ಹರುಷದಲಿ ತಾನೆಸಗಿ ಮದ್ರೇ
ಶ್ವರನ ತಂಗಿಯ ಕರೆಸಿ ಪಾಂಡುವಿ
ಗರಸಿಯನು ಮಾಡಿದನು ಪ್ರಸರಿಪ ವೈದಿಕೋಕ್ತಿಯಲಿ ॥ ೨

ವರವಿವಾಹಮುಹೂರ್ತಸಮನಂ
ತರದ ಲಗ್ನದಲಖಿಳರಾಜ್ಯದ
ಭರದ ನಿರ್ವಾಹಕಮಹಾಪಟ್ಟಾಭಿಷೇಚನವ ।
ಸುರನದೀಸುತ ಪಾಂಡುವಿಗೆ ವಿ
ಸ್ತರಿಸಿದನು ಧೃತರಾಷ್ಟ್ರವಿದುರರ
ಪರಮಪರಿತೋಷಾನುಮತದಲಿ ಮೆರೆದುದಾವಿಭವ ॥ ೩

ಪಾಂಡುವಿನ ರಾಜ್ಯಪರಿಪಾಲನ.

ಸೋಮಕುಲದಲಿ ಜನಿಸಿದವದಿರ
ಗೀಮಹೀಪಾಲಕನು ರತಿಸಂ
ಗ್ರಾಮದಲಿ ಸಾಹಿತ್ಯದಲಿ ಸತ್ಯದಲಿ ವಿನಯದಲಿ ।

---

1 ನಾನೀ, ಖ 2 ಬಾಳಿಕೆ, ಖ. 3 ನನುಜೆಮಾದ್ರಿಯನು, ಖ.

ಸಾಮದಲಿ ಶೌರ್ಯದಲಿ ಸುಜನ
ಪ್ರೇಮದಲಿ ನೀತಿಯಲಿ ವೃಷವನು
ಭೂಮಿಯೊಳು ಸಾನಱಿಯೆ ನರರೊಳು ಸತ್ಯಕೇಳಿಂದ ॥ ೪

ಪಸರಿಸಿದ ಪರಿಕೀರ್ತಿ ತಾಸಿ
ಪ್ರಸರದಲಿ ಬಿಳುಪಾಯ್ತು ದೀಜಗ
ವಿಸರದಲಿ ಝಳಪಿಸುವಖಂಡೆಯಸಿರಿಯ ಸೊಂಪಿನಲಿ ।
ಮಸಗಿತಗ್ಗದ ಕೆಂಪು ಪರಬಲ
ವಿಸರವಳಸಕ್ರೋಧಮಯತಾ
ಮಸದಿನಸಿತಾಭಾಸವಾದುದು ಭುವನವಿಸ್ತಾರ ॥ ೫

ಓಲಗಿಸುವುದು ಮಿತ್ರರಾಯರ
ಮೌಳಿಮಣಿ ಪಾಂಡುವಿನ ಚರಣನ
ಖಾಳಿಯನು ಸೆಣಸುಮಹೀಶರ ಮೌಳಿಮಣಿಕಿರಣ ।
ಓಲಗಿಸಿದುದು ಪ್ರಣಯದಮರೀ
ಬಾಲೆಯರ ಪದನಖವನೀನೆಲೆ
ಹೇಳುವೆನು ಪಾಂಡುವಿನಖಂಡೆಯಸಿರಿಯ ಸಗಡರವ ॥ ೬

ಓಲಗಿಸಿಕೊಂಬಾತನಂಧನೃ
ಪಾಲನುಳಿದಂತಖಿಳ ಧರಣೀ
ಪಾಲಕತ್ವವು ಪಾಂಡುಭೂಪತಿವರಕುಮಾರಂಗೆ ।
ಲಾಲಿಸುವ ಕುಲವಿಹಿತಧರ್ಮವ
ಪಾಲಿಸುವ ಕಲಿಭೀಷ್ಮನದು ಸಂ
ಭಾಳಿಸಿತು ನಳನಹುಷಚರಿತವನವರ ಪರಿಪಾಟಿ[1] ॥ ೭

ಧೃತರಾಷ್ಟ್ರನಿಗೆ ಮಕ್ಕಳಿಲ್ಲದ ಚಿಂತೆ.

ನೃಪಪರಂಪರೆಯಿಂದ ಬಂದೀ
ವಿಪುಳವಂಶಸ್ಥಿತಿನಿಸರ್ಗವ

---

1 ವವರಪರಂಪರೆಯು, ಜ.

ನಸಹರಿಸಿದನು ಹಿಂದೆ ವೇದವ್ಯಾಸಮುನಿ ಬಂದು ।
ಕೃಪೆಯು ಮೂಡನೆ ತನ್ನ ಸಂತತಿ
ಕೃಪಣವಾಯ್ತೆಂದನವರತ ಕುರು
ನೃಪತಿ ಚಿಂತಾಭರದಿ ಬಳಲುವನಂದು ಧೃತರಾಷ್ಟ್ರ ॥ ೮

ವೇದವ್ಯಾಸರ ಆಗಮನ.

ಅರಸ ಚಿತ್ತೈಸೊಂದುದಿನ ಮುನಿ
ವರನು ಬಿಜಯಂಗೈದು ಹಸ್ತಿನ
ಪುರವ ಹೊಕ್ಕನು ರಾಜಭವನಕೆ ಬಂದು ಹರುಷದಲಿ ।
ಸುರನದೀತನುಜಾದಿಗಳ ಸ
ತ್ಕರಣವನು ಕೈಕೊಂಡು ಮಕ್ಕಳ
ಪರಮವಿಭವಕೆ ಮುಯ್ಯನಾಂತು ಮುನೀಂದ್ರನಿಂತೆಂದ ॥ ೯

ಭರತಕುಲದಲಿ ಮಕ್ಕಳಿಲ್ಲದ
ಕೊರತೆ ಕೋಮಲಸೌಖ್ಯಲತೆಗಿದು
ಗರಗಸವಲಾ ತಂದೆ ಬಾ ಧೃತರಾಷ್ಟ್ರ ಬಾ ಯೆನುತ ।

ಗಾಂಧಾರಿಗೆ ವ್ಯಾಸರ ಮಂತ್ರೋಪದೇಶ.

ಕರೆದು ಕಟ್ಟೇಕಾಂತದಲಿ ನೃಪ
ಗರಸಿಗನುಪಮ ಪುತ್ರಶತವವ
ತರಿಸುವುದು ನಿನಗೆಂದು ಕೊಟ್ಟನು ಮಂತ್ರಪಿಂಡವನು ॥ ೧೦

ಧರಿಸಿದಳು ಗಾಂಧಾರಿ ಗರ್ಭೋ
ತ್ಕರವನಿತ್ತು ನಿಜಾಶ್ರಮಕೆ ಮುನಿ
ತಿರುಗಿದನು ದಿನದಿನದೊಳುಬ್ಬಿತು ರಾಯನಭ್ಯುದಯ ।
ಅರಸ ಕೇಳ್ಬೇಂಟೆಕಾರರು
ನೆರೆದು ಬಂದರು ಮೃಗನಿಕಾಯದ
ನೆರಹಿಗಳ ನೆಲೆಗೊಳಿಸಿ ಪಾಂಡುನೃಪಾಲನೋಲಗಕೆ ॥ ೧೧

ಕೇಳಿದನು ಮೃಗದಿಕ್ಕೆ ಹಕ್ಕಿಯು
ಗಾಳಿಯನು ಬಳಿಸಿಗದೆಲ್ಲರ
ಬೀಳುಕೊಟ್ಟನು ರಾಜಸಭೆಯನು ರಾಯನುಚಿತದಲಿ |
ಬೋಳ್ ಗವಲಂಬುಗಳ ಕೆದರಿಸಲು
ಕಾಳಿಕೆಯು ಕುಪ್ಪಸದ ಜೋಂಟಿಯು
ಮೇಳದಲಿ ಭೂಪಾಲ ಹೊರವಂಟನು ಶಿಕಾರಿಯವ || ೧೨

ಪಾಂಡುವು ಮೃಗರೂಪರಾದ ಋಷಿದಂಪತಿಯನ್ನು ಹೊಡೆಯುವಿಕೆ.

ಏನಸಂಜನು ನಿಮ್ಮ ಪೂರ್ವಜ
ಹಾನಿ ಬಂದೀತೆಂದು ನೋಡದೆ
ಮಾನಸಿಧಿ ವ್ಯಸನಾನುಬಂಧದ ಹೊಲಬಿಟು ನಡೆತಂದ |
ಕಾನನದೊಳಾಯತದ ಶರಸಂ
ಧಾನಕಳಿತಶರಾಸನನು ಮೃಗ
ಹಾನಿಗಳ ಹೆಕ್ಕಳದಲೋಲಾಡಿದನು ಬೇಂಟೆಯಲಿ || ೧೩

ಬಂದುದಾಪಾಂಡುವಿಗೆ ನಿಮ್ಮಯ
ತಂದೆಗಾದ ವಿಪತ್ತಿನಂದದ
ಲೊಂದು ತಾವಿನಲೊಬ್ಬ ಮಿಥುನಮುನಿ ಮೃಗರೂಪಾಗಿ |
ನಿಂದು ರಮಿಸುತ್ತಿರೆ ಮೃಗವ್ಯಾಧ
ನೆಂದು ಹೊಡೆದನಂಬಿನಿಬ್ಬರ
ಗೊಂದು ಸರಳಲಿ ಕೀಲಿಸಿದ ಮುನಿ ಕುಸಿದನು ನರರಾಗಿ || ೧೪

ಆಮುನಿದಂಪತಿಗಳ ಸಾವು, ಪಾಂಡುವಿನ ಪಶ್ಚಾತ್ತಾಪ

ಹಾ ಮಹಾದೇವ ಯನುತಲಿ ಮುನಿ
ಕಾಮಿನೀಸಹಿತೊಡಲನುಟ್ಟ್ಯತ
ತೋಮರದ ಮೊನೆಯುರವನೊಂದು ಕಿಬ್ಬಸುರಿನ ನಿಜಾಂಗನೆಯು |
ಕಾಮಿನಿಯೆ ಕಡುನೊಂದ ನಿರಿನೆಲು
ತಾಮರಸವನು ತೂಗ್ಗಿ ತೋಱಿಚಿನ
ತಾ ಮುನೀಶ್ವರ ಮೊಳಗಿದು ಮುಂಡಾಡಿಗನು ನಿಜಸುತಿಯು || ೧೫

ಪಾಂಡುವಿಗೆ ಮುನಿಶಾಪ

ಕಾತರಿಪ ಮುನಿಮಿಥುನವನು ನಿ
ಮ್ರಾತ ಕಂಡನು ಬಿಲ್ಲಕೊಪ್ಪಿನ
ಲಾತಕದಪಿನ ಮಕುಟದೊಲಹಿನ ಬೆರಳ ಮೂಗಿನಲಿ ।
ಭೀತಿಗಂಪಿನ ತಳಿತಬೆಱಗಿನ
ಪಾತಕದ ಪರಿಭವದ [1] ಮುಖದ ಮ
ಹೀತಳಾಧಿಪ ಸುಯ್ದು ನೊಂದನು ಶಿವ ಶಿವಾ ಯೆನುತ ॥ ೧೬

ಅಱಿಯೆ ನಾನಿವರೆಂದು ಮೃಗವೆಂ
ದಱಿದೊಡಿದು ಮತ್ತೊಂದು ಪರಿಯಾ
ಯ್ತುಱುವ ಮಾಣಿಕವೆಂದು ಕೊಂಡೊಡೆ ಕೆಂಡವಾದುದಲ ।
ಸರವಿ ತಾ ಹಾವಾದುದಿದ ಕಂ
ಡಱಿಯೆನೀಕೌತುಕವನುಱೆ ಮೈ
ಮಱೆದು ಕೊಂದೆನೆ ಯೆನುತ ಹರಿದೈತಂದನಾಕ್ಷಣಕೆ ॥ ೧೭

ಉಗಿದು ಬಿಸುಟನು ಸರಳ ಮಗ್ಗುಲ
ಮಗುಚಿ ನೆತ್ತರ ಹೊನಲಿನಿಂದವೆ
ತೆಗೆದು ತೊಳದೊಱಸಿದನು ಸಗ್ಗಳೆಯ ನೀರಿನಲಿ ।
ಮೃಗವಹರೆ ಮಾನುಷರಕಟ ಪಾ
ಪಿಗಳಿದೆತ್ತಣ ತಪವಿದೆತ್ತಣ
ಮೃಗವಿನೋದಕ್ರೀಡೆ ಕೊಂದುದೆನುತ್ತ ಬಿಸುಸುಯ್ದ ॥ ೧೮

ಮತ್ತೆ ನಾವೇ ಪಾಪಿಗಳು ಸೀ
ವೃತ್ತಮರಲಾ ಸಾಕಿದೇತಕೆ
ನುತ್ತ ಮರಳುವ ಕಂಗಳಡಿಗಡಿಗೊಗುವ ಮೇಲುಸುರ ।
ಎತ್ತಿ ಹಾಯ್ಕುವ ಕೊರಳ ಬಿಕ್ಕಳ

[1] ಪರಿತವದ, ಖ. ಜ.

ಕಿತ್ತುವೆಧರದ ರೋಷದಲಿ ಹೊಗೆ
ಸುತ್ತಿದುರಿವಾತುಗಳ ಸೂಸಿದರವನಿಪನ ಮೇಲೆ ॥ ೧೯

ಎಲವೊ ರಾಜಬ್ರುವನೆ ತನ್ನಯ
ಲಲನೆಯೊಡನಿರೆ ಕೊಂದೆ ನಿನ್ನಯ
ಲಲನೆಯಲಿ ನೀ ಕೂಡಿವಾಗಳೆ ಮರಣ ನಿನಗೆನಲು ।
ಹಲವು ಮಾತೇಕೆನುತ ಹರಣವ
ಕಳೆದುದಾ ಮುನಿಮಿಥುನವವನಿಪ
ತಿಲಕ ದುರ್ಮಾನವಲಿ ಹೊಕ್ಕನು ಹಸ್ತಿನಾಪುರವ ॥ ೨೦

ಆದ ಹದನನು ಭೀಷ್ಮಧೃತರಾ
ಷ್ಟ್ರಾದಿಗಳಿಗಱುಹಿದನು ಹಯಮೇ
ಧಾದಿಯಲಿ ಮುನಿವಧೆಯ ಪಾತಕದಾ ವಿಘಾತಿಗಳ ।
ವೈದಿಕೋಕ್ತಿಯ ತಂತ್ರದಲಿ ಸಂ
ಪಾದಿಸುವೆನೆ ಶಿರವ ಬಿದುರಿ ಮ
ಹಾದುರಾಗ್ರಹಬುದ್ಧಿಯಲಿ ಬಂದನು ಸಿಜಾಲಯಕೆ[1] ॥ ೨೧

ಪಾಪಪರಿಹಾರಕ್ಕಾಗಿ ಸ್ನಾನಾದಾನ ತಪೋವನಗಮನ

ಸಕಲಭಂಡಾರವನು ಭೂಸುರ
ನಿಕರದಲಿ ಚೆಲ್ಲಿದನು ಸುಜನ
ಪ್ರಕರವನು ಗಾಂಗೇಯಧೃತರಾಷ್ಟ್ರರಿಗೆ ಕೈಗೊಳಿಸಿ ।
ಚಕಿತಚಿತ್ತನು ಮುನಿಪತಿಯ ಪಾ
ತಕವನೊತ್ತುವ ಶೈಲ[2] ವಾವು ದೊ
ಸಕಲದೋಷವಿನಾಶಕೆನುತಲಿ ಹೊಕ್ಕನೈ ವನವ ॥ ೨೨

ಅರಸ ಕೇಳ್ ಶತಶೃಂಗಶೈಲದ
ವರತಪೋಧನರಾಶ್ರಮಕೆ ನಿ

---

1 ಹೊಱವಂಟನರಮನೆಗೆ, ಜ. 2 ನೆತ್ತಿಯುಸಬುಳ, ಖ.

ಮ್ಮರಸ ಬಂದನು ವಂದಿಸಿದನಾಪರಮಮುನಿಜನಕೆ ।
ಹರುಷದಲಿ ಜಾಬಾಲಿಗಾರ್ಗ್ಯಾಂ
ಗಿರಸಶೌನಕಗೌತಮಾದ್ಯರು
ಧರಣಿಪನ ಸಂಭಾವಿಸಿದರರ್ಘ್ಯಾಸನಂಗಳಲಿ ॥ ೨೩

ಈತನಮಳಾಷ್ಟಾಂಗಯೋಗವಿ
ಧೂತಕಿಲ್ಬಿಷನಾಗದಱ ಬಳಿ
ಕಾತಪಸ್ವಿಗಳೊಳಗೆ ಸಂದನು ದಿನಪತೇಜದಲಿ ।
ಆತಪೋನಿಷ್ಠಂಗೆ ತಾವತಿ
ಭೀತಿಭಕ್ತಿಯಲಧಿಕಶಿಶ್ರೂ
ಷಾತಿಶಯದಲಿ ಮನವ ಹಿಡಿದರು ಕುಂತಿಮಾದ್ರಿಯರು ॥ ೨೪

ಪರಮವೈರಾಗ್ಯದವರಂತಃ
ಕರಣನಿರುಪಮಭಾವಶುದ್ಧಿಯ
ಮುರಹರಧ್ಯಾನೈಕಪೀಯೂಷಾಭಿಷೇಕದಲಿ ।
ಹಿರಿದು ಹೊಂಗಿದ ನಿಷ್ಪ್ರಪಂಚೋ
ತ್ಕರದ ಸುಖದುನ್ನತಿಯೊಳಸೆದನು
ಧರಣಿಪತಿ ತಾನಾಮಹಾಪಾತಕವ ಕೆಡೆಯೊದೆದು ॥ ೨೫

ಆ ವನದಲ್ಲಿ ಪಾಂಡುರಾಯನನ್ನು ಕುರಿತು ಕುಂತಿಯ ವಚನ

ನಾರಿಯರು ಮಱುಗಿದರಕಟ ಮುದಿ
ಹಾರುವನ ತನು ಬೇಟವೆಮ್ಮಯ
ಬೇಱುಗೊಲೆ ಯಾಗಿದ್ದುದೇ ಹಾಯೆನುತ ಬಿಸುಸುಯ್ದು ।
ವಾರಿಜಾನನೆ ಕುಂತಿ ಮೆಲ್ಲನೆ
ಸಾಱಿದಳು ನಯದಲಿ ರಹಸ್ಯದ
ಲಾರುವಱಿಯದವೋಲು ಬಿನ್ನಹ ಮಾಡಿದಳು ಪತಿಗೆ ॥ ೨೬

ಭರತವಂಶಕೆ ಪುತ್ರಶತವವ
ತರಿಸುವುದು ಗಾಂಧಾರಿದೇವಿಗೆ
ವರಮುನೀಶ್ವರನಿತ್ತ ಹದನಿದು ನಿಮ್ಮಡಿಗಳಱಿಯೆ ।
ದುರುಳಮುನಿಪನ ಶಾಪವೇ ಸ್ತ್ರೀ
ಪುರುಷಸಂಗವಿರೋಧಿ ನಮಗಿ
ನ್ನರಸ ನಾಪುತ್ರಸ್ಯ ಗತಿಯೆಂದಿರದೆ ಶ್ರುತಿವಚನ ॥ ೧೭
ಧರೆಯ ರಾಜ್ಯಸ್ಥಿತಿಗೆ ಸುತರವ
ತರಿಸುವರು ಗಾಂಧಾರಿಗಾಪು
ತ್ರರಿಗೆ ಸುತರಾಸುತರ್ಗೆ ಸುತರಾಸುತರು ಜನಿಸುವರು ॥
ಧರೆ ಪರಂಪರೆಯಿಂದಲತ್ತಲೆ
ಸರಿವುದೀನಿಮ್ಮಡಿಗೆ ದರ್ಭಾ
ಸ್ತರಣಸಮಿದಾನಯನವೇ ಕಡೆಗಂ[1] ದಳಾಕುಂತಿ ॥ ೧೮

ಕುಂತೀ ಪಾಂಡುಗಳ ಸಂವಾದ

ವನಜಮುಖಿ ಕೇಳ್ ಪುತ್ರಮುಖದರು
ಶನವು ಸುಲಭವೆ ಪುಣ್ಯಹೀನರಿ
ಗೆನಿತು ಹಲುಬಿದೊಡೇನು ಹಂಗಿಗರಾವು[2] ದುಷ್ಕೃತಿಗೆ ।
ಮುನಿಯು ಬೇಟದ ಬೇಳುವೆಯ ಮಾ
ತಿನ ಹವಣ ನೀ ಬಲ್ಲೆ ನೀ ಹೇ
ಳೆನಗೆ ಕರ್ತವ್ಯವನು ಮಾನಿನಿ ಭೀತಿ ಬೇಡೆಂದ ॥ ೧೯
ನಾರಿಯುರು ಮತ್ತಲ್ಲಿ ರಾಜಕು
ಮಾರಿಯುರು ಚಲವಾದಿಗಳು ಗಾಂ
ಧಾರಿಗಾದುದು ಪುತ್ರಸಂತತಿಯೆಂಬ ಖೇದದಲಿ ।
ವೀರ ಬಿನ್ನೈಸಿದೆನು ಕಾರ್ಯವು
ಬಾರಿಯೊದುದು ಬಲ್ಲೆ ಯಿವಳುವಿ
ಕಾರಿ ಯೆನ್ನದಿರೆಂದು ರಾಯನ ಚರಣಕೆಱಗಿದಳು ॥ ೨೦

---

1 ನಮವೆ ಕಡೆಗೆಂತೆಂ, ಕ. ಖ. 2 ನಾವ್ಹಂಗಿಗರು, ಕ. ಖ. ಘ.

ಲೋಲಲೋಚನೆ ದೃಢಪತಿವ್ರತೆ
ಯೇಳು ದುಃಖಿಸಬೇಡ ಭೃಗುಜಾ
ಬಾಲಿಜಮದಗ್ನ್ಯಾದಿದಿವ್ಯಮುನೀಂದ್ರಜನವೆಲ್ಲ ।
ಓಲಗಿಸುವುದು ದುಷ್ಕೃತಿಗೆ ನಿ
ಷ್ಪಾಳಯವು ಬಳಿಕಹುದು ಮಂತ್ರವಿ
ಶಾಲಬೀಜದಲಹುದು ಸಂತತಿ ಕಾಂತೆ ಕೇಳೆಂದ ॥ ೩೧

ಭವದನುಗ್ರಹದಿಂದ ಸುತರು
ದ್ಭವಿಸಿದರೆ ಲೇಸನ್ಯಥಾ ಸಂ
ಭವಿಸದೇ ದುಷ್ಕೀರ್ತಿವಧುವಂಜಲಿಸಳೇ ಕುಲವ ।
ಅವನಿಪತಿ ಕೇಳ್ ನಳನಹುಷಪೌ
ರವಸುಹೋತ್ರಾದ್ಯರ ನಿಜಾತ್ಮೋ
ದ್ಭವರ ಪಾರಂಪರೆಗೆ ಗತಿಯೇನೆಂದಳಾಕುಂತಿ ॥ ೩೨

ಅರಸಿ ಕೇಳ್ ಸದ್ವಿಜಪಾರಂ
ಪರೆಯುಲದು ಸತ್ಪಾತ್ರದಲಿ ಮುನಿ
ವರರ ಕಾರುಣ್ಯದಲಿ ಪುತ್ರೋದಯವು ಸದ್ವಿಹಿತ ।
ಪರಮವೈದಿಕಸಿದ್ಧವಿದು ಸರ
ಸಿರುಹಮುಖಿ ನಿಶ್ಶಂಕೆಯುಲಿ ನೀ
ಧರಿಸು ಮುನಿಮಂತ್ರೋಪದೇಶವನಿದುವೆ ನಿರ್ದೋಷ ॥ ೩೩

ಕುಂತಿಯು ದೂರ್ವಾಸರಿಂದ ಬಂದ ಮಂತ್ರದ
ಸಂಗತಿಯುನ್ನು ಪತಿಗೆ ಹೇಳುವಿಕೆ

ಆದೊಡವೆನಿಪ ಬಿನ್ನಹವು ತನ
ಗಾದಿಯುಲಿ ದೂರ್ವಾಸಮುನಿ ಕರು
ಣೋದಯದಲಿತ್ತೈದುಮಂತ್ರಾಕ್ಷರದ ವರವುಂಟು ।
ನೀ ದಯಾಂಬುಧಿ ನಿನ್ನನುಗ್ರಹ

ಪಾದುದಾದೊಡೆ ತದ್ವಿಧಾನದ
ಲಾದರಿಸುವೆನು ಪುತ್ರಕಾಮ್ಯವನೆಂದಳಾಕುಂತಿ ॥ ೩೪

ಲೇಸನಾಡಿದೆ ಕುಂತಿ ಮುನಿಯುಪ
ದೇಶಿಸಿದನೇ ನಮ್ಮ ಭಾಗ್ಯವಿ
ದೈ ಸಲೇ ನೀ ದೃಢಪತಿವ್ರತೆಯೆನ್ನನುಜ್ಞೆಯಿದು ।
ಭೂಸುರರ ನೀ ಭರತವಂಶವಿ
ಳಾಸರನು ಕೃತಶತ್ರುಪಕ್ಷವಿ
ನಾಶರನು ಬೆಸಲಾಗು ಹೋಗೆನ್ನಾಣೆ ಹೋಗೆಂದ ॥ ೩೫

ಪತಿಯ ಅಪ್ಪಣೆಯಂತೆ ಕುಂತಿಯು ಪುತ್ರರನ್ನು ಪಡೆಯುವಿಕೆ

ತರುಣಿ ಪಾಂಡುವಿನಾಜ್ಞೆಯನು ನಿಜ
ಶಿರದಲಾಂತು ಸಮಸ್ತಮುನಿಮು
ಖ್ಯರಿಗೆ ವಂದಿಸಿ ಹರಿಹರಬ್ರಹ್ಮಾದಿಗಳಿಗೆಱಗಿ ।
ಸರಸಿಯಲಿ ಮಿಂದುಟ್ಟು ಕೆಂಪಿನ
ವರದುಕೂಲವ ಸ್ಮರಿಸಿದಳು ತಾ
ಪರಮಮುನಿಮಂತ್ರೋಪದೇಶವ ನೆನೆದು ಚಿಂತಿಸುತ ॥ ೩೬

ಮೂಱುಗುಣದೊಳು ನೋಡಿ ಸತಿಯರ
ನೀಱೆ ನರರನು ದೈತ್ಯವರ್ಗವ
ಬೇಱಿರಿಸಿ ನಾಕಜಸಮೂಹವ ತಾರತಮ್ಯದಲಿ ।
ನಾರಿ ಧ್ಯಾನಿಸಿ ಕಂಡಳಾಕ್ಷಣ
ವೀರಪಾಂಡುವು ನಿಜಪರಾವಹ [1]
ಮಾರುತನು ತಾನೀಗ ಭಾರತಿರಮಣನಾವೇಶಿ [2] ॥ ೩೭

ಎಂಬುದನು ತಾನಱಿದು ತನ್ನೊಳ
ಗಂಬುಜನಿಸಖಸುತನ ಮೇಲಕೆ

---

1 ನಿಜಪ್ರಹೂಹೂ, ಕ. ಖ. ಗ. 2 ಮಾಣನುನಾನೆಂಬ ಭಾರತನಿಪುಣಗಂಧರ್ವ, ಕ. ಖ. ಗ.

ಹಂಬಲಿಸಿ ಧರ್ಮಜ್ಞ ಪುತ್ರನ ಬಯಸಿ ಸತಿ ಯಮನ |
ಇಂಬುಗಟ್ಟಿದಳೊಂದುಮಂತ್ರವ
ನಂಬುಜನಿಸಖಸುತನ ತಂದಿತು
ಶಂಬರಾರಿವಿರೋಧಿಯು ಪ್ರತಿಬಿಂಬವೆಂಬಂತ ‖ ೩೮

ಸತಿಯು ಸಮ್ಮುಖವಾಗಿ ವೈವ
ಸ್ವತನು ಬಂದನಿದೇಕೆ ನಮ್ಮನು
ಕ್ಷಿತಿಗೆ ಬರಿಸಿದೆ ಯೆನಲು ಲಜ್ಜಾವಿನತಮುಖಿಯಾಗಿ |
ಸುತನ ಕರುಣಿಪುದೆನಲು ಭಯಪರಿ
ತತೆಯು ವಿಮಳಸ್ವೇದಜಲಲ
ಜ್ಜಿತೆಯುನಂಗೀಕರಿಸಿ ಕೊಟ್ಟನು ಸುತನ ಯಮನಂದು ‖ ೩೯

ಬಳಿಕ ಕುಂತಿಗೆ ನುಡಿದ ಸಿನ್ನಯು
ಲಲಿತಕಂದನ ಸತ್ಯ ಸ್ಥೈರಣೆ
ಗಲಿಸೆ ಶಾನೆಣೆಯಿಲ್ಲ ಸುರನರನಾಗಲೋಕದಲಿ |
ನಳಿನನಾಭಂಗಧಿಕಪ್ರೀತನು
ವಿಳೆಯೊಳೇಕಚ್ಛತ್ರನಾಗಿಹ
ಲಲನೆ ನೀ ಕೇಳೆಂದು ತಿರುಗಿ ಕೃತಾಂತ ಬೀಳ್ಕೊಂಡ ‖ ೪೦

ಧರಣಿಪತಿ ಕೇಳ್ಕುಂತಿಗಾದುದು
ವುರಗತಾರಾಶುಭಮುಹೂರ್ತದ
ನಿರುತದಲಿ ವರಗರ್ಭಿಣಿಗೆ ನಮತೀವೆ ಮಾಸಗಳು |
ಅರಸಿಗಾಯಿತು ತನ್ನ ಮಂದಿರ

ಧಾರಣೀಪತಿ ಕೇಳು ಕುಂತೀ
ನಾರಿಗಾದುದು ಗರ್ಭವಿಮಳಸು
ತಾರೆಶುಭಲಗ್ನದಲಿ ತೀರಿದುದಂದು ನವಮಾಸ |
ನೀಱೆಗಾಯಿತು ಸಂಭ್ರಮವು ಖಲ
ವೈರಿಮುಖ್ಯಾಮರರ ನಗರದಿ
ಘೋರನಬ್ಬರಿಸಿದುವು ದುಂದುಭಿಯಖಿಳವಾದ್ಯಗಳು ‖ ೪೧

ಧರಣಿಯಲಿ ಪಾಂಡುವಿನ ಮಾದ್ರೀ
ವರಸತಿಯ ಸಂಗಡದೊಳಾದವು ಮಾಸವೊಂಭತ್ತು ॥ ೪೧

ಧರ್ಮ ಜನನ

ಪರಿಹರಿಸಲಾ ಜ್ಯೇಷ್ಠ ತಾರೆಯ
ಚರಣವೆರಡಱ ಪುಣ್ಯಗ್ರಹಗಳ
ದರುಶನದಿ ತಾ ಚೈತ್ರಮಾಸದ ಕೃಷ್ಣ ಪಕ್ಷದಲಿ ।
ಪರಮಗುರುವಾರದಲಿ ತದಿಗೆಯೊ
ಳರಸ ಹುಟ್ಟಿದನಿಂದುಕುಲದಲಿ
ಪುರುಷನವತರಿಸಿದನು ಸುಕುಮಾರಕನು ಧರಣಿಯಲಿ । ೪೨

ನಿರ್ಮಳಿತವಾಯ್ತಖಿಳಜಗದಲಿ[1]
ಕರ್ಮವೇ ಬೆಚ್ಚಿದುದು ಸಾಕ್ಷಾ
ದ್ಧರ್ಮವೇ ಧರಣಿಯಲಿ ನರರೂಪಾಗಿ ಜನಿಸಿತೆಲ್ಲೈ ।
ಧರ್ಮದೀಶ್ವರಹೆಚ್ಚಿ ಭಾರತ[2]
ಧರ್ಮವೇ ತಾ ಧರಣಿಗಿಳಿದನು[3]
ಧರ್ಮವಿನ್ನೆಮಗಹುದೆನುತ ಹರುಷಿಸಿತು ಮುನಿನಿಕರ ॥ ೪೩

ಧರಣಿಪತಿ ಧರ್ಮಜನ ಮುಖಸಂ
ದರುಶನವ ಮಾಡಿದನು ಹರುಷದ
ಹೊಱೆಯ ಭಾರಣೆಯಿಂದ ಪುಳಕಾಂಬುಗಳ ಪೂರದಲಿ ।
ಹರಿದು ಪುತ್ರೋತ್ಸವದ ನುಡಿ ಗಜ
ಪುರದೊಳಬ್ಬರವಾಯ್ತು ಪಾಂಡುವಿ
ನರಸಿಯಲಿ ಸಂತಾನ ಜನಿಸಿದುದೆಂದು ಜನಜನಿತ ॥ ೪೪

---

1 ಖಿಳಜಗದೆದುಷ್ಷ ಚ.

2 ದುರ್ಮಹೀಶರ ಹೊತ್ತ ಭಾರದ, ಚ.

3 ಕರ್ಮವೇದನೆ ಧಾತ್ರಿಗಿಳಿದುದು, ಚ.

ಕುಂತಿಗೆ ಮಕ್ಕಳಾದ ಸಂಗತಿಯುಂ ಕೇಳಿದ ಗಾಂಧಾರಿಗೆ ಗರ್ಭಪಾತ.

ಕೇಳಿದಳು ಗಾಂಧಾರಿ ಕುಂತಿಗೆ
ಬಾಲಕೇಳಿವಿನೋದವೆಂಬುದು
ಮೇಳವಿಸಿತಾಮುನ್ನ ಮಾಡಿದ ತಪದ ಫಲವೆನುತ [1] ।
ಕಾಳುನುಡಿಗಳ ನುಡಿದು ಮುನಿಪತಿ
ಠೌಳುಕಾಱನಲಾ ಸುಡೀಗ
ರ್ಭಾಳಿಗಳನೆಂದಬಲೆ ಹೊಸೆದಳು ಬಸುಱನೊಡೆಮುಱಿದು ॥ ೪೫

ಉದಿರಿದುವು ಧರಣಿಯಲಿ ಬಲುಮಾಂ
ಸದ ಸುರಕ್ತದ ಗಟ್ಟಿಗಳು ಖಂ
ಡದ ಸುಡಾಳದ ಜಿಗಿಯು ಹೇಸಿಕೆ ನಿಕರ ನೂಱೊಂದು ।
ಕೆದಱಿದಳು ವಾಮಾಂಘ್ರಿಯಲಿ ನೂ
ಕಿದಳು ಹಾಕಿವ ಹೊಱಗೆನುತ ನೋ
ಡಿದಳು ಕರೆ ಕನ್ನೆಯರನೆನುತ ಕಠೋರಕೋಪದಲಿ ॥ ೪೬

ತನತನಗೆ ತನು ನಡುಗಿ ಕಾಂತಾ
ಜನವು ಬಂದುದು ತಾಯೆ ಬೆಸಸೇ
ನೆನಲು ಬಿಸುಡಿವ ನೂಱ ಹೊಱಗೆಂಬಾಮುಹೂರ್ತದಲಿ ।
ಮುನಿಪ ವೇದವ್ಯಾಸನಾಕೆಯ
ಮನೆಗೆ ಬಂದನು ಕಂಡನೀಕಾ
ಮಿನಿಯ ಕೋಳಾಹಳವಿದೇನೇನೆಂದು ಬೆಸಗೊಂಡ ॥ ೪೭

ಭರತಸಂತಾನಕೆ ಕುಮಾರರ
ಹೆಱುವೆನಾ ಮುನ್ನೊಂದು ಗರ್ಭವ
ಧರಿಸಿದೆನು ನಿಮ್ಮಡಿಯ ಕೃಪೆಗಳ ಮಂತ್ರಪಿಂಡದಲಿ ।
ವರುಷವೆರಡಾಯ್ತಿದಱ ಭಾರವ
ಧರಿಸಿದೆನು ದಾಯಾದ್ಯರೊಳಗವ
ತರಿಸಿದನು ಮಗನೆನುತ ಮುಖದಿರುಹಿದಳು ಗಾಂಧಾರಿ ॥ ೪೮

---

1 ಮೇಳವಿಸಿತೇ ಮುನ್ನ ಹಾ ತಪ್ಪೇನುತಪ್ಪೇನು, ಕ. ಖ.

ವ್ಯಾಸರ ಅಪ್ಪಣೆಯಂತೆ ಗರ್ಭಸಂರಕ್ಷಣೆ.

ಮರುಳುಹೆಂಗಸೆಲೈ ಮಹಾತ್ಮರ
ಪರಿಯ ನೀನೆಂತಱಿವೆ ಗರ್ಭೋ
ತ್ಕರವ ಕೆಡಿಸಿದೆ ಪಾಪಿ ನೀ ಸಾಱೆನುತ ಮುನಿ ಮುನಿದು ।
ತರಿಸಿದನು ಘೃತಪೂರಿತದ ಕೊ
ಪ್ಪರಿಗೆಗಳನೊಂದೊಂದಱೊಳಗವ
ನಿರಿಸಿ ಮಂತ್ರಿಸಿ ನೀರ ತಳಿದನು ರಕ್ಷೆಗಳ ರಚಿಸಿ ॥ ೪೯

ಚಿಂತೆ ಯಿಲ್ಲದೆ ವರುಷದಿನಪರಿ
ಯಂತ ರಕ್ಷಿಸು ಬೞಿಕ ನಿನ್ನಯ
ಸಂತತಿಯ ಸಾಮರ್ಥ್ಯವನು ಗಾಂಧಾರಿ ನೋಡೆನುತ ।
ಕಂತುಪಿತ ಬೞಿಕಾಗ [1] ಸತಿಯನು
ಸಂತವಿಸಿ ತಿರುಗಿದನು ಧರಣೀ
ಕಾಂತ ಕೇಳೈ ವನದೊಳತ್ತಲು ಭೀಮನುದ್ಭವವ ॥ ೫೦

ಬೞಿಕ ತುಂಬಿತು ವರುಷ ಧರ್ಮಗೆ
ನಳಿನಮುಖಿ ಪಾಂಡುವಿಗೆ ನುಡಿದಪ
ಳೆಲೆ ಮಹೀಪತಿ ನಿನ್ನ ಪುತ್ರನು ಜಾತಿಧರ್ಮದಲಿ ।
ಬಲುಹನುಳ್ಳವನಹುದುವೀತನೆ
ಯಿಳೆಯನುಱೆ ಪಾಲಿಸುವ ಭುವನಾ
ವಳಿಯ ಜೀವರ ಬಲುಹ ಬಗೆಯದ ಸುತನು ಜನಿಸುವೊಡೆ ॥ ೫೧

ಧರಣಿಯಲಿ ನಿಮ್ಮಿಂದ ಸುಕೃತದ
ಚರಿತರುಂಟೇ ಯೆನಲು ಮಹಿಪತಿ
ಕರುಣಿಸಿದನಿನ್ನೊಬ್ಬ ಪುತ್ರನ ಪಡೆಯೆ ಹೋಗೆಂದ ।
ಸುರನಿಕರತೆತ್ತೀಸಕೋಟಿಯ
ನಿರಿಸಿ ಮೇಗಣದೇವಗಣದೊಳು
ಧರಿಸುವುದು ನೀ ಪುತ್ರಗರ್ಭವನೆಂದು ನೇಮಿಸಲು ॥ ೫೨

---

1 ಕಂತು ಪಿತಸನ್ನಿಭನು, ಖ, ಚ, ಜ.

ನಿಯಮದಲಿ ಕಾಮಿನಿ ಸರೋವಾ
ರಿಯಲಿ ಮಿಂದಳು ಬೀಜಮಂತ್ರ
ವ್ಯಯವ ಮಾಡಿದಳಮರನಿಕರವ ನೋಡಿ ಕೈಮುಗಿದು ।
ಬಯಸಿದಳು ವಾಯುವನು ನಿಜಮೂ
ರ್ತಿಯಲಿ ಬಂದು ಸಮೀರನೀಕುಂ
ತಿಯನು ನುಡಿಸಿದನೆಮ್ಮ ಬರಿಸಿದ ಹದನ ಹೇಳೆಂದ ॥ ೫೩

ಬರಿಸಿದುದು ಬೇಱೇನು ಸುತನನು
ಕರುಣಿಪುದು ನೀವೆನಲು ತಾ ವರ
ಹರುಷದಲಿ ಮನವುಟ್ಟಿ ಕೊಟ್ಟನು ಧೀರಪುತ್ರನನು ।
ಮರಳಿದನು ಪವಮಾನನೀಪಂ
ಕರುಹಮುಖಿಯು ಪ್ರಸೂತೆಯಾದಳು
ವರುಷವೊಂದಕೆ ಧರಿಸಿ ಪರಬಲಕಾಲಭೈರವನ ॥ ೫೪

ಜಯಸಿರಿಯಳೆನ್ನತ್ತೆ ಹರಿ ತಾ
ನಯದಿ ಮಾವನು ಬ್ರಹ್ಮ ಜನಿಸನು
ಬಯಲು ಭ್ರಮೆ ಬೇಡಿಬ್ಬರಲಿ ತನಗಲ್ಲ ಗರ್ಭವದು ॥ ೫೩
ಎಂದು ಬಳಿಕರವಿಂದಲೋಚನೆ
ಯಂದು ಸಾಕ್ಷಾದ್ದೇವಮಧ್ವರ
ತಂದೆಯನು ರಜಗುಣದ ಮುಖ್ಯಪ್ರಾಣದೇವನನು ।
ಇಂದುಮುಖಿ ವರಮಂತ್ರದಿಂದವೆ
ಕಂದೆಱೆದು ಕಳುಹಿದಳು ತಾ ಕಡು
ಮಿಂದು ಬಾಹ್ಯಾಂತರದಿ ವರಶುಚಿಯಾಗಿ ಕೈಮುಗಿದು ॥ ೫೪
ಬಯಸಲು ಜಗದ ಜೀವನನು ತಾ
ಜಯಿಸುವ ಮೂರ್ತಿಯು ಬಂದು ಕುಂತೆಯ
ನಯವಿದನು ನೀನಿಂದು ಬಯಸಿದ ಹದನ ಹೇಳೆಂದ ।
ನಯನದಲಿ ಹರುಷಾಶ್ರು ತುಂಬಿತು
ನಯದೆ ರೋಮಾಂಚನದಿ ಕುಂತಿಯು
ಜಯಜಯೆನುತಲು ಮೆಲ್ಲನೆಂದಳು ದೇವ ಕೇಳೆನುತ ॥ ಘ. ಜ. ೫೫

ಭೀಮಜನನ.

ಪವನಜನು ತಾ ಮಾಘಮಾಸದ
ನವಮಿಯಲಿ ತಾ ಶುಕ್ಲಪಕ್ಷದ
ರವಿಯು ಮಧ್ಯಾಹ್ನದಲಿ ಬಂದಿರೆ ಯಗ್ನಿದೇವತೆಯು ।
ಯುವತಿಕೃತ್ತಿಕೆಯಾದ ತಾರೆಯೊ
ಳವತರಿಸಿದನು ಪಾದಮೂಱಕೆ
ರವಿರವಿಜಕುಜರಾಯಲಗ್ನಕೆ ತಾರೆ ಕೇಳೆಂದ ॥ ೫೫

ಪವನಸುತನವತರಿಸೆ ಪಾರ್ಥಿವ
ನಿವಹ ನಡುಗಿತು ದೈತ್ಯಗಣವುಱಿ
ಜವವಟಿಯೆ ನಿಂದುದು ರಿಪುವಿನಾಶನಕಾಲಭೈರವಗೆ [1] ।
ಭುವನದಲಿ ತಮತಮಗೆ ನಾಕಜ
ನಿವಹ ಹೂಮಳೆಗಱೆದು ಹರುಷಿಸಿ
ಪವನಜನ ತಾಯ್ ಭೀಮಸೇನನು ಯೆಂದು ಹೆಸರಿಡಲು ॥ ೫೬

ಭೀಮನುದಿಸಿದ ಯಿರುಳು ಕೌರವ
ಭೂಮಿಪತಿ ಜನಿಸಿದನು ಮಿಗೆ ನಿ
ಮ್ಮಾಮಹಾತ್ಮನ ಜನನ ಬೆದಱಿಸಿತಖಿಳಜನಮನವ ।
ಭೂಮಿ ನಡುಗಿತು ದೆಸೆಗೆ ಹರಿದುವು
ಧೂಮಕೇತುಗಳುದಿರಿ ಬಿದ್ದವು
ತಾಮಸನು ಜನಿಸಲಿಕೆ ದೇವಾಲಯದ ಪ್ರತಿಮೆಗಳು ॥ ೫೭

ಕರೆಸಿದನು ಧೃತರಾಷ್ಟ್ರನವನೀ
ಸುರರ ಬೆಸಗೊಂಡನು ಕುಮಾರರ
ದರುಶನದ ಸಮನಂತರದಲುತ್ಪಾತಫಲಗತಿಯು ।
ಭರತವಂಶದಲುಱದ ಭೂಮೀ
ಶ್ವರರನಂತವನೀತನೇ ಸಂ
ಹರಿಸುವನು ಸಂದೇಹವಿದಕೇನೆಂದರವರೆಂದು ॥ ೫೮

---

1 ಜವವಟಿ ಸುದಾಕಲಿ ವಿನಾಶನ ಕಾಲನುದ್ಭವಿಸೆ, ಜ

ಕುಲಕೆ ಕಂಟಕನಾದನೊಬ್ಬನ
ಕಳವುದೂರಲಿ ನಾಶ ತಾ ಕುಲ
ವೆಱೆಯೆ ದೇಶವೆ ಗಾಸಿ ಮಾಡುವುದೂರ ಕೆಡಿಸುವುದು ।
ಇಳೆಯನಖಿಳವ ಬಿಸುಡುವುದು ತ
ನ್ನುಳಿವ ಮಾಡುವುದೆಂಬ ವಚನವ
ತಿಳುಹುದೀತನ ಬಿಸುಟು ಕಳೆ ನೀನೆಂದನಾವಿದುರ ॥ ೫೯

ಸುತನ ಮೇಲಣ ಮೋಹವಾಗ
ಸ್ಥಿತಿಯನೀಕ್ಷಿಸಲೀವುದೇ ದು
ರ್ಮತಿಯುಳೀತನ ಬಿಸುಡಲಸದಳವಲ್ಲ ಗಾಂಧಾರಿ ।
ಸುತನಿರೀಕ್ಷಣಜಾತಕರ್ಮೋ
ಚಿತದ ದಾನಂಗಳಲಿ ಭೂಸುರ
ತತಿಯ ದಣಿಸಿದನನಿಬರಿಗೆ ಗುಣನಾಮಕರಣವನು ॥ ೬೦

ಜನಪನಿಟ್ಟನು ಹಿರಿಯ ದುರ್ಯೋ
ಧನನು ದುಶ್ಶಾಸನ ವಿಕರ್ಣನು
ಕನಕವರ್ಮಸುಷೇಣದೀರ್ಘೋದರಮಹೋದರರು ।
ಜನವಿಜಯ ಜಲಸಂಧ ದೃಢವಾ
ಹನ ವಿವಿಂಶತಿ ಕುಂಡಧಾರಕ
ರೆನಲು ಬಾಹುಕ ದೀರ್ಘಬಾಹುಕನೆನಿಸಿ ಹೆಸರಾಯ್ತು ॥ ೬೧

ವಿಕಟಜಂಘನು ತಾಳಜಂಘನು
ಪ್ರಕಟದುರ್ಮತಿ ಪಾಪಕರ್ಮನು
ವಿಕಳಮತಿ ತಾ ಸ್ವರ್ಣಕರ್ಣನು ದೀರ್ಘಕನು ಶಲನು ।
ಪ್ರಕಟಕುಂಭೀಪಾಕ ಪ್ರಾಪ್ತನು [1]
ಸಕಲಕಂಟಕಧರ್ಮಕಂಟಕ
ವಿಕಳಮತಿ ಮುಸ್ಸೇವ್ಯದುರ್ಜಯ ಪಾಪಕರ್ಮಯುತ ॥ ೬೨

1 ಪಾತ್ರನು, ಖ.

ವೀರನಿಂದ್ಯನು ಚಿತ್ರಕವರ್ಮನು
ಘೋರಕರ್ಣನು ದುಷ್ಟಕರ್ಮನು
ಕಾರುಕನು ಬಹುಬುದ್ಧಿ ಕಾಮುಕಸೇವ್ಯಬಾಹಿರನು ।
ಶೂರಸೇನನು ಘೋರಸೇನನು [1]
ವೀರಸೇನನು ಮಿಥ್ಯಸೇನನು [2]
ಧೀರಕರ್ಮನುದಾರಕರ್ಮನು ಭೂಪ ಕೇಳೆಂದ ॥ ೬೩

ಚಿತ್ತವಿಸು ದುಸ್ಸಹನು ದುರ್ಜಯ
ಮತ್ತೆ ದುರ್ಮತಿ ಚಿತ್ರರಥ ತಾ
ಚಿತ್ರಕರ್ಮನು ಚಿತ್ರಭುಜಬಲನೇಕಲೋಚನನು ।
ಸತ್ಯದೂರನು ಜಾರಕರ್ಮನು
ಮಿಥ್ಯವಾದಿ ಹಿರಣ್ಯವರ್ಮನು
ಚಿತ್ತವಿಸು ಧೃತರಾಷ್ಟ್ರಪುತ್ರರ ನಾಮಕರಣಗಳ ॥ ೬೪

ಭಾರವರ್ಮನು ಚೋರವರ್ಮನು
ನಾರಿಲಂಪಟನಾತ್ಮಘಾತಕ
ಕ್ರೂರಕರ್ಮನು ಧರ್ಮಘಾತಕ ದೇವನಿಂದಕನು ।
ವಾರಿಜಾಕ್ಷವಿರೋಧಿ ಹರಿಣೀ
ಮಾರಿಯೆಂಬವನೊಬ್ಬ ಖರತರ
ಘೋರಕರ್ಮನಶೀಲಕರ್ಮನು ಶೂನ್ಯವಾದಿಕನು ॥ ೬೫

ಸತ್ಯದೂರನಸತ್ಯಸೇವ್ಯನು
ಮಿಥ್ಯದೇಹಿಕ ಕರ್ಮಬಂಧನು
ನಿತ್ಯಹಿಂಸಾಪರನು ನಿಗಮವಿದೂರನೆಂಬವನು ।
ಹತ್ಯದೋಷಿಕ ಮತ್ತೆ ಸುಜನರ
ಮೊತ್ತವರ್ಜಿತನಾತ್ಮಸ್ತುತ್ಯನು
ವೃತ್ತಮರ ತಾನಾಗಸಿಂದಿಪನೊಬ್ಬನನವರತ ॥ ೬೬

---

1 ಘೋಷಸೇನನು, ಖ. 2 ಘೀರಕರ್ಮನು, ಖ.

ಒಬ್ಬನವರಲಿ ದೀರ್ಘಜಂಘನು
ಒಬ್ಬನವರಲಿ ಕುಬುಜನೆಂಬವ
ನೊಬ್ಬನವರಲಿ ಶೂನ್ಯಹೃದಯನು ವೇಕಬಾಹುಕನು |
ಒಬ್ಬನೇ ತಾನೇಕನಯನನ
ದೊಬ್ಬನೇ ತಾನೇಕನಾಸಿಕ
ನೊಬ್ಬನೇ ತಾ ತ್ರಿತಯಹಸ್ತನು ಚತುರ್ಥಕರ್ಣದಲಿ ॥ ೬೭
ಒಬ್ಬನೇ ತಾ ಬರ್ಬರನು ತಾ
ನಿರ್ಬುದ್ಧಿ ಲೋಕದಲಿ ಕುರುಕುಲ
ಗರ್ಭಕನು ತಾನೊಬ್ಬನೆಂಬವ ಕರ್ಮನಾಶಕನು |
ಸರ್ಬನಾಶಕನೆಂಬನೊಬ್ಬನು
ದುಬ್ಬಿಯಲಿ ಜನಿಸಿದನು ಕೌರವ
ನುರ್ಬಿಪತಿ ಧೃತರಾಷ್ಟ್ರರಾಯಗೆ ಸುತರು ತಾವಾಗಿ ॥ ೬೮

ಇಂತು ಜನಿಸಿದ ನೂಱುಜನಗಳ
ಸಂತವಿಸಿ ಧೃತರಾಷ್ಟ್ರಭೂಪತಿ
ಸಂತತಿಯ ಗುಣವಱಿದು ಮಾಡಿದ ನಾಮಕರಣವನು |
ಅಂತು ಮಾಡಿದ ನೂಱುಮಾನುಷ
ಜಂತುಗಳು ಪಾಂಡವರ ವೈರಿಗ
ಳಿಂತು ಕೇಳೃ ತಾವು ರಾವಣಸುತರು ಕೇಳೆಂದ ॥ ೬೯
ಜನಪತಿಗೆ ತಾನೊಬ್ಬ ವೈಶ್ಯಾಂ
ಗನೆಗೆ ಸುತನು ಯುಯುತ್ಸು ನೂಱೊಂ
ದೆನಿಸಿದರು ಸುಕುಮಾರಕರು ಧೃತರಾಷ್ಟ್ರನಂದನರು |

ಗಾಂಧಾರಿಗೆ ದುಶ್ಶಳಾ ಜನನ.

ಜನಿಸಿದೀ ನೂಱೊಂದು ದೈತ್ಯರಿ
ಗನುಜೆ ದುಶ್ಶಳೆಯಾದಳವನಿಪ
ತನುಜೆ ಸೈಂಧವಗರಸಿ ಯಾದಳು ಭೂಪ ಕೇಳೆಂದ ॥ ೭೦

* ನೂರು ಹೆಸರುಗಳು ಪೂರ್ಣವಾಗಿರುವುದಿಲ್ಲ, ಮತ್ತು ಅನೇಕವಾದ ಹೆಸರುಗಳು ಸಂಸ್ಕೃತ ಭಾರತಾನುಸಾರಿಯಲ್ಲ.

ಅವಳು ತ್ರೇತೆಯೊಳಂದು ಮಂಥರೆ
ಯುವತಿಯಾಗಿರೆ ರಾಮಚಂದ್ರನ
ಭುವನಪಟ್ಟವ ಕೆಡಿಸಿದಪಳವಳರಸ ಕೇಳೆಂದ |
ಅವಳು ಕೃತಯುಗದಂದು ಜ್ಯೇಷ್ಠೆಯು
ಭವಗಳೀಪರಿ ಮುಂದೆ ಕಲಿಯುಗ
ವಿವರಿಸಲು ಗೋವೃಂದನಾಶಕಳಿವಳು ಕೇಳೆಂದ || ೭೧

ಅತ್ತಲಾ ಹದನಾಯ್ತು ಬೞಿಕಿನೊ
ಳಿತ್ತ ಧರ್ಮಜ ಭೀಮಸೇನರ
ಹೆತ್ತು ಹರುಷದಲಿರಲು ಪಾಂಡುನೃಪಾಲಕುಂತಿಗಳು [1] |
ಮತ್ತೆ ಕೇಳದ್ಭುತವ ನೆಱೆ ಮೊಱೆ
ಯುತ್ತ ಹೆಬ್ಬುಲಿ [2] ವರತಪೋವನ
ದತ್ತಲೈತರೆ ಪಾಂಡು ಕೆಡಹಿದನಾಮೃಗಾಧಿಪನ || ೭೨

ಆಮಹಾರಭಸಕ್ಕೆ ಯಲ್ಲಿಯ
ಸ್ತೋಮಮುನಿಜನವಂಜೆ ಪರ್ವತ
ದಾ ಮಹಾಡಿಂಬಿನಲಿ ಪಾಂಡುವಿನರಸಿ ನಡುಗಿದಳು |

ಭೀಮಾಂಗಸ್ಪರ್ಶದಿಂದ ಪರ್ವತ ಭೇದನ.

ಭೀಮ ಬಿದ್ದನು ತೊಡೆಯ ಮೇಲಿಂ
ದೀಮಹಿಗೆ ತರುಶೈಲಶಿಲೆ ನಿ
ರ್ನಾಮವಾದುದು ಹಸುಳೆ ಹೊಱಳಿಯೆ ಬಿದ್ದ * ರಭಸದಲಿ || ೭೩
ಶಿಶುವ ತೂಪಿಡಿದಳು ನಿವಾಳಿಸಿ
ಬಿಸುಟು ರಜವನು ಮಂತ್ರರಕ್ಷಾ
ಪ್ರಸರವನು ಮುನಿಗಳಲಿ ಮಾಡಿಸಿ ಮೆಱೆದಳಾಕುಂತಿ |

---

1 ಹೆತ್ತು ಹರ್ಷದೊಳಿವರು ಮೆಱೆದರು ಪಾಂಡುಕುಂತಿಯರು, ಖ.
ಕೇಸರಿ, ಜ.

ದಾ ಮಹಾತ್ಮನ ಹತಿಗೆ ಪರ್ವತ ಭೂಮಿಯಲಿ ಶತಶೃಂಗವಾಯಿತು
ಸೋಂಕೆ, ಜ

[1]ಬೆಸಲಹೆನು ತಾನೆಂದು ತಿಂಗಳು
ನುಸುಳೆ ಪಾಂಡುವಿಗೆಂದಳಾಗಲೆ
ಯುಸಮಬಲ ಕೇಳೆನಗೆ ಪುತ್ರದ್ವಯದ ವಿವರವನು ೭೪

ಒಬ್ಬನೇ ಧರ್ಮಜ್ಞನಾದವ
ನೊಬ್ಬನೇ ತಾನಧಿಕಶೂರನ[2]
ದಿಬ್ಬರಾದವರಿನ್ನು ವರಸೌಂದರ್ಯವುಳ್ಳವನ ।
ಒಬ್ಬ ಕಂದನ ಹೆತ್ತೆವಾದೊಡೆ
ಸರ್ವಭುವನದೊಳಾವ ಮಾನ್ಯರು
ಸರ್ವಥಾ ನೀನಿದಕೆ ಚಿತ್ತೈಸೆಂದಳಾಕುಂತಿ ॥ ೭೫

ಎನಲು ಮೆಚ್ಚಿದ ಪಾಂಡುನೃಪ ತಾ
ವನಿತೆಗಾಗಲು ನುಡಿದ ನಾಕಜ
ಜನಗಳರಸನ ಪುತ್ರಭಿಕ್ಷವ ಬೇಡು ಹೋಗೆಂದ ।
ಎನಲು ಕುಂತೀದೇವಿಯಾಗಲು
ಮನದೊಳುತ್ಸಾಹಿಸಿಯೆ ಹರಹರ
ಯೆನುತ ಧಿಮ್ಮನೆ ಯೆದ್ದು ಪತಿಯಂಘ್ರಿಯಲಿ ತಾ ಬಿದ್ದು ॥ ೭೬
ವಸುಧೆಗತಿಬಲನೊಬ್ಬ ಕಂದನ
ಬೆಸಲಹೆನು ತಾನೆನುತ ಕಮಳಾ
ಳಿಸರಕ್ಕೈತಂದಾಗ ಹರುಷಿಸಿ ಮಿಂದಳಾಕುಂತಿ ।
ವಿಸರುಹಾನನೆ ನೆನೆದು ಮಳಲಲಿ
ವಸುಧೆಪೂಜೆಯ ಮಾಡಿ ಪದ್ಮವ
ಪಸರಿಸಿಯೆ ಪರಿಪೂರ್ಣೆಯಾದಳು ಕುಂತಿ ವಿನಯದಲಿ ॥ ೭೭

ಅಂದು ಕಡು ಶುಚಿಯಾಗಿ ಸುಮನೋ
ವೃಂದದೊಳಗಾರೈದು ನೋಡಿ ಪು

---

1 ವಸುಧೆಗಧಿಕನನೊಬ್ಬ ಕಂದನ ಬೆಸನಹೆನು ತಾನೀಗ ಕೇಳೀ ಶಿಶುಗಳಿಬ್ಬರ ನಿಜವ ಪುತ್ರದ್ವಯದ ವರಗಳನು, ಖ 2 ಭುಜಬಲ, ಕ. ಖ.

ರಂದರನ ನೆನೆದಳು ಮುನೀಂದ್ರನ ಮಂತ್ರಸಿದ್ಧಿಯಲಿ ।
ಬಂದನಲ್ಲಿಗದೇನು ಬೇಕರ
ವಿಂದಲೋಚನೆ ಹೇಳು ಕೊಡುವೆನು
ಕಂದ ಬಲುಗೈಯ್ಯಾಗಬೇಕೆಂದಾಗ ಲಜ್ಜೆಯಲಿ ॥ ೭೮

ಎನಲಿಕಿಂದ್ರನು ಪೃಥೆಯ ಮಾತಿಗೆ
ನೆನೆದು ಹೊಂಪುಳಿಯಾಗಿ ದೇವಾಂ
ಗನೆಯ ವಲ್ಲಭನಾಗ ಪಾಂಡುವಿನರಸಿಯಂಗವನು ।
ಮನದಲಾಲಾಗಿಸಿಯೆ ನಾಕಜ
ಜನಗಳರಸನು ಪರಮಸುಖದಲಿ
ವನಿತೆಗೆಂದನು ಕೇಳು ಜನಮೇಜಯ ಮಹೀಪಾಲ ॥ ೭೯

ಸುತನನಿತ್ತೆನು ನಿನಗೆ ತ್ರಿಭುವನ
ತತಿಯೊಳಗೆ ಬಲುಗೈಯ್ಯ ಕೊಟ್ಟೆನು
ಸತಿಶಿರೋಮಣಿ ನಿನ್ನ ಕಂದಗೆ ಶಿವನು ಶಂಕಿಸುವ ।
ಶತಭವಾಂತರ ಪುಣ್ಯತರುಕಾ
ಮಿತದ ಫಲವಿದೆನುತ್ತಲಾಸುರ
ಪತಿ ಲತಾಂಗಿಗೆ ವರವನಿತ್ತೊಡರಿದನು ನಿಜಪಥವ [1] ॥ ೮೦

ಅರ್ಜುನನ ಜನನ.

ತೀವಿದುದು ನವಮಾಸವಿಂದ್ರನ
ಭಾವಗರ್ಭವು ಕುಂತಿದೇವಿಗೆ
ದೇವನಾಜ್ಞೆಯ ಮೇಲೆ ಫಾಲ್ಗುಣಮಾಸದುತ್ತರೆಯ ।
ಜೀವಕೇಂದ್ರಸ್ಥಾನ ಶುಭದಿನ[2]
ಜಾವಪಂಚದಶಿಯ ದಿವಸದ
ಲ್ಲಾ ವಿಜಯ ಮೂಱನೆಯ ಚರಣಕೆ ಜನನವಾಯ್ತೆಂದ ॥ ೮೧

---

1 ವರಸತಿಗೆ ಫಲವಾಯ್ತೆನುತಲಿ ಶತಮುಖನು ವರವಿತ್ತು ಗಗನ
ಕ್ಕಡರಿದನು ಬಳಿಕ, ಕ. 2 ಗುರುದಿನ, ಜ.

ಭಾವೆ ಶುಭಗ್ರಹದೃಷ್ಟಿರಾಶಿಯು
ತೀವಿ ಜನಿಸಿದನಾಗ ವರಗಾಂ
ಡೀವಿ ಜನಿಸಲಿಕೊಡನೆ ಜನಿಸಿತು ಜನದ ಸುಮ್ಮಾನ ।
ರಾವಣಾಂತಕನಲ್ಲಿ ಯಂಗದ
ದೇವಜನಕನು ವಾಲಿ ಜನಿಸಿದ
ದೇವನೇ ತಾನಾಗಿ ಪಾರ್ಥನು ದ್ವಾಪರಾಂತ್ಯದಲಿ ॥ ೮೨

ದೇವದುಂದುಭಿ ಮೊಳಗಿದುದು ಕುಸು
ಮಾವಳಿಯ ಮಳೆ ಸುರಿದುದಾಡುವ
ದೇವಸತಿಯರ ಹೊಳೆವ ಕಂಗಳ ಧಾರೆ ಮಿಂಚಿದುವು ।
ತೀವಿದುತ್ಸವ ವುಬ್ಬರಿಸೆ ಭುವ
ನಾವಳಿಯಲಿಂದ್ರಾದಿ ನಿಖಿಳಸು
ರಾವಳಿಗಳಾದರಿಸಿ ಕೊಂಡಾಡಿತು ಧನಂಜಯನ ॥ ೮೩

ರಣಭಯಂಕರನರ್ಜುನನು ಧಾ
ರುಣಿಯಲುದಿಸಿದೊಡಾರುತಿಂಗಳ
ಗಣನೆಯಲಿ ಮುನ್ನಂದು ಮಧುರೆಯ ರಾಜಭವನದಲಿ ।
ಗುಣರಹಿತನಚ್ಯುತನು ವರಶ್ರಾ
ವಣ ಬಹುಳದಷ್ಟಮಿ ಯಿರುಳು ರೋ
ಹಿಣಿಯಲವತರಿಸಿದನಲ್ಲೆ ದೇವಕಿಯ ಜಠರದಲಿ ॥ ೮೪

ಓತು ತಾನವತರಿಸಿ ಮೆರವಿ
ಖ್ಯಾತ ನಾರಾಯಣನಲ್ಲೆ ಬಳಿ
ಕಾತನುರ್ವೀಭಾರ ಸಂಹಾರದ ವಿನೋದದಲಿ ।
ಭೂತಪತಿ ಮೊದಲಾದ ದಿವಿಜ
ವ್ರಾತ ನರರೂಪಿನಲಿ ಮಿಗೆ[1] ಸಂ
ಭೂತವಾಯಿತು ಕೇಳು ನೃಪ ಕೃಷ್ಣಾವತಾರದಲಿ ॥ ೮೫

---

1 ನಾನಾರೂಪಿನಲಿ, ಖ.

ಮಾದ್ರಿಗೆ ಒಂದು ಮಂತ್ರವನ್ನುಪದೇಶಿಸುಯೆಂದು ಪಾಂಡುವಿನಪ್ಪಣೆ.

ಬಳಿಕ ಪಾಂಡುನೃಪಾಲ ಕುಂತಿಗೆ
ತಿಳಿದು ನಿನಗೆನ್ನೇಸು ಮಂತ್ರದ
ಬಳಗವಿಹುದೆಂದೆನಲಿಕೆಂದಳು ಮಂತ್ರವಿನ್ನೊಂದು ।
ಉಳಿದಿಹುದು ತಾನೆನಲು ನೃಪಕುಲ
ತಿಲಕನೆಂದಪನದನು ಮಾದ್ರೀ
ಲಲನೆಗೀವುದು ಮಂತ್ರವೊಂದನು ನೀನು ಮನಮುಟ್ಟಿ ॥ ೮೬

ನಿನಗೆ ಮೂವರು ಪುತ್ರರಾದರು
ತನುಜನೊಬ್ಬನು ಮಾದ್ರಿಗಾಗಲಿ
ವನಜಮುಖಿ ಪತಿಯಾಜ್ಞೆಯಿಂದಲೆ ಹರುಷಮಾಡಿದಳು ।
ಮನದೊಳಗೆ ಮಧುಸೂದನನ ತಾ
ನೆನೆದು ಪಾರ್ಥನನೆತ್ತಿ ಮೊಲೆಗುಡು
ತನುನಯದಿ ಬಾ ತಂಗಿ ನೀನೆನುತರಸಿ ಮೋಹದಲಿ ॥ ೮೭

ಸಾಕು ಮೂವರು ಸುತರು ತನಗೆಂ
ದಾಕೆ ಮಾದ್ರೀದೇವಿಗಗ್ಗದ
ನಾಕುಮಂತ್ರದೊಳೊಂದ ಸವತಿಗೆ ದಯವ ಮಾಡಿದಳು ।
ನಾಕಜರ ನೀ ನೋಡಿ ವರಿಸೆನ
ಲಾಕೆ ತನ್ನಯ ಮನದಿ ಹರುಷಿಸಿ
ಬೇಕು ತನಗೊಂದವಳಿ ಯೆಂದಳು ನೋಡಿ ಸುರಗಣವ ॥ ೮೮

ಶೋಧಿಸುತ ನೋಡಿದಳು ಜ್ಞಾನದಿ
ಭೇದವಿಲ್ಲದ ಯಶ್ವಿನೀಸುತ
ರಾದಿಯಲಿ ತಾ ಮನಕೆ ತಂದಳು ಸುತರಸಿವರಲ್ಲಿ ।
ಸಾಧಿಸುವೆ ನಾನೆನುತ ನೆನೆದಳು

ವೇದದರ್ಥವ ಮಂತ್ರವನು ಮನ
ಕಾದರಿಸಿ ಸರಸಿಯಲಿ ಮಿಂದಳು ಕರೆದಳವರುಗಳ ॥ ೮೯

ಬೇಗದಲಿ ವರಮಂತ್ರವಿಬ್ಬರ
ನಾಗಳೇ ಕರೆತಂದು ಮಾದ್ರೀ
ಯೋಗದೆಡೆಯಲ್ಲಿರಿಸಿದುದು ತಾನಶ್ವಿನೀಸುತರ ।
ರಾಗದಲಿ ನಾಕಜರೊಳಬ್ಬರು
ಬೇಗದಿಳಿದರು ಸ್ವರ್ಗಲೋಕದಿ
ನಾಗ ಮಾದ್ರೀದೇವಿ ಯಿದ್ದೆಡೆಗಾಗಿ ನಿಮಿಷದಲಿ ॥ ೯೦

ಕುಂತಿಯು ಮಂತ್ರೋಪದೇಶದಿಂದ ಮಾದ್ರಿಗೆ ನಕುಲಸಹದೇವರ ಜನನ.

ಬಂದರವರಿಬ್ಬರು ಮಹೀತಳ
ಕಿಂದುವದನೆಗೆ ಸುತರನಿತ್ತರು
ಮಂದಗಮನೆಯು ಕಳುಹಿ ಹಾಯ್ದರು ಗಗನಮಂಡಲಕೆ ।
ಬಂದು ವರುಷಕೆ ಕಿಱಿಯನರ್ಜುನ
ನಿಂದ ಬಳಿಕವರಲ್ಲಿ ಯುದಯಿಸ
ಲಂದು ವರಮುನಿನಿವಹ ಕೊಂಡಾಡಿತು ಕುಮಾರಕರ ॥ ೯೧

ಹರುಷಿಸಿಯು ತಾ ಪಾಂಡು ಕುಂತಿಯು
ವರಕುಮಾರಕರೈವರಾಗಲು
ಸರಸಿರುಹಮುಖಿ ಮಾದ್ರಿಯಾ ವೈಶಾಖಬಹುಳದಲಿ ।
ವರಚತುರ್ದಶಿಶುಕ್ರವಾರದ
ಉರುಮೃಗಾನಕ್ಷತ್ರ ಪ್ರಥಮದ
ಚರಣ ತಾ ಶುಭಯೋಗದಲ್ಲುದಯಿಸೆ ಕುಮಾರಕರು ॥ ೯೨

ಪರಮಹರುಷದಿ ಕುಂತಿ ಯೆಂದಳು
ಧರಣಿಪತಿ ಯೆನಗೊಂದು ಸಲುಗೆಯ
ನಿರುತವೀವುದೆನಲ್ಕೆ ಪಾಂಡುವದೇನು ಪೇಳೆನಲು ।
ವರಕುಮಾರರು ನಮಗೆ ಜನಿಸಿದ

ಹರುಷವಾರ್ತೆಯ ನಮ್ಮ ತವುರಿ[1]ಗೆ
ನಿರುತದಲಿ ಹೇಳೆನಲು ಕೇಳನೆ ಯಟ್ಟಿದನು ನೃಪತಿ ॥ ೯೩

ಪಾಂಡುವು ತನಗೆ ಮಕ್ಕಳಾದುದನ್ನು ವಸುದೇವನಿಗೆ ತಿಳಿಸುವಿಕೆ.

ಬಂದು ಮಧುರಾಪುರಿಗೆ ದೂತರು
ವಂದಿಸಿಯು ವಸುದೇವಗೆಂದರು
ತಂದೆ ಕೇಳೈ ನಿಮ್ಮ ಸೋದರಿಯೆನಿಪ ಕುಂತಿಯಲಿ ।
ನಂದನರು ಜನಿಸಿದಪರೈವರು
ವಂದ್ಯಜನಪ್ರತಿಪಾಲಕರು ವಾ
ನಂದಹೃದಯರುಮುನ್ನತರು ಕುಲಕೀರ್ತಿಪಾಲಕರು ॥ ೯೪

ಕುಂತಿ ಸುತರನು ಹೆತ್ತಳೆಂದ
ತ್ಯಂತವಾರ್ತೆಯ ಕೇಳಿದನು ತಾ
ಕಂತುವಿನ ಪಿತನಯ್ಯ ಮಧುರಾಪುರದ ಮಧ್ಯದಲಿ ।
ಚಿಂತೆ ಮಱೆದುದು ತಂಗಿಮಕ್ಕಳ
ಸಂತತಿಯ ಸಂತೋಷವಾರ್ತೆಗೆ
ಕಂತುಪಿತನಯ್ಯ ಮುಱುಗಿದ ತೋಷಪ್ರವಾಹದಲಿ ॥ ೯೫

ವಸುದೇವನು ಭೂಷಣಾದಿಗಳನ್ನು ಕಳುಹಿಸುವಿಕೆ.

ಕರಿತುರಗನಿಕರವನು ಸತಿಯರ
ವರರಥವ ರತ್ನಾಭರಣವನು
ಪರಿಪರಿಯ ವಸ್ತ್ರಾವಳಿಯ ಬೇಕಾದ ವಸ್ತುಗಳ ।
ತರಿಸಿದನು ತಾ ತನ್ನ ಪುರದಲಿ
ವರಸುವಸ್ತುವ ಕೊಟ್ಟು ಕಶ್ಯಪ
ವರಮುನಿಪಸಹಿತವರ ಕಳುಹಿದ ಪಾಂಡುನೃಪನೆಡೆಗೆ ॥ ೯೬

ಬಂದನಾಕಶ್ಯಪನು ಕುಂತೀ
ನಂದನರ ಕಂಡಖಿಳವಸ್ತುವ

---

[1] ಶೌರಿ, ಖ.

ತಂದು ಕಾಣಿಕೆಗೊಟ್ಟು ಕಂಡನು ಪಾಂಡುಭೂಪತಿಯು |
ಅಂದು ವಸುದೇವಾದಿಯಾದವ
ವೃಂದ ರೋಹಿಣಿದೇವಕಿಯರಾ
ನಂದನರ ಸುಕ್ಷೇಮಕುಶಲವನರಸ ಬೆಸಗೊಂಡ || ೯೭

ಯಾದವರ ಸುಕ್ಷೇಮಕುಶಲವ
ನಾದರಿಸಿ ಬಳಿಕಾದ ಕಾರ್ಯವ
ಮೇದಿನೀಪತಿ [1]ಹೇಳಿ ಕಳುಹಿದ ಕೆಲವು ದಿನದಿಂದ |
ವೈದಿಕದ ಚೌಲೋಪನಯನಗ
ಳಾದಿಷೋಡಶಕ್ರಿಯೆಗಳನು ಗಾ
ರ್ಗ್ಯಾದಿಋಷಿಗಳ ಕೈಯ್ಯ ಮಾಡಿಸಿ ಮೆಱೆದ[2]ನೈವರಿಗೆ || ೯೮

ಈತರೊಳು ಧರ್ಮಸುತಗೆರಡನೆ
ಯಾತ ಭೀಮನು ಬಳಿಕ ಮೂಱನೆ
ಯಾತ ಪಾರ್ಥನು ನಾಲ್ಕನೆಯರಾ ನಕುಲಸಹದೇವ |
ಈತಗಳು ಕೌಂತೇಯಮಾದ್ರೀ
ಜಾತರತಿಶಯದಿವರು ಭುವನ
ಖ್ಯಾತರೆಂದರು ಸಕಲಮುನಿಗಳು ಪಾಂಡುನಂದನರ || ೯೯

ಬಳಿಕ ಮಾದ್ರೀಸುತರದೊಂದಿನ
ದುಲಿವುತಲಿ ತೊಟ್ಟಿಲಲಿ ಮಲಗಿರ
ಲಿಳೆಗೆ ತಾನತಿ[3]ಚೋದ್ಯವಾಯಿತು ಭೂಪ ಕೇಳೆಂದ |

ಪಾಂಡವರಿಗೆ ಕೃಷ್ಣನು ಬಂದು ಅಭಯವಂ ಕೊಡುವಿಕೆ.

ಒಲಿದು ಯಾದವರಾಯನಾವನ
ದೊಳಗೆ ಬಂದನು ನಕುಲನಲ್ಲಿಗೆ
ಮಲಗಿರಲು ತಾ ನುರಗನಾಗಿಯೆ ಯಾವನಾಶ್ರಮಕೆ || ೧೦೦

1 ನಾದಯಾಂಬುಧಿ ಕೇಳಿದನು ಬಳಿಕಾವ ಕಾರ್ಯವ, ಖ.

2 ಗಳನುಜ್ಞೆಯಲಿ ಮಾಡಿಸಿದ, ಖ. 3 ಳೆಯೊಂದತಿ, ಖ.

ಉರಗನಾಕಾರವನೆ ಧರಿಸಿಯೆ
ತರಳರಿಹ ತೊಟ್ಟಿಲಿನ ಮೇಲಿಂ
ದುರವಣಿಸಿ ಸಹದೇವನಾಕ್ಷಣ ಬಭ್ರುವಾಗಿರಲು ।
ಹರಿಯುದಕೆ ನಸುನಕ್ಕು ಯಮಳರ
ಪರಿಯನಱಿದನು ನೀವು ಧರಣಿಯ
ನರರು ಬೆಸಗೊಂಡಲ್ಲದೇನುವೆನುಸಿರಬೇಡೆಂದ ॥ ೧೦೧

ನೀವು ಪರಮಜ್ಞಾನಸಿದ್ಧರು
ನೀವು ತ್ರಿಜಗಜ್ಜೀವರಾಶಿಯ
ತಾವು ಕೇಳುವ ಶ್ರವಣದಧಿದೇವತೆಗಳೆಂದೆನುತ ।
ನಾವು ನಿಮ್ಮಯ ಜೀವಸಖರೈ
ನಾವು ನಿಮ್ಮಯ ಪಾರ್ಥದೇವಗೆ
ನಾವು ಸಾರಥಿ ನಿಮ್ಮಭೀಷ್ಟವ ಬಯಸುತಿಹೆವೆಂದ ॥ ೧೦೨

ಎಂದು ಬೞಿಕಲ್ಲಿಂದ ತಿರುಗಿದ
ನಂದನರ ಬೀಳ್ಕೊಂಡನಾದಿನ
ದಂದಿಗಾಯಿತು ಮಾಸ ಮೂಱು ದಿನದ ಗಣನೆಗಳು ।
ಅಂದುಮೊದಲಾಗವರು ಜ್ಞಾನಕೆ
ಸಂದುಗಾಣರು ಕುಂತಿಪುತ್ರರು
ತಂದೆ ಕೇಳೈ ಮಾದ್ರಿಯಾ ವರಸುತರಿಗಸುರಾರಿ ॥ ೧೦೩

ಬಂದು ಕರುಣಿಸಿ ಹೋದಬೞಿಕರ
ವಿಂದಲೋಚನೆ ಮೊಲೆಗುಡಲಿಕಾ
ನಂದನರ ಹೊರೆಗಾಗಿ ಬರಲಿಕೆ ಮುನ್ನಿನಂದದಲಿ ।
ಅಂದು ಮಲಗಿರೆ ಯಾದವೇಂದ್ರನು
ಬಂದ ಹದನನು ತಿಳಿದು ಮದ್ರಜೆ
ಯಿಂದುಮುಖಿ ಸಂತೋಷಬಟ್ಟಳು ಹರುಷದೇಳ್ಗೆಯಲಿ ॥ ೧೦೪

ಅಂದು ಮೊದಲಾಗೈವರಾಗೋ
ವಿಂದನಂಘ್ರಿಯ ಬಲದಿ ಬದುಕುವ
ಕಂದರೈ ಶ್ರೀ ಪಾಂಡು ಪುತ್ರರು ಭೂಪ ಕೇಳೆಂದ ।
ಅಂದು ಸುಜನಸ್ತೋಮ ಪಾಂಡುವ
ನಂದನರ ನೆಱೆ ಹಾಡಿ ಹರಸುತ
ಲಂದು ತಪವನದೊಳಗದಷ್ಟಾಶೀತಿಮುನಿಗಣವು ॥ ೧೦೫

ವರಯುಧಿಷ್ಠಿರನೃಪನು ಹುಟ್ಟಿದ
ನಿರುತ ಚೈತ್ರದ ಮಾಸದಲಿ ತಾ
ವರವೃಕೋದರ ಜನಿಸಿದನು ಶ್ರೀ ಮಾಘಮಾಸದಲಿ ।
ನರನು ಫಾಲ್ಗುನಮಾಸದಲಿ ನೆಱೆ
ನಿರುತ ಮಾದ್ರಿಯೊಳಾಗ ಯಮಳರು
ಧರಣಿಗವತರಿಸಿದರು ವೈಶಾಖದ ಚತುರ್ದಶಿಗೆ ॥ ೧೦೬

ಕೃಷ್ಣಪಕ್ಷದೊಳಶ್ವಿನಿಯುಲಾ
ವೃಷ್ಣಕರನಿಂದಾರ್ಯವಾರಕೆ
ಜಿಷ್ಣುವಿನ ತಮ್ಮಂದಿರೆಸೆದರು ಭೂತಳಾಗ್ರದಲಿ ।
ವೈಷ್ಣವೋತ್ತಮರೈವರನು ತಾ
ತೃಷ್ಣೆಯಲಿ ಶ್ರೀಕುಂತಿಯಧಿಪತಿ
ಕೃಷ್ಣವೇಣೀತೀರದಲಿ ಸಲಹಿದನು ಹರುಷದಲಿ ॥ ೧೦೭

ಸುತರನಾಲೋಕಿಸುವನೈವರ
ಸತತ ಸಾವಿರಭಾರಿ ಪಾಂಡವ
ಪಿತನ ಹರುಷವನೇನ ಹೇಳುವೆನಾವನಾಂತರದಿ ।
ಕ್ರತುಸಹಸ್ರವನಂತಜಾಪ್ಯವು
ಯತಿಪದಾಂಬುಜಸೇವೆ ಸಂತತ
ಸುತವಿನೋದದ ಸುಖವ ಕೊಟ್ಟಿತೆನುತ್ತ ಪಾಂಡುನೃಪ ॥ ೧೦೮
ಹರಿಪರಾಯಣನಾಗಿ ಮಕ್ಕಳ
ಪರಮವಿಭವದಿ ರಾಯ ಮನದಲಿ

ವರಸತಿಯರೊಡಗೂಡಿ ರಾಜ್ಯವ ಮೆಱೆದು ವನಗಳಲಿ ।
ಇರುತಿರಲು ಪಾಂಡವರಿಗೈವರಿ
ಗಱುಪಿದನು ನಾನಾಂಗವಿದ್ಯೆಯ
ಬರಿಸಿದನು ಶ್ರೀವೀರನಾರಾಯಣನ ಕರುಣದಲಿ ॥ ೧೦೯

ಹದಿನೈದನೆಯ ಸಂಧಿ ಮುಗಿದುದು.

ಹದಿನಾಱನೆಯ ಸಂಧಿ.

ಸೂಚನೆ.

ವರಮುನಿಯ ಶಾಪದಲಿ ಸರಿದನು
ಸುರರ ನಗರಿಗೆ ಪಾಂಡು ಹಸ್ತಿನ
ಪುರಕೆ ತಂದರು ಸಕಲಮುನಿಗಳು ಪಾಂಡುನಂದನರ ॥

ಶತಶೃಂಗಪರ್ವತದಲ್ಲಿ ಮುನಿವೃತ್ತಿಯಿಂದ ಪಾಂಡುವಿನ ವಾಸ.

ಕೇಳು ಜನಮೇಜಯ ಧರಿತ್ರೀ
ಪಾಲ ಶತಶೃಂಗಾದ್ರಿಯಲಿ ಭೂ
ಪಾಲಸಿದ್ದನು ತನ್ನ ವೀರಕುಮಾರಕರು ಸಹಿತ ।
ವ್ಯಾಳಮೃಗಶಾರ್ದೂಲವನಗಜ
ದಾಳಿಭಯವನು ಪರಿಹರಿಸಿ ಮುನಿ
ಜಾಲಕಾಶ್ರಮದೊಳಗೆ ಸುಖಮಯನಾಗಿ ನೃಪನೆಸೆದ [1] ॥

ಆಸಮಸ್ತಮುನೀಂದ್ರರೊಡನ
ಭ್ಯಾಸವಾದಿವ್ಯಾಶ್ರಮದ ವನ

1 ಪಾಳಿಕಾಶ್ರಮವೆನಿಸಿದನು ಪಾವನತಪೋವನವ, ಟ.

ವಾಸವಾತಪವಾಕುಮಾರಪರಾಕ್ರಮಾಲೋಕ ।
ಆಸಮಂಜಸಸತಿಯರಿಬ್ಬರು
ಶಾಸನೆಗಳಾವಿಭವಕಿಭಪುರಿ
ಯಾಸಮಸ್ತೈಶ್ವರ್ಯವದು ತೃಣವಾಯ್ತು ಭೂಪತಿಗೆ ॥ ೨

ಸುತವಿನೋದದ ಸಿರಿಗೆ ದಿವಿಜರ
ಪತಿಯ ಸಿರಿ ತೊತ್ತೆಂದು ವಿಮಳ
ವ್ರತತಪೋಲಕ್ಷ್ಮಿಗೆ ವಿಲಾಸಿನಿ ಮುಕ್ತಿವಧುವೆಂದು ।
ಯತಿಪದಾಂಬುಜನಿತ್ಯಸೇವಾ
ಸತಿಗೆ ದಾಸಿ ಜಗತ್ತ್ರಯಾಧಿ
ಷ್ಠಿತಪದವಿಯೆಂದುಬ್ಬಿದನು ಕಲಿ ಪಾಂಡು ವಿಪಿನದಲಿ ॥ ೩

ವರುಷ ಹದಿನಾರಾಯ್ತು ಧರಣೀ
ಶ್ವರನ ಹಿರಿಯ ಮಗಂಗೆ ಭೀಮಗೆ
ವರುಷ ಹದಿನೈದರ್ಜುನಗೆ ಹದಿನಾಲ್ಕು ಹದಿಮೂರು ।
ಕಿರಿಯರಿಬ್ಬರಿಗನಿಬರಾಮುನಿ
ವರರಿನಧ್ಯಯನಾದಿವಿದ್ಯಾ
ನಿರತರಾದರು ಬಂದುದಂದು ವಸಂತಮಯದಿವಸ ॥ ೪

ವಸಂತಋತುವರ್ಣನೆ.

ತೆಗೆದುದಗ್ಗದ ತಂಪು ನದಿಸರ
ಸಿಗಳ ತಡಿಯಲಿ ಹೆಜ್ಜೆಯಾದುವು
ಹಗಲು ಹಂಸೆಯ ನೆಳಲು ಗೊಂಡುದು ಬಯಸಿ ಹಿಮಜಲವ ।
ಸೊಗಸಿದುವು ನೆಳಲುಗಳು ದೂರಕೆ
ಸೆಗಳಿಕೆಗಳಗ್ಗಳಸೆ ತಂ[1] ಗಾ
ಳಿಗೆ ವಿಹಾರಿಸಿ ಮೆಯ್ಯ್ಯ ತೆತ್ತುದು ಕೂಡೆ ಜನನಿಕರ[2] ॥ ೫

---

1 ಗಳೇಱಿದವುತಂ, ಘ. 2 ಸಕಲಭುವನಜನ, ಖ.

ಯೋಗಿಗೆತ್ತಿದ ಖಡ್ಗಧಾರೆ ವಿ
ಯೋಗಿಗೊಡ್ಡಿಹ ಸಬಳ ಸಕಳವಿ
ರಾಗಿಗಳ ಹೆಡತಲೆಯ ದಡಿ ಸೃಷ್ಟಿಕರಿಗಲಗಣಸು |
ಆಗಮಿಕರೆದೆಶೂಲ ಗರ್ವಿತ
ರಾಗಿಗಳ ಗಳನಾಳ ವ[1]ಗ್ಗದ
ಭೋಗಿಗಳ ಕುಲದೈವವೆನಿಸಿತು ಕುಸುಮಮಯಸಮಯ || ೬

ಮೊಱೆವ ತುಂಬಿಯ ಗಾಯಕರ ನಯ
ಸರದ ಕೋಕಿಲಪಾಠಕರ ಬಂ
ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ |
ಅರಳಿದಬುಜದ ಸತ್ತಿಗೆಯ ಮಂ
ಜರಿತಕುಸುಮದ ಚಾಮರದ ಭಾ
ಸುರವಸಂತನೃಪಾಲ ನಡೆದನು ಪಾಂಡುವಿನ ಮೇಲೆ || ೭

ಫಲಿತಚೂತಕದಿಂಪುಗಳ ನೆಱೆ
ತಳಿತಶೋಕೆಯ ಕೆಂಪುಗಳ ಪರಿ
ದಳಿತಕಮಲದ ಕಂಪುಗಳ ವನವನದ ತಂಪುಗಳ |
ಎಳೆಲತೆಯ ನುಂಪುಗಳ ನವಪರಿ
ಮಳದ ಪವನನ ಸೊಂಪುಗಳ ವೆ
ಗ್ಗಳಿಕೆ ಝಳಪಿಸೆ ಹೊಯ್ದು ಸೆಳೆದುದು ಜನದ ಕಣ್ಮನವ || ೮

ಪಸರಿಸಿತು ಮಧುಮಾಸತಾವರೆ
ಯೆಸಳ ದೋಣಿಯ ಮೇಲೆ ಹಾಯ್ದವು
ಕುಸುಮಶರನುಬ್ಬರದ ತೊಱೆಯನು ಕೂಡಿ ತುಂಬಿಗಳು |
ಬಸರ್ವ ಕರದಂಡದ ಪರಾಗದ
ಕೆಸರಲದ್ದವು ಕೊಂಚೆಗಳು ಹಗ
ಲೆಸೆದ ದಂಪತಿವಕ್ಕಿ ಸಾರಸರಾಜಹಂಸೆಗಳು || ೯

---

1 ಗೂಗೆಗಳನಱಸಾಳನ, ಟ.

ಜಗವ ಹೊರೆದುದು ಬಹಳಪರಿಮಳ
ದೊಗುಮಿಗೆಯು ತಂಗಾಳಿ ವನವೀ
ಥಿಗಳ ವಳಯವ ಹೊರೆದು ಮರಳುವರಿಲ್ಲ ವಿರಹಿಗಳು ।
ಹೊಗುವ ಕಾಮನ ದಳದ ಚೂಣಿಯು
ಸೊಗಡು ಹೊಯ್ದೊಡೆ ಕೈದುವಿಕ್ಕಿತು
ವಿಗಡಮುನಿಜನಕೇನನೆಂಬೆನು ನೃಪತಿ ಕೇಳೆಂದ ॥ ೧೦

ಆಗ ಪಾಂಡುವಿಗೆ ವನದಲ್ಲಿ ಮಾದ್ರಿಯು ದರ್ಶನ.

ಆವಸಂತದೊಳೊಮ್ಮೆ ಮಾದ್ರೀ
ದೇವಿ ವನದೊಳಗಾಡುತಿರ್ದಳು
ಹೂವಿನಲಿ ಸರ್ವಾಂಗಶೃಂಗಾರದ ವಿಳಾಸದಲಿ ।
ಆವಳಿವಳೂರ್ವಶಿಯೊ ರಂಭೆಯೊ
ದೇವವಧುಗಳ ಸುಳಿವೊ ತಾನಿಂ
ನಾವಚಲುವಿಕೆ ಶಿವ ಶಿವಾ ಯೆಂದರಸ ಬೆಱಗಾದ ॥ ೧೧

ತಾಗಿದುದು ಕಾಮನ ಶರನಿಕರ
ಲಾಗುವೇಗದಲೆಂತುಟೋ ತೆಗೆ
ಪೂಗಣೆಗಳ್ಳದಲ್ಲಿ ರೋಮಗಳಲ್ಲ ಬಾಣಮಯ ।
ವಾಗೆ ನಟ್ಟವು ಕಣೆಗಳೆಂಬವೊ
ಲಾಗಱಿವನೞಿಪಿದನು ಪ್ರಜ್ಞಾ
ಸಾಗರಂಗಳುಮಧ್ಯಕಟಜಾನ್ವಂಘ್ರಿ ಮಿತವಾಯ್ತು ॥ ೧೨

ಮಱೆದು ಹಿಂದೆಲ್ಲವನು ಕುಂತಿಯು
ನಱಿಯಲೀಯದೆ ಮೆಲ್ಲಮೆಲ್ಲನೆ
ತುಱುಗಿದೆಳಲತೆವನದಲಾಡುವ ಸತಿಯ ಸಾಱಿದನು ।

ಮಾದ್ರಿಯು ಸಂಗದಿಂದ ಪಾಂಡುವಿನ ಮರಣ.

ಸೆಱಗ ಹಿಡಿದರೆ ಬೇಡಬೇಡೆಂ
ದೆಱಗಿದಳು ಚರಣದಲಿ ತರುಣಿಯು
ತುಱುಬ ಹಿಡಿದೆತ್ತಿದನು ಹೆಣಗಿದನೊಡನೆ ಝೋಂಪಿಸಿದ ॥ ೧೩

ಕೊಂದೆಲೈ ಕಡು ಪಾಪಿ ಮಱೆದಾ
ಹಿಂದೆ ಮಾಡಿದ ಮೃತ್ಯುವನು ಮುನಿ
ಯೆಂದ ನುಡಿ ಹೊಳ್ಳಹುದೆ ಸುಡು ದುರ್ವಿಷಯುಕೆಳಸಿದೆಲೈ ।
ಬೆಂದುದೇ ನಿನ್ನಱಿವು ಧೈರ್ಯವ
ನಿಂದು ನೀಗಿದೆ ಯಕಟ ನಿನ್ನಯು
ನಂದನರಿಗಾರುಂಟೆನುತ ಹೊಗಿದಳು ಲಲಿತಾಂಗಿ ॥ ೧೪

ಕೊಂಬುದೇ ಬಯಲಱಿತಗಿಱಿತದ
ಡೊಂಬಿನಾಗಮನೀತಿಗೀತಿಯು
ಶಂಬರಾರಿಯು ಸಬಳವಲ್ಲಾ ಬೇಗೆ ವೋಹಿದುದು ।
ತುಂಬಿದೊಡೆ ಮಗುಚಿದೊಡೆ ಮಱುವೊನೆ
ಗೊಂಬುದೆಂಬವ್ರೊಲವನಿಪತಿ ಯೊ
ತ್ತಂಬರದಿ ಹಿಡಿದಬಲೆಯನು ಕೂಡಿದನು ಕಳವಳಿಸಿ ॥ ೧೫

ಅಂಬು ಮಱುವೊನೆ ಗೊಂಡುದೆಂಬುವ
ನಿಂಬಿನಲಿ ತಾ ಕಾಣಬಂದುದು
ಬೆಂಬಿಡದೆ ತಾ ಹಿಡಿದನಾಗಲು ಪಾಂಡು ತತ್ಸತಿಯು ।
ಅಂಬುಜಾಕ್ಷಿಯುನವಚಿ ಪಿಮಳಾ
ಡಂಬು ಬೇಡೆಲೆ ಯುವನಿಪತಿ ಯೆನೆ
ಯಂಬರವ ಸೆಳೆದಪ್ಪಿ ರಮಿಸಿದ ನೃಪತಿಯುರವಣಿಸಿ ॥ ೧೬

ಆಸುಖದ ಝೋಂಪಿನಲಿ ಮಱೆದವ್ರೊ
ಲೋಸರಿಸಿದುದು ವೆದನಕಂಗಳು
ಪೈಸರಿಸಿದವು ತೆಕ್ಕೆ ಸಡಲಿತು ದೇಹ ಬಾರಿಸಿತು ।
ಸೂಸಿದುದು ನಿಟ್ಟುಸುರು ರಾಣೀ
ವಾಸದುರದಲಿ ಕದಪನಿಟ್ಟು ಮ
ಹೀಶನೊಱಗಿದ ಹದನ ಕಂಡಳು ಮಾದ್ರಿ ಭೀತಿಯಲಿ ॥ ೧೭

ಅಕಟ ಪಾಂಡುಮಹೀಶ ವಿಷಕ
ನ್ನಿಕೆಯುನೆನ್ನನು ಮುಟ್ಟಿದೈ ಬೇ

ಡಕಟ ಕೆಡಿಸದಿರೆಂದೆನೇ ತಾನಱಿಯನೇ ಹದನ ||
ಪ್ರಕಟ ಕುರುಕುಲತಿಲಕರನು ಬಾ
ಲಕರನಾರಿಗೆ ಕೊಟ್ಟೆ ತನ್ನೊಡ
ನಕಟ ಮುನಿದೈ ಮಾತನಾಡೆಂದೊದಱಿದಳು ಮಾದ್ರಿ || ೧೮

ಏನಿದೆತ್ತಣ ರಭಸ ಮಾದ್ರೀ
ಮಾನಿನಿಯು ಹಾ ರಾಯನಾವೆಡೆ
ಹಾನಿ ಹಿರಿದುಂಟಱಿವೆನಂಗಸ್ಪಂದಶಕುನದಲಿ |
ಏನು ಮಾರಿಯೊ ಶಿವ ಶಿವಾ ಯೆನು
ತಾನಿತಂಬಿನಿ ಗಾಢಗತಿಯಲಿ
ಕಾನನದೊಳೈತಂದಳಾಕೆಯು ಸರದ ಬೞಿವಿಡಿದು || ೧೯

ಕಂಡಳವಳಬ್ಬರನು ಧೊಪ್ಪನೆ
ದಿಂಡುಗೆಡೆದಳು ಮೂರ್ಛೆಯಲಿ ಮಱಿ
ಗೊಂಡುದೆಚ್ಚರು ಮಾದ್ರಿಯೊಳು ಹಲುಬಿದಳು ಗೋೞಿಡುತ |

ಮಕ್ಕಳ ಪ್ರಳಾಪ.

ಚಂಡಿಕೆಗಳಲ್ಲಾಡೆ ಹರಿದರು
ಪಾಂಡುನಂದನರೈವರೀತನ
ಕಂಡು ಹಾ ಯೆಂದೊಱಲಿ ಹೊರಳಿದರವನಿಪನ ಮೇಲೆ [1] || ೨೦

ಬೊಪ್ಪ ದೇಶಿಗರಾದೆವೇ ವಿಧಿ
ತಪ್ಪಿಸಿತಲಾ ನಮ್ಮ ಭಾಗ್ಯವ
ನೊಪ್ಪಿಸಿದೆ ಮುನ್ನಾರಿಗೆಮ್ಮನು ಪೂರ್ವಕಾಲದಲಿ |
ಮುಪ್ಪಿನಲಿ ನಿಮಗೀಯವಸ್ಥೆಯು
ದೊಪ್ಪವುದೆ ಹೇರಡವಿಯಲಿ ಮಲ
ಗಿಪ್ಪುದೇನೆಂದೊಱಲಿ ಮಱುಗಿದರಾಕುಮಾರಕರು || ೨೧

---

1 ದೊಡಱಿ ಮೊಱುಗಿದರಾಕುಮಾರಕರು, ಜ,

ಕೇಳಿ ಹರಿತಂದುದು ಮುನಿವ್ರಜ
ದೇಳಿಗೆಯು ಬಲು ಶೋಕರಸದ ಛ
ಡಾಳತನವನು ನಿಲಿಸಿ ಬೋಧಿಸಿದರು ಕುಮಾರಕರ ।
ಆಲಿಸಿದಳಾಕುಂತಿ ಮಹೋಗ್ರ
ವ್ಯಾಳವಿಷವಪಹರಿಸಿ ಧರಣೀ
ಪಾಲಕನ ನೋಡಿದಳು ಬಿಸುಟ್ಟೆ ತನ್ನಸಿಂದೆನುತ ॥ ೨೧

ಅರಸ ನಮಗಲ್ಲಿಹದೆ ಸುರಸ್ತ್ರೀ
ಯರಲಿ ನೆರೆದೈ ನಿನ್ನ ಪಥಗಳ
ತುಳುಬ ಕೊಯ್ವೆನವರ ತೊತ್ತಿರ ಮಾಡುವೆನು ತನಗೆ ।

ಕುಂತೀಮಾದ್ರಿಯರ ಸಹಗಮನ ವಿಚಾರ

ಅರಸಿ ನೀಸೀಮಕ್ಕಳನು ಸಂ
ತರಿಸಿ ಕೊಂಡಿಹುದೆಂದು ಮಾದ್ರಿಯು
ಕರವ ಹಿಡಿದೊಡೆ ಕುಂತಿಗೆಂದಳು ಕಾಂತೆ ವಿನಯದಲಿ ॥ ೨೨

ಮರುಳೆಲೌ ನೀವಕ್ಕ ನಿಮ್ಮೈ
ವರು ಕುಮಾರರು ನಿಮ್ಮ ಕೈಲೆಡೆ
ಧರಣಿಪತಿ ನಿಡುನಿದ್ರೆಗೈದನು ತನ್ನ ತೋಳಿನಲಿ ।
ಸುರವಧುಗಳೊಡನಿರಲಿ ನಿಮ್ಮಯ
ಹರಿಬವೆನ್ನದು ನೋಡು ತನ್ನಯ
ಪರಿಯನೀತನ ನಿನಗೆ ಕೊಡೆನೆಂ [1] ದಂಘ್ರಿಗೆಱಗಿದಳು ॥ ೨೩

ಮುನಿಗಳೀಕೆಯು ತಿಳುಹಿ ಮಾದ್ರಿಗೆ
ಜನಪತಿಯು ಸಹಗಮನವೇ ಮತ
ವೆನಿಸಿ ಶವಸಂಸ್ಕಾರವನು ವೈದಿಕವಿಧಾನವಲಿ ।
ಎನಲು ಮನ್ನಿಸಿ ಕುಂತಿ ಮಾದ್ರಿಗೆ
ಜನಪತಿಯು ತಾನಿತ್ತು ಮಕ್ಕಳ
ತನುವಿಗಾನತೆಯಾಗಿ ನುಡಿದಳು ಮಾದ್ರಿ ಧರ್ಮಜಗೆ ॥ ೨೪

1 ತನಗೆ ಕೊಡಿಯೆಂ, ಕ, ಖ.

ಮಾದ್ರಿಯ ಸಹಗಮನ.

ಸುತರ ಪಾಲನೆ ನಿನಗೆ ಮುಖ್ಯವು
ಗತಿಯ ಮಾಡೆಮಗೆಂದು ಹೊಕ್ಕಳು
ಸತಿಶಿರೋಮಣಿ ಹರುಷದಿಂದವೆ ಪತಿಯ ವಾಮದಲಿ ।
ಪತಿಯ ಸಹಗಮನದಲಿ ಮಾದ್ರೀ
ಸತಿಗೆ ಶಿಖಿಯನು ಕೊಟ್ಟರೈವರು [1]
ಸುತರು ಸಹಿತೀಕುಂತಿ ಮಿಂದಳು ಬಳಿಕ ಕೃತ್ಯವನು [2] ॥ ೨೬

ಶ್ರುತಿವಿಧಾನದಲಖಿಳಮುನಿಸಂ
ತತಿಗಳನು ಮುಂದಿಟ್ಟು ಮಾಡಿಸಿ
ಸುತರ ಪಾಲಿಸುತಿರ್ದಳಾಶತಶೃಂಗಶೈಲದಲಿ ।
ಸುತರುಸಹಿತೀಕುಂತಿ ಋುಷಿಗಳ
ಸತಿಯರಾನುಡಿಗಳಲಿ ತನ್ನಯ
ಪತಿಯ ಮರಣವ ಮರೆದು ಸುತರನು ನೋಡಿ ಚಿಂತಿಸಲು ॥ ೨೭

ಅರಸನಪಗತನಾದನಾನೃಪ
ನರಸಿ ಬಾಲಕಿ ಶಿಶುಗಳೈವರು
ಭರತಕುಲಜರು ನಾವು ತಪಸಿಗಳಿರ್ದುದಾರಣ್ಯ ।
ಅರಿಗಳಾರಾಕ್ಷಸರು ನಾವಿ
ಲ್ಲಿರಿಸುವುದು ಮತವಲ್ಲ ಹಸ್ತಿನ
ಪುರದಲೊಪ್ಪಿಸಿ ಬಹುದು ನಯವೆಂದುದು ಮುನಿವ್ರಾತ ॥ ೨೮

ಮುನಿಗಳು ಧರ್ಮಾದಿಗಳನ್ನು ಹಸ್ತಿನಪುರಕ್ಕೆ ತಂದು ಬಿಡುವಿಕೆ.

ಎಂದು ಕುಂತೀದೇವಿಸಹಿತಾ
ನಂದನರನೈವರನು ಮುನಿಗಳು
ತಂದರಿಭಪುರಿಗಾಗಿ ಭೀಷ್ಮಾದಿಗಳಿಗೀ ಹದನ ।

---

1 ಸತಿಶರೀರ ಬಿಟ್ಟಳೈವರು, ಖ. 2 ಮಿಂದುಪರೇತಕೃತ್ಯವನು, ಕ.

ಮುಂದೆ ಸೂಚಿಸಲುತ್ಸವದೊಳದಿ
ರ್ವಂದರನಿಬರು ಶುಭಮುಹೂರ್ತದ
ಲಂದು ನಗರಿಯು ಹೊಗಿಸಿದನು ಸಂತೋಷದಲಿ ಭೀಷ್ಮ ॥ ೨೯

ಇವರ ಜನನಕ್ರಮವನಾಪಾಂ
ಡುವಿನ ವಿಕ್ರಮ ವರತಪೋಧನ
ನಿವಹ ಕೊಂಡಾಡಿದುದು ಬಳಿಕೀಮರಣಸಂಗತಿಯು ।
ಅವನಿಪನ ಸಂಸ್ಕಾರ ಮಾದ್ರೀ
ಯುವತಿಸಹಗಮನೌರ್ಧ್ವದೇಹಿಕ
ವಿವಿಧಕೃತ್ಯವನೀಪ್ರಪಂಚವ [1] ನವರಿಗಱುಹಿದರು ॥ ೩೦

ಮುನಿಗಳಾಕ್ಷಣ ತಿರುಗಿದರು ತ
ಜ್ಜನಪವೃತ್ತಾಂತವನು ವಿವರಿಸಿ
ಜನಜನಿತ ಬಳಿಕುಬ್ಬಿ ಹರಿದುದು ಶೋಕಮಯಜಲಧಿ ।
ವಿನುತಧೃತರಾಷ್ಟ್ರಾದಿಬಾಂಧವ
ಜನ ಪುನಸ್ಸಂಸ್ಕಾರದಲಿ ಭೂ
ಪನನು ದಹಿಸಿದರೌರ್ಧ್ವದೇಹಿಕವಾಯ್ತು ಮಿಗುಬಿಲ್ಲಿ ॥ ೩೧

ಅರಸ ಕೇಳ್ ಭೀಷ್ಮ ಧೃತರಾ
ಷ್ಟ್ರರನು ಬೋಧಿಸಿ ಬಹಳಶೋಕ
ಜ್ವರದ ಬಿಡುಗಡೆಮಾಡಿದವರ ಪರಾಶರಾತ್ಮಜನು ।

ವ್ಯಾಸರು ಸತ್ಯವತಿಯನ್ನು ಇಲ್ಲಿರಬೇಡೆಂದು ಹೇಳುವಿಕೆ

ಕರೆದು ಯೋಜನಗಂಧಿಯನು ನೀ
ನಿರಲು ಬೇಡೆಲೆ ತಾಯೆ ನಿಮ್ಮ
ಭರತವಂಶದೊಳೊಗೆದ ಕಿಚ್ಚುರುಹುವುದು ನೃಪಕುಲವ ॥ ೩೨
ಹೇಳಬಾರದು ಮುಂದಣದು ದು
ಷ್ಕಾಲವಿಂದಿಗೆ ನಾಳೆ ನಾಳೆಗೆ

1 ಕೃತ್ಯಾನೀಕ ಪಥಕವ, ಜ.

ಕಾಲ ಬೆಟ್ಟಿತು ವರ್ಣಧರ್ಮಾಶ್ರಮದ ನೆಲೆ ಹೋಯ್ತು ।
ಕಾಲ ವಿಷಮವು ಕೌರವಕ್ಷಿತಿ
ಪಾಲಪಾಂಡುಕುಮಾರರಲಿ ಕೈ
ಮೇಳವಿಸುವುದು ಕದನ ಬಿಜಯಂಗೈಯ್ಯಿ ನೀನೆಂದ ॥ ೭೩

ಎನಲು ಯೋಜನಗಂಧಿ ನಿಜನಂ
ದನನ ನುಡಿಯೇ ವೇದಸಿದ್ಧವಿ
ದೆನುತ ಸೊಸೆಯರು ಸಹಿತ ಸರಿದಳು ವರತಪೋವನಕೆ ॥
ಮುನಿಪನಿತ್ತಲು ಬದರಿಕಾನಂ
ದನಕೆ ತಿರುಗಿದ [1] ನಿತ್ತ ಗಂಗಾ
ತನುಜ ಸಲಹಿದನಖಿಳಪಾಂಡವಕೌರವವ್ರಜವ ॥ ೭೪

ಅತ್ತಲಾವರಸತ್ಯವತಿ ವನ
ದತ್ತಹೋದವಳಲ್ಲಿ ಮುನಿಗಳ
ಮೊತ್ತದಲಿ ಹರಿಕಥೆಯ ಕೇಳುತ ಪರಮಹರುಷದಲಿ ॥
ಉತ್ತಮರ ಪಥವಿಡಿದು ಸೊಸೆಯರ
ನತ್ತೆ ಪಾಲಿಸುತಲ್ಲಿ ವತ್ಸರ
ಹತ್ತ ನೂಕಿದಳಾತಪೋವನದೊಳಗೆ ಹರಿಪದವ ॥ ೭೫

ಸತ್ಯವತಿ ಮತ್ತು ಸೊಸೆಯರ ಲೋಕಾಂತರಗಮನ.

ಸೇವಿಸಿದ ಬಳಿಕಮರಲೋಕದ
ದೇವವಧುಗಳ ಕೂಡೆ ಸಂದಳು
ದೇವವೇದವ್ಯಾಸಮುನಿಪನ ಕೃಪೆಯ ಭಾರದಲಿ ।
ಆವಧುಗಳಂಬಾಲೆಯಂಬಿಕೆ
ಯಾವಿದುರವರಜನನಿಸಹಿತವೆ
ಯಾವಿಬುಧಪತಿಯಿಪ್ಪ ಠಾವಿಗೆ ಸಾರಿದರು ಬಳಿಕ ॥ ೭೬

---

1 ಮರಳಿದ, ಟ.

ರಾಯ ಕೇಳ್ಳೈ ಲೋಕದಲಿ ಪತಿ
ದಾಯದಲಿ ಸತಿ ಪುತ್ರರನು ಹೆ
ತ್ತಾಯುವತಿಜನಕಹುದು ಗತಿ ತಾ ಸತ್ಯಲೋಕವದು ।
ನ್ಯಾಯ ತಾನಹುದಿನ್ನು ಮುಂದಣ
ದಾಯ ಕುಂತೀದೇವಿಗೊಬ್ಬಳಿ
ಗಾಯಿತ್ತೆ ಕೈವಲ್ಯ ಪುತ್ರರ ಹೆತ್ತ ಫಲದಿಂದ ॥ ೩೨

ಹದಿನಾರನೆಯ ಸಂಧಿ ಮುಗಿದುದು.

ಹದಿನೇಳನೆಯ ಸಂಧಿ.

ಸೂಚನೆ.

ಭೀಮದುರ್ಯೋಧನರ ಸೆಣಸಿನ
ತಾಮಸಿಕೆ ಹೆಚ್ಚಿದುದು ಬಳಿಕು[1]
ದ್ದಾಮಶಸ್ತ್ರಾ[2]ಭ್ಯಾಸವನು ಮಾಡಿದರು ದ್ರೋಣನಲಿ ॥

ಪಾಂಡವಧಾರ್ತರಾಷ್ಟ್ರರ ಆಟಗಳು.

ಕೇಳು ಜನಮೇಜಯ ಮಹೀಶ್ವರ
ಬಾಲಕರು ನೂರಾರು ಮೆರೆದರು
ಬಾಲಕೇಳೀವ್ಯಸನಿಗಳು ಹೊರವಳಯದಲಿ ಪುರವ ।
ಆಳನೇರಿಕೆ ಹಿಡಿಗವಡೆ ಗುರಿ
ಯಾಳು ಚಂಡಿನ ಹೊಣಕೆ ಚಿಣಿಕೋ
ಲಾಳು ಚಿನಿವೆಂಡಿನಲಿ ದಂಡೆಯ ಹಾರುಗುಪ್ಪೆಗಳ[3] ॥ ೧

---

1 ಕದನೋ, ಟ. 2 ರಸ್ತ್ರ, ಟ.
3 ಗೊತ್ತಿನ ದಂಡೆಯಿನೆ ನಾನಾವಿನೋದದಲಿ, ಚ. ಟ.

ಗುಡುಗು ಗುತ್ತಿನ ಚೆಂಡು ಗುಮ್ಮನೆ
ಬಡಿವ ಕತ್ತಲೆಗುದ್ದು ಗಂಭದ
ಗಡಣೆ ಕಣ್ಣುಮುಚ್ಚಾಟ ಸವಗಲಿ ಹಲ್ಲೆಯಾಟಗಳ [1] |
ಕೆಡೆಹು ಕುಟ್ಟು ವಿವಾದಿಯಾದವ
ಗಡವಿನೋದದಲಾಡಿದರು ಪಂ
ಗಡದಲೈವರು ನೂರ್ವರವರಿತ್ತಂಡವೊಂದಾಗಿ || ೧

ಭೀಮನ ಪರಾಕ್ರಮ.

ಇದರೊಳೊಬ್ಬನೆ ಭೀಮನನಿಬರ
ಸದೆವ ತಾ ಸೋತೊಡೆ ವಿಭಾಡಿಸಿ
ಕೆದಱುವನು ಗೆದ್ದೋ [2] ಡಿದರೆ ಬೆಂಬತ್ತಿ ಹಿಡಿದೆಳೆದು |
ಸದೆದು ಬಿಡುವನು ಮುನ್ನ ಭೀಷ್ಮಂ
ಗೊದಱೆ ದೂಱುವನಿವನು ಮಗುಪೊಂ
ದೊದಗಿ ಸಂಗಡವಿಹರು ತಾ ವೊಂದಾಗಿ ಮಱುಕೊಳಿಸಿ || ೨

ಕೆಣಕಿ ದುರ್ಯೋಧನನನೆತ್ತಿಯ
ನಣೆದು ಹಾಯ್ವನು [3] ನಿಮ್ಮ ನೂರ್ವರ
ಬಣಗುಗಳಗೆಡಗಾಲ ತೊಡರಿದೆ ಬನ್ನಿ ಸೀವೆನುತ |
ಗುಣವ ನುಡಿದೊಂದಾಗಿ ಕೆಳಗೊಂ
ಡಣಕಿಸುತ ವೈಮೆಱೆಸಿ ಮಱೆಯುಲಿ
ಕೆಣೆದು ಹರಿವನು ಭೀಮನಾದುರ್ಯೋಧನಾದಿಗಳ [4] || ೩

ಹೇಱುವರು ಯಮಜಂಗೆ ನಿನ್ನವ
ನೂಱಗವ ನಿಲಿಸೆಂದು ಪಾರ್ಥಗೆ
ಹೇಱುವರು ಬಱಿಕವರು ಭೀಮನ ಕರೆದು ಬೇಡೆನಲು [5] |

---

1 ಕಣ್ಮುಚ್ಚಸಗವರಿಪರಿಹಲಗೆನಿಡುಗವಣೆ, ಚ. ಟ.

2 ಬಿಟ್ಟೋ, ಕ. ಖ. 3 ಹೊಯ್ವನು, ಜ.

4 ಬಿಡುವರು ಭೀಮನನಾದುರ್ಯೋಧನಾದಿಗಳು, ಖ. ಟ.

5 ಗಾರಡಿಸೆ, ಖ. ಟ.

ಕೇಳುವೆನು ಹಾ ಯೆಂದು [1] ತನ್ನಯ
ಸೋಲದಲಿ ಬೆನ್ನೊಡ್ಡಿ ತಾ ನೋ [2]
ಲಾಳನೇಱಿಸಿ ಹರಿದು ಕೆಡಹುವ ಕಲ್ಲುಗುಂಡಿನಲಿ [3] ॥ ೫

ಭೀಮಸೇನನ ಮೇಲೆ ಬಾಲರ ದೂರುಗಳು.

ಅಳುತ ಧೃತರಾಷ್ಟ್ರಂಗೆ ಭೀಮನು
ಕಳದ ಹಲುಗಳ ತೋಱಿ ಮೊಳಕಾಲ್ [4]
ಗಳಲಿ ಘಾಯವ ನೋಡಿರೈ ನೀವೆಂದು ದೂಱುವರು [5] ।
ಕೆಳಯನವನೆಮಗಲ್ಲ ಕಾಲನೇ
ಯಿಳೆಯುಲುಱಿವಿಲ್ಲೆನುತ ಕೌರವ
ಹೊಳಲ ಹೊಱಯಿಕೆ ಬಾರೆನೆಂದೊಡೆ ನಮ್ಮ ಕರೆದೊಯ್ದು ॥ ೬

ಬಂದುದಿನ ವರಭೀಮಸೇನನು
ಮಂದಮತಿಗಳ ಭವನದಲ್ಲಿಗೆ
ಬಂದು ಕರೆವನು ಕೌರವೇಂದ್ರನ ಸಹಿತಶತಕವನು ।
ಇಂದು ನಿಮ್ಮನು ಗುದ್ದಿದೊಡೆ ಗೋ
ವಿಂದನಂಘ್ರಿಗಳಾಣೆ ಯೆನಲಿಕೆ
ಬಂದರೈ ನೂಱೊಂದುಮಾನಿಸರರಸಕೇಳೆಂದ ॥ ೭

ಮುದದಲೊಬ್ಬನೆ ಭೀಮನನಿಬರ
ಸದೆವ ತಾ ಸೊಪ್ಪಾಗಿ ಶತಕರ
ತಿದಿಯ ಸುಳಿವನು ಕಾಲಲೊರುಸುವನೊದಱಿ ಮೆಟ್ಟುವನು ।
ಬದಿಯ ತಿವಿವನು ಬೀಱಲೊದೆವನು
ಮೊದಲೆ ತಾನ್ನೈತಂದು ಭೀಷ್ಮಂ
ಗೊದಱಿ ದೂಱುವ ಕೌರವೇಂದ್ರನ ಧುರಕೆ ಸೆಣಸುವನು ॥ ೮

---

1 ಲೇಸೆಂದ, ಖ 2 ಬೆನ್ನೊಡ್ಡುವನುವೇ, ಖ.

3 ಸದೆವನು ಗುತ್ತಿನಲಿಕೆಡಹಿ, ಚ. ಟ.

4 ಗಳನೊಡೆದಮೊಳಕಾಲ್, ಚ. ಟ. 5 ಗಳನುತೋಱಿಸಿ ದೂಱುತ, ಚ.

ಮುಳ್ಳುಮೊನೆಯಲಿ ಚಿಗುರಿ ನೆತ್ತರ
ಚೆಲ್ಲಿ ಹುಡಿಯಲಿ ಹೊರಳಿ ತಾ ಬಂ
ದಲ್ಲಿ ಧೃತರಾಷ್ಟ್ರಂಗೆ ಭೀಷ್ಮಂಗಳುತ ದೂಱುವನು ।
ರು ದುರ್ಯೋಧನಾದಿಗಳು, ಚ. ಟ.
ಒಲ್ಲೆನೆಂದೊಡೆ ನಮ್ಮ ಕರೆವರು
ಖುಲ್ಲರೆಲ್ಲರು ನಿಮ್ಮ ಮಕ್ಕಳ
ದೆಲ್ಲರಿಗೆ ನಾನೊಬ್ಬನಾಪೆನೆ ಯೆಂದನನಿಲಜನು ॥ ೯

ಮಕ್ಕಳಿಗೆ ಧೃತರಾಷ್ಟ್ರನ ಬುದ್ಧಿವಾದ.

ಎನಲು ತಾ ಧೃತರಾಷ್ಟ್ರ ಮಕ್ಕಳ
ಮನವಱಿದು ತಾ ಬುದ್ಧಿಗಲಿಸಿದ
ತನುಜರಿರ ನಿಮಗಾರು ಹಿತವರುಮಿಲ್ಲ ಲೋಕದೊಳು ।
ಎನುತ ಮಕ್ಕಳಿಗಂಧನೆಂದನು
ವಿನಯ ಮಿಗೆ ಕೌಂತೇಯವರ್ಗಕೆ
ತನತನಗೆ ಮನಮುಟ್ಟೆ ಹಿತವರು ಭೀಷ್ಮನಾವಿದುರ ॥ ೧೦

ಆಕೆವಾಳರು ಭೀಷ್ಮವಿದುರರು
ಸಾಕು ನಿಮ್ಮೊಳು ನೂಱುನಾಲ್ವರು
ಬೇಕೆ ಬೇಱಿಹುದೊಬ್ಬ ತಾ ಬೇಱಿಹುದು ಖೇಳದಲಿ ।
ನೂಕಿ ಸೂಱುಳು ಮಾಡಿ ಬಿಟ್ಟೊಡೆ
ನಾಕುಜಾವದೊಳಿಹರು ಮಱುದಿನ
ವಾಕುಮೊರರು ತಮ್ಮೊಳೊಂದಹರೊಂದು ನಿಮಿಷದಲಿ [1] ॥ ೧೧

ಬಂದುದಿನ ನೂಱಾಱುಮಂದಿಯು
ಬಂದು ಮೆಳೆಯಲಿ ಪುರದ ಹೊಱಗಿಹ
ದೊಂದು ತಾವು ಪ್ರಮಾಣವೃಕ್ಷವ ಕಂಡು ನಡೆತರಲು ।

1 ಳೊಂದಾಗಿಹರು ಗೆಳೆಯಾಗಿ, ಚ. ಟ.

ಬಂದು ತಾವೆಡರಿದುದು ಕೌರವ
ವೃಂದ ಮರನನು ಬಳಿಕ ನಾಲ್ವರು
ಪೊಂದುವೃಕ್ಷದಲಿರಲು ತಾ ಹರಿದಾಡಿದನು ಭೀಮ ॥ ೧೨

ಬಳಿಕ ಬಳಲಿದನಕಟ ಯಿಾಜಗ
ಬಳಗವಿಪ್ಪತ್ತೊಂದು ಜೀವರು
ಸುಳಿವ ಸತ್ವದ ಸರಿಸಕೊಬ್ಬನು ನಿಲುವನನಿಲಜನು ।
ಇಳೆಯುಲಡಮುಸುಕಿನಲಿ ಜೀವರ
ಹೊಳಹಿನಂತಿರೆ ಬಳಲಿ ಬೆವರುತ
ಬಳಿಕ ಬಂದಾಮರದ ಬುಡವನು ಹಿಡಿದು ಕುಳ್ಳಿದನು ॥ ೧೩

ಮರನ ಹಿಡಿದಲುಗಿದೊಡೆ ಬಿದ್ದರು
ಭರತಕುಲಪಾಲಕರು ನೂರ್ವರು
ವರಮಹಾವಾತದಲಿ ತರುಫಲನಿಕರ ಬೀಳ್ವಂತೆ ।
ಶಿರವೊಡೆದು ಯೊದೆನೊಂದು ಮೊಳಕಾ
ಲ್ಮುರಿದು ಕೈಗಳು ಮುರಿದು ನೆತ್ತರು
ಸುರಿಯೆ ಧೃತರಾಷ್ಟ್ರಂಗೆ ತೋರಿದರಳುತ ಘಾಯವನು ॥ ೧೪

ದುರುಳರೆಲವೋ ನೀವು ಭೀಮನ
ಪರಿಯ ಬಲ್ಲಿರೆ ಯಕಟ ಬೇಡೆಂ
ದರಸ ಬೈದನು ತನ್ನ ಮಕ್ಕಳ ನೋಡಿ ಖಾತಿಯಲಿ ।
ಹಿರಿದು ಹೆಚ್ಚಿತು ವೈರ ಭೀಮಗೆ
ಕುರುಕುಲಾಧಿಪರೊಳಗೆ ಬಾಲ್ಯದ
ಭರದ ಮೊದಲಲಿ ಕೇಳು ಜನಮೇಜಯಮಹೀಪಾಲ ॥ ೧೫

ಭೀಮದುರ್ಯೋಧನರಿಗೆ ವೈರಾಭಿವೃದ್ಧಿ.

ದುರುಳನವನೊಡನಾಡಬೇಡೆಂ
ದರಸ ಸುತರನು ಸಂತವಿಟ್ಟನು
ಹಿರಿದು ಹೆಚ್ಚಿತು ಭೀಮದುರ್ಯೋಧನರಿಗತಿವೈರ ।

ಮರಳಿ ತಾ ವೊಂದಾಗುತೀತನ
ಕರೆದು ವಿವಿಧಕ್ರೀಡೆಯುಲಿ ವ್ಯೈ
ವಂಚಿಸಿ ಭೀಮನ ಕಟ್ಟಿ ಹಾಯ್ಕಿದರೊಂದುಮಡುವಿನಲಿ ॥ ೧೬

ಬಳಿಕ ಕೌರವನಾಕಳಿಂಗನ
ಹುಳುಕು ಮತವನು ಮನದಲಿಕ್ಕಿಯೆ
ಯಿಳೆಯು ಸುರ ಹೇಳಿನ್ನು ಪಾಂಡವರೊಳಗೆ ಭೀಮನನು ।

ಭೀಮನನ್ನು ಕೊಲ್ಲುವ ಉಪಾಯಗಳು.

ಕೊಲುವ ಪರಿ ತಾನೆಂತು ನಮಗೀ
ಬಲುಹು ಸಾಲದದೆನಲು ಭೂಪತಿ
ಕೊಲುವೊಡಿನ್ನೊಂದರಿದೆ ವಿಷವಲ್ಲುದಕದಲ್ಲೆನಲು ॥ ೧೭

ಅರಸ ತಾನೊಂದಿನದಲಾತನ
ಕರೆಸಿ ವಿವಿಧಕ್ರೀಡೆಯುಲಿ ಹಸಿ
ದಿರಿಸಿ ಗಣಪಂಗೆನುತ ಭೀಮನ ಕಟ್ಟಿ ಮಡುವಿನಲಿ ।
ಪರಿಹರಿಸಬೇಕೆಂದು ಯೋಚಿಸಿ
ಕುರುಕುಲೇಂದ್ರನು ಹೇಳೆ ಭೀಮನು
ಪರಿಹರಿಸಪೌತಣವ ಕೊಂಡನು ಬಂದನವರೊಡನೆ ॥ ೧೮

ಬರಲು ಕೌರವವೃಂದ ಭೀಮನ
ಸುರನದಿಯ ಹೊರೆಗವರು ಕರೆದರು
ನಿರುತ ಬಳಿಕವರೆಲ್ಲ ಗಣಪನ ಪೂಜೆ ಮಾಡಿದರು ।
ಭರವಸದಿ ಭೀಮಂಗೆ ತಾ ವಾ
ವರಪ್ರಸಾದವನೀಯೆ ಭಕ್ಷಿಸಿ
ಹಿರಿದು ಪವಡಿಸೆ ಕಟ್ಟಿ ಕೆಡಹಿದರೊಂದುಮಡುವಿನಲಿ ॥ ೧೯

ಹಾ ಸರಿಯೆ ಗುಂಡಿಯುಲಿ ನೂಕಿಯು
ರೋಷವನು ಬಿಟ್ಟೈದೆ ಮರಳಿಚಿ

ಭೂಷೆಗಳ್ ಕೈಕೊಂಡು ಬಂದರು ಪಾಂಡುಸುತನೆಡೆಗೆ ।
ವೈಸಿಕದ ಕಣೆಗಳುಂಟೆ ಕುಂತಿಗ
ಪೊಸು ತಡೆದವು ಭೀಮಸೇನಗೆ
ವ್ಯಸನ ಬರಬೇಕದೆನುತವ ಹೋದರಂಬುನೆಗೆ ॥ ೨೦

ಹಾಸಿ ಬಿದ್ದನ ಕಚ್ಚೆ ಫಣಿಗಳು
ಘಾಸಿ ಮಾಡಲು ಬಚ್ಚಿಕ ವಿಷದಾ
ವೇಷ ತಿಳಿಯಲು ಭೀಮ ಕೊಂದನು ಸರ್ಪಸೋಹರವ ।

ಭೀಮವಾಸುಕಿಸಂವಾದ

ನಾಶ ಮಾಡುತ್ತಿರಲು ಕೈಯಲು
ವಾಸುಗಿಯು ಹರಿತಂದು ಭೀಮಂ
ಗೋಸುಗಸಿಂತೆಂದನೀವಾರಯ್ಯ ಹೇಳೆಮಗ ॥ ೨೧

ನಾನು ಕುಂತೀಸುತನು ಕೌರವ
ಮಾನಸಿಧಿ ವಿಷವಿಕ್ಕಿ ನನ್ನನು
ಮಾನವಿಯು ಬಳಮಾಯ್ಕಿ ಕಡಹಿದರೋಳಗೆ ಸರ್ಪಗಳು ।
ಹೀನವಾನದೊಳಗೆನ್ನ ಕಚ್ಚಿದೊ
ಡಾನು ಕೊಂದೆನು ಸರ್ಪಕುಲವನು
ನೀನು ಕಚ್ಚಲಿಕೀಗ ಬಂದೆಯೊ ಯೋನು ಹೇಳೆಂದ ॥ ೨೨

ಭೀಮನ ಪಾತಾಳಲೋಕಗಮನ.

ನಕ್ಕು ವಾಸುಗಿ ಭೀಮಸೇನನ
ತಕ್ಕಯಿಸಿ ಕೈದಣಿಯೆ ಕುಂತಿಯು
ಮಕ್ಕಳಮೊಗಳಿಯುಂದಿರಪ್ಪರಿ ಮನೆಗೆ ನಡೆಯೆಂದು ॥
ಎಕ್ಕತುಳದಲಿ ಬಂದು ವಾಸುಗಿ
ಯಿಕ್ಕಿದನು ತಾನಮೃತಭೋಜನ
ಶರ್ಕರೆಯು ತಾ ಪುಲ್ಲಬಂಪದ ಸವಿಯು ನೋಡುಸುತ ॥ ೨೩

ಮಾಡಿದನು ತಾನಮೃತಪಾನವ
ಗಾಢಬಲ ಪತ್ತೃಮೃತಕಲಶದಿ
ರೂಢಿಗಚ್ಚರಿಯಾಗಿ ಯಂಗೀಕರಿಸಿದನು ಭೀಮ ।
ತೀಡಿಯಾಯಿತು ತ್ರಾಣ ಕರಿಗಳ
ಪಾಡುಗೊಳ್ಳದ ಬಳದಿನಾಗಲು
ನೋಡಿ ತಕ್ಷಕ ತನ್ನ ಮಗಳನು ಭೀಮಸೇನಂಗೆ ॥ ೨೪

ಪಾತಳಲೋಕದಲ್ಲಿ ಭೀಮನ ವಿವಾಹ.

ವರವಿವಾಹವ ಮಾಡಿ ನುಡಿದನು
ವರವೃಕೋದರ ನಾವು ನಿಮ್ಮಯ
ಹಿರಿಯ ಮಾತಾಮಹರ ಕಡೆ ಕೇಳೆನುತಲಾಫಣಿಪ ॥
ವರಸುತೆಯ ಭೀಮಂಗೆ ಹೇದಿಸಿ
ಯುರಗ ತಕ್ಷಕ ತನ್ನ ಮನೆಯಲಿ
ಮರುತಜನ ನಿಲಿಸಿದನು ಪುನರಪಿಯೊಂದು ಮಾಸವನು ॥ ೨೫

ನಾಗಕನ್ನಿಕೆಯಿಂದ ಭೀಮನು ಅಮೃತಸ್ಥಳವನ್ನು ತಿಳಿಯುವಿಕೆ

ಇರುತಿರಲು ವರಭೀಮ ಕಾಕೋ
ದರನ ಸುತೆಯನು ತಾನು ಕೇಳಿದ
ಸುರರು ಪಾತಾಳದಲಿ ಬೈಚಿಟ್ಟಮೃತವೆಲ್ಲಿಹುದು ।
ಅರಸ ಕೇಳ್ಯಮೃತವದು ತಾ
ನಿರುತ ಭೋಗಾವತಿಯ ಸನಿಹದ
ವರಭವನದಲ್ಲಿಹುದು ಯಕ್ಷರು ಸುರರು ಕಾಯಿಹರು ॥ ೨೬

ಅಲ್ಲಿದ್ದ ಕಾವಲುಗಾರರನ್ನು ಹೊಡೆದು ಅಮೃತಪಾನಮಾಡಿದುದು.

ಎನಲು ಮಾರುತತನಯನಾಕ್ಷಣ
ವನಿತೆ ಹೇಳಲು ಕೇಳಿ ಧಾಳಿಯ
ನನಿಮಿಷರ ಸುಧೆಯಲ್ಲಿಗೈದಿದ ಯಕ್ಷರಾಕ್ಷಸರ ।

ತನುಗಡಿದು ನೂಱೆಂಟುಲಕ್ಷವ
ನನಿಲಸುತನಪ್ಪಳಿಸುತ್ತೈದಿದ
ನನಿಮಿಷಾನ್ನವ ಪೊಗೆದು ಕುಡಿಯಲಿಕಿಂದ್ರ ಕೇಳಿದನು ॥ ೨೭

ದೂಱನಾಕ್ಷಣ ಕೇಳುತಿಂದ್ರನು
ಶಾಱಿಸಿದನನಿಮಿಷರಿಗಮೃತವು
ಸೂಱೆಹೋಯಿತು ಬೇಗ ಹಲ್ಲಣಿಸುವುದು ಸುರನಿಕರ [1] |
ಏಱುವುದು ಕರಿತುರಗರಥಗಳ
ನೇಱು ನಡೆವುದು ಭೋಗವತಿಗೆ
ಗಾಱುಮಾನವನವನ [2] ಹಿಡಿತಹುದೆಂದು ನೇಮಿಸಿದ ॥ ೨೮

ನೇಮಿಸಲು ಬಳಿಕಮರನಿಕರವು
ಭೂಮಿಗಿಳಿಯಿತು ಬಳಿಕಲ್ಲಿಯೆ
ಕಾಮಿಸಿತು ಪಾತಾಳಮಧ್ಯಕ್ಕರಸ ಕೇಳೆಂದ |
ಆಮಹಾಸುರಸೇನೆ ಬಂದಾ
ಭೀಮಸೇನನ ಮುತ್ತಿ ನಾಕಜ
ಸ್ತೋಮವನು ಹುಡಿಗುಟ್ಟಲೋಡಿದುದಿಂದ್ರಮೊದಲಾಗಿ ॥ ೨೯

ಇಂದ್ರಾದಿಗಳು ಸೋತು ಶಿವನನ್ನು ಮರೆಹೊಗುವಿಕೆ.

ಓಡಿ ನಾಕಜಪತಿಯು ಶೂಲಿಯ
ಬೇಡಿಕೊಂಡನು ಜೀಯ ನಮ್ಮನು
ನೋಡಿ ಕೃಪೆಯಿಂದುಳುಹಬೇಹುದೆನಲಿಕೆ ಶಿವನೆಂದ ॥
ಖೇಡತನ ಬಲುಹಾಯ್ತು ನಿಮ್ಮನು
ಕಾಡುವವರಾರೆಂದೊಡಾಗಳ
ರೂಢಿಯಿಂದಿಳಿದೊಬ್ಬ ಮಾನವ ಬಂದನಮೃತವನು ॥ ೩೦

ತೋಡಿ ತಿನಲಿಕೆ ನಾವದಿಲ್ಲಿಗೆ
ಜೋಡು ಮಾಡಿದೆವಲ್ಲಿ ಮನುಜನು
ಕಾಡಿದನು ಹಿರಿದಾಗಿ ನಮ್ಮನು ದೇವ ಕೇಳೆಂದ |

---

1 ಸುರಕರಿಯ, ಖ. 2 ಪೋಱದಾವಮಾನವನ, ಖ.

ಮಾಡುವುದು ನೀವ್ ಬಿಜಯುವಲ್ಲಿಗೆ
ರೂಢಿಗವನುಪಟಳವ ಮಾಣಿಸಿ
ನೋಡಿ ಕಾವುದು ಸುಧೆಯುನೆನಲಿಕೆ ಶಂಭು ಪತಿಕರಿಸಿ ॥ ೩೧

ತನ್ನ ಪರಿವಾರವನು ನಿಲ್ಲಿಸಿ
ಬೆನ್ನಲಾರುವ ಬರಲು ಬೇಡೆನೆ
ತನ್ನ ಸಂಗಡ ಬಂದಳಾಯುಮೆ ಶಿವನು ಕರೆಯಲಿಕೆ ।
ಪನ್ನಗನಭೂಷಣನಿಚಿದಪನು
ಮನ್ನಿಸಿಯೆ ಪಾತಾಳಕಾಗಲು
ಮುನ್ನ ಕಂಡನು ಭೀಮಸೇನನ ರೌದ್ರದಾಕೃತಿಯ ॥ ೩೨

ರುದ್ರ ಭೀಮರ ದ್ವಂದ್ವಯುದ್ಧ.

ಕಂಡು ಕೋಪಾಗ್ನಿಯಲಿ ಕುರುಕುಲ
ದಿಂಡೆಯನು ಮೇಲ್ವಾಯ್ದು ವಕ್ಷವ
ಕೊಂಡು ಕುಲಿಶವು ಶೈಲಕಾಗಲೆ ಯೆಱಗುವಂದದಲಿ ।
ಚಂಡಪರಶುವಿನುತ್ತಮಾಂಗವ
ದಂಡಿಯಲಿ ತಿವಿಯಲ್ಕದಾಹವ
ಚಂಡವಿಕ್ರಮ ತಾನು ತಿವಿದನು ಭೀಮನಂಗವನು ॥ ೩೩

ತಿವಿದೊಡಲನನಿಲಜನು ತತ್ಕ್ಷಣ
ಶಿವನ ವಕ್ಷವನೆಱಗಿ ಮುಷ್ಟಿಯು
ಹವಣ ಕಂಡಾಶಿವನು ವ್ಯಾಘ್ರಾಕಾರ ತಾನಾದ ।
ಪವನಜನ ಕಿಬ್ಬದಿಯಲೆಱಗಿದ
ಶಿವನು ಪೂರಾಯದಲು ಪವನಜ
ನವಯವಕ್ಕದಱ ಕಲೆಯಾಯ್ತಾ ಭೀಮಸೇನನಿಗೆ ॥ ೩೪

ವರವೃಕೋದರನೆಂಬ ನಾಮವು
ನಿರುತವಾಯ್ತುವೆಗಂದು ಬಳಿಕಾ
ವರವೃಕೋದರ ವ್ಯಾಘ್ರದೇವರ ಮೇಲೆ ಕೋಪಿಸಿಯೆ ।

ಕರವಲಾಘಾಯುವನೆ ಯೊರಸುತ
ಹರಿದು ಬಂದಾಹುಲಿಯು ಕಾಲನು
ಮರುತಜನು ಕಯ್ಯಿಕ್ಕಿ ಹಿಡಿದನು ನಿಮಿಷಮಾತ್ರದಲಿ ॥ ೩೫

ಪಾರ್ವತಿಯು ಪ್ರಾರ್ಥಿಸಿದಂತೆ ಶಿವನನ್ನು ಬಿಡುವಿಕೆ.

ಹಿಡಿದು ತಿರ್ರನೆ ತಿರುಹಿ ನೆಲದೊಳು
ಹೊಡೆವ ಸಮಯಕೆ ಕಂಡು ಪಾರ್ವತಿ
ಬಿಡುಬಿಡೆಲೆ ಪವಮಾನನಂದನ ಈತ ಶಿವನು ಕಣಾ ।
ಹೊಡೆಯದಿರು ಹೊಡೆಯದಿರು ನಾಕಜ
ರೊಡೆಯನೀತನು ಮೃಡ ಕಣಾ ಸೀ
ಹೊಡೆಯಲಿಕೆ ಹೊಳ್ಳಹುದು ದೇವಾಸುರಮಹೀತಳವು ॥ ೩೬

ಸುರರ ಕಾರ್ಯಕ್ಕಾಗಿ ಬಂದನು
ಪರಸುಧೆಯ ಕಾಯಲಿಕೆ ಸೀಸಿ
ಹರನನಂಗೀಕರಿಸಿ ಕೊಂಬುದು ಲೋಕ ಮೆಚ್ಚಲಿಕೆ ।
ಹರನ ಯುವತಿಯ ಮಾತ ಮನ್ನಿಸಿ
ಮರುತಜನು ಕಡು ನೊಂದು ಶಿವ ಶಿವ
ಪುರುಳದಾನವಹರನೆ ಕರುಣಾಕರನೆ ಶರಣೆನುತ ॥ ೩೭

ಧರೆಯಲಪ್ಪಳಿಸುಪ್ರದನಾಗಳ
ಪರಿಹರಿಸಿ ತಾ ಭೀಮಸೇನನು
ಪರನನಿಳುಹಿದ ಬಳಿಕ ಭೋಗಾವತಿಯ ಮಾರ್ಗದಲಿ ।
ಹರ ಮಹಾದೇವೆನುತ ಭಕ್ತಿಯ
ಲರಸ ಹರನನು ಹೊಗಳಿ ಮತ್ತಾ
ಪರಸತಿಯ ಶಿವಸಹಿತ ಚರಣಕ್ಕೆರಗಿ ಪೂಜಿಸುತ ॥ ೩೮

ವ್ಯಾಘ್ರೇಶ್ವರ ಪ್ರತಿಷ್ಠೆ

ಸ್ಥಾಪಿಸಿದ ಆ ವ್ಯಾಘ್ರದೇವರ
ರೂಪುಗೊಂಡಿಹುದೆಂದು ರುದ್ರನ
ಕೋಪವನು ನೀರೊಳಗೆ ಕಡಹಿದನರಸ ಕೇಳೆಂದ ।

ಆಪುರಂಗರಮುಖ್ಯನಾಕಜ
ತಾಪವನು ಮೋಣಿಸಿ ಯದಾಗಲೆ
ಯಾಪುರಂದರತನುಜನಣ್ಣನು ಬಂದನಹಿಕಾಲದ ॥ ೩೯

ರಾಜಭವನಕೆ ಬಂದು ತಾ ಸುರ
ರಾಜನನು ಬೀಳ್ಕೊಂಡು ಪಾಂಡವ
ರಾಜಕುವರನು ಬಂದ ಭೋಗಾವತಿಯ ಮಾರ್ಗದಲಿ ।
ರಾಜಭೋಜನ ಮಾಡಿ ಯಮೃತಪ
ತೇಜದಲಿ ಕುರುರಾಯ ಹಾಕಿದ
ವ್ಯಾಜದಲಿ ತಾ ಬಂದನಾಗ ಪ್ರಮಾಣಕೋಟಿಯಲಿ ॥ ೪೦

ಆಪ್ರಮಾಣದ ಕೋಟಿಯಿಂದವೆ
ಸುಪ್ರಮಾಣನು ಬಂದನಾಗಳು
ತಾ ಪ್ರಮಾಣದ ಮಾಸವೆರಡಕ ಕುಂತಿಯಾಲಯಕೆ ।
ಆಪ್ರಭಂಜನಪುತ್ರ ತಡೆದಿರೆ
ಸುಪ್ರಭಂಜನ ಮಾತೆ ಚಿಂತಿಸೆ
ಸುಪ್ರತೀಕಾಂತಕನು ನಹುಸುತಲಾಗಲಿಂತೆಂದ ॥ ೪೧

ಕುಂತಿ ಯೇನೇ ತಾಯೆ ನಿನಗೀ
ಚಿಂತೆ ಯೇಕನೆ ನಿನ್ನ ಕಾಣದ
ಚಿಂತೆಯೆನೆ ಕೌರವನು ನಮ್ಮ ವಿಷಪ್ರಯೋಗದಲಿ ।
ಭ್ರಾಂತಿಗೊಳಿಸಿಯೆ ಗಂಗೆಯುತ್ತರ
ಗೊಂತಿನಲಿ ಕೆಡಹಿದನು ಕೆಡಹಲು
ಕಂತುಪಿತ ರಕ್ಷಿಸಿದನಲ್ಲಿಯೆ ನಮ್ಮ ಕೇಳೆಂದ ॥ ೪೨

ಕುಂತಿಗೆ ಭೀಮ ಬರುವನೆಂದು ವ್ಯಾಸರ ವಚನ.

ಭೀಮ ಬಾರದ ಮುನ್ನ ಕುಂತಿಯು
ಭೀಮ ತಡೆವನದೇಕೆ ಬಾರನು
ಕಾಮುಕರು ಕೌರವರು ಬಂದರದೆಂದು ಮರುಗುತಿರೆ ।

ಭೂಮಿಪತಿ ಕೇಳ್ ಕುಂತಿದೇವಿಯು
ಭೀಮಚಿಂತೆಯನಱಿದು ಮುನಿಗಣ
ಸ್ತೋಮವಂದಿತವ್ಯಾಸ ಬಂದನು ಹಸ್ತಿನಾಪುರಕೆ ॥ ೪೩
ಬಂದ ವೇದವ್ಯಾಸದೇವನ
ವಂದು ಕುಂತಿಗೆ ಹೇೞಿ ಚಿಂತೆಯ
ವಂದುಗವ ಬಿಡಿಸಿದನು ಭೀಮನ ವಿಷಯ ಕತೆಗಳನು ।
ಇಂದು ಮಾಡಿದುದಾತನಾ ಗೋ
ವಿಂದಕರುಣದಿ ವಿಜಯ ನಾಗರ
ಮಂದಿರದೊಳಾಭೀಮ ಮಾಡಿದ ಹದನ ಹೇೞಿದನು ॥ ೪೪
ಇಂದುಧರನನು ಗೆದ್ದು ನಾಗರ
ನಂದನೆಯ ವೈವಾಹವಾದುದ
ನಂದು ನಾಕಜರನ್ನವುಂಡುದನ್ನೈದೆ ಹೇೞಿದನು ।
ಇಂದು ಭೀಮಂಗಿದಿರದಾವನೊ
ಇಂದಿರಾಪತಿಯಂಘ್ರಿಬಲದಲಿ
ಕಂದನಾತನ ಚಿಂತೆ ಬೇಡೌ ತಾಯೆ ನಿನಗೆಂದ ॥ ೪೫
ನಾಳೆ ಯುದಯಕೆ ಭೀಮನೀ ನಿ
ನ್ನಾಲಯಕೆ ಬಹನೆಂದು ಹೇೞಿಯೆ
ಬೀೞುಕೊಂಡನು ಸತ್ಯವತಿಸುತ ಕುಂತಿದೇವಿಯನು ।
ಕೇಳಿದನು ಸೌಬಲನು ಭೀಮನ
ಯೇೞಿಗೆಯನಿಸಿತೆಲ್ಲ [1] ಮೞುಗಿದ
ಕೋಲುಮೞುಮೊನೆಗೊಂಡ ಸರ್ಪನ ಪೋಲು ಚಿಂತಿಸಿದ ॥ ೪೬

ದುರ್ಯೋಧನನ ಚಿಂತೆ.

ಪೇೞಿದನು ಕೌರವರಿಗೆಕ್ಕಟಿ
ಕೇಳಿ ಕೌರವನದಕೆ ತನ್ನಯ
ಕಾಲ ಬಂದನೆ ಯೆನುತ ದುಗಡವ ಹಿಡಿದು ಚಿಂತಿಸಿದ ।

1 ನಿಜಕೇಳಿ, ಕ. ಜ.

ಕಾಲ ನುಂಗನು ಮೇಲೆ ಸರ್ಪ
ವ್ಯಾಳ ನುಂಗದು ಭೀಮಸೇನನ
ಕಾಲಕಿನ್ನೇನೆನುತ ಕೌರವರಾಯ ಖತಿಗೊಂಡು ॥ ೪೭

ವನಿತೆಯನು ಬೆಸಗೊಳಲು ಕುಂತೀ [1]
ವನಿತೆ ನುಡಿದಳು ನಿನ್ನೆ ಭೀಮನು
ಮನೆಗೆ ಬಂದನದಾರು ನೀರೊಳು ಕಟ್ಟಿಕೆಡಹಿದರು ।
ಎನಲು ಕೌರವರಾಯ ಶಪಥವ
ಮನಕೆ ಬಂದುದ ನುಡಿದ ಸಾಕ್ಷಣ
ಜನನಿ ಭೀಮನ ಕಾರ್ಯವೇನುವೆನಱಿಯೆ ತಾನೆಂದ ॥ ೪೮

ತನ್ನ ಸಾಕ್ಷಾಜ್ಞನನಿಸುತೆಯಳ
ಮನ್ನಿಸದೆ ಕೂಡಿದನ ಗತಿಯಹು
ದಿನ್ನೆನಗೊಸೆದು ವರವಿವಾಹಕೆ ಬಾಲೆಗೊಟ್ಟವನ ।
ಕನ್ಯೆಯನು ಕೂಡಿದನ ಗತಿ ತಾ
ತನ್ನನೈದಲಿ ತಾಯೆ ಗುರ್ವಿಣಿ
ಚಿನ್ನೆಯನು ಕೊಂದವನ ಗತಿಗಳು ತನಗೆ ಸಮನಿಸಲಿ ॥ ೪೯

ತಾಯೆ ಭೀಮನ ನಾವು ಕಾಣದೆ
ನೋಯುತಲಿ ಬೆದೆಬೆದೆನೆ ಬೇವುತ
ನಾವು ಬಂದೆವು ಮನೆಗೆ ತತ್ಕ್ಷಣ ನಿಮಗೆ ಹೇಳುತಲಿ ।
ಬಾಯ ಬಿಡುವೆವು ಭೀಮಸೇನನ
ಕಾಯುವೆನು ನೆಱಿ ಕಾಣದೀಗಳ
ಪಾಯದಲ್ಲಿರುತಿರಲಿಕೀಶ್ವರ ನಮಗೆ ಕರುಣಿಸಿದ ॥ ೫೦

ಇಂದು ಬಂದನು ಭೀಮಸೇನನ
ದೆಂದು ಕೇಳಯೆ ಬಂದೆವಿಲ್ಲಿಗೆ
ಯೆಂದು ನಿಮ್ಮಯ ಭೀಮಸೇನನು ಕಾಣಬಾರನೆನೆ ।

---
1 ಮನೆಗೆ ಬಂದಱಿ ಕೇಳೆ ಕುಂತೀ, ಖ.

ಬಂದನೀಕ್ಷಣ ವೀಗ ಗಂಗಾ
ನಂದನನ ವಿದುರಾದಿಭವನಕೆ
ಕಂದ ಗವಿಸಿದನವರ ವಂದಿಸಿ ಹರಕೆಗೊಳಲೆಂದು ॥ ೫೧

ಎನಲು ಕೌರವರಾಯನಾಕ್ಷಣ
ಕನಲಿಕೆಯು ದುಗುಡದಲಿ ಕುಂತೀ
ವನಿತೆಯನೆ ಬೀಳ್ಕೊಂಡು ಬಂದನು ತನ್ನ ಮಂದಿರಕೆ ।
ಅನಿಲಜನ ಘಾತಕ್ಕುಪಾಯುವ
ನೆನೆನೆನೆದು ಮನಗುಂದಿ ಕೌರವ
ಜನಪ ಕಂಡನು ಮತ್ತೆ ವಿಷಗಳನಿಕ್ಕಬೇಕೆನುತ ॥ ೫೨

ಪಾಶವನು ಹರಿದೆದ್ದು ಬಂದತಿ
ರೋಷಿಸಿವನನು ಮತ್ತೆ ತವ್ಮೊಳು
ಭಾಷೆಗಳಲೊಂ [1] ದಾಗಿ ಕೂಡಿದರೊಂದು ದಿವಸದಲಿ ।
ಆಸಿಗನು [2] ವ್ಯೆಮಱಿದು ಹೊತ್ತು ಮ
ಹಾಸುರದ ಫಣಿಗಳಲಿ ಕಚ್ಚಿಸಿ
ಘಾಸಿಮಾಡಲು ಬದುಕಿ ಬೇಸರನಡಿಗಡಿಗೆ ಭೀಮ ॥ ೫೩

ಅರಸ ಕೇಳಾಯುಷ್ಯಮುಳ್ಳಡೆ
ಹರಿಹರಬ್ರಹ್ಮಾದಿಗಳು ಸಂ
ಹರಿಸಲಱಿಯರು ಬಱಿದೆ ದೈನ್ಯಂಬಡುವುದೀಲೋಕ ।
ಭರತವಂಶದ ಬಾಹಿರರು ನಿ
ಮ್ಮರಸುಗಳು ಭೀಮಂಗೆ ಮಾಡಿದ
ಹುರಿಯನಾಹರಿ ಹರಿದ ಪರಿಯನು ಮತ್ತೆ ಕೇಳೆಂದ ॥ ೫೪

ಅರಸ ಕೇಳಾಪೂರ್ವದತ್ತವು
ಹರಿವಿರಿಂಚಿಗಳಳವೆ ಲೋಕದ
ಜರಡರೇತಕೆ ದುಃಖ ಬಡುವರು ದೇಹಧರ್ಮದಲಿ ।

---

1 ವಾಸೆವಮುಱಿದೊಂ, ಕ. ಖ. 2 ಅಸಿತಗ, ಚ. ಟ.

ನಿರುತ ತಾನದು ತಪ್ಪದೈ ಬಾ
ಹಿರರು ನಿವಿಷ್ಟಾಪೂರ್ವಪಿತರೊಳು
ಬರಲು ವಿಷಗೊಡೆ ವಿಧಿಯುಗೆದ್ದುದನಾರು ಬಲ್ಲವರು ॥ ೫೫

ಭೀಮನನ್ನು ಕೊಲ್ಲುವ ಉಪಾಯಚಿಂತನೆ

ಭೀಮ ಬಂದುದ ಕೇಳಿ ಕೌರವ
ಭೂಮಿಪತಿ ಬೆಂಡಾದನಕಟಾ
ಸೋಮಶೇಖರ ದೇವ ಭೀಮನನೇಕೆ ಕಳುಹಿದನೋ ।
ಭೀಮನನು ನಿರ್ನಾಮ ಮಾಡದೆ
ಭೂಮಿಗಟ್ಟಿದ ಮತ್ತೆ ನಾವೀ
ಭೀಮನಾಶನಕೇನ ಮಾಡುವೆವೆಂದ ಸೌಬಲನು ॥ ೫೬

ಕೇಳಿ ತಾ ಕೆಕ್ಕರಿಸಿ ನೋಡಿಯೆ
ಹೇಳಿದನು ಮತ್ತೊಂದನಾಗಳು
ಯೋಚಿಗೆಯು ವಿಷದನುವನಾಗಳ ಭೂಪ ಕೇಳೆಂದ ।
ಕೇಳರೈ ವಿಷ ಭೀಮಸೇನಗೆ
ಕಾಲವೆಹುದಲ್ಲೆಂಬ ಮಾತನು
ಖೂಳರವದಿರು ಮೇಲುಗಾಣದ ಪರಿಯು ಕೇಳೆಂದ ॥ ೫೭

ಕಾಳಕೂಟ ಹಲಾಹಲವು ಕಾ
ಕೋಲೀಳ ದಾರದ ವತ್ಸನಾಭಿ ಕ
ರಾಳಸೌರಾಷ್ಟ್ರ ಕವಶಲ್ಕಲ [1] ಸುಪ್ರದೀಪನವ ।
ಹೇಳಲರಿದೆನಿಪೆಂಟು ವಿಷವನು
ಮೇಳವಿಸಿ ಬಟಿಕುಚದ ಮಧುರವಿ
ಶಾಲವಸ್ತುಗಳಿಂದ ಕಜ್ಜಾಯಗಳ ಮಾಡಿಸಿದ ॥ ೫೮

ದಿಟ್ಟಸಿದರೆವೆ ಸೀವುದಂಗೈ
ಮುಟ್ಟದರೆ ಯುರಿದಪ್ಪುದು [2] ಬಟ್ಟಕವ
ನಟ್ಟ ಕೈಚಳಕದ ಸುವಾರದ ವಿದ್ಯೆಯೇನರಿದೋ ।

---

1 ಕರಶೌಕ್ಲಿಕ, ಕ. ಟ. 2 ಹುಗಳಹುದು, ಚ. ಟ.

ವಿಷಾನ್ನವನ್ನು ತಿಂದು ಮತ್ತು ಕೌರವರನ್ನು ಸೋಲಿಸುವಿಕೆ.

ಕೊಟ್ಟರೀತಂಗೆಲ್ಲವೆನು ಜಗ
ಜಟ್ಟಿ ಹಾಯ್ಕೊಂಡು ನುಣ್ಣನೆ
ಚಿಟ್ಟುಮುಳಿಯಾಟದಲಿ ಸದೆದನು ಮತ್ತೆ ಕೌರವನ ॥ ೫೯

ಮಡುವಿನಲಿ ಹಾಯ್ಕಿದಿರಿ ಹಾವಿನ
ಯೆಡೆಯುತಂದೊಳಿದಿರಿ [1] ಬಲ್ವಿಷ
ಪಡಿಗೆಗಳ ಮೆಲಿಸಿದಿರಿ ಬಲ್ಲಂದದ ವಿಕಾರದಲಿ ।
ಕೆಡಲನುವ ಮಾಡಿದಿರಿ ನೂರ್ವರ
ಕೆಡಹಿ ಶಾಕಿನಿಯರಿಗೆ ರಕ್ತವ
ಕುಡಿಸಿದಲ್ಲದೆ ಬಿಳಿದೆ ಬಿಡುವೆನೆ ಯೆಂದನಾಭೀಮ ॥ ೬೦

ಬಳಗೆ ಬಳೆದುದು ವೈರಶಿಖಿ ಕಡೆ
ಗೆಳಸೆ ಹಾಯ್ದುದು ಜನನಿಜನಕರ
ಬಲುನುಡಿಗಳಲಿ ನೂರ್ವರಿರ್ದರು ಶಕುನಿಮತವಿಡಿದು ।
ಖಳಕಳಂಗನ ನೀತಿಮತದಲಿ
ಬಲುಹುಗುಂದದೆ ಪಾಂಡುಪುತ್ರರ
ನೆಳಲ ಸೈರಿಸದೆನುತ ತಮ್ಮೊಳು ಸುಯ್ದು ದುಗುಡದಲಿ ॥ ೬೧

ಇರುತ ಕುಂತೀಸುತರ ನೆಕ್ಕಟಿ
ನಿರುತ ಬುದ್ಧಿಯುನಱುಹಿ ಧರ್ಮದ
ಹೊಱಗೆ ತಪ್ಪದೆ ನಡೆಸುತಿರ್ದರು ಲೋಕ ಮೆಚ್ಚಲಿಕೆ ।
ದುರುಳರುಪಟಳಕಂಜಲಾಗದು
ಹಿರಿದು ಸೈರಿಸನಂಬುಜಾಕ್ಷನು
ಪರಿಹರಿಸಿ ತಾ ಕೊಡುವನಗಣಿತಸುಖಸಮೂಹವನು ॥ ೬೨

ಅಂದು ಮೊದಲಾಗವರು ವಿದುರನ
ದೊಂದಮಾತನು ಮೀಱಿ ನಡೆಯರು
ಮಂದಮತಿಗಳು ಶಕುನಿಮತದಲಿ ದುಷ್ಟಮಂತ್ರವನು ।

---

[1] ಹೆಡೆಯುತಂಪೋದಿರಿ, ಕ. ಚ. ಟ.

ಎಂದು ಬಿಡದವರ್ಕೈದೆ ಮಾಡುವ
ರಂದು ಮೊದಲಾಗರಸ ಪಾಂಡುವ
ನಂದನರಿಗಾಕೌರವಾದಿಗಳಂದನಾಮುನಿಪ ‖ ೬೩

ಹುಳುಕು ನೀತಿಗಳಾಕಳಿಂಗನ
ನೊಲಿದು ಕೇಳುವ ಕೌರವೇಂದ್ರನು
ಹುಳುಕುಹೊದ್ದದ ವಿದುರನೀತಿಯಲಿಹರು ಪಾಂಡವರು ।
ಬಲುಹು ಗುಂದದೆ ಭೀಷ್ಮವಿದುರರ
ಬಳಕೆಯಲಿ ತಾವೆಡಗಿ ಗುಣದಲಿ
ಕೆಲರು ಮೆಚ್ಚಿ ವಿಭಾಡಿಸುವನಾಭೀಮ ಕೌರವರ ‖ ೬೪

ಧರ್ಮಾದಿಗಳಿಗೆ ಕೃಪಾಚಾರ್ಯರಿಂದ ಶಸ್ತ್ರಾಭ್ಯಾಸ.

ಆಟದಲಿ ತೊಡಗಿದರು ಮೊದಲಲಿ
ತೋಟಿಯೆನೆ ಸಾಕಾತಗಳ ಕಾ
ಲಾಟವನು ನಿಲಿಸುವೆನು ಶಸ್ತ್ರಾಸ್ತ್ರಗಳ ಸಂಗದಲಿ ।
ಆಟವಿಕರೊಡನಾಡಿ ಬಲಿದೊಳ
ತೋಟಿ ಬಱಿದೇ ಬಿಡದು ಮೃತ್ಯುವಿ
ನೂಟ ಮುಂದಿಹುದೆನುತ ಮನದಲಿ ಭೀಷ್ಮ ಚಿಂತಿಸಿದ [1] ‖ ೬೫

ಧರಣಿಪತಿ ಚಿತ್ತೈಸು ಗೌತಮ
ವರಋುಷಿಗೆ ಜನಿಸಿದ ಶರದ್ವನು
ಪರಮಋುಷಿಯಾಋುಷಿ ತಪೋವನದೊಳಗೆ ಧನುಸಹಿತ ।
ಇರುತ ಕಂಡನು ದೈವಗತಿಯಲಿ
ಸುರವಧುವನಾಕ್ಷಣಕೆ ಕಾಮ
ಜ್ವರಿತನಾದನು ಚಲಿಸಿತಾತನ ವೀರ್ಯವವನಿಯಲಿ ‖ ೬೬

ಅದು ಶರಸ್ತಂಬದಲಿ ನೆಲೆಯಾ
ಮಮ ಮುನಿಚ್ಯುತವೀರ್ಯ ಮುನಿಸುತ

---

[1] ಕಳಕಳಗುಂದಿದನು ಭೀಷ್ಮ, ಚ. ಟ.

ರುದಿಸಿದರು ಶಂತನುಮಹೀಪತಿ ಕಂಡು ಕೃಪೆಯಿಂದ |
ಸದನದಲಿ ವಧುವಿಂದ ಸಾಕಿದ
ಮುದದಿ ಕೃಪನೆಂದಿಟ್ಟು ಹೆಸರನು
ಕದನಬಲುಹಿನ ಕೃಪನ ಕರೆಸಿದ ಭೀಷ್ಮ ಹರುಷದಲಿ || ೬೭

ಆಕೃಪಾಚಾರಿಯನ ದೆಸೆಯಿಂ
ದೀಕುಮಾರರು ನಿಖಿಳತರ್ಕ
ವ್ಯಾಕರಣಮೊದಲಾದ ಚೌದಶವಿದ್ಯಗಳನಱಿದು |
ನಾಲ್ಕುವೇದದ ಸಕಲಶಾಸ್ತ್ರಕ
ಳಾಕಳೆಯಲಿ ಪ್ರವೀಣರಾದರು
ಲೋಕದಲಿ ಧನುನಿಪುಣರಾರೆಂದರಸಿದನು ಭೀಷ್ಮ || ೬೮

ದ್ರೋಣಾಚಾರ್ಯರ ಜನನ

ಮುನಿಭರದ್ವಾಜಾಖ್ಯನಿದ್ದನು
ಘನತಪೋನಿಷ್ಠೆಯಲಿ ದಿವಿಜಾಂ
ಗನೆಯ ಕಂಡನು ಘಾಯವಡೆದನು ಮದನನೆಸುಗೆಯಲಿ |
ತನುಪರಿಚ್ಯುತವೀರ್ಯ ಬೀಳಲು [1]
ಕನಕಕಳಸದೊಳಿರಿಸಲಲ್ಲಿಯೆ
ಜನಿಸಿದನು ದ್ರೋಣಾಭಿಧಾನದಿ ಮುನಿಯ ದೆಸೆಯಿಂದ || ೬೯

ದ್ರೋಣಕಲಶದೊಳಾದ ದೆಸೆಯಿಂ
ದ್ರೋಣನಾದನು ಬಳಿಕ ಮುನಿಯೂ
ದ್ರೋಣಗುಪನಯನಾದಿವಿಪ್ರಕ್ರಿಯೆಗಳನು ಮಾಡಿ |
ದ್ರೋಣನೊಡನೋದಿದ [2] ನೃಪಾಲ
ಶ್ರೇಣಿಯನು ಶಸ್ತ್ರಾಸ್ತ್ರಕಳೆಯಲಿ
ಜಾಣರನು ಮಾಡಿದನು ಭಾರದ್ವಾಜಮುನಿಯೊಲಿದು || ೭೦

[1] ಮನುಸ[illegible]ಜ ಟ,   [2] ದಿಸಿ, ಜು ಟ,

ದ್ರುಪದಜನನ

ದ್ರೋಣನುದವಿಸಿದಾದಿನ ಸುಪ
ರ್ವಾಣಿಯಲಿ ಜನಿಸಿದ ನೃಪಾಲ
ಶ್ರೇಣಿನಾಶಕ ದ್ರುಪದ ಹುಟ್ಟಿದ ಪಾದತಳದಿಂದ ।
ಕ್ಷೀಣಮತಿ ತಾ ಹುಟ್ಟಿದಾಗಳೆ
ಕ್ಷೋಣಿಯಲಿ ತನಗನುವ ಕಾಣದೆ
ದ್ರೋಣಪಿತನನು ಸಾರಿ ಬದುಕಿದ ಹಲವು ಕಾಲದಲಿ ॥ ೭೧

ದ್ರೋಣದ್ರುಪದರದೊಂದು ಠಾವಿನ
ಬಾಣವಿದ್ಯೆಯ ಕಲಿತು ಜಗದಲಿ
ಜಾಣರಾದರು ಸಕಲವಿದ್ಯಾಬ್ರಹ್ಮವಿದ್ಯೆಯಲಿ ।
ಕೇಣವಿಲ್ಲದೆ ಸಕಲಶಾಸ್ತ್ರಪ್ರ
ವೀಣರಾದರು ನಾಲ್ಕುವರ್ಣಕೆ
ದ್ರೋಣಕೃಪರಿಂಗೊಬ್ಬ ಗುರು ಭೂಪಾಲ ಕೇಳೆಂದ ॥ ೭೨

ಕೃಪನನುಜೆಯನು ತಂದು * ದ್ರೋಣಗೆ
ವಿಪುಳವೈವಾಹವನು ಮಾಡಿದ
ನೃಪತಿ * ಬಂದೀದ್ರೋಣನೊಡನಱಿದನು ಧನುಶ್ಶ್ರುತಿಯ ।

ಅಶ್ವತ್ಥಾಮ ಜನನ

ಕೃಪೆಯಲಿ ದ್ರೋಣಂಗೆ ಜನಿಸಿದ
ನಪರಶಂಕರರೂಪನಾಹವ
ನಿಪುಣನಶ್ವತ್ಥಾಮ ಭಾರದ್ವಾಜಗೋತ್ರದಲಿ ॥ ೭೩

ಹುಟ್ಟಿದಾಗಳೆ ದ್ರೋಣಪುತ್ರನು
ನೆಟ್ಟನಶ್ವತ್ಥಾಮದಲಿ ತಾ
ಬಿಟ್ಟು ಹರಿದನು ಶೀಘ್ರಗತಿಯಲಿ ಕೃಪೆಯ ಮನೆಯಿಂದ ।

---

* ದ್ರೋಣಂಗುಪಯಮವ ಮಾಡಿದನು ಪಾರ್ಷತ ನೃಪತಿ

ನೆಟ್ಟನಾಮಗ ಹರಿಯಲಿಕೆ ಜಗ
ಜಟ್ಟಿಯನು ಹಿಡಿತಂದು ಮನೆಯ
ಲ್ಲಿಟ್ಟನಾಮವನೀತನಶ್ವತ್ಥಾಮ ತಾನೆಂದು ॥ ೨೪

ತಂದೆಯಲಿ ಶ್ರಮಮಾಡಿದೀನೃಪ
ವೃಂದಸಹಿತೀದ್ರೋಣದ್ರುಪದರ
ದಿಂದುಧರನವತಾರಕಿತ್ತರು ಸಕಲಪರಿಕಯನು ।
ಅಂದು ಶರಕವಚವನು ದ್ರೋಣಗೆ
ತಂದು ಭಾರದ್ವಾಜನಿತ್ತನು
ನಂದನಗೆ ಬಟಿಕಿನ್ನು ಮುಂದಣ ಕಥೆಯ ಕೇಳೆಂದ ॥ ೨೫

ದ್ರೋಣರಿಂದ ರಾಜ್ಯಲಾಭ ಸೂಚನೆ.

ದ್ರೋಣನಾಶ್ರಮದೊಳಗೆ ದ್ರುಪದನು
ಕ್ಷೀಣಕಳೆಗಳಲಿರಲು ಕಂಡಾ
ದ್ರೋಣನೆಂದನು ನೀನು ಚಿಂತಿಸಬೇಡ ನಿನಗಿನ್ನು ।
ಮಾಣದಿಪ್ಪತ್ತೊಂದು ದಿನದಲಿ
ಕಾಣಬಹುದೈ ನಿನಗೊಡೆಯತನ
ಕೇಣವಿಲ್ಲದೆ ಯಿಲ್ಲಿ ತಾ ಪಾಂಚಾಲದೇಶದಲಿ ॥ ೨೬

ದ್ರೋಣರಿಗೆ ಅರ್ಧ ರಾಜ್ಯದಾನಪ್ರತಿಜ್ಞಾ

ಎನಲು ಸಂತೋಷದಲಿ ದ್ರುಪದನು
ಮುನಿಗೆ ನುಡಿದನು ನಿಮಗೆ ರಾಜ್ಯವ
ವಿನಯದಲಿ ಸರಿಭಾಗವೀವೆನು ದ್ರೋಣ ಕೇಳೆನಲು ।

ದ್ರುಪದಗೆ ರಾಜ್ಯಲಾಭ

ಜನಪ ಕೇಳಾಚೆಯಲಿ ಪಾರ್ಷತ
ಜನಪನಿರಲಿಕ್ಕನುಜರಾತನ
ತನತನಗೆ ನೃಪತನಕೆ ಹೋರಲಿಕಾಗ ಮಂತ್ರಿಗಳು ॥ ೨೭

ವಿನಯದಲಿ ಗಜಬಜವ ಮಾಡಿಸಿ
ಜನಪತಿಯು ಮದಕರಿಯನರ್ಚಿಸಿ
ಜನಪತಿತ್ವಕೆ ನಾವು ಬಿಡಲಿಕದಾರ ಕೈಕೊಂಡು |
ಮನೆಗೆ ತರುವುದೊ ಆತನೇ ನೃಪ
ನೆನಲು ಖತಿಯನು ಮಾಣ್ದು ಹಸ್ತಿಯು
ಜನಪನನುಜರು ಬಿಡಲಿಕಾಗಜ ಬಂದು ದ್ರುಪದನನು ‖ ೭೮

ಅಂದು ಕಂಡುದು ಪುರದ ಬಾಹ್ಯದ
ಲೊಂದು ದೇವಾಲಯದ ಮಧ್ಯದ
ಗೊಂದಿಯಲಿ ತಾ ದ್ರುಪದನೊಳಗಿರೆ ಭದ್ರಗಜ ಬಂದು |
ಚಂದದಲಿ ಪಾರ್ಷತನನೆಬ್ಬಿಸಿ
ತಂದು ರಾಜಾಲಯವ ಹೊಗಸಲಿ
ಕಂದು ವರರಾಜ್ಯಾಭಿಷೇಕವ ಧರಿಸಿದನು ದ್ರುಪದ ‖ ೭೯

ದ್ರೋಣಾಚಾರ್ಯರು ಪರಶುರಾಮರ ಬಳಿ ಬರುವಿಕೆ.

ಇತ್ತ ದ್ರೋಣನ ಪಿತನು ತಾ ಸುರ
ರತ್ತ ಸರಿದನು ಬಳಿಕ ಕಳಸಜ
ತತ್ತಪೋವನದಲ್ಲಿ ಜನಕಕ್ರಿಯೆ[1]ಗಳನು ಮಾಡಿ |
ಹೊತ್ತ ದಾರಿದ್ರ್ಯದಲಿ ಮನಮಱು
ಗುತ್ತ ದೇಶಾಂತರದೊಳಗೆ ತೊಳ
ಲುತ್ತ ಬಂದನು ಮಗ ಸಹಿತ ಹೇರಡವಿಯಲಿ ದ್ರೋಣ ‖ ೮೦

ಪರಶುರಾಮಾಶ್ರಮಕೆ ಮುನಿಯೈ
ತರಲು ಭಾರದ್ವಾಜನನು ಸ
ತ್ಕರಿಸಿ ನುಡಿದನು ಜಾಮದಗ್ನ್ಯನು ಮಧುರವಚನದಲಿ |
ಧರೆಯನಿತ್ತೆನು ನಾನು ದ್ವಿಜರಿಗೆ

---

1 ಯೂರ್ಧ್ವಕ್ರಿಯೆ, ಖ. ಚ, ಟ,

ಶರಧಿಯೊಳಗಿರ್ದಪೆನು ನಿಮ್ಮಯ
ಪರಮಮುನಿಯಾತಿಥ್ಯಪೂಜೆಗಭಾಗ್ಯ ತಾನೆಂದ ॥ ೮೧

ದ್ರೋಣಪರಶುರಾಮರ ಸಂಭಾಷಣ.

ವಿನಯದಲಿ ನೀ ಬಂದ ಬರವೇ
ನೆನಲು ದ್ರೋಣನು ಜೀಯ ಬಿನ್ನಹ
ಯೆನಗೆ ತಾನೀಸುತನು ಜನಿಸಿದೊಡಿವಗೆ ಹಯನಿಲ್ಲ ।
ತನುಜನೀತನು ಹಾಲ ಬೇಡುತ
ಮನೆಯೊಳಗೆ ಕಡು ಕಾಡುತಿರಲಿಕೆ
ವನಿತೆ ಯೆಮ್ಮಯ ಭಿಕ್ಷದನ್ನವ ಕದಡಿ ಕುಡಿಸುವಳು ॥ ೮೨

ಕುಡಿದು ಸುಖದಲ್ಲಿರಲಿಕೊಂದಿನ
ದೊಡನೆ ಯಾಡುತ ನೃಪನು ಕಂಡನು
ಕುಡಿಸಿದನು ತಾ ತನ್ನ ಮನೆಯಲಿ ಹಾಲುತುಪ್ಪವನು ।
ಕುಡಿದು ಮಱುದಿನ ಯಾವನಾಳದ
ಪುಡಿಯ ಕದಡನು ಕುಡಿಯಲೊಲ್ಲದೆ
ಕೆಡಹಿ ಕಳದನು ಯಾಳಿಯಾಡುತವಳುತ ಹೋರುತಿರೆ ॥ ೮೩

ಇರಲಿಕಾಗಲು ನಾನು ಬಂದೆನು
ಪರಿವಿಡಿಯಲಾತನುಜನಳುತಿರೆ
ನಿರುತದಲ್ಲಿಂತೆಂದು ಕೃಪಿ ತಾ ನುಡಿದಳೆನ್ನೊಡನೆ ।
ತರುಣನಿಗೆ ನೀವೊಂದುಧೇನುವ
ತರಲಿಕೊಲ್ಲಿರಿ ಯೆಂದು ಬುದ್ಧಿಯ
ಮೆಱೆಯಲಿಕೆ ನಾ ಬಂದೆನಿಲ್ಲಿಗೆ ನಿಮ್ಮ ಬೇಡಲಿಕೆ ॥ ೮೪

ಎನಗೆ ವ್ರತವೊಂದಿಹುದು ಮಾನವ [1]
ಜನದೊಡನೆ ದಾನವನು ಕೊಳ್ಳೆನು

1 ರಾಜನ, ಖ.

ವನಜಲೋಚನ ನಿಮ್ಮ ಧೇನುವ ಬೇಡ ಬಂದೆನೆನೆ ।
ಎನಲು ಭಾರ್ಗವರಾಮನೆಂದನು
ನಿನಗೆ ಕೊಡುವೊಡೆ ಧೇನು ನಮ್ಮ
ಲ್ಲ ನಿತದಿದ್ದೈಸುವನು ಧರಣಿಯಮರರಿಗರ್ಪಿಸಿದೆ ॥ ೮೫

ಧನರಹಿತ ನಾ ಹೊತ್ತ ಭಾರಿಯ
ಧನುವಿದೊಂದಿದೆ ದಿವ್ಯಶರವಿದೆ
ಮನಕೆ ಬಂದೊಡೆ ವರಿಸಿ ನೀವೆನೆ[1] ದ್ರೋಣ ನಸುನಗುತ ।

ಶಸ್ತ್ರಾದ್ಯಭ್ಯಾಸವನ್ನು ವರಿಸುವಿಕೆ.

ಎನಗೆ ನಿಮ್ಮಡಿಗಳ ಕೃಪಾಲೋ
ಕನದಲುತ್ಸವವಾಯ್ತು[2] ಲೋಕದ
ಜನಮನೋರಂಜನವೆ ಬೇಹುದು ಶರವ ಕೊಡಿ ಯೆಂದ॥ ೮೬

ಆಮಹಾನಿಸ್ಸೀಮಋಷಿಗಾ
ಸೋಮಶೇಖರಗಿದಿರಿಗಾಣೆನು
ಭೂಮಿಯಲಿ ಸರಿಯಿಲ್ಲ ಖರಸಂಗ್ರಾಮಭೂಮಿಯಲಿ ।
ಆಮಹಾಭಾರತದ ಯುದ್ಧದ
ಹೋಮದಲಿ ನೀ ವರಸದಸ್ಯನ
ದೀಮಹಾವರವೈಷ್ಣವಾಸ್ತ್ರವ ಕೊಳ್ಳು ನೀನೆಂದ ॥ ೮೭

ಬಳಿಕ ಭಾರದ್ವಾಜಸುತ ತಾ
ನೊಲಿದು ಕೊಂಡನು ದಿವ್ಯಬಾಣವ
ನಿಳೆಯ ಭಾರವನಿಳುಹಲಾಯಿತಿದೆನುತ ಕೈಕೊಂಡ ।
ಜಲಧಿಯಲಿ ಮಿಂದಗ್ನಿಕಾರ್ಯವ
ನೊಲಿದು ಮಾಡಿಯೆ ಬಂದು ಗುರುವಿನ
ಬಳಿಯನಾಂತುಱೆ ಬಾಣವಿದ್ಯೆಯ ಕಂಡು ಹರ್ಷಿಸಿದ ॥ ೮೮

ಇವು ಮಹಾನಿಸ್ಸೀಮತರವೈ
ಷ್ಣವವಲೇ ದಿವ್ಯಾಸ್ತ್ರಚಯಗಳ

1 ಬಂದುವರಿಸುನೀನೆನೆ. ಚ. ಟ. 2 ವಲೇಪರಿಯಾಪ್ತಿ, ಚ. ಟ.

ನವೆರು ಕೊಟ್ಟರು ಕೊಂಡನುಚಿತವಿಧಾನದಲಿ ದ್ರೋಣ |
ಇವು ಮಹಾರಣರಂಗದಲಿ ಶಾ
ತ್ರವನಿವಾರಣವೈಸಲೆವಿಮ್ಮಾ
ವ್ಯವಹೃತಿಗೆ ತಾನೇನುಪಾಯವೆನುತ್ತ ಚಿಂತಿಸಿದ || ೪೯

ದ್ರೋಣನು ದ್ರುಪದರಾಯನ ಬಳಿ ಬರುವಿಕೆ.

ಮಗನೆ ಬಲ್ಲೈ ದ್ರುಪದಭೂಪತಿ
ಮಗುವುತನದಿಂದೆಮ್ಮ ಸಖವ್ರೋ
ಲಗಿಸುವಾತನದೊಲಿದು ಸಲಹುವ[1] ಮಿತ್ರಭಾವದಲಿ |
ಪ್ರಗುವ ನಡೆ ಪಾಂಚಾಲರಾಯನ
ನಗರಿಯನು ನಾವೆಂದು ಮುನಿವರ
ಳಿಗಳ ಮಣಿಯನು ಬೀಳುಕೊಂಡನು ರೇಣುಕಾಸುತನ || ೫೦

ಬಂದನೀತನು ದ್ರುಪದರಾಯನ
ಮಂದಿರಕ್ಕಾ ಬಾಗಿಲಾಳ ಕೊ
ಳೆಂದನೆಲವೋ ನಾವು ನಿಮ್ಮರಸಂಗೆ ಪೂರ್ವದಲಿ |
ಸಂಗ ಮಿತ್ರರು ದ್ರೋಣಮುನಿಪತಿ
ಯೆಂದು ನಮ್ಮಭಿಧಾನವನು ಪೇ
ಳೆಂದು ಕಳುಹಲು ಬಂದು ಬಿನ್ನಹಮಾಡಿದರು ಪದನ || ೫೧

ಐಶ್ವರ್ಯಮದಾಂಧ ದ್ರುಪದರಾಯನ ಉಪೇಕ್ಷೆ.

ಸಿರಿಯ ಮದದಧಿಕಪ್ರತಾಪ
ಜ್ವರದ ಮದಪಾದಲಾದ ಮದಸಂ
ಕರದ ರಜದಲಿ ಮಾಸಿತೀತನ ಮನದ ಮಡಿವರ್ಗ |
ತಿರಿವ ಹಾರುವನೊಡನೆ ಭೂಮೀ
ಶ್ವರರಿಗೆತ್ತಣ ಮೈತ್ರಿ ಹೋಗಲಿ
ಕರೆಯಬೇಡೆನೆ ಬಂದು ಬಾಗಿಲವನ ನಿವಾರಿಸಿದ || ೫೨

---

1 ನೆವು ನಾವಲ್ಲಿ ಸಲಹನೆ, ಟ.

ಮೆಱೆದನೇ ತಪ್ಪೇನು ನಾವ್ ಕಂ
ಡಱಿಹಿ ಮರಳುವೆವೈ ಸಲೇ ಯೆಂ
ದುಱುಬಿದೊಡೆ ತಱುಬಿದರು ಕಂಬಿಯನಿಕ್ಕಿ ಬಾಗಿಲಲಿ ।
ಒಱೆಯನುಗುಳಿಚಿ ಖಡುಗದಲಿ ಬಿಡೆ
ತರಿದನಿಕ್ಕೆಲದವರನೋಲಗ
ಶರವಣಿಸಿದನು ಮುಂದೆ ನಿಂದನು ದ್ರುಪದಭೂಪತಿಯ ‖ ೯೩

ಏನೆಲವೊ ಪಾಂಚಾಲ ಚಿಕ್ಕಂ
ದಾನು ನೀನೊಂದಾಗಿ ತಂದೆಯೊ
ಳೇನ ಕಲಿತೆವು ಮಱೆದು ಕಳದೈ ಹಾ ಮಹಾದೇವ ।
ಏನು ಬಂದಿರಿ ಯೆಂಬ ಗುಣವಚ
ನಾನುರಾಗವೆ ಸಾಲದೇ ಧನ
ವೇನು ಫಲ ಕಕ್ಕುಲಿತೆ ನಮಗಿಲ್ಲೆಂದನಾದ್ರೋಣ ‖ ೯೪

ಸೂರಿಗಳಗತಿಮೂರ್ಖರಿಗೆ ಗಂ
ಭೀರರಿಗೆ ಭಂಡರಿಗೆ ವೇದಾ
ಚಾರಸಂಯುಕ್ತರಿಗನಾಚಾರಪ್ರಸಕ್ತರಿಗೆ [1]
ಧೀರರಿಗೆ ಹಂದೆಗಳಿಗೆತ್ತಣ
ಸೇಱುವೆಗಳ್ತೆ ಭೂಪತಿಗೆ ಬಡ
ಶಾರುವರಿಗೆತ್ತಣದು ಸಖತನವೆಂದನಾದ್ರುಪದ ‖ ೯೫

ಆಗ ದ್ರೋಣಾಚಾರ್ಯರ ಪ್ರತಿಜ್ಞೆ.

ಎಲವೊ ನಿನ್ನಾಸ್ಥಾನಸಹಿತೀ
ಪೊಳಲ ಸುಡುವೆನು ನಿನ್ನ ಸೀಱೆಯ
ಬಲಿಯ ಕೊಡುವೆನು ಭೂತಗಣಕಿದಿರಲ್ಲ ನೀನೆನಗೆ ।
ಕಲಿತವಿದ್ಯೆಯ ಕೋಲ ಮಕ್ಕಳ

---

[1] ಪ್ರಶಸ್ತರಿಗೆ, ಕ. ೨.

ಕಳುಹಿ ಕಟ್ಟಿಸಿ ವಾಮಪಾದದಿ
ತಲೆಯನೊದೆವೆನು ಮಱೆಯದಿರು ನೀನೆಂದನಾದ್ರೋಣ ॥ ೯೬

ಎಂದು ಗರ್ಜಿಸಿ ಮಗ ಸಹಿತ ಮನ [1]
ನೊಂದು ಮುನಿ ಮರಳಿದನು ಜನಪದ
ವೃಂದ ಪಲವನು ಕಳೆದು ಬಂದನು ಹಸ್ತಿನಾಪುರಕೆ ।
ಅಂದು ಸಕಲಕುಮಾರಕರು ನಲ
ವಿಂದ ನಗರಿಯ ಹೊಱಗೆ ಗುಱಿಗಳ
ಮುಂದುವರಿದೆಸುಗೆಲೆಸದಿರೆ ಕಂಡನಾದ್ರೋಣ ॥ ೯೭

ಬೆರಸಿದನು ನೆರವಿಯಲಿ ನೋಡು
ತ್ತಿರೆ ಯುಧಿಷ್ಠಿರನೃಪನ ಹರಳುಂ
ಗುರವಿಘಾತಿಯಲುಗಿದುಬಿದ್ದುದಗಾಧಕೂಪದಲಿ ।
ನೆರೆದು ತಡಿಯಲಿ ನಿಂದು ನೋಱ್ತ
ವರು ನಿರೀಕ್ಷಿಸಿ ಸಾಧ್ಯವಲ್ಲೆನು
ತಿರೆ ಮಗಂಗೆ ಮುನೀಂದ್ರನೆಂದನು ಬೇಗ ತೆಗೆಯೆಂದು [1] ॥ ೯೮

ಸರಳ ತೊಡಚಿ ತದೀಯಮೊಣೆಬಂ
ಧುರದ ಮುದ್ರಿಕೆಗೆಚ್ಚನಾಗಳು [2]
ಶರಶಳವಹಿಳುಕಿನಲಿಕಣೆ ಕಣೆಯನು [3] ನಿಬಂಧದಲಿ ।
ಸರಳ ಸಂದರ್ಭದಲಿ ನಿಮಿಷಾಂ
ತರಕೆ ಫಣಿಪನ ಹೆಡೆವೆಣಿಯನು
ಧರಿಸುವಂತಿರೆ ತೆಗೆದು ಬಿಸುಟನು ರತ್ನಮುದ್ರಿಕೆಯ ॥ ೯೯

ಕಂಡು ಬೆಱಗಾದುದು ಕುಮಾರರ
ತಂಡ ತನತನಗೈದಿ ಭೀಷ್ಮನ
ನಂಡಲೆದುದೀ ಮುನಿಯ ನಿಂದೇ [4] ಸಂತವಿಡಿಯೆಂದು ।

---

1 ಭಾಷೆಯುಮಾಡಿತನ್ನಯ್ಯ, ಚ. ಟ 2 ಹಿಳುಕಿನ, ಟ.
3 ಶಿರಕೆ ಶರವಾಹಿಳುಕಿನಲಿ ಕನಿರೆಯುಚ್ಚ. ಟ. 4 ನೀಗಲೆ, ಖ.

ಚಂಡಭುಜಬಲನವರ ಕಾಣಿಸಿ
ಕೊಂಡು ಕೊಟ್ಟನು ಭೀಷ್ಮನವರಿಗ
ಖಂಡವಿಭವವನತುಳಧನಪತಿಯಾದನಾ ದ್ರೋಣ ॥ ೧೦೦

ವರಮುಹೂರ್ತದೊಳವರ ಸೂಟ್ಯ
ವರನು ಕೊಟ್ಟನು ಶಸ್ತ್ರವಿದ್ಯಾ
ಪರಿಣತರ ಮಾಡೆಂದು ದ್ರೋಣನ ಕೈಯ್ಯಲಾ ಭೀಷ್ಮ ।
ಗರುಡಿಕಟ್ಟಿತು ಮೂಱುಯೋಜನ
ವರೆಯು ವಿಸ್ತಾರದಲಿ ಸಾವಿರ
ಕುಱಿಯು ಹೊಯ್ದರು ಪೂಜಸಿದರಾ ಚತುರಚಂಡಿಕೆಯು ॥೧೦೧

ಗರುಡಿ ಪೂಜಾವಿಧಿಯು ಸಮನಂ
ತರದಲನಿಬರು ಚಾಪವಿದ್ಯೆಗೆ
ನಿರತರಾಗಲು[1] ಕೇಳಿದರಂ ನಾನಾದಿಗಂತದಲಿ ।
ಬರುತಲಿರ್ದರು ಕೂಡೆ ಹಸ್ತಿನ
ಪುರಕೆ ವಿದ್ಯಾರ್ಥಿಗಳು ಪಾರ್ಥಿವ
ವರಕುಮಾರರು ಬಂದು ಕಂಡರು ಶಸ್ತ್ರ ಪಂಡಿತನ ॥ ೧೦೨

ರಾಯಬಲ್ಲೆ ಹಿಂದೆ [2] ಶಿಶುವನು
ತಾಯಿ ಬಿಸುಟಳು ಗಂಗೆಯಲಿ ರಾ
ಧೇಯನಾದನು ರಾಧೆಯೆಂಬವಳೊಲಿದು ಸಲುಹಿದೊಡೆ ।
ಆಯುಗತಿಗಳ ಪರಿಯನಾತನ
ರಾಯ ಕೇಳ್ಕೆ ಕರ್ಣ ಗಾದಿನ
ದಾಯುಗಂಡವು ಹಿಂದೆ ಮೂವತ್ತಾಱು ವತ್ಸರವು ॥ ೧೦೩

ಅಂದಿಗೈತಂದಿಭಪುರಿಯ ನೃಪ
ಮಂದಿರಕೆ ಬಂದಲ್ಲಿ ದ್ರೋಣನ
ದ್ವಂದ್ವಚರಣಕೆ ಕಯ್ಯ ಮುಗಿದನು ಗುರುವೆ ಕೇಳೆಂದ ।

---

1 ಸಮವತೊಡಗಿದರರ ಸುಮಕ್ಕಳು, ಚ. ಟ.　　2 ಮುನ್ನ, ಟ.

ಇಂದು ನಮಗೀ ಶಸ್ತ್ರವಿದ್ಯೆಯು
ತಂದೆ ಕಲಿಸುವುದೆನಲು ದ್ರೋಣನ
ದೆಂದನೆಲವೋ ನೀನು ಸೂತನು ಕಲಿಯುತರವಲ್ಲ ॥ ೧೦೪

ಎನಲು ತಿರುಗಿದ ಕರ್ಣನಾಕ್ಷಣ
ತನುವನಂಗೀಕರಿಸಿ ಕೊಂಡನು
ವಿನುತಭೂಸುರರೂಪಿನಂದದಿ ಬಂದು ಭಾರ್ಗವನ ।
ವನದ ಮಧ್ಯಕೆ ಬಂದು ರೇಣುಕ
ತನುಜಗೆಱಗಿದೊಡಾತ ಕೇಳಿದ
ಮನುಜರಾರೈನೀವದೆಂದೊಡೆ ನಾನು ಭೂಸುರನು ॥ ೧೦೫

ಎನಗೆ ನಿಮ್ಮಯ ಚಾಪವಿದ್ಯೆಯ
ನನುಕರಿಸಬೇಕೆನಲು ಭಾರ್ಗವ
ಮನವೊಲಿದು ತಾ ನಿತ್ತ ನಾನಾಶಸ್ತ್ರಕೌಶಲವ ।
ಮನಕೆ ಹತ್ತೆಯವಾದ ಶಿಷ್ಯನ
ವನದೊಳೊಂದಿನ ಕರೆದು ಜಾನುವ
ತನಗೆ ತಲೆದಿಂಬಾಗಿ ಮಲಗಿದ ತ್ರಿಗುಣವರ್ಜಿತನು ॥ ೧೦೬

ಇರಲಿಕಿಂದ್ರನು ಕರ್ಣಶಸ್ತ್ರದ
ಪರಿಯನಱಿದಂತಾಗ ಶಾಪವ
ಧರಿಸಿ ಕೀಟಕನಾಗಿ ಕರ್ಣನ ತೊಡೆಯ ಛಿದ್ರಿಸಿದ ।
ಗುರುಗಳಿಗೆ ತಾ ನಿದ್ರೆ ಭಂಗವು
ದೊರಕುವುದು ತಾ ನಲುಗಿದೊಡೆ ತಾ
ನಿರುತವೆಂದಾಗಳುಕದಿರ್ದನು ಕರ್ಣನೊಂದುದಿನ ॥ ೧೦೭

ತೀಡಿ ತೊಡೆಯನು ಕೊಱೆದು ರಾಮನ
ನೀಡಿಱಿದು ತೊಡೆಯೆರಡ ಮುಟ್ಟಲು
ನೋಡಿದನು ರಾಧೇಯನಿರವನು ತೊಡೆಯ ಘಾಯವನು ।

ಮೂಡಿತರುಣಾಂಬುವಿನ ನದಿಯಿದು
ಕೂಡಿ ಕೊಱಿದುದದೇಕೆ ತಾಳ್ದನೊ
ರೂಢಿಯಲಿ ದ್ವಿಜಜಾತಿಯುಚ್ಚರಿ ಸೀನದಾರೆಂದ ॥ ೧೦೯

ಎನಲು ಕರ್ಣನು ನಾನು ಸೂತನ
ತನುಜ ನಿಮ್ಮಲಿ ಧನುವಿನಭ್ಯಾ
ಸನುವ ಕಲಿತೆನು ಮನಕೆ ಬಂದುದ ಕೊಡುವುದೆನಗೆಂದ ।
ಎನಲು ರಾಮನು ಕೊಟ್ಟ ಶಾಪವ
ನಿನಗದವಸರಕೊದವಿದಂದಿಗೆ
ವಿನುತ ನಮ್ಮಯ ಮಂತ್ರ ಮಱೆಯಲಿ ಹೋಗು ನೀನೆಂದ ॥ ೧೧೦

ಆಯುಗತಿಯಿಂ ಪರಶುರಾಮನ
ಲಾಯುಧಶ್ರಮಗಲಿತು ಬಳಿಕದು
ವಾಯುವಾಯಿತು ಬಂದ ನೀಗಜಪುರಿಗೆ ಕಲಿಕರ್ಣ ।
ರಾಯಗುರುವಿನ ಹೊರೆಗೆ ಹೋಗದೆ
ರಾಯನಱಿಯದೆ ಕರ್ಣ ಕೌರವ
ರಾಯನೆಗರಿಯ ಬಂದು ಹೊಕ್ಕನು ವರುಷವೆರಡಱಲಿ ॥ ೧೧೧

ಬಂದು ಹಸ್ತಿನಪುರಕೆ ರಾಧಾ
ನಂದನನು ದುರ್ಯೋಧನನನ್ಯೈ
ತಂದು ಕಂಡನು ಕೌರವೇಶ್ವರ ಹಿರಿದು ಮನ್ನಿಸಿದ ।
ಅಂದು ಮೊದಲಾಗವರ ಸಖ್ಯಕೆ
ಸಂದ ಕಾಣೆನು ಕರ್ಣಕುರುಪತಿ
ಗೊಂದೆ ಜೀವನವೊಂದೆ ಮತಮನವೊಂದೆ [1] ಕೇಳೆಂದ ॥ ೧೧೨

ಬೇಟೆ ಕರ್ಣನಕೂಡೆ ಹಗಲಿರು
ಳಾಟ ಕರ್ಣನ ಕೂಡೆ ಷಡುರಸ
ದೂಟ ಕರ್ಣನ ಕೂಡೆ ಶಸ್ತ್ರಾಭ್ಯಾಸ ವಿವನೊಡನೆ ।

1 ಮತವದುಭೂಪ, ಕ.

ಬೇಟ ಮನದಲಿ ನಗೆಯು ಮಧುರದ
ನೋಟ ಕಣ್ಣಲಿ ಬಲಿದವರಕೂ
ಡಾಟಗಳಲಿವರಿಬ್ಬರೊಂದೆನಿಸಿದರು ಜಗವಱಿಯೆ ॥ ೧೧೩

ಸುರಗಿ ಸಬಳ ಕಠಾರಿಯುಬ್ಬಣ
ಹರಿಗೆಹಿರಿಗದೆ ಬಹುದೃಢಾಯುಧ
ಪರಿಘ ಚಕ್ರ ಮುಸುಂಡಿ ತೋಮರಭಿಂಡಿವಾಳಚಯ ।
ಪರಶು ಕಕ್ಕಡೆ ಮುಸಲ ಮುದ್ಗರ
ವರಧನುರ್ದಂಡಾದಿಶಸ್ತ್ರಾ
ಸ್ತ್ರದಲನಿಬರು ಕುಶಲರಾದರು ಮುನಿಯ ಗರುಡಿಯಲಿ ॥ ೧೧೪

ಜನಪ ಕೇಳ್ಭೀಮದುರ್ಯೋ
ಧನರು ಗದೆಯಲಿ ಮಿಗಿಲು ಕರ್ಣಾ
ರ್ಜುನರು ಧನುವಿನಲಧಿಕರಾದರು ನೃಪಕುಮಾರರಲಿ ।
ತನತನಗೆ ಸರ್ವಾಯುಧಂಗಳ
ಲನಿಬರಱಿತರು ಕೂಡೆ ಗುರುವಿನ
ಮನಕೆ ಹತ್ತೆಯವಾದನರ್ಜುನ ಶಸ್ತ್ರಶಿಕ್ಷೆಯಲಿ ॥ ೧೧೫

ಒಂದುದಿನ ಫಲುಗುಣನ ಭೋಜನ
ದಂದವನು ತಾ ವಱಿಯಲಿಕೆಯರ
ವಿಂದವದನೆಯು ಕೈಯ್ಯ ದೀಪವನಿರುಳು ಬೀಸಿಸಿದ ।
ಸಂದಕತ್ತಲೆಯೊಂದು ಮಾಣದೆ
ಯುಂದು ಮುಣಲಿಕೆ ಕಂಪ ಬಾರ್ಕೈ
ಸಂದ ನಿಶಿಯೊಳಗೂಟವೇನೆನಲಿದಕೆ ಬೆಳಕೇಕೆ ॥ ೧೧೬

ಎನಲು ದ್ರೋಣನು ಮೆಚ್ಚಿ ಪಾರ್ಥಗೆ
ಮನವೊಲಿದು ತಾನೆಂದನೆಲವೋ
ಪೀನುತಗುಱಿಗಳ ತಱಿವೆಠಾವಿಗೆ ನಯನ ಬೇಡೆಂದು ।

ಎನುತ ತಿರುಗಿದ ದ್ರೋಣ ಮನೆಗೆಯು
ನೆನೆಯುತದನಾಪಾರ್ಥ ಹಿಡಿದನು
ಮನದೊಳುತ್ಸಾಹಿಸುತ ಮಾಡಿದ ಲಕ್ಷ್ಯವಿದ್ಯೆಯಲಿ ॥ ೧೧೩

ಮಾಡಿದನು ಗರುಡಿಯಲಿ ಶ್ರಮವನು
ನೋಡಿದರೆ ಗುಣಿಯಿಸುವ ವಿದ್ಯೆಯು
ರೂಢಿಯೊಳಗದು ಚೋದ್ಯವೆನಿಸಿತು ಪಾರ್ಥ ಮಾಡಿದುದು ।
ಮಾಡುತಿರಲೊಂದಿನದೊಳೊಬ್ಬನು
ಬೇಡ ಬಂದನು ವ್ಯಾಧ ಧನುವನು
ರೂಢಿನೃಪರಾಚಾರ್ಯರೆಂದಪರೇಕಲವ್ಯಂಗೆ ॥ ೧೧೮

ನೀನು ಬೇಡನು ನಿನಗೆ ವಿದ್ಯೆಯು
ನಾನು ಕಲಿಸಲು ಬಾರದೆಂದೊಡೆ
ಹೀನಮನದಲಿ ಮರಳಿದನು ತಾ ಕಾನನಂಗಳಿಗೆ ।
ಏನ ಮಾಡುವೆನೆನುತ ಮೃಣ್ಮಯ
ಮಾನವಾಕೃತಿ ಮಾಡಿ ದ್ರೋಣನ
ತಾನು ಪೂಜಿಸಿ ಶ್ರಮವ ಮಾಡಿದೊತಾಯ್ತು ಧನುರ್ವಿದ್ಯೆ ॥ ೧೧೯

ನಾಗಪುರದರಸುಗಳ ಮಕ್ಕಳ
ಬಾಗಿಸಿತು ಬಿಲುವಿದ್ಯೆ ಲೋಕದ
ಭೋಗಿನೃಪರತ್ನಜರ ವಿದ್ಯೆಯದೇಕಲವ್ಯನಲಿ ।
ಬಾಗಿ ಹೋಯಿತು ಹೋದರೊಂದಿನ
ನಾಗಪುರದರಸುಗಳ ಮಕ್ಕಳು
ಹೋಗಿ ಬೇಟೆಯನಾಡುತಿರಲಾ ರಾಯಧರ್ಮಜನ ॥ ೧೨೦

ನಾಯಿ ಹೊಕ್ಕಿತದೇಕಲವ್ಯನ
ಯಾಯುಧಂಗಳ ದಿವ್ಯಶಾಲೆಯ
ಧ್ಯಾಯಮಾಡಲು ನಾಯ ದನಿಯನು ಕೇಳಿ ಗುಣಿಮಾಡಿ ।

ನಾಯು ಬಾಯುನು ತುಂಬೆ ಬಾಣವ
ರಾಯು ಕಟಕಾಚಾರ್ಯನೆನುತಾ
ಧ್ಯಾಯುವಮಾಡಿದನೇಕಚಿತ್ತದಲಾಗ ಗುರುಪದವ ॥ ೧೨೧

ಬಟ್ಟಿಕ ಬಾಯಲಿ ತುಂಬೆ ಬಾಣವ
ದಳುಕಿ ತಿರುಗಿತು ನಾಯಿ ಪಾಂಡವ
ತಿಲಕರಲ್ಲಿಗೆ ಬರಲು ಪಾರ್ಥನು ಕಂಡು ಬೆಱಗಾಗಿ ।
ಎಲೆ ಗುರುವೆ ತಾ ಶಬ್ದ ವೇಧೆಯು
ಬಲುಹು ನಮಗೀವಿದ್ಯೆ ಶೂನ್ಯವ
ದಿಳೆಯೊಳಬ್ಬ ವಸಾರು ಹೇಳಿದನೆಂದೊಡಿಂತೆಂದ ॥ ೧೨೨

ಏಕಲವ್ಯನು ನಮ್ಮ ಶಿಷ್ಯನು
ವೇಕಚಿತ್ತದೊಳೆಮ್ಮ ಪೂಜಿಸೆ
ಲೋಕಪತಿ ಹರಿ ಮೆಚ್ಚಿ ಕೊಟ್ಟನು ವಿದ್ಯೆಯಿದನೆಂದ ।
ಆಕುಮಾರರ ನಿಲಿಸಿ ಬಲದೊಳ
ಗೇಕಲವ್ಯನ ಹೊರೆಗೆ ದ್ರೋಣನ
ದೇಕಚಿತ್ತದಿ ಬರಲು ಕಂಡನು ಗುರುವಿಗಿದಿರಾಗಿ ॥ ೧೨೩

ಕಂಡು ಪೂಜಿಸಿ ಯೆನ್ನಳೊಂದುವ
ಕೊಂಡು ಬದುಕಿಸಬೇಕು ಶಿಷ್ಯರ
ತಂಡದಲಿ ತಾನಧಮನೆಂದರೆ ದ್ರೋಣನಿಂತೆಂದ ।
ಕಂಡಱಿಯೆವಿದನಿನ್ನ ಭಾವವ
ಹಿಂಡು ಶಿಷ್ಯರೊಳಧಿಕ ನೀನೇ
ಗಂಡುಗಲಿ ನಮಗೀಗ ಕೊಡು ಕೊಡು ನಿನ್ನ ಹೆಬ್ಬೆರಳ ॥ ೧೨೪

ಎಂದೊಡಾಗಲೆ ಕಡಿದು ಗುರುಗಳ
ಗಂದು ವೇಧಿಸೆ ತನ್ನ ಹೆಬ್ಬೆರ
ಳೊಂದುವನು ಬಟಿಕದಱಿನಾತಗೆ ಸತ್ವ ಗತವಾಗೆ ।

ಮುಂದೆ ಮರ್ತ್ಯರಿಗೈದೆ ಹಿಂದಣ
ಛಂದ ಕಂಗಳಲೆಸೆಯಲಾಯಿತ
ದಂದು ದ್ರೋಣಸುಮೇಕಲವ್ಯನ ಶಬ್ದವೇಧೆಯನು ॥ ೧೨೪

ಬಂದು ಕೆಡಿಸಿಯೆ ಮರಳೆ ಶಿಷ್ಯರ
ವೃಂದಸಹಿತೈದಿದಪನಿಭಪುರಿ
ಗಂದು ಮಱುದಿನ ತನ್ನ ಮುನ್ನಿನ ಗರುಡಿಯೊಳಗಿರ್ದ ।
ಬಂದು ಭೀಮಾದಿಗಳು ಕೌರವ
ವೃಂದ ನಾನಾಭೂಪನಂದನ
ರಂದು ಗುರುವಿಂಗೆಱಗಿ ಕಲಿತರು ಸಕಲವಿದ್ಯೆಗಳ [1] ॥ ೧೨೫

ಹದಿನೇಳನೆಯ ಸಂಧಿ ಮುಗಿದುದು.

ಹದಿನೆಂಟನೆಯ ಸಂಧಿ.

ಸೂಚನೆ.

ರಾಯಕಟಕಾಚಾರ್ಯನಿಂದ ವಿ
ಘಾಯದಲಿ ನೊಂದಗ್ನಿಮುಖದಲಿ
ರಾಯದ್ರುಪದನು ಪಡೆದ ಧೃಷ್ಟದ್ಯುಮ್ನದ್ರೌಪದಿಯ ॥

ಧರ್ಮಾದಿಗಳ ವಿದ್ಯಾಭ್ಯಾಸಕ್ರಮ.

ಕೇಳು ಜನಮೇಜಯಧರಿತ್ರೀ
ಪಾಲ ಕಲಿತರು ನಿಮ್ಮಪೂರ್ವನೃ
ಪಾಲಕರು ಶಸ್ತ್ರಾಸ್ತ್ರಸಾಂಗೋಪಾಂಗವಿಧಿಸಹಿತ [2] ।

1 ತಮತಮವಿದ್ಯೆಯುಳಿವಟ್ಟು. ಖ.

2 ಸರಹಸ್ಯಸಾಂಗೋಪಾಂಗವಿದ್ಯೆಗಳ, ಚ.

ಸ್ಥೂಲದಲಿ ಸೂಕ್ಷ್ಮದಲಿ ಬಹಳವಿ
ಶಾಲದಲಿ ಸಂಕೋಚದಲಿ
ಲಘುಪಾಳಿಯ ವಿಹಾರದಲಿ [1] ವಿವಿಧಾಸ್ತ್ರಪ್ರಯೋಗದಲಿ ॥ ೧

ಎಡಬಲದ ಪಯಣದ ಮಹಾಬಲ [2]
ದೊಡನೆ ತೋಱುವ ಕುಶಲವಿದ್ಯೆಯ [3]
ಪಡೆಯ [4] ದುವ್ವಾಳಿಗಳ ಸೂಟಿಯ ಸರಳ ಸೋಹೆಗಳ ।
ಕಡುಗಲಿಗಳೇಱಾಟದಲಿ ಮಿಗೆ
ಜಡಪಾವರು ಖಡ್ಗಹಸ್ತಾದಿ [5]
ಬಿಡುವವರ ರೇವಂತರಗ್ಗಳರಾವರ್ಯೆಯುವರು ॥ ೨

ನಗವನೊಡ್ಡಿದರೊಂದು ಶರದಲಿ
ಹುಗಿಲುಗಳವ ವಿದೂರಪಾತದಿ
ಗಗನವಂತವ ನೆಸೆವ ಜೋದರ ವಿದ್ಯೆಗಳ ಮಿಗುವ ।
ಉಗಿವ ಬಿಡುವೆಡಬಲನ ಬವರಿಯ
ಲಗಿವ ಲವಣಿಯ ದಂತಿಶಿಕ್ಷೆಗೆ
ಮಿಗಿಲು ಭಗದತ್ತಾದಿಗಳಿಗೆಂದುದು ಕುಮಾರಕರ ॥ ೩

ರಥವ ರಕ್ಷಿಸಿಕೊಂಡು ನಿಜಸಾ
ರಥಿಯ ಕಾಯಿದು ಮುಂದೆ ಹೊಡಿದ
ರಥಹಯಂಗಳ ತನುಗಳಲಿ ಮಸೆಗಾಣದಂದದಲಿ ।
ಪ್ರತಿಭಟನ ಶಸ್ತ್ರಾಸ್ತ್ರವನು ರಿಪು
ರಥಿಕರನು ಸಮರದಲಿ ಜಯಿಸುವ
ರಥಿಕವಿದ್ಯೆಯೊಳವರ ಸರಿ ಸುರನರರೊಳಿಲ್ಲೆಂದ ॥ ೪

---

1 ಸಂಹಾರದಲಿ, ಖ. ಜ.
2 ಣಾಮುಜೊಳಹಿನ, ಚ.
3 ಕಹಲತೆರಮಯುದಲಿ ಖರಿವಯ, ಚ.
4 ಬಿಡೆಯ, ಚ.
5 ಝುಡಿಪವಾದ ದೃಢಾಯುತಿಕಗಿದು, ಚ.

ಧನುರ್ಧಾರಿಗಳಲ್ಲಿ ಉತ್ತಮರನ್ನು ತಿಳಿಯಲು ದ್ರೋಣಾಚಾರ್ಯ ಕೃತಪರೀಕ್ಷೆ.

ಇನಿಬರೊಳು ಬಿಲುಗಾರನಾರ
ರ್ಜುನನೊ ಕರ್ಣನೊ ಭೀಮ ದುರ್ಯೋ
ಧನರೊ ಮೇಣ್ ಮಾದ್ರೇಯರೊ [1] ದುಶ್ಶಾಸನಾದಿಗಳೊ |
ಮನದ ಬಯಕೆಯ ಕಾಂಬುದೀ ಲೋ
ಚನದಲೆನುತಲಿ ದ್ರೋಣನಾಗಲು
ವಿನುತಗುರು ರಚಿಸಿದನು ಲಕ್ಷ್ಯವನೊಂದುವೃಕ್ಷದಲಿ || ೫

ಕಾಣಬಾರದು ಲಕ್ಷ್ಯಭೇದವ
ಜಾಣಭಟರಿಗೆ ಕಟ್ಟ ದೊರೆಯಿದು
ಕಾಣಿಸಿದರ್ಕೈ ಹೂಣಿಸಿದರ್ಕೈ ಹೂಡಿದಂಬಿನಲಿ
ಕಾಣಿರೇ ಕರ್ಣಾದಿಸುಭಟ
ಶ್ರೇಣಿ ನೀವೆನೆ ಗುರುವಿನಣಕಪ
ನಾಣೆಯಿಟ್ಟವೊಲೆಚ್ಚು ಲಕ್ಷ್ಯವ ಕೆಡಿಪಿದನು ಪಾರ್ಥ || ೬

ದ್ರೋಣ ತನ್ನಯ ಶಿಷ್ಯವರ್ಗ
ಶ್ರೇಣಿಯನು ಮೇಳವಿಸಿ ಸುರನದಿ
ತಾಣದಲಿ ಬರಲೊಂದು ವೃಕ್ಷದ ಕೆಳಗೆ ಕುಳ್ಳಿರಲು |
ಜಾಣಸುಯೋಧನನು ಸೌಬಲ
ದ್ರೋಣ ನದಿಸುತ ವಿದುರ ನಾನಾ [2]
ಕ್ಷೋಣಿಪರ ವರಕುವರ ಪಾರ್ಥನದೊಬ್ಬ ಹಿಂದಿರಲು || ೭

ರಾಯಕಟಕಾಚಾರ್ಯ ಪಾರ್ಥಗೆ
ಪ್ರಿಯದಲಿ ವೆಚಸಿಸಿದನನಿಬರ
ನಾಯತದಿ ನಮಗಟ್ಟಕಳೆಯನು ಕೊಂಡು ಬಾಯೆಂದ |

---

1 ಧನನೊಮಾದ್ರೀ ಸುತರೊ ಮೇಣ್, ಕ. 2 ನಾಗಾಂಗೇಯವಿಧುರ, ಖ. ಜ.

ಅಯುತದಿ ನವೆಗಟ್ಟಕಳೆಯುನು
ಪಾಯದಲಿ ಕ್ಷಿತಿಗಿಳುಹದಿಲ್ಲಿಗೆ
ತಾ ಯೆನುತ ಸುರನದಿಯ ತೀರಕ್ಕೆಂದು ಬೆಸನಿತ್ತ ॥ ೮

ಬರಬರಲು ತಾನೊಂದು ವೃಕ್ಷದ
ಹೊರೆಯ ಸಾಲು ಪರಮಸುಖದೊಳ
ಗಿರುತ ದ್ರೋಣನು ರಾಯಕುವರರ ಕರೆತು ವಚನಿಸಿದ ।
ಮರದ ತುದಿಗೊಂಬಿನಲಿ ತೋಱುವ
ವರತಳಿರ ನೆಲೆ ನಿಕರವೊಂದೊಂ
ದಱಲಿ ಛಿದ್ರವ ಮಾಡಲೆಸುವುದು ನೋಡಿದಪೆ ನಾನು ॥ ೯

ಎಂದೊಡಾಕ್ಷಣ ರಾಜಪುತ್ರರ
ದಂದು ದ್ರೋಣನು ನೋಡಲೆಸೆದಪ
ರಂಧಕನ ಸುತಮುಖ್ಯಸೂರ್ಯನ ಸೂನುವೊದಲಾಗಿ ।
ಬಂದೆಲೆಯಲೊಂದೊಂದುಛಿದ್ರವ
ನಂದೆ ಯೆಸೆಯಲು ಬೞಿಕ ದ್ರೋಣನು
ಬಂದು ನಿರ್ವಾಣಾಪಗಹನವ ಮಾಡಲನುವಾದ ॥ ೧೦

ಹಿಂದೆ ಪಾರ್ಥನು ಗುರುಗಳಾಜ್ಞೆಯ
ನಂದು ಕೇಳಿಯೆ ಯಟ್ಟಕಳೆಯನ
ದೊಂದುಬಟ್ಟಲ ತುಂಬಿ ತನ್ನಯ ಬಿಲ್ಲುಕೋಲಗಳ ।
ಅಂದು ತರುತಿರೆ ಮುಂದೆ ಬರಬರ
ಲೊಂದು ತರುವಿನ ಕೆಳಗೆ ರಾಜರ
ವೃಂದಕುಳ್ಳರ್ದ ಛಂದವನು ತಾನಱಿದು ಮರಗೊನೆಯ ॥ ೧೧

ನರನು ಕಂಡನದೆಲೆಯಳೊಂದೊಂ
ದಱಲಿ ಛಿದ್ರವನೆಸುಗೆಯನು ತಾ
ಸುರಪನಂದನನೊಂದು ಕೈಯಲಿ ಬಿಲ್ಲನೇಱಿಸುತ ।

ಗುರುವಿನಾಜ್ಞೆಯೊಳಿಬುಹೆ ಬಟ್ಟಲ
ಧರೆಯೊಳಾಕ್ಷಣಕೊಂದುಕೈಯ್ಯಲಿ
ಸರಳಸಾರವ ಹೂಡಿ ಯೆಚ್ಚನು ವಳಗಳ್ಳಸುವೆನು ॥ ೧೨

ಎಲೆಯೆಲೆಯು ಪ್ರತ್ಯೇಕ ಛಿದ್ರವು
ನೆಲೆಯುಲಾಯಿತು ಬಟಕ ಫಲುಗುಣ
ಘಟಿಲನೈತಂದಿತ್ತ ಗುರುವಿಗೆ ತೈಲನಾಳಿಸಿಯು ।
ಬಲಿದು ಗುರುವಭ್ಯಂಗ ಮಾಡಿಯು
ಬಟಕ ಶಿಷ್ಯರ ತಂಡದಿಂದವೆ
ಹೊಬಲಿಗೈತರುತಲ್ಲಿ ಕಂಡನು ಮೊದಲಮಾರ್ಗದಲಿ ॥ ೧೩

ಮರನ ಯೆಲೆಗಳಿಗೆರಡು ಛಿದ್ರವ
ಗುರು ನದೀಸುತ ಕಂಡು ಪಾರ್ಥನ
ಕರೆದು ಕೇಳಿದನಂದು ಫಲುಗುಣ ನಿರುತವಚನವನು ।
ಪರಿಕ್ರಮಿಸುವೆರಡೆರಡುಛಿದ್ರವ
ನೊ ಛೆದಪೆನು ತಾನಾದ ಮೊದಲಲಿ
ಗುರುವಿನಾಜ್ಞೆಯೊಳಚ್ಚರೀ ನೃಪತನಯರೊಂದೆಲೆಯು ॥ ೧೪

ಎಚ್ಚೊಡೊಂದೊಂದಾಯ್ತು ಛಿದ್ರವು
ಸಿಶ್ಚಯದೊಳೊಂದೊಂದು ಬಟಕಿವೆ
ನೆಚ್ಚನಿದೆ ಯೆರಡೆರಡು ಛಿದ್ರವನಾರು ಮಾಡಿದರು ।
ಮುಚ್ಚದಿರು ನೀನೆಚ್ಚಯಾದೊಡೆ
ಸಚ್ಚಿದಾನಂದೈಕನಾಣೆಯು
ನಿಚ್ಚಯುವ ಹೇಳೆಂದು ಪಾರ್ಥನ ಕೇಳಿದನು ಭೀಷ್ಮ ॥ ೧೫

ಎಂದೊಡರ್ಜುನ ಹೇಳ್ದನಾ ಬರು
ತೊಂದುಛಿದ್ರವ ಕಂಡೆನೆಲೆಗಳ
ವೃಂದದಲಿ ನಮ್ಮವರ್ಗಳಸೆಗಸರೆನುತಲಾನೆಚ್ಚೆ ।

ಎಂದೊಡಾಗುರು ಪಾರ್ಥಗೆಂದನು
ಕಂದನಾವೆಂದುದನು ಮೆಚ್ಚಿದೈ
ಯೆಂದೊಡೆಂದನು ನಾನು ಬಟ್ಟಲನಿಱುಹದಿವನೆಚ್ಚೆ ॥ ೧೬

ಇಱಿಹುದಿದ ನೀನೆಚ್ಚ ಪರಿಯುನ
ದೊಲಿದು ತೋಱೈಯೀಗ ನಮಗೆನೆ
ಘಟಿಲನಾ ಕಲಿಪಾರ್ಥ ತೋಱಿದ ಶಸ್ತ್ರಕೌಶಲವ ।

ಅರ್ಜುನನ ಶಸ್ತ್ರಕೌಶಲವನ್ನು ದ್ರೋಣನು ಸ್ತುತಿಸುವಿಕೆ.

ಅಲುಗಿಸದೆ ಬಟ್ಟಲನು ವೊಳಕ್ಕೈ
ಯೊಳಗೆ ಯಿರಿಕಿದೆ ರಡುಹಸ್ತಂ
ಗಳಲಿ ಚಾಪದ ತಿರುವನೇಱಿಸಿ ಶರವ ತೊಡಚಿದನು ॥ ೧೭

ಎಸೆಯಲಾಗುರು ಭೀಷ್ಮಮೊದಲಾ
ಶಶಿಕುಲರು ಕೊಂಡಾಡೆ ಕಳಶಜ
ನೊಸೆದು ಹರುಷಿಸಿ ಪಾರ್ಥಗೇವಗದಾರು ಸರಿಯೆಂದ ।
ಎಸೆವ ಕೈಚಳಕವನು ಕೌರವ
ಪ್ರಸರವಱಿದುದು ಕರ್ಣಮೊದಲಾ
ಗಸಮಬಲ ಕಲಿಪಾರ್ಥ [1] ಮೆಚ್ಚಿಸಿದನು ನದೀಸುತನ ॥ ೧೮

ಕಂದಪಾರ್ಥಗೆ ಸುಭಟಶ್ರೇಣೀ
ವೃಂದ ಸರಿಯೇ ತ್ರಿಪುರಭಂಜನ
ನಿಂದು ಶಿಷ್ಯನು ಯುಹನು ಫಲುಗುಣನೆಂದು ಕೊಂಡಾಡಿ ।

ಅರ್ಜುನನಿಗೆ ದ್ರೋಣರು ಸಕಲವಿದ್ಯಾದಾನ ಮಾಡಿದುದು.

ಅಂದು ಗುರು ಮನವೊಲಿದು ಪಾರ್ಥನ
ನಂದವಿಟ್ಟನು ತನ್ನ ವಿದ್ಯಾ
ವೃಂದವನು ತಾನೀವೆನೆನುತಲಿ ದ್ರೋಣ ಹರುಷಿಸಿದ ॥ ೧೯

1 ಗಸಮಬಲರುಭಯಿಸಲು, ಖ.

ಹಿರಿದು ಮೆಚ್ಚಿ ಧನಂಜಯನನಾ
ದರಿಸಿ ಕೊಟ್ಟನು ಸಕಲವಿದ್ಯೆಯ
ನುರುತರಪ್ರೇಮದಲಿ ಮತ್ತೊಂದೆರವನಿಂತೆಂದ |
ಧುರದೊಳಗೆ ನಿನ್ನಲ್ಲಿ ಸೆಣಸಿದ
ಸುರನರೋರಗನಿಕರ ಸೋಲಲಿ
ನಿರುತ ನಿನ್ನೊಳಸಹ್ಯಮಾಡಿದ ಜನರು ಕೆಡಲೆಂದ || ೨೦

ಇರಲಿರಲು ಫಲುಗುಣನನೆಕ್ಕಟಿ
ಗರೆದು ಶಸ್ತ್ರಾಸ್ತ್ರಸಂಚಯ
ಪರಮಸಿದ್ಧಾಂತವನು ಕಲಿಸಿದನಖಿಳಸಂಗತಿಯ |
ಕರುಣಿಸಿದನಾಗ್ನೇಯಪಾರಂ
ದರಮಹಾವಾಯುವ್ಯವಾರುಣ
ಹರಸಬ್ರಹ್ಮಾಸ್ತ್ರಸೌರೋರಗನಗಾದಿಗಳ || ೨೧

ಅಂದು ಭೀಷ್ಮಾದಿಗಳ ಕಳುಹಿದ
ನಂದು ಕುರುಕುಲವೃಂದಸಹಿತವೆ [1]
ಬಂದರಿವರಾ ಕುಂತಿಪುತ್ರರು ವಿನಯಪರರಾಗಿ | [2]
ಬಂದನಾಗುರು ಮತ್ತೆ ಗಂಗೆಯ
ಮಿಂದು ಬಟ್ಟಿಕಲ್ಲೊಬ್ಬ ಸೂತಜ
ಗೆಂದನೆಲವೋ ನೀನು ಹಸ್ತಿನಪುರಕೆ ದಱಿವುದು || ೨೨

ಇಂದು ಭಾರದ್ವಾಜನನು ತಾ
ನೊಂದು ನೆಗಳೈತಂದು ನುಂಗಿತ
ದೆಂದು ಹೇೞಲಿಕಾಗ ಹರಿತಂದವನು ಬೊಬ್ಬಿಱಿದ |
ಇಂದುಕುಲನೃಪಗುರುವನೀಗಲ

---

1 ಮಂದಿರಕ್ಕಾಗೊಮ್ಮೆ ಕುರುನೃಪ, ಖ.
2 ವೃಂದಸಹಿತವೆ ಬಂದರಾಕುಂತೀ ಕುಮಾರಕರು,

ದೊಂದು ನೆಗಳೈತಂದು ನುಂಗುವ
ಯುಂದವನು ತಾ ಕಂಡೆನೆನಲಿಕೆ ಕೌರವಾದಿಗಳು ॥ ೨೩

ಬಿಟ್ಟು ಕೈ ಮಂಡೆಯುಲಿ ಬೇಗದಿ
ಕಟ್ಟಿ ಬಂದೆವೆನುತ್ತ ಬಂದರು
ನೆಟ್ಟನಾಗುರುವಿದ್ದ ಠಾವಿಗೆ ಕರ್ಣ ಕೌರವರು ।

ಅರ್ಜುನನು ಆಗ ಸಿದ್ಧನಾಗಿ ಬರುವಿಕೆ.

ಇಟ್ಟಣಿಸಿ ನರ ಮನೆಗೆ ಬಂದನು
ಕಟ್ಟಿಕೊಂಡನು ಬಾಣ ನೂಱನು
ತೊಟ್ಟನಾಕ್ಷಣ ಜೋಡತೇರನು ಹೂಡಿ ಹೊಱವಂಟ ॥ ೨೪

ವೇಗದಲಿ ಸನ್ನದ್ಧ ಚಾಪದ
ಲಾಗ ಪಾರ್ಥನು ಬರುತ ಮನದಲಿ
ಲಾಗಿಸುತ ತಾನೊಂದ ನೆನೆದನು ಕೇಳು ಭೂಪತಿಯೆ ।
ರಾಗದಲಿ ಗುರುಗಳನು ನುಂಗುವ
ಲೋಗನೆಗಳನು ಸೀಳಿ ಬಿಸುಡುವೆ
ಬೇಗದಲಿ ಸುರಪತಿಯು ಬ್ರಹ್ಮನ ಕಾಲಯಮರುಗಳ ॥ ೨೫

ಮಱಿಯು ಹೊಕ್ಕರೆ ಬಿಡುವೆನೇ ನಾ
ಗುರುವ ನುಂಗಿದ ನೆಗಳನೆನುತಲಿ
ವರಸುಭಟಶ್ರೇಣಿಗಳ ತಾತನು ಪಾರ್ಥ ತಾ ಬಂದ ।
ಬರಲು ಕಟಕಾಚಾರ್ಯನಾತನ
ಪರಿಯು ಕಂಡನು ಪಾರ್ಥ ಹೇಳೈ
ಶರಶರಾಸನಕವಚಪಿಂದೇಕೆಂದೊಡಿಂತೆಂದ ॥ ೨೬

ನಿಮ್ಮ ನುಂಗುವ ನೆಗಳು ಬಡವನೆ
ಸುಮ್ಮನದು ತಾ ಬಂದು ಮಾಡುವ
ಕರ್ಮವಾವುದದೆನಲು ಕಳಶಜ ಹಿರಿದು ಮನ್ನಿಸಿದ ।

ದ್ರೋಣರು ಅರ್ಜುನನಲ್ಲಿ ವಿದ್ಯೆಯನ್ನು ತುಂಬಿದುದು.

ತಮ್ಮನಿವನಹುದೆಮ್ಮ ಕಾಯಕೆ
ಸುಮ್ಮನಿವನಲಿ ನಮ್ಮ ವಿದ್ಯೆಯ
ಸೊಮ್ಮ ತುಂಬಿಸಬೇಕು ಕೌರವನಿಕರವೇಕೆಂದ ॥ ೨೭

ವೀರಫಲುಗುಣಸಹಿತ ಕೌರವ
ಧಾರುಣೀಶರ ಗೂಡಿ ಕಟಕಾ
ಚಾರ್ಯ ಬಂದನು ಹಸ್ತಿನಾಪುರಕರಸ ಕೇಳೆಂದ ।
ಧಾರುಣೀಶರ ಸುತರ ಕಳುಹಿದ
ಧೀರಭಾರದ್ವಾಜ ತನ್ನಯ
ವೀರಪುತ್ರನು ಗೂಡಿ ಬಂದನು ತನ್ನ ಮಂದಿರಕೆ ॥ ೨೮

ಎನ್ನ ಮನಸಿನೊಳಿದ್ದಭೀಷ್ಟವ
ದಿನ್ನು ದೊರಕುವುದೆನುತ ಕಳಶಜ
ನುನ್ನತೋನ್ನತನಹನು ಫಲುಗುಣ ಶಿಷ್ಯರೊಳಗೆನುತ ।
ಮನ್ನಿಸುತ ಮನವೊಲಿಯಲಿತ್ತನು
ತನ್ನೊಳುಳ್ಳ ಸಕಲವಿದ್ಯೆಯ
ನುನ್ನತೋನ್ನತವಾಯ್ತು ಗೌತಮವಿದುರಭೀಷ್ಮರಿಗೆ ॥ ೨೯

ವಿದ್ಯಾಭ್ಯಾಸಕ್ರಮವನ್ನು ಪರೀಕ್ಷಿಸುವುದೆಂದು ದ್ರೋಣರ ಹೇಳುವಿಕೆ

ಒಂದುದಿನ ವೊಡ್ಡೋಲಗಕೆ ಗುರು
ಬಂದು ಮನ್ನಿಸಿಕೊಂಡು ನಸುನಗು
ತೆಂದನಾಧೃತರಾಷ್ಟ್ರ ಗಂಗಾಸೂನು ವಿದುರರಿಗೆ ।
ಇಂದು ಪರಿಯಂತರವು ನಿಮ್ಮಯ
ನಂದನರನಭ್ಯಾಸಿಸಿದೆನಭಿ
ನಂದನೀಯರೊ ನಿಂದ್ಯರೋ ನೀವ್ ನೋಡಬೇಕೆಂದ ॥ ೩೦

ಸಕಲಶಸ್ತ್ರಂಗಳಲಿ ಹಯಗಜ
ನಿಕರದೇಱಾಟದಲಿ ಲೋಕ

ಪ್ರಕರಮಾರ್ಗಣದಲಿ [1] ಚತುರ್ದಶವಿಮಳವಿದ್ಯೆಯಲಿ ।
ಸಕಲಲಕ್ಷಣಗಣಿತಗಾರುಡ
ನಿಕರ [2] ಭರತಾದ್ಯಖಿಳಕಳೆಯಲಿ
ವಿಕಳರೋ ಸಂಪೂರ್ಣರೋ ನೀವ್ ನೋಡಬೇಕೆಂದ ॥ ೧೯

ಲೇಸನೆಂದಿರಿ ಸುತರ ವಿದ್ಯಾ
ಭ್ಯಾಸರಚಿತಶ್ರಮವನಾವರೆ
ದೈಸು ನಿಮಗುತ್ಸವವಲೇ ತಪ್ಪಾವುದುಚಿತವಲ್ಲೈ ।
ಈಸುದಿನವೀಮಕ್ಕಳೊಡನಾ
ಯಾಸವಿದು ಸಾಮಾನ್ಯವೇ ನಾ
ವೇಸು ಧನ್ಯರೊ ನಿಮ್ಮದೆಸೆಯಿಂದೆಂದನಾಭೀಷ್ಮ ॥ ೨೦

ಆದಿಯಲಿ ಪುರವೈರಿ ಬಳಿಕಿನೊ
ಳಾದನಗ್ರದ ಪರಶುಧರನೀ
ಮೇದಿನಿಯೊಳೀಯುಗದಲನುಪಮಶಸ್ತ್ರವಿದ್ಯೆಯಲಿ ।
ವೈದಿಕದಲುರೆ ನಿಮ್ಮವೊಲು ದೊರೆ
ಯಾದವರು ಕುಮಾರಕರ ಪ್ರ
ಣ್ಯೋದಯದ ಕಂದೆರವೆಯ್ಯೆಸಲೆ ಯೆಂದನಾಭೀಷ್ಮ ॥ ೨೧

ಜೋಯಿಸರ ಕರೆದಖಿಳದಿವಸದೊ
ಳಾಯಿದರು ಶುಭದಿನವನವರ್ಗೆ ಪ
ಸಾಯದುಡುಗೊರೆಗಳಲಿ [3] ಮನ್ನಿಸಿ ಮನೆಗೆ ಕಳುಹಿದರು ।

ವಿದ್ಯಾಪ್ರದರ್ಶನಕ್ಕಾಗಿ ಸ್ಥಳ ನಿರ್ಮಾಣ.

ರಾಯನಾಜ್ಞೆಯಲಿಭಪುರಿಯ ಹೊರ
ಗಾಯತದ ಭೂಮಿಯಲಿ ವಾಸ್ತುವಿ
ಧೇಯದೊಳಗಳವಡಿಸಿದರು ಹನ್ನೆರಡುಯೋಜನವ ॥ ೨೨

---

[1] ಪ್ರಕಟಮಾರ್ಗೀಕೃತ, ಚ ಟ. [2] ವಿಕಟ, ಚ. ಟ. [3] ಸಹಿತ, ಚ. ಟ.

ತರವಿಡಿದು ರಚಿಸಿದರು ನೆಲೆಯು
ಪ್ಪರಿಗೆಗಳ ಹಂತಿಯುಲೆಯಂತಃ
ಪುರದ ತತ್ಪಾರ್ಶ್ವದಲಿ ಭೂರಿಯ ಭದ್ರಭವನಿಕೆಯ |
ಪುರಜನದ ಪರಿಜನದ ನೆಲೆಯು
ಪ್ಪರಿಗೆಗಳು ಕೂಡಿದವು ಹಸ್ತಿನ
ಪುರದ ಸಿರಿ ಸಾಮಾನ್ಯವೇ ಜನನಾಥ ಕೇಳೆಂದ || ೨೫

ನೆರೆದುದಗಣಿತಕರಿತುರಂಗವು
ವರವರೂಥಪದಾತಿ ಭೂಮಿ
ಶ್ವರರು ಬಂದರು ನೋಡಲೆಂದು ದಿಗಂತರಾಳದಲಿ |
ವರಮುಹೂರ್ತದೊಳಂದು ಘನಸಾ
ಗರದ ತೆರೆ [1] ಬಿಟ್ಟಂತೆ ಕರದಲಿ
ನೆರೆದು ನಿಂದುದು ಜನನಿಕರವೇನೆಂಬೆನದ್ಭುತವ || ೨೬

ಸಂದಣಿಸಿ ನೃಪರಾಣಿವಾಸದ
ಗೊಂದಣದ ದಂಡಿಗೆಗಳಿಳಿದವು
ಮುಂದೆ ಹೊಂಗಂಬಿಗಳ ಜೋದರು ಜನಪಲಾಯನದ |

ಅಲ್ಲಿಗೆ ಕುಂತೀ ಮೊದಲಾದವರ ಆಗಮನ.

ಬಂದರಾಗಾಂಧಾರಿಕುಂತಿಯ
ರಿಂದುಮುಖಿಯರ ಮೇಳದಲಿ ನಡೆ
ತಂದುದಗಣಿತವರವಧೂನಿಕುರಂಬ ನಲವಿನಲಿ || ೨೭

ವಿದುರಧೃತರಾಷ್ಟ್ರರು ಸಹಿತ ಸುರ
ನದಿಯ ಮಗನೈತಂದು ನವಭ
ದ್ರದಲಿ ಕುಳ್ಳಿರ್ದನು ಪಸಾಯಿತಸಚಿವಜನಸಹಿತ |
ಒದಱುವಗ್ಗದ ವಂದಿಗಳ ದನಿ

1 ಸೆಲೆ, ಜ.

ಮಧುರವಾದ್ಯದ ರವವು ಮಿಗೆ ಮಿ
ಕ್ಕೊದೆದು ಹಾಯ್ದುದು ಲೋಕ ಮೂಱು ಕರ್ಣಕೋಟರವ ॥

ಪರಿಪರಿಯ ಶೃಂಗಾರದಲಿ ನೂ [೩೮
ರ್ವರು ಸಹಿತ ದುರ್ಯೋಧನನು ನಾ
ಲ್ವರುಸಹಿತ ಯಮನಂದನನು ತಾವೆರಡುಪಾರ್ಶ್ವದಲಿ ।
ಗುರುತನುಜಕೃಪಕರ್ಣಸುಬಲಾ
ದ್ಯರು ಪುರೋಭಾಗದಲಿ ಭೂಮಿಾ
ಶ್ವರರಸಂಖ್ಯರು ಹಿಂದೆ ಬರಲೈತಂದನಾದ್ರೋಣ ॥ ೩೯

ಹೊಯ್ದುಕೋಣನ ಕುಱಿಯ ಹಿಂಡನು
ತೊಯ್ದ ರಕ್ತದ ನೆರೆದ [1] ರಾಶಿಯ
ನೈದೆ ಬಲಿಯನು ದೆಸೆದೆಸೆಗೆ ಚೆಲ್ಲಿದರು ತುಷ್ಟಿಯಲಿ ।
ಕೈದುಗಳ ತನಿವೆಳಗು ನೈದಿಲ
ವೈದುನನ ಮಾರಂಕವೆನೆ ಬಂ
ದೈದಿ ರಂಗಸ್ಥಳವ ಹೊಕ್ಕುದು ರಾಜಸುತನಿಕರ ॥ ೪೦

ಬಾಗಿಲಲಿ ಕಟ್ಟಿಗೆಯ ಕೈಗಳ
ಲಾಗುರೂಢ್ಯವೆಕ್ರಪರು ನಿಂದರು
ಸೀಗುರಿಯ ವಿನುತಂ [2] ತರಂಗದ ಸಾಲಸತ್ತಿಗೆಯ ।
ಸಾಗರದ ಗಳಗರ್ಜನಾರ್ಭಟೆ
ಹೋಗಲೇನದು ಪಾಡೆಯೆನೆ ಬಾ
ಪಾಗವಾಚಾರ್ಯನ ಘಡಾವಣೆ ಘಲ್ಲಿಸಿತು ಜಗವ ॥ ೪೧

ಆಮಹಾಕಣದಿಂಟು ದಿಕ್ಕನ
ಹೋಮ ತೀರಿತು ಫಳಿಗೆವಟ್ಟಲ
ಸೌಮುಹೂರ್ತಿಕರಾಯತಧ್ವನಿ ಸಾರಸಮಯದಲಿ [3] ।
ಸೋಮವಂಶೋದ್ಭವನೃಪಾಲಲ

---

[1] ರಕ್ತೋದನದ, ಚ. ಟ. [2] ಸುಟಿವಿನ, ಚ. [3] ಸಾಧುವಾದದಲಿ, ಚ.

ಆವನಗ್ಗದ ಧರ್ಮಸುತನು
ದ್ದಾವಗುರುವಿಂಗೆಱಗಿ ನಿಂದನು ನುಡಿಸಿದನು ಧನುವ ॥ ೪೦

ರಾಜಕುಮಾರರ ವಿದ್ಯಾಪ್ರದರ್ಶನ.

ಅರಸ ಕೇಳು ಯುಧಿಷ್ಠಿರನ ಪರಿ
ಪರಿಯೊಳೆಸುಗೆಯ ಚಾಪವಿದ್ಯಾ
ನಿರತಿಶಯಕೋಯೆಂದು ಗರ್ಜಿಸಿದುದು ಸಭಾಜಲಧಿ ।
ಸುರಗಿಹಿರಿಯುಬ್ಬಣಗದಾಯುಧ [1]
ಪರಿಘಚಕ್ರಮುಸುಂಡಿಮುದ್ಗರ
ಪರಿಗೆಮೊದಲಾದಖಿಳಶಸ್ತ್ರಾಸ್ತ್ರವನು ತೋಱಿಸಿದ ॥ ೪೧

ಕರಿತುರಗದೇಱಾಟವೊಗಲಾ
ಗಿರೆ ಸಮಸ್ತನೃಪಾಲವಿದ್ಯಾ
ಪರಿಣತಿಗೆ ಹಿಗ್ಗಿದರು ಭೀಷ್ಮಾದಿಗಳು ಹರುಷದಲಿ [2] ।
ಪರಿವಿಡಿಗಳಲಿ ನಕುಲಸಹದೇ
ವರು ವಿವಿಂಶತಿಚಿತ್ರಬಲದು
ರ್ಮರ್ಷಣಾದಿಕುವರರು ಸೂರ್ವರು ತೋಱಿದರು ಶ್ರಮವ ॥ ೪೨

ಈತ ಧರ್ಮಜನಿವರು ಮಾದ್ರೀ
ಜಾತರೀತ ಸುಲೋಚನನು ಬಳಿ
ಕೀತನಿವ ದುಸ್ಸಹ ವಿಕರ್ಣವಿಚಿತ್ರ [3] ಸಿವನೆಂದು ।
ಈತ ಧನುವಿನೊಳೀತ ಖಡ್ಗದೊ
ಳೀತ ಪರಿಘದೊಳೀತ ಕುಂತದೊ
ಳೀತ ಬಲುಹಿನಲೆಂದು [4] ಭೂಪತಿಗಱುಹಿದನು ವಿದುರ ॥ ೪೩

---

1 ವಡಾಯುಧ, ಚ.
2 ನಲವಿನಲಿ, ಜ.
3 ದೀರ್ಘಕವಿಂದಸಿವನಿಂತೀತ, ಚ.
4 ಬಲುಹೆಂದಂಥ, ಚ.

ಬಳಿಕ ನಾನಾದೇಶದರಸುಗ
ಳಿಳಿದು ತಮಗಳವಟ್ಟ ಶಸ್ತ್ರಾ
ವಳಿಗಳನು ತೋರಿದರು ಮೆಚ್ಚಿಸಿದರು ಮಹಾಸಭೆಯ |
ನೆಲನನಬ್ಬರಿಸುವ ಮಹಾಕಳ
ಕಳದೊಳಗೆ ಪಯಪಾಡುಗಳವೆ [1]
ಗ್ಗಳದ ಪಾಯವಧಾರು ಮಸಗಿದುದೊಂದುತಾವಿನಲಿ [2] || ೪೬

ದುರ್ಯೋಧನನ ವಿದ್ಯಾಪ್ರದರ್ಶನ.

ಹಗಲು ಕೈದೀವಿಗೆಯ ಬಿರುದಿನ [3]
ವಿಗಡನಿವನಾರೆನಲು ಭೂಪಾ
ಳಗಳ ರತ್ನಪ್ರಭೆಯ ಲಹರಿಯ ಲಾವಣಿಗೆ ಮಿಗಿಲು |
ಝಗಝಗಿಪತನುರುಚಿಯ ಮಿಂಚನು
ಮಿಗುವಕಿರಡಚ್ಛವಿಯ ತಲೆಯೊ
ತ್ತುಗಳ ಚಾವಡಿಯೊಳಗೆ ಕೌರವರಾಯನೈತಂದ || ೪೭

ಹೊರೆ ನಿರಂತರ ಗಜಬಜಂಗಳ
ವೇನು ಜೀಯವಧಾರು ಚಿತ್ತವ
ಧಾನಯೆಂದಾನಕದ [4] ಕಂಚುಕಿನಿಕರ ಕೈನೆಗಹಿ |
ಭಾನುವಿನ ಭಾರಣೆಯ ಪ್ರೋಲ್ ಚತು
ರಾನನನ ನೆಱ ಸೃಷ್ಟಿಪಾಲನ [5]
ಸೂನು ಹೊಕ್ಕನು ರಂಗವನು ಭೀಷ್ಮಾದ್ಯರಿಗೆ ನಮಿಸಿ || ೪೮

ಬವರಿಯಲಿ ಪಯಪಾಡಿನಲಿ ವ್ಯಾ
ಲವಣಿಯಲಿ ಬಿನ್ನಾಣದಲಿ ಭಾ
ರವಣೆಯಲಿ ದೆಖ್ಖಾಳದಲಿ ವೇಗಾಯ್ಲರೇಖೆಯಲಿ |

---

1 ಕಳದವೋಜೆಯನು ತಿವಿವಪರಿವೆ, ಚ.
2 ಥಟ್ಟನಲಿ, ಚ.
3 ಬೆಳಗಿನ, ಕ. ಚ.
4 ವೆಂದುದುಸಾಲ, ಚ.
5 ಉತ್ಥಾನಮುಖಿ ಚತುರಾಂಧಭೂಪನ, ಚ.

ತಿವಿವ ಮೊನೆಯೊಂದಖಿಲ ಮುಖಿಂ
ದವನು ತೋರ್ಪ ವಿಭೇದದಲಿ ಕೌ
ರವಮಹೀಪತಿ ತೋಱಿದನು ಶ್ರಮವನು ಕಠಾರಿಯಲಿ ‖ ೪೯

ಸುರಗಿಯಲಿ ಚಕ್ರದಲಿ ಹಲವಲಿ
ಹರಿಗೆಯಲಿ ಕಕ್ಕಡೆಯಲಸಿಯಲಿ
ಪರಿಘದಲಿ ಕುಂತದಲಿ ಗದೆಯಲಿ ಬಿಂಡಿವಾಳವಲಿ ।
ಪರಿಪರಿಯ ಚಿತ್ರದ ಚಮತ್ಕೃತಿ
ತರವ ತೋಱಿಸಿದನು ಶರಾಸನ
ಶರವಿಸರಸಂಧಾನದೊಳಗಪುದೆಸಿಸಿದನು ಸಭೆಯ ‖ ೫೦

ಧೀರ ರೇ ಜಗಜಟ್ಟಿ ರಾಜಕು
ಮಾರ ಚೌಪಟಮಲ್ಲ ಕುರುಕುಲ
ಕೈರವಾಮೃತಕಿರಣ ಧೀರುರೆ ಭಲರೆ ಭಲರೆನುತ ।
ಭೂರಿಸಭೆಯಲಿ ಬಿಱಿದು [1] ಬಿಸುಡುವ
ಸೀರೆಗಳ ತೂಪಿಱಿದು ಸುಳಿವ
ಪ್ಪಾರತಿಯ ತಸಿಹರಕೆ ತಳಿತುದು ತಾಯ ನೇಮದಲಿ ‖ ೫೧

ಏಱಿ ತೋಱಿದನಶ್ವಗಜರಥ
ವಾಱನೇಱಿನು ಸಭೆಯೊಳೊಂದನು
ನೂಱುಪರಿಯಲಿ ತೋಱಿದನು ಶಸ್ತ್ರಾಸ್ತ್ರಕೌಶಲವ ।
ವಿಾಱಿ ಹೆಚ್ಚಿದ ಹರುಷದಿಂದು
ಬ್ಬೇಱಿದನು ಧೃತರಾಷ್ಟ್ರ ಹಿಗ್ಗಿದ
ಳಾಱುಮಡಿಯಲಿ ಜನನಿ ದುರ್ಯೋಧನನ ಪರಿಣತಿಗೆ ‖ ೫೨

ಭೀಮಸೇನನ ವಿದ್ಯಾಪ್ರದರ್ಶನ.

ಮಸಗಿದಾನೆಯ ಗಂಧದಲಿ ರೂ
ಡಿಸುವ ಕೇಸರಿಯಂತೆ ಜಂಭನ

---

1 ಸುಳಿದು, ಜ.

ಜಸದ ಝಾಡಿಗೆ ಬೆದಱದಿದಿರಹ ವಜ್ರಧರನಂತೆ |
ಪಸರಿಸುವ ಪರಿವಾರಮಧ್ಯದೊ
ಳಸವಂಬಳ ಹೊಳಕಿದನು ಮೇಘದ
ಮುಸುಕನುಗಿದಿನನಂತೆ ಮೈದೋಱಿದನು ಕಲಿಭೀಮ ॥ ೫೩

ಗುರುನದೀಸುತವಿದುರ ಧೃತರಾ
ಷ್ಟ್ರರಿಗೆ ವಂದಿಸಿ ಯಾಯುಧಂಗಳ
ಪರಿಯ ಚಿತ್ರಶ್ರಮವ ಸಾಂಗೋಪಾಂಗಕೌಶಲವ |
ಕರಿತುರಗದೇಱಾಟಮೊದಲಾ
ಗಿರೆ ಸುಯೋಧನರಚಿತವಿದ್ಯಾ
ಪರಿಣತಿಗೆ ಮಗ್ಗಳವಿದೆನೆ ತೋಱಿದನು ಕಲಿಭೀಮ ॥ ೫೪

ಭೀಮದುರ್ಯೋಧನರ ಕಲಹ ಮತ್ತು ಕಲಹ ಶಾಂತಿ.

ಕೋಲಗುರು ಚಿತ್ತೈಸು ಕುರುಭೂ
ಪಾಲ ಸಮ್ಮುಖನಾಗು ಹಿಡಿ ಮಾ
ರ್ಗೋಲನೆನ್ನೊಡನೆನುತ ತಿವಿದನು ಭೀಮ ಕೌರವನ |
ಮೇಳವಿಸಿತೆರಡಂಕ ಬಂದುಗೆ
ಗೋಲಹೊಯ್ದಾಟದಲಿ ಬಟ್ಟಿಕಾ
ಭೀಳಗದೆಗಳ ತುಡುಕಿ ತಱುಬಿದರಧಿಕರೋಷದಲಿ ॥ ೫೫

ಹೊಯ್ದರೊಡ್ಡಿದರಣೆದು ಮೊನೆಯಲಿ
ಹೊಯ್ದರೊಳಸಱಿಯಿಂದ [1] ಕಳೆದರು
ಕಾಯ್ದು ಹೆಣಗಿದರುಪ್ಪರಕೆ ಜಾಱಿದರು ಪಡಿತಳಕೆ |
ಮೆಯ್ದೆಗೆದರಡ ಹೊಯ್ಲಿನಲಿ ಬಲು
ಗಯ್ದು ಕಾಱಿರು ಮನದ ಖತಿಗಿದಿ
ರೆಯ್ದದೆನೆ ಹೊಯ್ದಾಡಿದರು ಕಲಿಭೀಮಕೌರವರು ॥ ೫೬

---

[1] ಹಾಯ್ದರೊಳಸುಟಿಯಿಂದ, ಚ.

ಎಲೆಲೆ ಹಿಡಿ ಹಿಡಿ ಭೀಮನನು ತೆಗೆ
ಕೆಲಕೆ ದುರ್ಯೋಧನನ ಯಿದು ಮಂ
ಗಳದ ಬೆಳದಿಂಗಳಿನ ಮಳೆ ಸುರಿದುದೆ ಮಹಾದೇವ |
ಕಳವಳಿಸಿ ಭೀಷ್ಮಾದಿಗಳು ನೃಪ
ತಿಲಕರಿಬ್ಬರ ನಡುವೆ ಹೊಕ್ಕರು
ಕುಲಗಿರಿಗಳಂದದಲಿ ಕೃಪಗುರುಸುತರು ವಹಿಲದಲಿ ‖ ೫೭

ತೆಗೆದರೀತನನಿತ್ತಲಾತನ
ನುಗಿದರತ್ತಲು ಜನದ ಗಳದಿಂ
ದೊಗೆದ ಗಾಢದ ಗಜಬಜವ ಮೋಹಿಸಿದರಲ್ಲಲ್ಲಿ |
ಬೆಗಡು ಮೊಳೆತುದು ಭೀಷ್ಮವಿದುರಾ
ದಿಗಳ ಮನದಲಿ ಮೇಲೆ ಹಬ್ಬುವ
ಹಗೆಗಿದುಪಲಕ್ಷಣವಲಾ ಯೆಂದುದು ಜನಸ್ತೋಮ [1] ‖ ೫೮

ಎಂದು ಭೀಮನ ತನ್ನ ಹೊಱಯಿಕೆ
ತಂದು ಭೀಷ್ಮಾದಿಗಳು ಮುದದಲಿ
ಮಂದಮತಿಯೊಳಗೇಕೆ ನಿನಗಿದು ಶೀಘ್ರವೆಂದೆನುತ |
ಮುಂದೆ ತಾನೊಲಿದಂತುಟಾಗಲಿ
ಯೆಂದು ಭೀಮಗೆ ಹೇಳಿ ಯುಂಧನ
ನಂದನನ ನಿಲಿಸಿದರು ಜನಮೇಜಯಮಹೀಪಾಲ ‖ ೫೯

ಅಳಮಸಗಿದಂಬುಜದವೊಲು ಜನ
ಜಲಧಿಜಾತಕ್ಷೋಭದಲಿ ಪೆ
ಗ್ಗಳಿಸಿತಗ್ಗದ ಸಾಧುವಾದವಿವಾದ ರಭಸದಲಿ |
ಮೊಳಗಿದವು ಕಲ್ಪಾಂತಮೇಘಾ
ವಳಿಯು ಗುರುವೆನೆ ವಾದ್ಯತತಿಗಳು
ಕಳದೊಳರ್ಜುನದೇವನೆದ್ದನು ಮುನಿಯ ಸನ್ನೆಯಲಿ ‖ ೬೦

---

1 ಬುಧವ್ರಾತ, ಚ.

ಅರ್ಜುನನ ವಿದ್ಯಾಪ್ರದರ್ಶನ.

ಈತನಾರರ್ಜುನನೆ ಹೋ ಹೋ
ಮಾತು ಮಾಣಲಿ ಮಾಣಲೆಂಬೀ
ಮಾತು ಹಿಂಚಿತು ಮುನ್ನ ಮೌನದೊಳಿರ್ದುದಾಸ್ಥಾನ ।
ಭೀತಕಳಕಳರಂಗದಲಿ ಪುರು
ಹೂತಸುತ ಮೈದೋಱಿದನು ಜನ
ವೀತನನು ಕೊಂಡಾಡುತಿರ್ದುದು ನೃಪತಿ ಕೇಳೆಂದ ॥ ೬೧

ದ್ರೋಣಕೃಪಮೊದಲಾದ ಮಾನ್ಯ
ಶ್ರೇಣಿಗೆಱಗಿದನಮರನಿಕರಕೆ
ಗೋಣನೆತ್ತಿದಸಿಟ್ಟು ಕರಪುಟವನು ಲಲಾಟದಲಿ ।
ಪ್ರಾಣಪಣ [1] ವಿದು ನಿಖಿಳವಿದ್ಯೆಯು
ಜಾಣತನವಿದು ವಿನಯವೆಂದಿದು
ಕೇಣವಿಲ್ಲದೆ ನೆರವಿ ನೆಱೆ ಹೊಗಳಿತು ಧನಂಜಯನ ॥ ೬೨

ನಿಲುವಿನಲಿ ಸ್ವಸ್ಥಾನದಲಿ [2] ಕೈ
ಚಳಕದಲಿ ಭಂಗಿಯಲಿ ಭಾರದ
ಲುಳಿಯಲೊಯ್ಯಾರದಲಿ ಮೋಡಾಮೋಡಿಯಂದದಲಿ ।
ಅಳವಿಯಲಿ ಪರಿವಿಡಿಯಲುಪ್ಪರ
ವಳಯದವಧಾನದಲಿ ಶಸ್ತ್ರಾ
ವಳಿಯ ಸಾಂಗೋಪಾಂಗಶ್ರಮವನು ತೋಱಿದನು ಪಾರ್ಥ ॥ ೬೩

ತುರಗಚಯರೇವಂತ ಮದಕುಂ
ಜರಮಹಾದೇವೇಂದ್ರ ರಥಷಂ
ಚರಣನವಮಾರ್ತಾಂಡನೆಂದಬ್ಬರಿಸೆ ಜನನಿಕರ ।
ಧುರದ ವಿಜಯಶ್ರೀಯ [3] ಶಿಕ್ಷಾ

---

1 ಪಥ, ಜ, ಪದ, ಚ.
2 ಸಂಸ್ಥಾನದಲಿ, ಚ
3 ತುರಗಗಜ ರಥವಿವಿಧ, ಚ.

ಪರಿಣತಿಯ ತೋಱಿದನು ಗುರುಕೃಪ
ಸುರನದೀಜರು ಮುಱುಗಿದರು ಪುಳಕಾಂಬುಪೂರದಲಿ ॥ ೬೪

ಮತ್ತೆ ಕೊಂಡನು ಧನುವ ನೆರವಿಯ
ನತ್ತ ಹೊಯ್ ಹೊಯ್ ಹೋಗಹೇಱ್ದು
ವೃತ್ತರೆದೆ ಜರ್ಝರಿತವಾಗಲು ತೋಱಬೇಕೆನುತ ।
ಬತ್ತಳಿಕೆಯಿಂದುಗಿದು ಹೂಡಿ ವಿ
ಯತ್ತಳಕೆ ಹಾಯ್ಸಿದನು ಕರ್ಬೊಗೆ
ಸುತ್ತಿ ದಳ್ಳುರಿ ಸುಱಿದುದಾಗ್ನೇಯಾಸ್ತ್ರಧಾರೆಯಲಿ ॥ ೬೫

ತೆಗೆಸಿದನು ಶಿಖಿಶರವ ಧನುವಿಂ
ದುಗುಳಿಸಿದ ವಾರಣವನಭ್ರವ
ನೊಗೆದುದದ್ಭುತವಾರಿಯುಪಸಂಹರಿಸಿದನು ಮಗುಳೆ ।
ಹಗಲನೊಂದೇ ತುತ್ತುಮಾಡುವ
ವಿಗಡತಿಮಿರಾಸ್ತ್ರದ ತಿಮಿರವನು
ತೆಗೆಸಿದನು ಸೂರ್ಯಾಸ್ತ್ರದಲಿ ಜಱಿಗಾಗೆ ಸುರನಿಕರ ॥ ೬೬

ಗಿರಿಸರಳ ವಜ್ರದಲಿ [1] ಮೇಘದ
ಸರಳನನಿಲದಿನುರಗಬಾಣವ
ನಿರುತ ಗರುಡಾಸ್ತ್ರದಲಿ ವಹ್ನಿಯ ಜೀವನಾಸ್ತ್ರಗಲಿ ।
ಪರಿವಿಡಿಯ ತೋಱಿದನು ಜನವೆ
ಬ್ಬರಿಸಲಡಿಗಡಿಗಂಧಭೂಪನ
ಕೊರಳು ಕುಸಿದುದು ನುಡಿಯ ನಾಟಕಹರುಷಭಾರದಲಿ ॥ ೬೭

ಇವರ ಮುಖವರಳಿದುದು ಗಂಗಾ
ಭವಕೃಪದ್ರೋಣಾದಿಗಳ ಬೞಿ
ಕವರ ತಲೆ ಬಾಗಿದುದು ಧೃತರಾಷ್ಟ್ರಾದಿಕೌರವರ ।
ಇವರ ಜನನಿಯ ಮುಖದ ಸುಮ್ಮಾ

---

1 ಗಿರಿಶರದಲದ್ರಿಗಳ, ಚ.

ನವೆನು ದುರ್ಯೋಧನನ ಜನನಿಯು
ಜವಳಿದುವೆಮ್ಮನವೆನು ಬಣ್ಣಿಸಲಱಿಯೆ ನಾನೆಂದ ॥ ೬೮

ಬಾಯ ಹೊಯ್ ಫಲುಗುಣನ ಹೊಗಳುವ
ನಾಯಿಗಳಲೇನಾಯ್ತು ಕೌತುಕ
ಪಾಯಿಕಿವೆದಿರ ಪಕ್ಷಪಾತವ ನೋಡು ನೋಡೆನುತ ।
ಸಾಯಕವ ತಿರುಹುತ್ತ[1] ಲಾಕ
ಣ್ರಾಯುತಾಂಬಕನೆಡಬಲದ ಕುರು
ರಾಯನನುಜರ ಗಡಣದಲಿ ನಡೆತಂದನಾಕರ್ಣ ॥ ೬೯

ಕರ್ಣನ ವಿದ್ಯಾ ಪ್ರಕಾಶ.

ಗುರುಗಳಿಗೆ ಕೈಮುಗಿದು ಶಿರದಲಿ
ತರಣಿಮಂಡಲಕೆಱಗಿ ನೋಡುವ
ನೆರೆವಿಗಿವನಾರೀತನಾರೆಂಬಚ್ಚರಿಯ ಮಿಱುಕಿ[2] ।
ಅರಸ ಕೇಳ್ಕೈ ವಿವಿಧಶಸ್ತ್ರೋ
ತ್ಕರದ ಕ್ರಮವನು ತೋಱಿದನು ಕರಿ
ತುರಗರಥವಾಹನದ ಶಿಕ್ಷಾವಿದ್ಯೆಗಳುಸಹಿತ ॥ ೭೦

ಆವವಿಧದಲಿ ಪಾರ್ಥ ತೋಱಿದ
ನಾವ ದಿವ್ಯಾಸ್ತ್ರಪ್ರಪಂಚವ
ಪಾವಕಾನಿಲವಾರುಣಾದಿಯನೈದೆ ವಿರಚಿಸಿದ ।
ಆವಿಧಾನದಲಾವಿಹಾರದ
ಲಾವಿಬಂಧದಲರ್ಜುನನ ಬಾ
ಣಾವಳಿಯ ಬಿನ್ನಾಣವನು ತೋಱಿದನು ಕಲಿಕರ್ಣ ॥ ೭೧

ಸೆಣಸುವೊಡೆಬಾ ಯೆನುತ ಪಾರ್ಥನ
ಕೆಣಕಿದನು ಘನರೋಷಶಿಖಿಯಲಿ
ಕುಣಿದವುಬ್ಬರ ಮೀಸೆ ಕಂಗಳೊಳೊಗುವಕೆಂಪುಗಳ ।

---

1 ತೂಗುತ್ತ, ಚ. 2 ದುಬುತವಬೀರಿ, ಚ.

ಕಣೆಕಣೆಯ ಕೌಶಲದ ಶರಖಂ
ಡಣೆಯ ಕೋಲಾಟದಲಿ ಖಣಿಖಣಿ
ಖಣಿಲು ಖಣಿಲೆನೆ ಮಸಗಲೆಚ್ಚಾಡಿದರು ಖಾತಿಯಲಿ [1] ॥ ೨೦

ರಾಯಸಭೆ ಕಳವಳಿಸೆ ಹೋ ಹೋ
ಹೋ ಯೆನುತ ಮುಂಕೊಂಡು ಹಿಡಿದರು
ವಾಯುಸುತಕೃಪಗುರುಸುತರು ದ್ರೋಣನು ಧನಂಜಯನ ।
ಆಯಿತೆಲವೋ ಕರ್ಣ ನೀನು ಪ [2]
ಸಾಯಿತನೊ [3] ನೃಪಹಾರದಲಿ ಮೋಹ
ನಾಯಕನೊ ನೀನಾವನೆಂದನು ಕೃಪನು ಖಾತಿಯಲಿ ॥ ೨೧

ಈತನಾರೈ ಕರ್ಣನೆಂಬವ
ನೀತನೀಯರ್ಜುನನೊಡನೆ ಮಾ
ರಾತು ಕೈಮಾಡಿದನು ಕೈಕೊಳ್ಳನು ಧನಂಜಯನ ।
ಈತ ತಪ್ಪಲ್ಲೆನುತ ಮಿಗೆ ವೈ
ಯ್ಯಾತನಾಧೃತರಾಷ್ಟ್ರನೀತನ
ಮಾತೆ ಕಂಡಳು ಕುಂತಿ ನೆನೆನಳು ಪೂರ್ವಸಂಗತಿಯ ॥ ೨೨

ಎನ್ನ ಮನವೇ ಬಲ್ಲದಲ್ಲಿದು
ತನ್ನ ವಶವೇ ವಿಷ್ಣುಮಾಯೆಯು
ಬಿನ್ನಣವಲೇ ಮಾತ ಬಿಗಿದುದು ಮನವನೊಳಸಿಕ್ಕಿ ।
ತನ್ನ ತಾನೇ ಮಱೆದು ಮೂರ್ಛಾ
ಪನ್ನೆಯಾದಳು ಕುಂತಿ ಯಿತ್ತಲು
ಖಿನ್ನನಾದನು ಕೃಪನ ನುಡಿಯಲಿ ಮನದೊಳಗೆ ಕರ್ಣ ॥ ೨೩

ಈತನರಸಲ್ಲೆಂದು ಕೃಪ ಹೇಳಿ
ವಾತನೇ ತಪ್ಪೇನು ರಾಜ್ಯದೊ
ಳೀತನನರಸನೆನಿಸುವೆನು ನಮ್ಮಯ ಪುರೋಹಿತರ ।

1 ಚಳಕದಲಿ, ಚ. 2 ನಿನ್ನಯ, ಜ. 3 ಪಾಯಕದ, ಜ.

ಕರ್ಣನನ್ನು ಅಂಗದೇಶದ ರಾಜನನ್ನಾಗಿ ಮಾಡುವಿಕೆ

ಶಾತಕುಂಭಾಸನವ ಮಂಗಳ
ಜಾತವಸ್ತುವ ತರಿಸು ತರಿಸೆಂ
ದಾತತತ್ಕ್ಷಣದಲಿ ಸುಯೋಧನನೆದ್ದು ರಭಸದಲಿ ॥ ೭೬

ಇರಿಸಿ [1] ಭದ್ರಾಸನದೊಳೀತಂ
ಗರಸುಪದವಿಯನಂಗದೇಶದ
ಸಿರಿಯನಿತ್ತನು ರಚಿಸಿದನು ಮೂರ್ಧಾಭಿಷೇಚನವ ।
ದರುಶನವನಿತ್ತಿತ್ತು ಧರಣೀ
ಶ್ವರರು ಕಂಡರು ಪೂರ್ವಶೈಲದ
ತರಣಿಯಂತಿರೆ ಕರ್ಣನೆಸೆದನು ರಾಜತೇಜದಲಿ ॥ ೭೭

ಈತನುತ್ಸವ ತನ್ನದೆಂದೇ
ಪ್ರೀತಿಯಿಂದಾಸೂತನೈತರ
ಲೀತನಿಚ್ಚದೆಬಗಿದನು ಪದದಲಿ ಬಚ್ಚಿಕ ಜನಜನಿತ ।
ಸೂತಸುತನಿವನೆಂದು ಭುವನ
ಖ್ಯಾತವಾದುದು ಬಚ್ಚಿಕ ನಸುನಗು
ತೀತನನು ಕುಲವೆತ್ತಿ ಭಂಗಿಸಿ ನುಡಿದನಾಭೀಮ ॥ ೭೮

ಇವನ ತಂದೆಯದಾರು ಪಾಂಡುವೊ
ಯವನಿಪತಿ ಧೃತರಾಷ್ಟ್ರನೋ ಕೌ
ರವನ ಸಿಂಹಾಸನಕೆ ಯೋಗ್ಯನವಾವಕುಲದವನು ।
ಅವಗಡಯತನಕಂಜುವನು ನೀ
ವಿವನ ಪತಿಕರಿಸುವೊಡೆ ನಿಮ್ಮಾ
ಯವನಿಪತಿಗಳೊಳಾರು ಹೇಳೆನೆ ಭೀಮ ಕುರುಪತಿಗೆ ॥ ೭೯

ಇವನ ತಂದೆಯದಾರು ಪಾಂಡುವೊ
ಪವನನೋ ಮಿಗೆ ನಿಮ್ಮ ಜನನವ
ನೆವಗೆ ಹೇಳಿರಿ ಹಿರಿಯ ಗುರುಗಳ ತಾಯದಾವವಳೊ ।

---

1 ತರಿಸಿ, ಚ.

ಅವಗಡಿಸುವೊಡೆ ಹಿರಿಯತನಕಂ
ಜುವೆನು ನಿಮಗೆನುತಡಿಗಡಿಗೆ ಕೌ
ರವಮಹೀಪತಿ ತಾನು ಜಱಿದನು ಭೀಮಗುರುಕೃಪರ ‖ ೮೦

ಬಳಗೆ ಗಜಬಜವಾಯ್ತು ಕೈದುವ
ಸೆಳೆದುದಲ್ಲಿಯದಲ್ಲಿ ಗುರುಕೃಪ
ರುಲುಹ ಕೇಳುವರಿಲ್ಲ ಕೈದೊಳಸಾಯ್ತು ಕಳನೊಳಗೆ ।
ಇಳಿದು ಭೀಷ್ಮಾದಿಗಳು ತಮ್ಮಯ
ನಿಳಯಕೈದಿದರೆರಡು ಬಲ ತ
ವ್ಮೊಳಗೆ ತಾವೇ ಹಳಿದು ಹರಿಗುದು ಭೂಪ ಕೇಳಂದ ‖ ೮೧

ಕೆಲರು ಭೀಮನನರ್ಜುನನ ಕೆಲರು
ಕೆಲರು ಕರ್ಣನ ಕೌರವೇಂದ್ರನ
ಕೆಲರು ಹೊಗಳುತ ಬಂದು ಹೊಕ್ಕರು ಹಸ್ತಿನಾಪುರವ ।
ಎಲೆ ಮಹೀಸುರ ಭೀಮಪಾರ್ಥರ
ಬಲುಹ ಹೊಗಳಿದರಾರು [1] ಕೌರವ
ತಿಲಕನನು ತಾವಾರು ಹೊಗಳಿವರೆಂದು ಬೆಸಗೊಂಡ ‖ ೮೨

ಎಲೆ ಪರೀಕ್ಷಿತತನಯ ಕೇಳಂ
ದೊಲಿದು ಭೀಮಾರ್ಜುನರ ಹೊಗಳುವ
ಬಳಗವದು ತಾ ಸಾಧುಶಾಂತರು ಕರ್ಣ ಕುರಪತಿಯ ।
ಗೆಳೆಯರಾದವರವರ ಜೀವರು
ಬಳಿಕ ಹೊಗಳುತ ಹೊಳಲ ಹೊಕ್ಕರು
ತಿಳಿದುಕೊ ನೀನಿದಱ ಪರಿಯನು ಭೂಪ ಕೇಳಂದ ‖ ೮೩

ಹೊಳಲ ಹೊಕ್ಕರು ಹಸ್ತಿನಾಪುರ
ದೊಳಗೆ ಕೌರವಪಾಂಡುಪುತ್ರರು
ಬಲಿಯಿತ್ತೈ ಮನವ್ಯೈರವಾದಿನದಲ್ಲಿ ಯುಭಯರಲಿ ।

---

[1] ಹೊಗಳಿದರಿಂದು, ಕ. ಖ.

ಬಳಿಕಲಾಮರುದಿವಸದಲಿ ಮ
ಕ್ಕಳುಗಳೆಲ್ಲರ ಕರೆಸಿ ಗರುಡಿಯ
ನಿಳಯದಲಿ ಕುಳ್ಳಿರ್ದು ಗುರು ನುಡಿದನು ಕುಮಾರರಿಗೆ ॥ ೮೪

ದ್ರೋಣನು ಶಿಷ್ಯರನ್ನು ಗುರುದಕ್ಷಿಣೆಯನ್ನು ಬೇಡುವಿಕೆ.

ಏನಿರೈ ಕುರುವಂಶನಳಿನೀ
ಭಾನುಗಳಿರ ವಿದಗ್ಧಜನಸುರ
ಧೇನುಗಳಿರಾ ನಾವು[1] ನಿಮ್ಮಲಿ ದಕ್ಷಿಣಾರ್ಥಿಗಳು ।
ಏನನೀವಿರಿ ನಮಗೆ ನೀವತಿ
ದಾನಿಗಳು ಕೊಡಲಾಪ ಸತ್ವನಿ
ಧಾನವುಂಟೇ ಹೇಳಿ ಯೆಂದನು ದ್ರೋಣನಿಬರಿಗೆ ॥ ೮೫

ಆವುದನು ಬಯಸಿದಿರಿ ನಿಮ್ಮಡಿ
ನೀವು ಬೇಡಿದ ತಂದು ಕೊಡುವೆವು
ನಾವಿದಕೆ ಸಂದೇಹ ಬೇಡೆಂದರು ಕುಮಾರಕರು ।
ತೀವಿದಗ್ಗದ ಹರುಷದಲಿ ಸಂ
ಭಾವನೆಯಲಾ ಮುನಿವರನು ಶಿ
ಷ್ಯಾವಳಿಗೆ ನುಡಿದನು ನಿಜಾಭಿಪ್ರಾಯಸಂಗತಿಯ ॥ ೮೬

ಕೇಳಿ ಬಲ್ಲಿರೆ ಗಂಗೆಯುತ್ತರ
ಕೂಲದಲಿ ಪಾಂಚಾಲದೇಶನ್ವ
ಪಾಲನಲ್ಲಿಗೆ ದ್ರುಪದನೆಂಬವನತುಳಭುಜಬಲನು ।
ಆಳುತನದಂಗದಲಿ ಪರರಿಗೆ
ಸೋಲದವನೊಬ್ಬರಸ ದ್ರುಪದನ್ವ
ಪಾಲಕನ ಹಿಡಿದೊಪ್ಪಿಸಿದರೆಮಗಹುದು ಪರಿತೋಷ ॥ ೮೭

ಐಸಲೇ ಗುರುದಕ್ಷಿಣಾರ್ಥವಿ
ದೇಸು ಘನ ತಂದೀವೆವೆಂದುಪ

---

1 ಯೆಂದು, ಕ. ಖ.

ಹಾಸದಲಿ ಕೈಹೊಯ್ದು ತಮ್ಮೊಳು ನಗುತ ಕೌರವರು |
ಆಸುಯೋಧನ ಕರ್ಣಸಹಿತ ಮ
ಹೀಶತನುಜರು ಬೀಳುಕೊಂಡರು
ಘಾಸಿಬಿದ್ದುದು ಪಾಂಡುಸುತಕೌರವಕುಮಾರರಿಗೆ ‖ ೮೮

ಧಾಳಿ ಯಿಟ್ಟುದು ರಾಯದಳ ಪಾಂ
ಚಾಲನಗರಿಗೆ ಮುಂದೆ ಹೊಕ್ಕುದು
ಚೂಳಿಕೆಯಲಿ ಸುಯೋಧನಾದಿಗಳೂರನುರವಣಿಸೆ |

ಕೌರವರ ಪರಾಜಯ.

ಧೂಳಿಗೋಂಟೆಯ ಕೊಂಡಳಿದು ರಾ
ಜಾಲಯಕೆ ಬರೆ ದ್ರುಪದನನುಜರು
ಸೋಲಿಸಿದರೈ ಕುರುರಾಯನನುಜರ ದಳವ ಬಳಿಕೈದು[1] ‖ ೮೯

ಹಿಡಿದು ಕೌರವಶತವ ರವಿಜನ
ನೊಡೆಬಿಗಿದು ಸೌಬಲನ ಸಹಿತವೆ
ಬಿಡದೆ ಬೀದಿಯೊಳೂರಸಲೋಡಿತು ಚಾತುರಂಗಬಲ |
ಬಡಮನದ ಮನ್ನೆಯರ ಗಡಣದೊ
ಳಡಸಿ ಬಂದೈ ಕೌರವೇಶ್ವರ
ಒಡೆಯ ದ್ರುಪದನು ನಿನ್ನ ಕಂಡರೆ ಬಿಡನದೆನುತಾಗ ‖ ೯೦

ಈತನೇ ಕೌರವನದೆಂಬವ
ನೀತನೇ ರಾಧೇಯ ಸೌಬಲ
ನೀತನೇ ದುಶ್ಶಾಸ ದುರ್ಜಯನೀತನೇ ಯೆನುತ |
ಈತಗಳು ನಮ್ಮರಸ ದ್ರುಪದನು
ಮಾತನಱಿಯರು ನೀತಿಬಾಹಿರ
ರೇತಕಿವದಿರರೆಂದು ಜನವಬ್ಬರಿಸಿ ನುಡಿಯಲಿಕೆ ‖ ೯೧

---

1 ಕೌರವೇಂದ್ರನ ಸೈನ್ಯಸಾಗರವ, ಖ.

ಪಾಂಡವರು ಸನ್ನದ್ಧರಾಗಿ ಪಟ್ಟಣವನ್ನು ಪ್ರವೇಶಿಸುವಿಕೆ

ಪುರದ ಹೊಱಬಾಹೆಯಲಿ ತಾವೈ
ವರು ಮಹಾಸನ್ನಾಹಚಾಪ
ಸ್ಫುರಿತತೂಣೀಬದ್ಧಕಂಪಿತಖಡ್ಗಪಾಣಿಗಳು ।
ಗುರುಸಹಿತಲಿವರಿದ್ದರಿತ್ತಲು
ಪುರಜನದ ಮುಸಲಾಪಹತಿಯಲಿ
ಮುಱಿದು ಬಂದುದು ಕೌರವೇಂದ್ರನ ದಳ ವಿಘಾತಿಯಲಿ ॥ ೯೨

ಆತುಕೊಂಡರು ಪಾಂಡುಸುತರಱಿ
ಜಾತಸಮರವಸಿವರ ಕೈಯ್ಯಲಿ
ಮಾತು ಹಲವರಲೇನು ಹೊಕ್ಕರು ಮುಱಿದು [1] ಪರಬಲವ ।
ಘಾತಿಗಾನುವರಿಲ್ಲ ಧುರದೊಳ
ಗಾತನನು ಮುತ್ತಿದರು [2] ದಕ್ಷಿಣೆ
ಯೀತ ಗುರುಗಳಿಗೆನುತ ಹೊಕ್ಕರು ದ್ರುಪದನರಮನೆಯ ॥ ೯೩

ಪಾರ್ಥ ಭೀಮನ ಬೇಡಿಕೊಂಡನು
ಪ್ರಾರ್ಥಿಸುತ ನಾನೊಬ್ಬ ದ್ರುಪದನ
ನರ್ಥಿಯಲಿ ಹಿಡಿತಹೆನು ತನಗಿದ ಕೃಪೆಯ ಮಾಡೆನುತ ।
ಪಾರ್ಥನೊಬ್ಬನೆ ಸಕಲಸೈನ್ಯ
ವ್ಯರ್ಥಮಾಡಿ ದ್ರುಪದರಾಯನ
ಸ್ವಾರ್ಥಗೃಹದೊಳಗೊಬ್ಬ ಹೊಕ್ಕನು ನೃಪತಿ ಕೇಳೆಂದ ॥ ೯೪

ಬಳಿಕ ಧರ್ಮಜಭೀಮಯಮಳರು
ಹೊಱಲ ಬೀದಿಯಲಿರಲು ಫಲುಗುಣ
ನುಲಿದು ಹೊಕ್ಕನು ದ್ರುಪದನಂತಃಪುರದ ಮಧ್ಯದಲಿ ।

1 ಹುರುಳಿಲ್ಲೆನುತ ಹೊಕ್ಕರು ಕೊಂದು, ಚ.

2 ಗುರುಗಳಿಗೀತನೇ ದಕ್ಷಿಣೆಯೆನುತ ಹಿಡಿದರು ಮಹೀಪತಿಯ, ಚ

ಲಲನೆಯರು ಕಂಡಂಜೆ ಪಾರ್ಥನು
ನಿಲಿಸಿದನು ನೀವಂಜದಿರಿ ಗುರು
ಲಲನೆಯರು ನೀವು ನಮಗೆನುತಲಿ ನೃಪನನೆಬ್ಬಿಸಿದ ॥ ೯೫

ಎಬ್ಬಿಸಲಿಕಾದ್ರುಪದ ಫಲ್ಗುನನ
ನಬ್ಬರವ ತಾ ಕಂಡು ಬೆದಱಿಯೆ
ವೊಬ್ಬನಿವನಾರೆನಲು ಫಲುಗುಣನೆಂದನೊಂದುವನು ।
ಒಬ್ಬನೇ ನೀನೆನ್ನ ಸಮರದ
ಹಬ್ಬವನು ನೋಡೆನಲು ನುಡಿಗಳ
ನಿಬ್ಬರವ ತಾ ಕಂಡು ದ್ರುಪದನು ಪಾರ್ಥಗಿಂತೆಂದ ॥ ೯೬

ನೀನದಾರ್ಯೆ ಯೆನ್ನ ಸಮರಕೆ
ಮಾನಿಸನು ತಾನಿಲ್ಲವೊಬ್ಬನ
ಲೇನು ಫಲವೆಂದೆನಲು ಫಲುಗುಣನೆಂದ ನಸುನಗುತ ।
ನಾನು ಕುಂತೀಪುತ್ರ ಮಧ್ಯಮ
ನೀನು ನಡೆ ಸಂಗ್ರಾಮ ಮಾಡುವ
ವೇನೆನಲು ಪಾಂಚಾಲ ಕೋಪಿಸಿ ಬಂದ ಕಾಳಗಕೆ ॥ ೯೭

ಸರ್ವಸೈನಿಕವೆಱಸಿ ನಿಂದಿರ
ಲೊರ್ವನೇ ದಱವುಱಿಸಿ ದ್ರುಪದನ
ನಿರ್ವಹಿಸಿ ತಾ ಹಿಡಿದು ಕಟ್ಟಿದ ನಿಮಿಷಮಾತ್ರದಲಿ ।

ದ್ರುಪದನನ್ನು ಹಿಡಿದು ಗುರುಗಳ ಬಳಿಗೆ ತರುವಿಕೆ.

ಸರ್ವಕೌರವಸೇನೆ ಸೋತುದ
ದೊರ್ವನೇ ಜಯಿಸಿದನು ಕೌರವ
ನುರ್ವಿಪತಿ ನೋಡಲಿಕೆ ಹಿಡಿದನು ದ್ರುಪದಭೂಪತಿಯ ॥ ೯೮

ಕೊಂಡು ಬಂದನು ದ್ರೋಣನಿದ್ದೆಡೆ
ಗಂಡಳೆದು ಬರೆ ಕುಂಭಸಂಭವ

ಕಂಡು ತನ್ನಾಲಯದ ಮಂಚದೊಳಂದು ಪವಡಿಸಿದ ।
ಗಂಡುಗಲಿ ನರಗುರುವನೆಬ್ಬಿಸಿ
ದಿಂಡುಗೆಡೆ ಪಾಂಚಾಲಭೂಪನ
ತುಂಡಿಸಿದನಾದ್ರೋಣಮಂಚದ ಕಾಲೊಳೂಡೆಮೆಟ್ಟಿ ॥ ೯೯

ಇದು ಮಹಾಪೌರುಷವೆ ಗುರುಗಳ
ನಿದಕೆ ನಿದ್ರೆಯು ಕೆಡಿಸಲೇತಕೆ
ಹದನ ತಾವೇ ಯೆದ್ದು ಕಾಂಬರೆನುತ್ತ ಮರಳದನು ।
ಒದೆಯುತಲಿ ದ್ರುಪದಾಖ್ಯನಾ [1] ಗುರು
ಮುದದಿ ವಾಮಪದಾಬ್ಜದಿಂದವೆ
ಕದಹ ತೆಗೆದನು ಮುಖದ ನಿದ್ರೆಯು ದ್ರುಪದಭೂಪತಿಯು ॥ ೧೦೦

ಕಂಡು ನೋಡಿ ದ್ರೋಣ ದ್ರುಪದಗೆ
ಭಂಡನೆಲವೋ ನೀನು ಒಲ್ಲೆ
ಕಂಡು ನಮ್ಮಯ ಪೂರ್ವದಪರವನೆಂದನಾದ್ರೋಣ ।
ಕೊಂಡು ಬಂದನು ಪಾರ್ಥದೇವನು
ಗಂಡುಗಲಿ ಹೆಡೆಗಯ್ಯಕಟ್ಟಿಯೆ
ಗಂಡನವನವನವನ ಕರೆಯಿಂದಿವನ ಬಿಡಲೆಂದ ॥ ೧೦೧

ಎಂದೊಡಾಗಲೆ ಪಾರ್ಥದೇವನ
ಬಂದು ಕಂಡರು ದ್ರೋಣದೂತರು
ನಿಂದಿರದೆ ನರ ಬಂದನಾಕ್ಷಣ ಗುರುವಿನರಮನೆಗೆ ।
ಬಂದು ಚರಣದ್ವಂದ್ವ ನಿರುತಕೆ
ವಂದಿಸುತ್ತಿರಲತ್ತ ಪಾರ್ಥನ
ತಂದೆಲ್ಯೆ ಪಾಂಚಾಲಭೂಪನನೆನುತ ಬಿಗಿದಪ್ಪಿ ॥ ೧೦೨

ಬಿಚ್ಚಿಕ ಪಾರ್ಥನ ಕೈಯ್ಯ ದ್ರುಪದನ
ಗಳದ ಪಾಶವ ಬಿಡಿಸಿ ಪಾರ್ಥಂ

---

1 ದ್ರುಪದಾಂಕನಾ, ಕ, ಖ.

ಗೊಲಿದು ದ್ರೋಣಾಚಾರ್ಯರೆಂದರು ಭೂಪ ಕೇಳೆಂದ |
ತಿಳುಹಿ ಬಾರ್ಕೈ ದ್ರುಪದನೀತನ
ಲಲನೆಯರ ಕೈಲೊಪ್ಪಿಸೆಂದರೆ
ಬಳಿಕ ಫಲುಗಣ ದ್ರುಪದರಾಜನ ಬಿಟ್ಟು ಹರುಷದಲಿ ‖ ೧೦೩

ದ್ರುಪದನಿಗೆ ದ್ರೋಣರ ಭರ್ತ್ಸನೆ.

ಕೊಂಡು ಬಂದರು ದ್ರೋಣನಿದಿರಲಿ
ದಿಂಡುಗೆಡಹಿದರೀತನನು ಕೈ
ಕೊಂಡನೆಲವೋ ದ್ರೋಣಸಖಪೂರ್ವಾಂತರವನೆನುತ [1] |
ಭಂಡನಿವನನು * ಕಳುಹಿ ಕಳೆಯಿಪ
ಚಂಡಿತನದಲ್ಲೀ ಸುದಿನ ಕ
ದ್ದಂಡವೊಳನನೇನ * ಮಾಡುವೆ ವೆಂದನಾದ್ರೋಣ ‖ ೧೦೪

ಎಲವೊ ಕೊಟ್ಟೆನು ಪ್ರಾಣದಾನವ
ನಳವು ನಿನಗೆಂತಹುದು ಸಾಹಸ
ದಳವಿಯನು ನೀನೆರಹು ಹಗೆಯಲಿ ಭಂಡ ಹೋಗೆನುತ |
ಕಳಚಿ ಕಟ್ಟದೆ [2] ನಿನ್ನ ರಾಜ್ಯದ
ನೆಲದೊಳರ್ಧವ ಕೊಟ್ಟು ನೀ ನಡೆ
ಬಳಿಕಲೆಂದೊಡಬಡಿಸಿ ದ್ರುಪದನ ಬಿಟ್ಟನಾದ್ರೋಣ ‖ ೧೦೫

ಬಳಿಕ ಪಾರ್ಥನು ದ್ರುಪದರಾಜನ
ಲಲನೆಯನು ಕರೆತರಿಸಿ ನಿಮ್ಮಾ
ಯಿಳೆಯೊಳರ್ಧವ ಕೊಂಡು ಗುರುಗಳು ಪ್ರಾಣದಾನವನು |
ಉಳುಹಿ ಬಿಟ್ಟರು ನಿಮ್ಮ ಪತಿಯನು
ತಿಳುಹಿಕೋ ನೀನೆಂದು ಪಾರ್ಥನು
ಬಳಿಕ ದುರ್ಯೋಧನನ ಕರ್ಣನ ಶಕುನಿಯನು ಕಂಡ ‖ ೧೦೬

1 ದ್ರುಪದಸಖಪೂರ್ವವನು ನೆನೆಯೆನುತ, ಚ.

* ಸಾಕುಬಿಡಿಸಲೆಚಂಡಿಯಾದನುದರ್ಪವಿಷವುಂ ಕೊಂಡ ಮೂರ್ಖತೆಗೇನ *

2 ಕಳೆದುಕೊಟ್ಟನು, ಚ.

ದ್ರುಪದನ ಪುತ್ರಕಾಮೇಷ್ಟಿ.

ಅರಸ ಕೇಳ್ಯ ದ್ರುಪದನೀಪರಿ
ಪರಿಭವಕೆ ಗುಱಿಯಾಗಿ ತನ್ನಯ
ಪುರವ ಹೊಗದೈತಂದು ಗಂಗಾತೀರದೇಶದಲಿ ।
ಧರಣಿಸುರರಲಿ ಪುತ್ರಕಾಮಾ
ಧ್ವರವ ವಿರಚಿಸಲಾಗ ಸತ್ವೋ
ತ್ಕರಸಮಗ್ರರ[1] ನರೆಸಿದನು ನಾನಾಗ್ರಹಾರದಲಿ ॥ ೧೦೭

ದ್ರೋಣಭಯದಲಿ ಸಕಲವಿಪ್ರ
ಶ್ರೇಣಿಯಿರೆ ಯಾಜೋಪಯಾಜರು
ಪ್ರಾಣನಿಸ್ಪೃಹರಾಗಿ ಮಾಡಿಸಿದರು ಮಹಾಕ್ರತುವ ।
ಕೇಣವೆಱಿದಾಹುತಿಯನಮರರ
ಬಾಣಸಿಗನುಣಬಡಿಸೆ ದೇವ
ಶ್ರೇಣಿ ದಣಿದುದು ಸಲಿಸಿದುದು ಪಾಂಚಾಲನಭಿಮತವ ॥ ೧೦೮

ಅರಸ ಕೇಳ್ಯ ಕೊಂಡಮಧ್ಯದೊ
ಳುರಿಯ ಕಱುವಿಟ್ಟೆಱಿವರೋ ಭಾ
ಸುರಮಹಾನಲನಪರರೂಪೋ ತಾನಿದೇನೆನಲು ।
ಶರವು ಖಡ್ಗವು ಚಾಪಚಕವರ್ಗೋ
ತ್ಕರ ಸಹಿತರೌದ್ರಾಂಗನಾಗವೆ
ತರಿಸಿದನು ಪಾಂಚಾಲಭೂಪತಿ ಭುಜವ ಸೊಪ್ಪೈಸೆ ॥ ೧೦೯

ವೇದಿಮಧ್ಯದೊಳೊಡೆದು ಮೂಡಿದ
ಳಾದರಿಸೆ ಜನವಮಮ ಕಾಮನ
ಕೈದುವೋ ತ್ರೈಲೋಕ್ಯಮೋಹನಮಂತ್ರದೇವತೆಯೊ ।
ಆದಿಯಲಿ ತಾ ಪಂಚದೇವರು

---

1 ಲಾಗಿ ಸತ್ವೋತ್ಕರ್ಷವಂತರ,

ಮೇದಿನಿಯೊಳೊಂದಂಗವಾಗಿಯೆ
ಯಾದವೇಂದ್ರನ ವೈರಿವರ್ಗಕೆ ಮೂಲಭೇದನವೊ ॥ ೧೧೦

ಕಾದುವೊಡೆ ಕರೆ ಹರಿಹರಬ್ರ
ಹ್ಮಾದಿಗಳಗೊರೆ ಯೆಂಬಹಂಕೃತಿ
ಯಾದುದಾರಾಯಂಗೆ ದ್ರುಪದಾತ್ಮಜೆಯ ಜನನದಲಿ ।
ಮೇದಿನಿಯ ಭೂಪರುಗಳನಿಸುವ
ಸೋದರರು ಶತವೆನಿಪ ಕೌರವ
ಗಾದಳ್ಳ ತಾ ಮೃತ್ಯುದೇವತೆ ಪರಿಯ ಕರುಣದಲಿ ॥ ೧೧೧

ದ್ರುಪದ ರಚಿಸಿದ ಮುಖವ ದ್ರೋಣನ
ನಪಹರಿಸೆ ಬೇಕೊಂದು ಪುತ್ರನು
ವಿಪುಳಭುಜಬಲಪಾರ್ಥನರಸಿಯುಮಾಗಬೇಕೆಂದು ।
ಜಪಿಸಲಿಕೆ ಮನದಂತಭೀಷ್ಟವು
ಸಫಲವಾಯಿತು ಪುತ್ರಿಪುತ್ರರು
ವಿಪುಳದ್ರೌಪದಿಪಿದಿತದೃಷ್ಟದ್ಯುಮ್ನರಾಗಲಿಕೆ ॥ ೧೧೨

ದ್ರೋಣವೆಧೆಗೀಮಗನು ಪಾರ್ಥಗೆ
ರಾಣಿಯೀಮಗಳೆಂದು ದ್ರುಪದ
ಕ್ಷೋಣಿಪತಿ ಸಲಹಿದನು ಸುತನನು ಸುತೆಯನೊಲವಿನಲಿ [1] ।
ದ್ರೋಣನಾಜ್ಞೆಗೆ ಪಾರ್ಥ ಕುರುಕುಲ
ಶ್ರೇಣಿಪತಿಮೊದಲಾದ ವೀರರ
ಗೋಣುಗಳ ಬಗೆವಡೆವನೇಣನು ಕೊಯ್ದು ಬಿಡಿಸಿದನು ॥ ೧೧೩

ತ್ರಾಣವಿಲ್ಲದ ಕುರುಕುಲೇಂದ್ರ
ಶ್ರೇಣಿ ಸರಿದುದು ಮರಳಿ ಪಾಂಡವ
ದ್ರೋಣರೆಲ್ಲರು ಬಂದು ಹೊಕ್ಕರು ಹಸ್ತಿನಾಪುರವ ।

1 ಸುತರನುಸಾನುರಾಗದಲಿ, ಚ,

ದ್ರೋಣ ಕಲಿಸಿದ ಸಕಲವಿದ್ಯೆಯ
ಜಾಣಿಕೆಯನೆಲ್ಲವನು ಕುವರಗೆ
ಕಾಣೆನಾವಿಗಡಂಗೆ ಸರಿಯನು ಭೂಪ ಕೇಳೆಂದ ॥ ೧೧೪

ಮಗನು ಧೃಷ್ಟದ್ಯುಮ್ನ ದ್ರೌಪದಿ
ಮಗಳು ಭಾರದ್ವಾಜಗೆತ್ತಿದ
ಹಗೆಗೆ ಪರಿವೆಹುದೆಂದು ಹಿಗ್ಗಿದ ದ್ರುಪದಭೂಪಾಲ ।
ದುಗುಡದಲಿ ಕುರುರಾಯ ದಾಯಾ
ದಿಗಳ ಬಿರುದಿನ ಬಿಂಕದಂಕೆಯ
ಬಿಗಿದಃಹರಿಯನು ನೆನೆದು ಮರುಗಿದನರಸ ಕೇಳೆಂದ ॥ ೧೧೫

ಏನು ಮರುಗಿದೊಡೇನು ಪಾಂಡವ
ಮಾನಸಿಧಿಗಳ ಪುಣ್ಯದನುಸಂ
ಧಾನ ಬೇಹುರದಲ್ಲಿ ಬೈಚಿಡು ದೇವಲೋಕದಲಿ ।
ಮಾನವರು ಮುನಿದೇಗುವರು ಪು
ಣ್ಯಾನುರಾಗದೊಳೊಬ್ಬರೊಬ್ಬರ
ತಾನು ರಕ್ಷಿಪ ಪಾಂಡುಪುತ್ರರ ವೀರನಾರಯಣ ॥ ೧೧೬

ಹದಿನೆಂಟನೆಯ ಸಂಧಿ ಮುಗಿದುದು.

ಹತ್ತೊಂಬತ್ತನೆಯ ಸಂಧಿ.

ಸೂಚನೆ.

ಚಂಡಭುಜಬಲ ರವಿತನಯ ಮುಂ
ಕೊಂಡು ಬಿಲ್ಲನು ವರಿಸಿ ಪೃಥ್ವೀ
ಮಂಡಲವ ಗೆಲಿದೈದಿ ಕೌರವಸಹಿತ ನಡೆತಂದ ॥

ವೈಶಂಪಾಯನರ ಭಾಷಣ.

ನಿಯುತಮತಿ ಚಿತ್ತವಿಸು ಜನಮೇ
ಜಯ ಮಹೀಪತಿ ನಿಮ್ಮ ಪೂರ್ವಾ
ನ್ವಯದ ಪಾರ್ಥಿವರಱಿದರುಸ್ನತಶಸ್ತ್ರವಿದ್ಯೆಗಳ ।
ಭಯವಿಹೀನರು ಕರ್ಣಪಾರ್ಥರು
ಜಯಗತಿಗೆ ಸಮನೆನಿಸುತಿರಲನು
ನಯದಿ ಕುರುಪತಿಯೊಡನೆ ಸಖ್ಯದಿ ದಿನಪಸುತನೆಸೆದ ॥ ೧

ಅನಿತರೊಳು ಕೇಳದನು ಭೂಪಾ
ಲನು ಮುನಿಪತಿಯ ಜೀಯ ಕರುಣಿಸು
ದಿನಪಜನು ತಾನೆಂತು ಬೆರಸಿದ ಕೌರವೇಂದ್ರನಲಿ ।
ಜನಪತಿಗೆ ರವಿಸೂನು ಮಾಡಿದ
ನೆನಹಿನಭಿಮತಕಾರ್ಯವೇನದ
ನೆನಗೆ ವಿಸ್ತರವಾಗಿ ಕರುಣಿಪುದೆಂದು ಕೈಮುಗಿದ ॥ ೨

ಕರ್ಣನ ಆಶ್ರಮಕ್ಕೆ ವಿಭಾಂಡಕತನುಜರ ಆಗಮನ.

ಅರಸ ಕೇಳಾದೊಡೆ ದಿವಾಕರ
ವರಸುತನು ಜಮದಗ್ನಿಸುತನೊಳ
ಗಱಿದು ವಿದ್ಯೆಯನಿಷ್ಫಲತ್ವವನೈದಲಲ್ಲಿಂದ ।
ಮಱುಕ ಮಿಗಲೈತಂದು ಗಂಗಾ
ವರನದೀತೀರದಲಿ ತಪದಿರೆ
ವರವಿಭಾಂಡಕತನುಜನೈತಂದನು ತದಾಶ್ರಮಕೆ ॥ ೩

ವಿನಯದಿಂದಿದಿರೆದ್ದು ಮುನಿಪನ
ದಿನಪಸುತ ಸತ್ಕರಿಸಿ ಬೞಿಕಾ
ವಿನುತಮಧುರಫಲಾದಿಗಳನಿತ್ತುಪಚರಿಸಲಂದು ।
ಮನದೊಳತಿಹರುಷದಲಿ ಹರಿಸಿದ
ವನಜಸಖನಂದನನನಂದಾ
ತನಗೆ ಬಂದ ವಿಪತ್ತನಱುಹಿದನೀಮಹಾಮುನಿಪ ॥ ೪

ರಾಯ ಕೇಳಾಮುನಿಪನಾಶ್ರಮ
ದಾಯತದ ಮಂದಿರಕೆ ದೈತ್ಯನಿ
ಕಾಯಸಹಿತಾಗೊಬ್ಬನು ಜರಾಮನ್ಯುವೆಂಬವನು ।
ಮಾಯೆಯಲಿ ಮುನಿ ಮಾಳ್ಪ ಯಜ್ಞನಿ
ಕಾಯಸತ್ಕ್ರಿಯೆಗಳನು ಕೆಡಿಸುವ
ನೀಯವಸ್ಥೆಯ ಹೇಳಿದನು ರಾಧೇಯಗಾಮುನಿಪ ॥ ೫

ಕರ್ಣ ದೈತ್ಯರ ಯುದ್ಧ.

ಕೇಳುತಾಗಳೆ ರವಿಜನಾಮುನಿ
ಪಾಲಕನ ಸಂತೈಸಿ ನಾ ಬಹೆ
ನೇಳಿ ವಿಗೆ ಪರಿಹರಿಪೆ ದೈತ್ಯನನೆನುತ ನಡೆತಂದು ।
ಧಾಳಿಯಿಟ್ಟನು ವರಜರಾಮ
ನ್ಯಾಲಯವ ಪಟ್ಟಣಕೆ ಖಳನಗ
ಕೇಳಿ ಕಾಲನ ಪೋಲು ಖತಿಯಿಂದಾಗಲೈತಂದ ॥ ೬

ಎಲವೆಲವೊ ಕವಿ ಕೊಲ್ಲೆನುತ್ತಾ
ಖಳನು ಮಾಯಾಜಾಲದಲಿ ರಿಪು
ಜಲಧಿಬಡಬನೊಳಾಂತು ನಿಂದನು ದೈತ್ಯಬಲಸಹಿತ ।
ಕಲಕಿದನು ಬಲಜಲಧಿಯನು ಬಲು
ಚಳಕದಲಿ ತೆಗೆದೆಸುತ ಸಲೆ ಮು
ಕ್ಕಳಿಸಿದನು ವಿಜ್ಞಾನಸಂಜ್ಞಾನಾಸ್ತ್ರದಲಿ ಬಲವ ॥ ೭

ಹೊಕ್ಕನಾಬಲಜಲಧಿಯನು ಸದೆ
ದಿಕ್ಕ ದೈತ್ಯನ ಮಾಯೆಯೆಲ್ಲವ
ಸುಕ್ಕಿಸಿದನದಟಿಂದ ಮಾಯಾಸಂಜ್ಞಕಾಸ್ತ್ರದಲಿ ।
ಮಿಕ್ಕು ಖಳನೈತಂದ ಗದೆಗೊಂ
ಡೆಕ್ಕತುಳದಲಿ ಕೋಪದಲಿ ಕಿಡಿ
ಯುಕ್ಕಲೆಳಗಿದನಿವನನೈದಿ ನಭೋಂಗಣದೊಳಸುರ ॥ ೮

ಎಱಗಿದಸುರನ ಗದೆಯು ಘಾಯಕೆ
ತರಹರಿಸಿ ಶಕ್ತಿಯನು ತೆಗೆದಾ
ಗರಿಭಟನನಿಡಲೆದೆಯನೊಳಕೊಂಡೈದೆ ಧರಣಿಯಲಿ ।
ಎಱಗಿತವನಸುವ್ರೋರ್ಗುಡಿಸಲಂ
ದಿರದೆ ಹಾಯ್ದುದು ದೈತ್ಯಜನವಾ
ಗುಱುವಶೋಣಿತಪುರಕೆ ಬಳಿಕಾಪುರದ ಜನನಿಕರ ॥ ೯

ಕಂಡಕಡೆಗೋಡಿತ್ತು ದೈತ್ಯರ
ತಂಡವವರಿಂಗಭಯವನು ಮಾ
ರ್ತಂಡಸುತ ಕರುಣಿಸುತ ಕರೆದನು ನಾಡುಬೀಡುಗಳ ।
ಹೆಂಡಿರನು ಬಳಿಕವನ ಮಗನನು
ಕಂಡು ಪಟ್ಟವ ಕಟ್ಟಿ ಧರಣೀ
ಮಂಡಲಕ್ಕರಸೆನಿಸಲಾಗ ಪ್ರಲಂಬರಾಕ್ಷಸನ ॥ ೧೦

ಮುನಿಯು ತುಷ್ಟನಾಗಿ ವರವನ್ನು ಕೊಡುವಿಕೆ.

ಇತ್ತ ಋಶ್ಯದ ಶೃಂಗಮುನಿಪತಿ
ಯತ್ಯಧಿಕಹರ್ಷದಲಿ ಮುನಿಜನ
ವೊತ್ತಸಹಿತಿದಿರ್ವಂದು ಮಿತ್ರಾರಪಿಯು ನಂದನನ ।
ಉತ್ತಮದ ಶೌರ್ಯಾನುಗುಣಗಳ
ಗರ್ತಿಯಿಂದುಱೆ ಮೆಚ್ಚಿ ಬೇಡುವು
ದತ್ಯಧಿಕಮನದಿಚ್ಛೆಯನು ಕೇಳೆಂದು ನೇಮಿಸಿದ ॥ ೧೧

ಬೇಡುವೆನು ದೃಢತರದ ಧೈರ್ಯವ
ಬೇಡುವೆನು ರಣದೊಳಗೆ ಖಾಡಾ
ಖಾಡಿಯಿಲ್ಲದೆ ಕಾಯುವ ಸಮರ್ಪಿಸುವ ಬುದ್ಧಿಯನು ।
ಬೇಡುವೆನು ಹರಿದರುಶನವ ಕಡೆ
ವೀಡಿನೊಳಗೆನ್ನಂತ್ಯಕಾಲಕೆ
ಬೇಡುವೆನು ಪಂಚಾಶತರ ಸುಕುಮಾರಕರನೆಂದ ॥ ೧೨

ಎಂದೊಡದು ಲೇಸೆನುತ ತರಣಿಜ
ಗಂದು ಮಂತ್ರಿಸಿ ಕೊಟ್ಟನನುಪಮ
ಬಂಧುರದ ಜಂಬೂಫಲವ ನಿನಗಧಿಕಮಮತೆಯಲಿ |
ಸಂದಸತಿಯರಿಗೀವುದೈ ನೀ
ನೆಂದು ನೇಮಿಸಿ ಕಳುಹಿದನು ಮುನಿ
ಯಂದು ಬಂದನು ಮಿಗೆ ವಿಚಾರಿಸುತಧಿಕಜನಪದವ ‖ ೧೩

ಕರ್ಣನು ಸಿಂಧುದೇಶಕ್ಕೆ ಹೋಗುವಿಕೆ.

ಧಾರುಣೀಪತಿ ಕೇಳು ಬಳಿಕಲು
ದಾರವಿಕ್ರಮ ಸಿಂಧುದೇಶದ
ಭೂರಮಣನೆಡೆಗೈದಿ ವೃದ್ಧಕ್ಷತ್ರಭೂಪತಿಯ |
ಸಾಱಿದನು ಬಳಿಕೀತನನು ಕಂ
ಡಾರಯಿದು ಮನ್ನಿಸಿದನವನಿಪ
ಸೂರ್ಯನಂದನನ ಬೆಸಗೊಳ್ಳುತ್ತಾಗಲಿಂತೆಂದ ‖ ೧೪

ಪಸಿದಾರೈ ನೀನು ತೇಜೋ
ಭಾನು ಪೇಳ್ವೈ ದಿವಿಜನೋ ಮನು
ಜನೇನು ಚಿಂತೆಯಿದೇಕೆ ನಿನ್ನಭಿಧಾನವೇನೆನಲು |
ಏನನೆಂಬೆನು ತನ್ನ ಮನದ ಮ
ಲೀನವನು ಹೇಳಿದೊಡೆ ಧರೆಯೊಳು
ಮಾನವರೊಳತಿಹೀನ ತಾನೇ ಸೂತಸುತನೆಂದ ‖ ೧೫

ಜನನದಧಿಕದ ನೆಲೆಯನಱಿಯೆನು
ಜನಪ ಕೇಳೆನ್ನವನು ರಾಧಾ
ತನಯನೆಂಬರು ಕಬ್ಬಿಲನು ಮಿಗೆ ಸಾಕಿದೆನ್ನವನು |
ಮುನಿಪನಾಜಮದಗ್ನಿರಾಮರ
ಸನಿಹದಲಿ ಸಕಲಾಸ್ತ್ರಶಸ್ತ್ರವ
ನನಿತ ಕಲಿತೆನು ಭೂಸುರೋತ್ತಮನೆನಿಸಿ ತಾನೆಂದು ‖ ೧೬

ಆಮುನಿಪತಿಗೆ ಶಿಷ್ಯನಾಗಿಯೆ
ಪ್ರೇಮದಲಿ ವರಬಿಲ್ಲುವಿದ್ಯೆಯ
ನೇಮಗೊಂಡೇ ಸಾಧಿಸಿದೆ ನಾ ಕೆಲವುಕಾಲದಲಿ ।
ಕ್ಷೇಮರಹಿತನ ಮಾಡಿದನು ಸು
ತ್ರಾಮನೆನ್ನನು ನಿಜವನಖಿದಂ
ದಾಮುನಿಪನಟ್ಟಿದನು ಶಾಪವಸಿತ್ತು ಸಿಷ್ಯಳದಿ ॥ ೧೭

ಅದಱಿನೆನಗೀಗುತ್ತಮದ ಕೋ
ವಿದಧನುರ್ವಿದ್ಯಾಪ್ರವೀಣರು
ಸದಮಳರದಾರುಂಟು ವಿಪ್ರರೊಳಧಿಕಶಿಕ್ಷಕರು ।
ಮುದದಲೆಂದೆನೆ ತೆಗೆದು ಬಿಗಿದ
ಪ್ಪಿದನು ಚಿಂತೆಯ ಬಿಡು ವಿವೇಕದಿ
ನೊದಗಿಸುವೆ ಕೇಳೆಂದು ಮತ್ತಿಂತೆಂದನಾಭೂಪ ॥ ೧೮

ಅಲ್ಲಿಂದ ರಾಜನ ಅಪ್ಪಣೆಯಂತೆ ಹಸ್ತಿನಾವತೀಗಮನ

ಕಳುಹುವೆನು ನಿನ್ನೀಕುಮಾರನ
ನಿಳೆಯೊಳಧಿಕವನಿಪ್ಪ ಗಜಪುರಿ
ಯೊಳಗೆ ಭಾರದ್ವಾಜಸುತನಾದ್ರೋಣನಾಮದಲಿ ।
ಚಲಿಸದನುಗತಬಾಣವಿದ್ಯೆಯ
ಕಲಿಸುವನನೇಕರಿಗೆ ನೀ ಸಹಿ
ತಳವಡಿಕೆಯಿಂದೈದು ಸೈಂಧವಸಹಿತ ಬೇಗೆಂದ ॥ ೧೯

ಎನಲು ಕರ ಲೇಸೆನುತ ದಿನಪನ
ತನುಜ ಕಳುಹಿಸಿ ಕೊಂಡು ಬಂದನು
ಜನಪ ಕೇಳು ಜಯದ್ರಥನು ಸಹಿತಂದು ಗಜಪುರಿಗೆ ।
ಜನಪ ಕೌರವನೃಪನ ಕಂಡನು
ಸನಿಹದಿಂದಿದಿರೆದ್ದು ದುರ್ಯೋ
ಧನನು ತೆಗೆದಪ್ಪಿದನು ಬೆಸಗೊಳುತಿವನ ಸಂಗತಿಯ ॥ ೨೦

ಧರಣಿಪತಿ ಕೇಳಿದನು ಮತ್ತಾ
ತರಣಿಸುತನತಿಪೂರ್ವವೃತ್ತಾಂ
ತರವನಾಗಳ್ ಮತ್ತೆ ತೆಗೆದಪ್ಪಿದನು ಕುಳ್ಳಿರಿಸಿ ।
ಅರಸನೆಂದನು ತನ್ನ ಸೋದರ
ವರರನಿಬರಲಿ ನೀ ಹಿರಿಯನೆಂ
ದಱಿದು ನಮ್ಮಿಸನಿಹದಲಿ ನೀನಿರುವುದೈ ಯೆಂದ ॥ ೨೧

ಆಗ ಸ್ವಯಂವರವಾರ್ತಾಶ್ರವಣ

ಇಂತು ಕರ್ಣನ ಸಖ್ಯದಲಿ ಭೂ
ಕಾಂತನಾಕೆಲಕಾಲವಿದ್ರಾ
ಮುಂತೆ ಕಲಿತರು ದ್ರೋಣನಲಿ ಬಟಿಕಖಿಳವಿದ್ಯೆಗಳ ।
ಸಂತಸದೊಳಿರಲೊಮ್ಮೆ ಬಂದುದು
ತಿಂತಿಣಿಯೊಳತಿಶಯದ ವೈವಾ
ಹಾಂತರಾಳದಲಧಿಕಲಿಖಿತವವಂತಿದೇಶದಲಿ ॥ ೨೨

ಅರಸ ಕೇಳ್ತದ್ದೇಶದಧಿಪತಿ
ವರಮಹಾನೃಪ ಭಾನುದತ್ತನು
ಧರೆಗಧೀಶ್ವರನವನ ಸೋದರ ಸೋಮದತ್ತನೃಪ ।
ಉರುಭುಜಾಬಲದಿ ಭಗದತ್ತನು
ಸುರವರೇಣ್ಯನ ವಿಭವಕತಿಬಂ
ಧುರವನಲು ವಿಸ್ತರಿಸಿದರು ವೈವಾಹಸಾಧನವ ॥ ೨೩

ಆನೃಪಾಲಕರಿಂಗೆ ಮೂವರು
ಮಾನನೀಯರು ಕನ್ನಿಕೆಯರಭಿ
[illegible]ಪಿಸ್ಕೃರು ಭಾನು ಮತಿ ವರಚಂದ್ರಮತಿ ಸುರಸೆ ।
[illegible] ವೈವಾ
[illegible]ಸ್ಯತಿಕಗನುಮಾನಿಸದೆ ನೃಪ
[illegible] ಬಂದರು ಸ್ವಯಂವರಕೆಂದು ಧರಣಿಪರು ॥ ೨೪

ಬಂದರಾಮಗಧಾವನೀಶರು
ಬಂದರಾಮತ್ಸ್ಯಾದಿಕೈಕಯರು
ಸಿಂಧುದೇಶಕಳಿಂಗಬರ್ಬರರಾದಿಯಾದವರು ।
ಬಂದರಾಪಾಂಚಾಲಕೋಸಲ
ವೃಂದಜನಶಿಶುಪಾಲಸೌಬಲ
ರಂದು ಸಾಲ್ವಪ್ರಮುಖ ಕಾಶೀರಾಜರೊಡಗೂಡಿ ॥ ೨೫

ಈಕುರುಕ್ಷಿತಿಪಾಲಸಹಿತವ
ನೇಕಕುರುಪತಿಯನುಜರೆಲ್ಲರು
ಚೇಕಿತಾನ ಕಳಿಂಗಸಹಿತೀಭಾನುಸುತಸಹಿತ ।
ನೂಕಿ ನಡೆದರು ಬಚಿಕ ವಿವಿಧಾ
ನೇಕಬಲಮೇಳಾಪದಲಿ ಕುಂ
ತೀಕುಮಾರಕರುಚಿಯೆ ಹಸ್ತಿನಪುರದಿ ಬಹಳಜನ ॥ ೨೬

ಬಂದ ಸಕಲಾವನಿಪಭೂಸುರ
ವೃಂದವನು ಮನ್ನಿಸಿದರವರಾ
ನಂದದಲಿ ವೈವಾಹಿಕೋತ್ಸವದಧಿಕವಿಭವದಲಿ ।
ಮುಂದೆ ಮೆಱೆವ ಮಹಾಸುಧಾರ್ಮಿಕ
ಛಂದದಾಮಂಟಪದೊಳೊಡ್ಡಿದ
ರಂದು ಧನುವನು ನಿಶಿತವಹ ಬಲುಬಾಣಗಳನಿರಿಸಿ ॥ ೨೭

ತರಿಸಿ ಧನುವನು ಯಂತ್ರಮತ್ಸ್ಯವ
ನಿರಿಸಿ ಸಾಱಿಸಿದರು ಕುತೂಹಲ
ಧರಣಿಪಾಲಸಮೂಹವೆದ್ದುದು ಕಾರ್ಮುಕವ ತುಡುಕಿ ।
ತರತರದಲೈತಂದು ಬಿಲ್ಲಿನ
ತಿರುವ ತೊಡಿಸಲು ನೆರೆಯದಾದರು
ಧರಣಿಪತಿಗಳು ವರಜರಾಸಂಧಾದಿನಾಯಕರು ॥ ೨೮

ಏನ ಹೇಳುವೆನರಸ ಮುಳಿದು ಮ
ಹಾನರೇಂದ್ರರು ಭೀತರಾದರು
ಮಾನಹಾನಿಗಳಾದುವೆಂದೈದಿದರು ತಮತಮಗೆ |
ಭಾನುಸುತನನುಮಾನವಿಲ್ಲದೆ
ಮಾನನಿಧಿಕುರುಪತಿಯ ಬೀಳ್ಕೊಂ
ಡಾನು ವರಿಸುವೆನಂಗನೆಯನೆನುತೈದಿ ನಿಂದಿರ್ದ || ೧೯

ಇವನ ಕಂಡುದು ಸಕಲನಾರೀ
ನಿವಹ ಭ್ರಮಿಸಿದುದೀತನಂಗೋ
ತ್ಸವಕೆ ಸೋತುದು ಸೂತಸುತನೆಂದೊಡನೆ ಶಂಕಿಸುತ |
ಅವನಿಪತಿ ಕೇಳೈದಿ ಬಳಿಕಾ
ರವಿಸುತನು ಬಲವೆಂದು ಬಿಲ್ಲಿನ
ಲವಳಿಗೆಯ ನೇವರಿಸಿ ರವಿಮಂಡಲಕೆ ಕೈಮುಗಿದ || ೨೦

ಕರ್ಣನು ಯಂತ್ರಮತ್ಸ್ಯವನ್ನು ಖಂಡನ ಮಾಡಿದುದು.

ಚಂಡಿಸಿದ ಸಕಲಾವನೀಶರ
ಮಂಡೆಯನು ಹೊಡೆದಂತೆ ಬಿಲ್ಲನು
ಕೊಂಡು ತಿರುವನು ತೊಡಿಸಿ ತಳೆದನು [1] ಬಲಿದು ಮಂಡಿಯಲಿ |
ಕೊಂಡನಾಕೂರಂಬನಾಕ್ಷಣ
ದಿಂಡುರುಳಲಾಯಂತ್ರಮತ್ಸ್ಯವ
ಖಂಡಿಸಿದನಾಧನುವ ಗೆಲಿದನು ಹಿಗೆ ಸ್ವಯಂವರವ || ೨೧

ಸಂದಣಿಸಿದಾಸಕಲರಾಯರ
ವೃಂದ ಕಂಡುದು ತಮತಮಗೆ ಮನ
ಗುಂದಿ ಹೋದರು ಕೆಲರು ನಿಂದರು ಕೆಲರು ಖಾತಿಯಲಿ |
ಮಂದಮತಿಗಳು ನಿಪ್ಪಸರದಲಿ
ಸಂದಣಿಸಿದರು ರವಿಸುತನ ಮೇ
ಲಂದು ಮಾಗಧಕೀಚಕಾದಿಗಳವನಿಪಾಲಕರು || ೨೨

---

1 ಸೆಳೆದು, ಖ.

ಮಗಧಾದಿಗಳೊಡನೆ ಕರ್ಣನ ಯುದ್ಧ.

ಅಕಟ ನಮ್ಮೀಸಕಲರಾಜರ
ನಿಕರವೆಲ್ಲವನುಳಿದು ಕಡು ತು
ಚ್ಛಕದಿ ಸೂತನ ಕುವರಗಾಯ್ತೀ ವಿಜಯ ಬಿಲ್ಲಿನಲಿ |
ವಿಕಳರಾದೆವು ನಾವೆನುತ [1] ನಿ
ಶ್ಚಕಿತಮಾಗಧಸಾಲ್ವರಾಕೀ
ಚಕರು ನಿಂದರು ರಣದೊಳದನೇ ವರ್ಣಿಸುವೆನೆಂದ || ೨೩

ಇತ್ತ ನೆರೆದುದು ಭೂಮಿಪಾಲರ
ಮೊತ್ತ ಕರ್ಣನ ದೆಸೆಯಲಾಕುರು
ಪೃಥ್ವಿಪತಿಗಳು ಕೌರವಾದಿಜಯದ್ರಥಾದಿಗಳು |
ಮೊತ್ತದಾಬಲವೊಂದೆಸೆಗೆ ವಿಬು
ಧೋತ್ತಮರು ಕಂಪಿಸಲು ಸಂಗರ
ವತ್ಯಧಿಕದಲಿ ಮಸೆದುದವನೀಪಾಲ ಕೇಳೆಂದ || ೨೪

ಮಸಗಿತದ್ಭುತಯುದ್ಧವಾದಿ
ಕ್ಪ್ರಸರ ಮುಸುಕಿತು ಕವಿವ ಬಾಣದ
ನಿಶಿತತೋಮರಬಿಂಡಿವಾಳದ ಖಡ್ಗತೋಮರದ |
ವಿಷಮಧಾರಾಸಾರದಲಿ ಧರೆ
ಮುಸುಕಿತಿವರವರೊಡ್ಡಿನಲಿ ನಿ
ಪ್ಪಸರದಲಿ ಬಿದ್ದುದು ವರೂಥತುರಂಗಕರಿನಿವಹ || ೨೫

ಮುಂಬಿಗರು ಮಿಗೆ ಘಾಸಿಯಾದರು
ಡೊಂಬಿಯಾಹವದೊಳಗೆ ಕರ್ಣನ
ಬೆಂಬಲದಿ ನೆಲೆ ಕುರುನೃಪಾಲಕರಾರ್ದು ಬೊಬ್ಬಿರಿದು |
ಎಂಬೆನೇನನು ಹೊಕ್ಕನಾಬಹ

---

1 ರಾಧೆವಲಾಯೆನುತ, ಖ.

ಳಾಂಬುಧಿಯು ಬಡಬಾಗ್ನಿ ಕವಿವಂ
ತಂಬುಜದ ಸಖಸೂನು ಹಿಡಿದನು ಸವರಿ ಪರಬಲವ ॥ ೩೬

ಕಾಲಯಮನೋ ಕರ್ಣನೋ ತೆಗೆ
ಕಾಳಗವನೆನೆ ಬಿನುಗುನೃಪತಿಗ
ಳೋಳಿ ಸಾಲಿಡೆ ಶಿರಗಳೆಣ್ದೆಸೆಗಳಲಿ ಪಸರಿಸಲು ।
ಕಾಲಗಂಡರು ಕೆಲಬರಂದಾ
ಬಾಲಕರ್ಣನ ಶಸ್ತ್ರಹತಿಯಲಿ
ಸೋಲದವರಿಲ್ಲೆನಲು ಕವಿದವು ಹೊಕ್ಕು ಪರಬಲವ ॥ ೩೭

ಅಳವಿಯಲಿ ಕೈಮಾಡಿ ಸಾಲುವ
ನಳವಳಿದನಾಕ್ಷಣದಿ ಕೀಚಕ
ನಳವಿಗೊಟ್ಟನು ಸೂಸಿದನು ಸರಳುಗಳ ಸಮ್ಮುಖದಿ ।
ಕಲಿತನವನೇನೆಂಬೆ ನಾಬಲುಸ
ರಳು ಕವಿದವು ಸೂತನಂದನನಳ
ವಳಿಯೆ ರಥಸಾರಥಿಗಳಳಿವಾಯ್ತು ಕದನದಲಿ ॥ ೩೮

ಮತ್ತೆ ಹೊಸರಥ ಸೂತನಸ್ತ್ರತ
ನುತ್ರಸಹಿತಿದಿರಾಗಿ ಸುಭಟನ
ತೆತ್ತಿಸಿದನಾಕರ್ಣ ಕವಿಸಿದನಧಿಕಮಾರ್ಗಣವ ।
ಕತ್ತರಿಸಿದನು ಕೀಚಕನು ನಭ
ವೆತ್ತಲೆಣ್ದೆಸೆಗೆನಲು ಸನಿಹದಿ
ಮತ್ತೆ ಕವಿದುವು ಬಾಣವೀತನನರಸ ಕೇಳೆಂದ ॥ ೩೯

ಕೊಂಬನೇ ಕೂರ್ಗಣೆಯ ಮುಸಿದೊಡೆ
ಯಂಬುಜದ ಸಖಸೂನು ನೋಡೆ ತ್ರಿ
ಯಂಬಕನ ಸಮ ಜೋಡಿಯಲ್ಲಾ ಬಾಹುವಿಕ್ರಮದಿ ।
ಹಂಬಲಿಸಲವನುಱವನೆಚ್ಚನು
ಬೆಂಬಿಡದೆ ಕೀಚಕನ ರಥದೊಳು
ತುಂಬಿಸಿದ ಬಲುಗೋಲ ಮಂಪಱಲಿ ನಾದಿದನು ಹಯವ ॥ ೪೦

ಆತನನು ಹಿಂದಿಕ್ಕಿ ಬಚಿಕೇ
ಸೂತಸುತನೊಳು ಮಗಧ ನಿಂದನು
ಭೂತಳಾಧಿಪ ಕೇಳು ಮುಸುಕಿದನಿನಸುತನ ರಥವ |
ಆತನೇ ನವ್ರೊಡನೆ ರಣವನು
ಭೀತನಾಗದೆ ನಿಲ್ಲೆನುತ ರಿಪು
ಸೂತನನು ತಡೆಗಡಿದು ಮಗಧನ ಧನುವ ಖಂಡಿಸಿದ || ೪೧

ಮೊಱೆದು ಪುನರಪಿ ಹಚಿದ [1] ನಾಹೊಸ
ತಿರುವನೇಱಿಸಿ ಮಹಿಪನೆಚ್ಚ ನು
ತರಣಿನಂದನನೆಚ್ಚ ನಾತನ ವಕ್ಷಿಬಾಣಗಲಿ |
ತಱಿವನವ ವರುಣಾಸ್ತ್ರದಲಿ ಬೊ
ಬ್ಬಿಱಿದು ಮೋಹಿನಿಯುಮಳಮಾರ್ಗಣ
ದಿರವಿನಲಿ ಮುದ್ರಿಸಿದನಾತನನೀತ ಪರಿಭವಿಸಿ || ೪೨

ಧರಣಿಪತಿ ಕೇಳಾಗಳಾನೃಪ
ವರನು ಮೂರ್ಛೆಗೆ ಸಂದನವರಲಿ
ಪಿರಿದು ಬಲುಮಂಡಳಿಕರಾಂತರು ಸೂತನಂದನನ |
ಪಿರಿದು ಪೃಥ್ವೀಪತಿಗಳನು ಸಂ
ಹರಿಸಿದನು ಕೆಲಬರನು ಕೆಲಬರ
ಸೆಱೆಯ ಹಿಡಿದನು ಕೇಳು ಜನಮೇಜಯಮಹೀಪಾಲ || ೪೩

ಸಮರಜಯ ಕಾಳಾಯ್ತು ಭೂಪ್ರೋ
ತ್ತಮರು ಬಿದ್ದರು ರಣದಿ ಸಮರ
ಶ್ರಮದ ಭಾರಣೆಯುಡಗಿ ಕಣ್ದೆಱೆದೆದ್ದು ಮಾಗಧನು |
ಕುಮತಿಯುಱಿವನು ರವಿಸುತನ ಸಂ
ಕ್ರಮಿತಶೌರ್ಯವನಿನ್ನು ಗರ್ವೋ
ದ್ಗಮವು ಸಾಕೆಂದೆನುತಲೀತನ ನುಡಿಸಿದನು ನೃಪತಿ || ೪೪

1 ಸೆಳೆದ, ಕ.

ಮಗಧನು ಕರ್ಣನೊಡನೆ ಸ್ನೇಹವಾಡುವಿಕೆ.

ವಾಸಿ ಬೀತುದು ನನಗೆ ನಿನ್ನಲಿ
ಲೇಸು ಲೇಸೈ ಕರ್ಣ ಸಮರಾ
ಭ್ಯಾಸಿಯಹೆ ಮೆಚ್ಚಿದೆನು ನಿನಗೆನಗೇಕೆ ಕಾಳಗವು ।
ಆಸರಡಗಿದುದೆನಗೆ ನಿನಗಿಂ
ದೀಸಿ ಕೊಡುವೆನು ಕನ್ನಿಕೆಯನಿ
ನ್ನೋಸರಿಸದೆಸಗುವನು ಮದುವೆಯನೆಂದನಾಮಗಧ ॥ ೪೫

ಇಂದಿನಿಂದವೆ ಪರಮಬಾಂಧವ
ಕುಂದದೆನಗೆಯು ನೀನು ನಡೆಯ್ಯೆ
ಮಂದಿರಕೆ ಮತ್ತೇನು ಭೃಗುಜನ ಕೋಲ ಮಗನಲ್ಲ ।
ಮುಂದೆ ಕಾಳಗ ಬೇಡವೆಂದೈ
ತಂದು ರಥವಿಳಿದೊಡನೆ ಕರ್ಣಗೆ
ವಂದಿಸಿದೊಡಿದಿರಪ್ಪಿದನು ಬಟಕೆಂದನವನೊಡನೆ ॥ ೪೬

ಆದೊಡೆಲೆ ಮಗಧಾವನೀಪತಿ
ಸಾಧಿಸಿದೆ ನಿಂದೀಸ್ವಯಂವರ
ದಾದಿಯಲಿ ನಿವಿಸ್ಮಾಕುರುಕ್ಷಿತಿಪಾಲಕಂಗೊಲಿದು ।
ಮೇದಿನಿಯೊಳಂದಧಿಕತರವೆನ
ಲಾದರಿಸು ವೈವಾಹಿಕವನೆನೆ
ಸಾದರದೊಳಂದಾ ಜರಾಸಂಧಾಖ್ಯನಿಂತೆಂದ ॥ ೪೭

ಕರ್ಣಾದಿಗಳ ವಿವಾಹ.

ಕುರುಪತಿಯು ವರಭಾನುಮತಿಯನು
ತರಳ ಸೋಮಪ್ರಭೆಯ ನೀ ಸ್ವೀ
ಕರಿಸುವುದು ಸುರಸೆಯನು ದುಶ್ಶಾಸನನು ಮಮತೆಯಲಿ ।
ನಿರುತ ಕೇಳೆಂದೆನುತ ಕರ್ಣನ
ಕರವಿಡಿದು ಕುರುನೃಪತಿ ಸಹಿತಾ
ಧರಣಿಪತಿಗಳು ಬಂದರಾಪುರವರಕೆ ಹರುಷದಲಿ ॥ ೪೮

ಮತ್ತೆ ಬಳೆದುದು ವಿಭವ ವಿದಿತಮು
ಹೂರ್ತವನು ನೋಡಿಸಿದರಂದಾ
ಪೃಥ್ವೀಪತಿ ವರಭಾನುದತ್ತ ಮಹೀಶಕುರುಪತಿಗೆ ।
ಪುತ್ರಿಯನು ಕೊಟ್ಟನು ಸುನಿರ್ಮಳ
ಚಿತ್ತದಲಿ ಚಂದ್ರಪ್ರಭೆಯನೊಲಿ
ದಿತ್ತು ದುಶ್ಶಾಸನಗೆ ಸುರಸೆಯೊಳಾಯ್ತು ವೈವಾಹ ॥ ೪೯

ನೆರೆದಸಕಲಾವನಿಪರೆಲ್ಲರ
ಪಿರಿದು ಮನ್ನಿಸಿ ಕಳುಹಿದನು ಭೂ
ವರರು ತಮತಮಗೈದಿದರು ತಮ್ಮಧಿಕಪಟ್ಟಣವ ।
ಅರಸ ಕೇಳಾಕ್ಷಣದಿ ಧರಣೀ
ಶ್ವರನರಸಿ ವರಭಾನುಮತಿಗಾ
ತರಣಿಸುತನೊಲಿದಿತ್ತ ಶತಕವ ಮಂತ್ರಫಲವದನು ॥ ೫೦

ತನ್ನರಸಿ ವರಚಂದ್ರಮತಿಗೆ ವಿ
ಭಿನ್ನನಾಲಕುಜಂಬುಫಲವನು
ನನ್ನಿಯಿಂದಿತ್ತಾಗ ಸುರಸೆಗೆ ಕೊಟ್ಟನೊಂದುವನು ।
ಸನ್ನುತನು ಕುರುಪತಿಸಹಿತಲಾ
ಕನ್ನಿಕೆಯರನು ವಿವಿಧವಿಭವದೊ
ಳನ್ಯನೆನಿಸದೆ ವೆರಿಸಿದನು ಸುಮುಹೂರ್ತದಿಂದೊಲಿದು ॥ ೫೧

ಬಟುವಜಿಯು ರಥತುರಗಕೋಶಾ
ವಳಿಯುನಗಣಿತಧೇನುಗಳ ಸಂ
ಕುಲವ ಬಲುಮದಗಜವ ರಾಣೀವಾಸಸಿಕರವನು ।
ಬಲಿದು ಬಟಿಕಳಿಯುಂದಿರನು ಸಂ
ಮಿಳಿತದಿಂದುಪಚರಿಸಿ ಕೊಟ್ಟನು
ಕಳುಹಿದನು ಕನ್ನಿಕೆಯರನುವರರೊಡನೆಯಾನೃಪತಿ ॥ ೫೨

ಆಲಿಸಿದೆಲೈ ಭೂಪ ನೀನಿದ
ಲೋಲಮತಿಯಾಕರ್ಣಿ ಕುರುಕುಲ
ಮೌಳಿಗಳಿಗೆಸ್ನೇಹವಾಯ್ತೊಂದೊಂದುಕಾರಣದಿ ।
ಮೇಲೆಮೇಲಧಿಕಾಸ್ಪದಗ ಸಂ
ಮೇಳಮಮತೆಗಳಾಕ್ರಮಿಸಿತಾ
ಬಾಲಿಕೆಯರ ವಿವಾಹವಾದಾಸಮಯ ಮೊದಲಾಗಿ ॥ ೫೩

ಹತ್ತೊಂಬತ್ತನೆಯ ಸಂಧಿ ಮುಗಿದುದು.

ಇಪ್ಪತ್ತನೆಯ ಸಂಧಿ.

ಸೂಚನೆ.

ಇಂದ್ರನೈರಾವತವ ಧರಣಿಗೆ
ತಂದು ನಿಜಮಾತೆಯನು ನೋನಿಸ
ಲೆಂದು ಫಲುಗುಣ ಕೀರ್ತಿವಡೆದನು ಮೂಱುಲೋಕದಲಿ ॥

ವೇದವ್ಯಾಸರ ಆಗಮನ.

ಕೇಳು ಜನಮೇಜಯ ಧರಿತ್ರೀ
ಪಾಲ ಹಸ್ತಿನಪುರಕೆ ಮುನಿಗಳ
ಮೌಳಿ ವೇದವ್ಯಾಸ ಬಿಜಯಂಗೈದನೊಂದುದಿನ ।
ಕೇಳಿದನು ಧೃತರಾಷ್ಟ್ರ ಭೀಷ್ಮಗೆ
ಹೇಳಿದನು ಋಷಿಬರವ ಹರುಷದ
ಲೀಲೆಯಿಂದಿದಿರ್ಗೊಂ [1] ಡು ತಂದರು ರಾಜಮಂದಿರಕೆ ॥ ೧

1 ಲೀಲೆಗೆಯ್ದಿದಿರ್ಗೊಂಡು, ಠ.

ಅರಮನೆಗೆ ನಡೆತಂದನಾಋಷಿ
ಧರಣಿಪತಿ ಯಿದಿರಾಗಿ ಬಂದನು
ದರುಶನವ ಮಾಡಿದನು ಪಾವಕ್ಕೆರಗಿ ಭಕ್ತಿಯಲಿ ।
ಅರಸಿ ಕಾಣಿಕೆಗೊಟ್ಟು ಚರಣಾಂ
ಬುರುಹಕೆರಗಿದೊಡಾಮುನೀಶ್ವರ
ಹರಸಿ ಹಿಡಿದೆತ್ತಿದನು ಗಾಂಧಾರಿಯು ಮಹೀಪತಿಯು ॥ ೨

ಬಂದ ವೇದವ್ಯಾಸಗಾಸಭೆ
ನಿಂದು ಕರಗಳ ಮುಗಿದು ಹರುಷದೊ
ಳಂದು ಬಿಜಯಂಗೈಸಿ ತಂದರು ಸಿಂಹವಿಷ್ಟರಕೆ [1] ।
ಸಂದಮಧುಪರ್ಕಾದಿಗಳಸಾ
ನಂದದಲಿ ಮಾಡಿದರು ಮುನಿಪತಿ
ಯಂದು [2] ನೃಪಗಾಂಧಾರಿಯರ ಕ್ಷೇಮವನು ಬೆಸಗೊಂಡ ॥ ೩

ದೇವಮುನಿ ನಿಮ್ಮಡಿಯ ಕೃಪೆಯಿರ
ಲಾವು ಸುಕ್ಷೇಮಿಗಳ ಯಿಲ್ಲಿಗೆ
ನೀವು ಬಿಜಯಂಗೈದು ನಿಮ್ಮ ಜಡಾತ್ಮದೇಹಿಗಳ ।
ಪಾವನವ ಮಾಡಿದಿರಿ ಧನ್ಯರು
ನಾವು ವೇದವ್ಯಾಸಮುನಿ ಯಿಾ [3]
ಜೀವ ನಿಮ್ಮಗಧೀನ ಚಿತ್ತವಿಸೆಂದನಂಧನೃಪ ॥ ೪

ಧರಣಿಪಾಲನ ನುಡಿಗೆ ಮಿಗೆ ಮುನಿ
ವರನು ಮೆಚ್ಚಿದೆನೆಲೆ ನೃಪತಿ ನಿ
ನ್ನರಸಿಗಳುಹಲು ಬಂದೆನೈರಾವತದ ನೋಂಪಿಯನು ।
ಹರನ ಮೋಹದರಾಣಿ ಪಾರ್ವತಿ
ಯರಸಿಗುತ್ಸವದಾನದಲಿ ಭೂ
ಸುರರ ದಣಿಸುವುದೆಂದು ವೇದವ್ಯಾಸಮುನಿ ನುಡಿದ ॥ ೫

1 ಸಿಂಹಪೀಠಕ್ಕೆ, ಠ. 2 ಯಂಥ, ಠ 3 ಬೇಱೆನ್ನೇನಬಚಿಕೀ, ಠ.

ಧರೆಯೊಳೈರಾವತದ ನೋಂಪಿಯು
ಹರುಷದಿಂದಿದನಾರು ನೋಂತರೆ
ಸಿರಿಯುಹುದು ಸತಿಗೈದೆತನ ಸೌಭಾಗ್ಯ ಹಿರಿದಹುದು ।
ಹರನರಸಿ ಗೌರಿಗೆ ಸಮರ್ಪಿಸಿ
ಹರುಷದಿಂ ಬಾಗಿನವನೀಯೆಂ
ದುಱವವೇದವ್ಯಾಸಮುನಿ ಗಾಂಧಾರಿಗಱುಹಿದನು ॥ ೬

ಗಾಂಧಾರಿಗೆ ಐರಾವತವ್ರತನಿರೂಪಣ.

ಕೇಳು ಜನಮೇಜಯ ಧರಿತ್ರೀ
ಪಾಲನೈರಾವತದ ನೋಂಪಿಯು
ಹೇಟಿಪನು ಧೃತರಾಷ್ಟ್ರನರಸಿಗೆ ವ್ಯಾಸಮುನಿರಾಯ ।
ಕೇಳಿದಳು ಹರುಷದಲಿ ಪುತ್ರಕ
ರೇಟಿಗೆಯ ಮುತ್ತೈದೆತನದಲಿ
ಬಾಟುವೆಯ ಕೈಕೊಂಡೆನೆಂದಳು ನಗುತ ಗಾಂಧಾರಿ [1] ॥ ೭

ತರುಣಿ ನಿನ್ನಯ ಸುತರ ಕೈಯ್ಯಲಿ
ತರಿಸಿದಾಮೃತ್ತಿಕೆಯಲೇ ಸುರ
ಕರಿಯ ರಚಿಸಿಯೆ ನೋಂತು ಭೂಸುರದೇವಸಂತತಿಯ ।
ಪರಿಪರಿಯ ದಾನಂಗಳಲಿ ಸ
ತ್ಕರಿಸಿ ಸುಖಿಯಾಗೆನುತಲಾಮುನಿ
ವರನು ತನ್ನಾಶ್ರಮಕೆ ಸರಿದನು ಬಾದರಾಯಣನು ॥ ೮

ಗಾಂಧಾರಿಯ ವ್ರತೋದ್ಯೋಗ.

ಅರಸ ಕೇಳೈ ಸುಬಲನಂದನೆ
ಕರೆಸಿದರೆ ನಿಜಸುತರು ಬಂದರು
ಕರವ ಮುಗಿದರು ತಾಯೆ ಬೆಸನೇನೆನಲು ನಸುನಗುತ ।

1 ಕಮಲ ಮುಖಿನಗುತ, ಢ.

ಕರಿಯ ನೋಂಪಿಗೆ ತನುಜರಿರ ನೀವ್
ತರಲು ಬೇಕೈ ಮಣ್ಣನೆಂದರೆ
ಹಿರಿದು ತಂದೊಟ್ಟಿದರು ಮಿಗೆ ಮೃತ್ತಿಕೆಯ ಗಿರಿಯಂತೆ ॥ ೯

ಬಂದರಾಚಿತ್ರಕರು ಕರಿಯವ್ರೊ
ಲಂದವಿಟ್ಟರು ಬಣ್ಣ ಬರಪಗ
ೞಂದ ರಚಿಸಿದರಾನೆಯನು ಚೌದಂತಿಗಳ ನಿಲಿಸಿ [1] ।
ತಂದು ಹೊಂಬಟ್ಟೆಗಳ ಹೊಂಪ್ರಣಿ
ಯಿಂದ ಮೆಱೆದಿಹಪಂಚಘಂಟೆಗ
ೞಿಂದ್ರನೈರಾವತಕೆ ಸರಿ ಮಿಗಿಲೆಂದುದಖಿಳಜನ ॥ ೧೦

ಮುತ್ತುಮಾಣಿಕದಿಂದ ಜೆಂಚೆಯ
ಮತ್ತಗಜದಲಿ ಬಿಗಿಸಿ ಪಲ್ಲವ
ಸತ್ತಿಗೆಗಳೆತ್ತಿದಪರಿತ್ಸಾಸಿರಗಳೇೞ್ನಾಱು ।
ಹತ್ತುಸಾಸಿರಸರಕದಾನೆಯ
ಸುತ್ತ ಬಿಟ್ಟವು ಹೊನ್ನನೇಣಿನ
ಜೊತ್ತಿಗೆಯ ಪಿಡಿದಂದದಿಂವಡರಿದರು ಮಾವುತರು ॥ ೧೧

ಚಂದವಾದುದು ಸುರಪನಾಗಜ
ದಿಂದವೆಗ್ಗಳ ಸುಬಲರಾಯನ
ನಂದನೆಯ ಬರಹೇೞ್ದೈರಾವತವ ನೋನುವೊಡೆ ।
ಎಂದು ಸಚಿವರ ಕಳುಹೆ ದೂತರು
ಬಂದರಾ ಗಾಂಧಾರಿದೇವಿಗೆ
ನಿಂದು ಮೆಯ್ಯಿಕ್ಕಿದರು ಕರಗಳ ಮುಗಿದು ಬಿನ್ನೈಸಿ ॥ ೧೨

ದೇವಿ ಚಿತ್ತೈಸುವುದು ರಚಿಸಿದ
ದೇವಗಜ ಚಲುವಿಕೆಯನದನಿ
ನ್ನಾವ ಹೊಸಪರಮೇಷ್ಠಿ ಸೃಷ್ಟಿಯೊ ಹೊಗಳಲೆನ್ನಳವೇ ।

---

1 ರಚಿಸಿದರಾಗಳಾಚೌದಂತದಾನೆಯನು, ಠ.

ದೇವತತಿ ಗಗನದಲಿ ಧರೆಯು ಜ
ನಾವಳಿಗಳಂಬಿನಲಿ ನೆರೆದಿವೆ
ನೀವು ಬಿಜಯಂಗೈವುದೆನೆ ನಗುತೆದ್ದಳಬುಜಾಕ್ಷಿ ॥ ೧೩

ಮಿಂದು ದೇವಾಂಗವನು ತೊಟ್ಟಳು
ಗಂಧಗಳನನುಲೇಪನಾದಿಯು
ಚಂದ್ರಮುಖಿ ಸರ್ವಾಂಗಭರಣವ ತೊಡಿಗೆಗಳ ತೊಟ್ಟು ।
ಹಿಂದೆ ಮುಂದಿಕ್ಕೆಲದ ನಾರೀ
ವೃಂದವೆಯ್ತರೆ ನಡುವೆ ತಾ ಹೊ
ನ್ನಂದಣವನೇಱಿದಳು ಸುರಕರಿಯೆಡೆಗೆ ಗಾಂಧಾರಿ ॥ ೧೪

ಹಿಡಿದಮುತ್ತಿನ ಛತ್ರಚಾಮರ
ಯೆಡಬಲದಲೊಯ್ಯಾರ ಸತಿಯರ
ಗಡಣಪಾಠಕರಂದು ಕೈವಾರಿಗಳ ಕಳಕಳಗ ।
ಹೊಡೆವ ನಾನಾವಾದ್ಯರಭಸವ
ಬಿಡದೆ ಚೀಱುವ ಕಹಳೆ ರಾಯನ
ಮಡದಿ ಸುರಕರಿಯೆಡೆಗೆ ಬಂದಳು ದೇವಿ ಗಾಂಧಾರಿ ॥ ೧೫

ಗಾಂಧಾರಿಯು ಪರಿವಾರಸ್ತ್ರೀಯರ ವರ್ಣನೆ

ಅರರೆ ಮನಸಿಜ ಭೂಭುಜನ ಮದ
ಕರಿಯು ಹಿಂಡೋ ಮೋಹ ಮದನನ
ಹೊರಳಿಯೋ ಮೋಹಾಮನೋಜನ ಕ್ರೀಡೆಗಳ ಸರವೊ ।
ಪರಮಸೌಭಾಗ್ಯದ ಜಯಾಂಬುಧಿ
ತೆಱಿಗಳೋ ಧೃತರಾಷ್ಟ್ರಭೂಮೀ
ಶ್ವರನ ರಾಣಿಯ ಕೆಳದಿಯರು ನಾವಱಿಯೆವಿದನೆಂದ ॥ ೧೬

ಹಾವುಗೆಯ ಹೆಜ್ಜೆಗಳು ಕವಳಿಯ
ಭಾವದಂತಿರೆ ನಗೆಮುಖವು ಕೆಂ
ದಾವರೆಗಳಂತಿರಲು ನೈದಿಲೆಯಂತೆ ನಯನಗಳು ।

ಭಾವದಲ್ಲೊಪ್ಪಿರಲು ಬಳಿಕಾ
ದೇವಿ ಗಾಂಧಾರಿಯನು ಬಳಿಸಿದ
ಭಾವೆಯರ ಚಲುವಿಕೆಯ ಬಣ್ಣಿಸಬಲ್ಲರಾರೆಂದ ॥ ೧೭

ನುಡಿಗೆ ಗಿಳಿ ಹೊದ್ದಿದುದು ಸತಿಯರ
ನಡೆಗೆ ನವಿಲಾಡಿದುವು ಮೇಲಡಿ
ಯಿಡಲು ನೇವುರದಸಿಗೆ ಕುಣಿದುವು ರಾಜಹಂಸೆಗಳು ।
ಕಡುಚಲುವೆನಯನಗಳ ಕಾಣುತ
ಕಡುಗಿದುವು ಬಳಿಕಾಚಕೋರಿಯು
ಗಡಣ ತುಂಬೆಗಳಿಂಬುಗೊಂಡುವು ದೇಹಪರಿಮಳಕೆ ॥ ೧೮

ಕಳಸಕುಚಗಳ ಹೊಳವವಕ್ಷ
ಸ್ಥಳದ ಬಾಹುದ್ವಯದ ವಿರಚಿತ
ನಳಿನಲೋಚನಯುಗದ ಪೀಯೂಷಾಂಶುವಾನನದ ।
ಚಲುವೆಕದಪಿನ ಪವಳದಧರದ
ಲಲನೆಯರು ಗಾಂಧಾರಿದೇವಿಯು
ಬಳಿಸಿನಲಿ ನಡೆತಂದರೈ ಭೂಪಾಲ ಕೇಳೆಂದ । ೧೯

ವ್ರತಾನಂತರ ನಾನಾದಾನ.

ಸುರಕರಿಯು ಕಾಣುತ್ತಲಾಪಂ
ಕರುಹಮುಖಿ ದಂಡಿಗೆಯನಿಳಿದಳು
ಹರುಷದಿಂ ಮುಯ್ಯಿಕ್ಕಿ ಕಾಣಿಕೆಗೊಟ್ಟು ಪೊಡವಟ್ಟು ।
ತರಿಸಿ ಗಂಧಾಕ್ಷತೆಯ ಪುಷ್ಪವ
ಚರಣಕರ್ಪಿಸಿ ಧೂಪದೀಪದಿ
ಪರಮನೈವೇದ್ಯಂಗಳಿಂ ಪೂಜಿಸಿದಳರ್ತಿಯಲಿ ॥ ೨೦

ಪರಿಪರಿಯ ಫಲವಸ್ತು ತರಿಸುತ
ಸುರಿದು ನನೆಗಡಲೆಗಳ ರಾಶಿಯ

ಮೆಱನ ಬಿಚ್ಚೋಲೆಗಳ ಬಣ್ಣದ ಹೊನ್ನನೂಲುಗಳ ।
ಗಿರಿಗಳೇಫಲವಾದುವಾಸುರ
ಕರಿಯ ನೋಂಪಿಯ ದಾನಕೆಂದೊಡೆ
ನೆರೆದುದವನೀಸುರರ ಸಂದಣಿಯರಸ ಕೇಳೆಂದ ॥ ೨೧

ಕರೆಕರೆದು ಸುವ್ವಾಸಿನಿಯರಿಗೆ
ಹರುಷದಿಂ ಬಾಗಿನವನಿತ್ತಳು
ಧರಣಿಯಮರರ ದಣಿಯಿಸಿದಳು ಹಿರಣ್ಯದಾನದಲಿ ।

ಗಾಂಧಾರಿಯು ಕುಂತಿಯನ್ನು ಉಪೇಕ್ಷಿಸಿದುದು.

ಸಿರಿಯ ಮದದಲಿ ಕುಂತಿದೇವಿಯ
ಕರೆಸಮಱದಳು ಸುಬಲಸುತೆ
ಸುರಕರಿಯ ನೋಂತಳು ತಿರುಗಿ ಹೊಕ್ಕಳು ತನ್ನ ಮಂದಿರವ ॥

ಸುರಪನೈರಾವತದ ನೋಂಪಿಗೆ
ಕರೆಸುವಳು ಗಾಂಧಾರಿಯೆನುತಾ
ಹರುಷದಿಂದವೆ ಹೊಱಗೆ ನೋಡುತ್ತಿರ್ದಳಾಕುಂತಿ ।
ಹರದುಬಹ ನೋಟಕಜನಂಗಳ
ಕರೆದು ಬೆಸಗೊಳಲೆಂದರಾಗಳ್
ಯರಸಿ ನೋಂತಳು ತಿರುಗಿ ಹೊಕ್ಕಳು ತನ್ನ ಮಂದಿರವ ॥ ೨೩

ಎಂದ ಮಾತನು ಕೇಳಿ ಮನದಲಿ
ನೊಂದು ಕಡು ಬಿಸುಸುಯ್ದು ಸರಿಯ
ಲ್ಲೆಂದು ತನ್ನನು ಕರೆಸಮಱದಳ್ ದೇವಿಗಾಂಧಾರಿ ।
ಬಂದುದೀ ಬಡತನವು ರಾಯನ
ಹಿಂದೆ ಹತ್ತದೆ ವ್ರತದೆನಕಟಕ
ಟೆಂದು ದುಗುಡವ ಹಿಡಿದು ಮನೆಯಲಿ[1] ಮಲಗಿದಳು ಕುಂತಿ ॥ ೨೪

1 ಖತಿಯಲಿ, ಠ.

ಅನುಜರೆಲ್ಲರ ಕೂಡಿ ಶಮನನ
ತನುಜ ಬಂದನು ಮನೆಗೆ ಮಾತೆಗೆ
ವಿನಯದಿಂದೆಱಗಿದನು ಮುಗುಡವೆ ಶಿವ ಮಹಾದೇವ ।
ಅನಿಲಸುತ ನಾವ್ ಹಸಿದೆವೇಳೇ
ಳೆನಲು ಮಾದ್ರೀಸುತರು ತಮ್ಮಯ
ಜನನಿಯಿರವನು ಕಂಡು ಮೆಱಗಿದರರಸ ಕೇಳೆಂದ ॥ ೨೫

ಬಿಲ್ಲುಮೊದಲಾದಖಿಳ ಕೈದುಗ
ಳಲ್ಲಿ ಶ್ರಮವನು ಮಾಡಿ ಗುರುವಿಂ
ಗಲ್ಲಿಚರಣದಲೆಱಗಿ ಮಿಗೆ ಬೀಳ್ಕೊಂಡು ಹರುಷದಲಿ ।
ಬಲ್ಲಿದನು ನಡೆತರಲು ರಿಪುಗಳು
ತಲ್ಲಣಿಸಿದರು ಧರೆಯೊಳಪ್ರತಿ
ಮಲ್ಲ ಫಲುಗುಣನೈದೆ ಹೊಕ್ಕನು ತಾಯ ಮಂದಿರವ ॥ ೨೬

ಆಗ ಅರ್ಜುನನು ತಾಯಿಯನ್ನು ಪ್ರಾರ್ಥನೆ ಮಾಡಿದುದು.

ಬಂದು ಫಲುಗುಣ ತಾಯ ಚರಣ
ದ್ವಂದ್ವದಲಿ ತಾನೆಱಗಿ ಮುಗುಡವು
ಬಂದ ಪರಿಯನು ಹೇಳಿ ನಿಮ್ಮಯ ಮನದ ಬಯಕೆಯನು ।
ತಂದಪೆನು ಶಿವನೊಡನೆ ಕಾದಿಯೆ
ಹಿಂದುಗಳೆದರೆ ನಿಮ್ಮ ಬಸುಱಲಿ
ಬಂದವನು ತಾನಲ್ಲ ನಿಮ್ಮಡಿಯಾಣೆ ಹೇಳೆಂದ ॥ ೨೭

ಜನನಿ ನಿಮ್ಮಯ ಮನದ ಬಯಕೆಯು
ಮನಸಿಜಾರಿಯ ಗೃಹದೊಳಿರ್ದೊಡೆ
ದನುಜರಿಪು ವೈಕುಂಠನಲ್ಲಿರ ಬ್ರಹ್ಮನಲ್ಲಿರಲು ।
ಅನಿಮಿಷಾಧಿಪನಿಂದ್ರನಲ್ಲಿರ
ನಿಮಗೆ ತಂದಾನೀಯದಿರ್ದೊಡೆ
ಜನಪ ಧರ್ಮಜನಾಣೆ ನಿಮ್ಮಾಣೆಂದನಾಪಾರ್ಥ ॥ ೨೮

ಮುಸುಡ ದುಗುಡವ ತೆಗೆದು ಚಿಂತೆಯ
ನುಸುಳಿಸುತ ನಿಜಮಾತೆಯಂಘ್ರಿಗೆ
ನೊಸಲ ಚಾಚಿಯೆ ಹೇಳು ಹೇಳೆನ್ನಾಣೆ ಹೇಳೆನಲು |
ಹೆಸರಿಡುವರಾರಾಕೆಯಳಲನು
ಪೊಸರುತಿಹಕಂಬನಿಗಳಿಂದವೆ
ಶಶಿವದನೆ ತಾ ಕುಂತಿ ನುಡಿದಳು ನಿಜಕುಮಾರಂಗೆ ॥ ೧೯

ಹೇಳಿ ಮಾಡುವುದೇನು ಫಲುಗುಣ
ಬಾಲಕರು ನೀವೆನ್ನ ಪುಣ್ಯವು
ಗಾಳಿಗೊಡ್ಡಿದಸೊಡರೊಲಾದುದು ನೃಪನ ಮರಣದಲಿ |
ಹೇಳಲೇನದ ಧರೆಯು ಕೌರವ
ರಾಳುತಿಹರೆಂಬವರ ಹಂಗಿನ
ಕೂಳಿನಲಿ ಬೆಂದೊಡಲ ಹೊರೆವವರೆಂದಳಿಂದುಮುಖಿ ॥ ೨೦

ಬಡತನಗಳಡಸಿದರೆ ಬಂಧುಗ
ಳೆಡಹಿ ಕಾಣರು ಮಗನೆ ಹೊಲೆಯಂ
ಗೊಡವೆ ಯಿರಲಿ ಮನ್ನಿಸುವರ್ ಮನುಜನೀತಿಯಿದು |
ಬಡವರಾಗಿಲ್ಲಿವರ ಹಂಗಿನ
ಲೊಡಲ ಹೊರೆವುದಕಿಂತ ಪ್ರಾಣವ
ಬಿಡುವುದೇ ಲೇಸೆಂದು ಕಂಬನಿ ದುಂಬಿದಳು ಕುಂತಿ ॥ ೨೧

ಏತಕೀಬಹುಚಿಂತ ನಿಮಗೀ
ಮಾತ ನಿಮ್ಮಯ ಮನದ ಬಯಕೆಯ
ಭೂತನಾಥನ ಮನೆಯೊಳಿರ್ದರು ತಂದು ನಿಮಗೀವೆ |
ಭೀತಿಯೇಕೌ ನಿಮ್ಮ ಚಿತ್ತದೊ
ಳಾತುರನು ಪೇಳೆಂದು ನುಡಿಯಲು
ಪ್ರೀತಿಯಲಿ ತೆಗೆದಪ್ಪಿ ಪಾರ್ಥಗೆ ನುಡಿದಳಾಕುಂತಿ ॥ ೨೨

ಪುತ್ರರುಗಳುಂಟೆಂದು ಭರದಲಿ
ವೃತ್ತಿಕೆಯ ಬೆಟ್ಟಗಳನೊಟ್ಟಲು
ಚಿತ್ರಕರು ರಚಿಯಿಸಿದರೈರಾವತದ ಹೋಲಿಕೆಗೆ ।
ಪೃಥ್ವಿ ನೆಱೆ ನೋಡಿತ್ತು ರಾಯನ
ಪತ್ನಿ ನೋಂತಳು ಕರೆಸದೆನ್ನನು
ಪಾರ್ಥ ನಮ್ಮದು ಬದುಕೆ ಹೇಳೆಂದಳಲಿದಳು ಕುಂತಿ [1] ॥ ೩೩

ಪುರುಷರಲಿ ಪುತ್ರರಲಿ ಬಹಳೈ
ಶ್ವರಿಯು ತನಗುಂಟೆಂದು ತಾ ಸುರ
ಕರಿಯ ನೋಂತಳು ಸುಬಲನಂದನೆ ಕರೆಸದೆನ್ನುವನು ।
ಕರ ಬಡವರಾವೆಂದು ನಮ್ಮನು
ಸರಕು ಮಾಡರು ಬೆಂದೊಡಲಸಿದ
ಹೊಱೆಯಬೇಕೇ ಪಾರ್ಥ ಹೇಳೆಂದೞಲಿದಳು ಕುಂತಿ [1] ॥ ೩೪

ಸರಿಯೆನಿಸಿ ನೋನುವೊಡೆ ಮಕ್ಕಳು
ತರಳರೈವರು ನೀವು ಸುರಪನ
ಪುರಿಗೆ ಸರಿದನು ಭೂಪ ಭೂವಧುವವರ ಸೇಱಿದಳು ।
ಸಿರಿಯು ಮದದಲಿ ಮುಂದುಗಾಣದೆ
ಹಿರಿದೆನಿಸಿ ಬದುಕುವೊಡೆ ದೈನ್ಯದ
ಲಿರಲು ಬೇಕೇ ಪಾರ್ಥ ಹೇಳೆಂದೞಲಿದಳು ಕುಂತಿ ॥ ೩೫

ಕಡುಗಲಿಯು ಕಾನನದೊಳವನಿಪ
ಮಡಿದನಾತನ ಬೞಿಯಲೇಯೆ
ನ್ನೊಡಲ ನೀಗದೆ ಪುೞಿದೆ ನಿಮಗಾರೊಡೆಯರಿಲ್ಲೆಂದು ।
ಪೊಡವಿಯವರದು ಮಗನೆ ನಾವೇ
ಬಡವರಾಗಿಲ್ಲಿಹುದಱಿಂದವೆ
ಯಡವಿಯೇ ಲೇಸೆಂದು ಕಂಬನಿ ದುಂಬಿದಳು ಕುಂತಿ ॥ ೩೬

[1] ಯೆಂದಳು ಕುಂತಿಬಿಸುಸುಯ್ದು, ಚ

ಅರ್ಜುನನು ತಾಯಿಗೆ ಐರಾವತವ ಮಾಡಿಸುವೆನೆಂದು ಹೇಳುವಿಕೆ.

ಎನಲು ಕುಂತಿಯು ಮಾತ ಕೇಳುತ
ಮನದೊಳಗೆ ಘುಡುಘುಡಿಸುತರ್ಜುನ
ನೆನೆದು ಚರಣದೊಳೆಱಗಿ ಕಂಬನಿದೊಡೆದು ಸೆಱಗಿನಲಿ ।
ಅನಿಮಿಷರು ದಾನವರು ಮೆಚ್ಚಲು
ಜನನಿ ನೋನಿಸದಿರ್ದೆನಾದೊಡೆ
ಧನುವ ಹಿಡಿಯೆನು ಧರ್ಮರಾಯನ ಪಾದದಾಣೆಂದ ॥ ೩೭

ಸಿರಿಯು ಮದದಲಿ ಕರಿಯ ನೋಂಪಿಗೆ
ಕರೆಸಮಱೆವಳ್ ನಿಮ್ಮ ತನ್ನಯ
ನೊರಜುಮಕ್ಕಳು ನೂರ್ವರುಂಟೆಂದವರ ಬಲುಹಿನಲಿ ।
ಬರಸುವೆನು ಕೌರವರ ಸಾಕಂ
ತಿರಲಿ ಸುರಪುರದಿಂದ ಸಕಲಾ
ಮರರ ವಸ್ತುವ ತರಿಸಿ ಕೊಡುವೆನು ತಾಯೆ ನೋಡೆಂದ ॥ ೩೮

ಹಿಂದೆ ರಾವಣ ತನ್ನ ಜನನಿಗೆ
ಯಿಂದುಮೌಳಿಯ ಪುರವ ಲಂಕೆಗೆ
ತಂದು ಕೊಡೆ ಕೈಕಸೆಯು ನೋಂತಳು ತ್ರೈಭುವನವಱಿಯೆ ।
ಇಂದು ನಿಮ್ಮಯ ನೋಂಪಿಗೋಸುಗ
ಮಿಂದ್ರನೈರಾವತವನಿಲ್ಲಿಗೆ
ತಂದು ಕೊಡುವೆನು ತಾಯೆ ನೀನೋಡೆಂದನಾಪಾರ್ಥ ॥ ೩೯

ಸುರಪತಿಯ ಗಜವನ್ನು ತರಿಸಲು ಅರ್ಜುನನ ಪ್ರಯತ್ನ.

ಸುರಕರಿಯು ಹೋಲಿಕೆಗೆ ಕೌರವ
ರೆಱೆಯು ಮಣ್ಣಿಲಿ ಮಾಡಿ ನೋಂತರೆ
ಧರೆಯಜನವೈತಂದು ನೋಡುತಿದಾವಘನವೆಂದು ।
ಸುರಪನೈರಾವತವನಾಸುರ
ತರುಣಿಯರ ಸುರಧೇನುವನು ನಿ
ಮ್ಮರಮನೆಗೆ ತಹೆನೆನುತ ಧನುವನು ಕೊಂಡನಾಪಾರ್ಥ ॥ ೪೦

ಬಿಲ್ಲ ತೆಗೆದನು ಸಮರಸಾಹಸ
ಮಲ್ಲ ಗವಸಣಿಗೆಯನುಗಿದು ಕರ
ಪಲ್ಲವದಿ ನೇವರಿಸುತುಭಯದ ಕೊರಳನಾರೈದು |
ಬಲ್ಲಿದನು ಫಲುಗುಣನು ತಿರುವನು
ಪಲ್ಲವಿಸಿದನು ಮೂಱುಲೋಕಕೆ
ತಲ್ಲಣವು ತಲೆದೋಱೆ ತೆಗೆದನು ಸರಳ ಹರುಷದಲಿ || ೪೧

ಬರೆಸಿದನು ಲಿಖಿತವನು ದಿವಿಜೇ
ಶ್ವರಗೆ ಫಲುಗುಣ ರಿಪುಕುಲಾಂತಕ
ಶರಧನುವನರ್ಚಿಸಿದ ಕೊಪ್ಪಿಗೆ ತೊಡಿಸಿದನು ತಿರುವ |
ಬರಸೆಳೆದನಾಕರ್ಣಪೂರಕೆ
ಭರದಿ ಝೇಂಕೃತಿಯೆದ್ದು ಶಬ್ದಕೆ
ಜಱಿದುವಡಕಿಲು ಜಗದ ಜೋಡಿಗಳರಸ ಕೇಳೆಂದ || ೪೨

ನೋಡಿದಳು ಕಂದನನು ನಿಂದಱೆ
ಬೇಡಿಕೊಂಡಳು ಮಗನೆ ದಿವಿಜರ
ಬೇಡಲಾಗದು ಸರಳು ಸುರಪನ ಸಭೆಯನೈದುವುದೆ |
ಆಡಿ ಮಸಿಯಲ್ಕಕ್ಕು ತಪ್ಪಲು
ಖೋಡಿಗಾಂಬುದು ಲೋಕ ಸಾಕ್ಷಿ
ಬೇಡಿಕೊಂಬೆನೆನಲ್ಕೆ ಕುಂತಿಗೆ ಪಾರ್ಥನಿಂತೆಂದ || ೪೩

ತಪ್ಪ ನುಡಿವೆನೆ ತಾಯೆ ರವಿಶಶಿ
ತಪ್ಪಿದರೆ ಮಾರುತನ ಗತಿ ತಾ
ತಪ್ಪಿದರೆ ವಿಧಿ ಬರೆದ ಬರಹವೆ ತಾನೆ ತಪ್ಪಿದರೆ |
ತಪ್ಪಲಱಿಯದು ನನ್ನ ಬಾಣದ
ದರ್ಪವನು ಸುರರೆಲ್ಲ ಬಲ್ಲರು
ತಪ್ಪಿದರೆ ನಿರ್ಮ್ಮಾಣ ಶರಸನ್ಯಾಸವೆನಗೆಂದ || ೪೪

ಗೋತ್ರಭೇದಿಯು ಕರಿಯು [1] ನೀಕ್ಷಣ
ಮಾತ್ರದಲಿ ತರಿಸುವೆನು [2] ತಾಪಸ
ಧೂರ್ತನೆಂದೆನ್ನದಿರು ಭಾಷೆಯ ಮಾಣಲಂಜುವೆನು |
ಖ್ಯಾತಿಯಿಂದವೆ ದೇವಕರಿಯನು
ಧಾತ್ರಿಯಲಿ ನಿಲಿಸುವೆನು ಬಳಿಕೀ
ಮಾತು ತಪ್ಪಿದರಾನು ನಿಮ್ಮಯ ತನುಜನಲ್ಲೆಂದ || 45

ಜನನಿ ಚಿತ್ತವಿಸೆಚ್ಚ ಬಾಣವ
ದನಿಮಿಷರ ಸಭೆಗೈದದಿರ್ದೊಡೆ
ಘನಪರಾಕ್ರಮತನಯನಾಡಿದ ನುಡಿಗೆ ಕವಲಾಗೆ |
ಧನುವ ಹಿಡಿಯೆನು ತಾಯೆ ನಿಮ್ಮಯ
ಮನದ ಬಯಕೆಯ ಸಲಿಸದಿರ್ದೊಡೆ
ಜನಪಪಾಂಡುವಿನಾಣೆ ನಿಮ್ಮಾಣೆಂದನಾಪಾರ್ಥ || 46

ಕಳುಹಿದೋಲೆಗೆ ಸುರಪ ಬೇಡಿದ
ಕಳುಹದಿರ್ದೊಡೆ ಹರಿದು ದಿವಿಜಾ
ವಳಿಯ ನದೆವೆನು ಸುಡುವೆನಮರಾವತಿಯನಿಂದ್ರನನು |
ನೆಲೆಗೆಡಿಸಿ ಯೈರಾವತವ ಧರೆ
ಗಿಳುಹಿ ನೋನಿಸದಿರ್ದೆನಾದೊಡೆ
ಯಿಳೆಯ ವಲ್ಲಭ ಧರ್ಮರಾಯನ ಪಾದದಾಣೆಂದ [3] || 47

ಭರದಿ ನುಡಿದಿನಿತುವನು ಗರುಡಿಯ
ಗುರುವ ನೆನೆದನು ಧರ್ಮರಾಯನ
ಚರಣಕೆರಗಿದನಾಗ ಜನನಿಯು ಪರಕೆಗಳ ಕೊಳುತ |

---

1 ಪುರಿಯ, ಗ   2 ಕಲುಕುದೆನು, ಗ

3 ಬಲುವಿಡಿದು ಕಾರ್ಮುಕವ ತೊಡುವುದುಬಿಡುವೆನಾನೆಂದ, ಗ.

ಅರ್ಜುನನು ಇಂದ್ರನ ಸಭೆಗೆ ಬಾಣವನ್ನು ಹಾಕಿದುದು.

ಮರುತಸುತಗಭಿನಮಿಸಿ ಬಾಣವ
ಬರೆಸೆಪೆದನಾಕರ್ಣಪೂರಕೆ
ಪರಬಲಾಂತಕ ಪಾರ್ಥನೆಚ್ಚನು ಸುರಪತಿಯ ಸಭೆಗೆ ॥ ೪೮

ಕಡುಗಲಿಯು ನರನೆಚ್ಚ ಬಾಣವು
ತಡೆಯದೈದಿದುದಿಂದ್ರಸಭೆಯಲಿ
ನಡುವ ರತ್ನದ ಕಂಬವನು ತಾನೊಡೆದು ಕೀಲಿಸಲು ।
ಸಿಡಿಲು ಹೊಡೆದಂತಾಯ್ತು ದಿವಿಜರು
ಕಡೆಗೆ ಝಲ್ಲನೆ ಚೆಲ್ಲಿ ವೋಡಲು
ನಡುಗಿ ಮೃತ್ಯುಂಜಯ ಶಿವಾ ಯೆನುತಿರ್ದನಮರೇಂದ್ರ ॥ ೪೯

ಕೆಟ್ಟು ಸುರರೋಡಿದರು ಕಂಬದಿ
ನೆಟ್ಟ ಬಾಣವ ಕಂಡು ಬಂಗನ
ದೃಷ್ಟಿಯಲಿ ಶರದೆಸುಗೆ ಲಿಖಿತವಿದಾವನೆಸಗೆಗಳು ।
ಕೆಟ್ಟೆನೋ ಶಿವ ಯೆನುತಲೋಲಯ
ಬಿಟ್ಟು ತಂದರು ಬಹಳತವಕದಿ
ಕೊಟ್ಟನಾಗಳ ಕರೆದು ಕರಣಿಕಪತಿಗೆ ಶತಮನ್ಯು ॥ ೫೦

ಸಿಲ್ಲಿ ಕಳಕಳವೇಕೆ ಹೋಯೆಂ
ದಲ್ಲಿ ಕಂಚುಕಿಸಿಕರ ಜಖಿಯಲ
ದೆಲ್ಲರಾಸ್ಥಾನದಲಿ ಮೌನದೊಳಿರಲು ಕರಣಿಕನು ।
ಸಿಲ್ಲದಾಗರ್ಜುನನ ವೋಲೆಯ
ಸೊಲ್ಲುಗಳನವಧರಿಸು ರಂಭಾ
ವಲ್ಲಭನೆ ಚಿತ್ತೈಸು ಕುಂತೀಸುತನ ಬಿನ್ನಪವ ॥ ೫೧

ಗಂಡುಗಲಿ ನರರಿಪುಕುಮುದಮಾ
ರ್ತಾಂಡ ಫಲುಗುಣ ವೈರಿಮದಗಜ
ಗಂಡಕೇಸರಿ ಚಾಪವಿದ್ಯಾಭಾಳಲೋಚನನು ।

ಚಂಡಭುಜಬಲ ಮೂಱುಲೋಕದ
ಗಂಡನೋಲೆಯು ಹದನ ರಂಭೆಯು
ಗಂಡ ಚಿತ್ತವಿಸುವುದು ಕುಂತೀಸುತನ ಬಿನ್ನಪವ ॥ ೫೨

ಇಂದ್ರನಿಗೆ ಅರ್ಜುನನ ಪತ್ರ.

ಸ್ವಸ್ತಿ ಶ್ರೀಮತು ದಿವಿಜರಾಯನ
ಮಸ್ತಗುಣಸಂಪನ್ನ ಸುರಪತಿ
ಹಸ್ತಿವಾಹನ ವಾಸವನ ಸುತ ಪಾರ್ಥನೆಂದೆನಿಪ ।
ಹಸ್ತಿನಾಪುರದರಸತನುಜನು
ಪ್ರಸ್ತದಿಂದಲಿ ಕಳುಹಿದೋಲೆಯು
ವಿಸ್ತರದಿ ಕೇಳುವುದು ಕುಂತೀಸುತನ ಬಿನ್ನಪವ ॥ ೫೩

ಧರಣಿಪತಿಪಾಂಡುವಿನ ಪಟ್ಟದ
ಸರಸಿಜಾನನೆ ಕುಂತಿದೇವಿಗ
ಹಿರಿದು ನೋಂಪಿಗಳುಂಟು ನಿಮ್ಮಮರಾವತೀಪುರದಿ ।
ಉಱುವ ನಾನಾವಸ್ತುಗಳ ನೀವ್
ಧರೆಗೆ ಕಳುಹಲು ನೋಂತ ಬಟಿಕವ
ನಿರದೆ ದಿನಮೂಱಕ್ಕೆ ಕಳುಹುವ ಕಳುಹು ಸುರನಾಥ ॥ ೫೪

ಐರಾವತ ಮೊದಲಾದುದನ್ನು ಕಳುಹಿಸೆಂದು ಕೇಳುವಿಕೆ

ಕಳುಹಿಸುವುದೈರಾವತವ ಬಲು
ಕುಲಿಶವನು ಸುರಧೇನು ಸುರತರು
ಸುಲಲಿತಾಶ್ವವ ರಂಭೆ ತುಂಬರುನಾರದಾದಿಗಳ ।
ಕಲಸ ಮೊದಲು ನಿಮ್ಮ ಭವನದ
ನಳಿನಮುಖಿಯರ ಕಳುಹು ಸುರಪತಿ
ಬಲುಹ ನುಡಿದರೆ ನಿನ್ನ ಕತನದಿ ಕೆಡುವುದಾಲೋಕ ॥ ೫೫

ಎತ್ತಣದು ಸಾಹಸವು ನರರಿಂ
ಗಿತ್ತೆಪೆನೆ ವಸ್ತುಗಳನೆಂದೊಡೆ

ಮುತ್ತಿ ಧಾಳಿಯನಿಟ್ಟು ನಿನ್ನಯ ದಿವಿಜಲೋಕವನು ।
ಹತ್ತಿ ದಿವಿಜರ ಸದೆಬಡಿವನಿದಿ
ರೆತ್ತಿ ಕಾದಲು ನಿನ್ನ ಲೋಕವ
ಮೆತ್ತೆ ಗೊಳಿಯು ತೆಗಸುವೆನು ಕೈಲಾಸಪುರಿಗಾಗಿ ॥ ೫೬

ತೋಱದಿರು ಸುರನಾಥ ಬಲುಹನು
ಹಾಱಲೂದುವೆ ನಿನ್ನ ದಿವಿಜರ
ಮೂಱುಲೋಕದ ಗಂಡ ಫಲುಗುಣ ಬಂದು ಕೊಲುತಿರಲು ।
ಮಾಱುಬರುವರದಾರು [1] ನಿನ್ನಯ
ದೂಱ ಕೇಳುವರಾರು ಸುರಪತಿ
ಬೇಱೆ ಮಾತೇಕಿನ್ನು ಬೇಡಿದನಿತ್ತು ಕಳುಹುವುದು ॥ ೫೭

ದಿಟ್ಟ ನರನೆನ್ನದಿರು ಕೇಳಿಗ
ಕೊಟ್ಟು ನೀ ಸುಖಿಯಾಗಿ ಬಾಳ್ಕೆ
ನೆಟ್ಟನೇ ಕೊಡದಿರಲು ನಿನ್ನಯ ದೇವಲೋಕವನು ।
ಸುಟ್ಟು ಕಳೆವೆನು ದಿವಿಜರನು ಬ
ನ್ನಟ್ಟ ಸದೆಯದೆ ಬಿಟ್ಟನಾದೊಡೆ
ಸೃಷ್ಟಿಗೀಶ್ವರ ಧರ್ಮರಾಯನ ಪಾದದಾಣೆಂದ ॥ ೫೮

ಗರುಡಿಯಧಿಪತಿಯಾಣೆ ಕೃಷ್ಣನ
ಚರಣಸರಸಿಜದಾಣೆ ತ್ರಿಪುರವ
ನುರುಹಿದ ಭವನ ಪಾದಪಂಕಜದಾಣೆ ಮರೆಯೇಕೆ ।
ಸುರಪ ನೀನೇ ಕಳುಹದಿರ್ದೊಡೆ
ಪರಮಮುನಿ ದೂರ್ವಾಸರಲಿ ನೀ
ನೆರಹಿದಂದವ ಮಾಡುವನು ಹರಿಕರುಣವುಂಟೆಂದ ॥ ೫೯

ಹರನ ದುರ್ಗವ ಹೊಕ್ಕು ನೀನಿರು
ಮುರಹರನ ವೈಕುಂಠದಲ್ಲಿರು

---

1 ಬೇಱೆಮುಗುಳಾರುಂಟು, ಖ.

ಸುರಪ ಕೇಳ್ಕೈ ಬ್ರಹ್ಮಲೋಕದಲೊಲಿದು ನೀನಿರಲು |
ಧುರದೊಳಗೆ ತ್ರೈದೇವರೆಂಬರ
ಶಿರವ ತೂಗಿಸಿ ನಿನ್ನ ಜೀವವ
ಹರಪುರವನೈದಿಸುವೆ ಕುಂತಿಯು ಪಾದದಾಣೆಂದ ‖ ೬೦

ಪರಮಪುರುಷೋತ್ತಮ ಮುಕುಂದನ
ಕರುಣ ವುಂಟೆಮಗಱಿಯೆ ಪುರಹರ
ನುಱುವಕರುಣೋದಯವು ನಮ್ಮೊಳಗುಂಟು ಧರೆಯೊಳಗೆ |
ಸರಳ ಮೊನೆಯಲಿ ಸಾಗರವನೀ
ಧರಣಿಯಿಂದವೆ ಶೋಷಿಸುವೆನೀ
ಗಿರವ ನಿನ್ನೈಶ್ವರ್ಯಸಿದ್ಧಿಗೆ ಬಡವನೆನಿಸುವನೆ ‖ ೬೧

ಅರ್ಜುನನ ಮೇಲೆ ಇಂದ್ರನ ಕೋಪ.

ಕೇಳಿದನು ಜಂಭಾರಿ ಫಲುಗುಣ
ನೋಲೆಯಿಂದಾಹದನನೆಲ್ಲವ
ಕಾಲರುದ್ರನ ಖತಿಗೆ ಮಿಗಿಲಾವೆನಲು ಕೋಪಿಸುತ |
ಕಾಳುಗೆಡೆದನು ಪಾರ್ಥನೆಂಬುವ
ಮೇಲಣಱಿಯದೆ ನುಡಿದನಲ್ಲದೆ
ಕಾಳಗಕೆ ನರರಿದಿರೆ ಸುರರಿಂಗೆಂದನಮರೇಂದ್ರ ‖ ೬೨

ಕಾಲಗತಿಯೋ ಹರಸಿರೂಪವೊ
ಹೇಳುವುದು ಸುರಸಿಕರವೆಪಜಯ
ದೇಳಿಗೆಯ ಸೂಚನೆಯೊ ಮರ್ತ್ಯರು ದೇವಲೋಕಕ್ಕೆ
ಕೋಲನೆಸೆವುದು ಬೇಡುವುದು ಸುರ
ಬಾಲೆಯರು ಮೊದಲಾದವಸ್ತುವ
ಶೂಲಧರನೇ ಬಲ್ಲನೈ ಸಲೆ ಯೆಂದನಮರೇಂದ್ರ ‖ ೬೩

ದಶಶಿರನು ಬಲಿ ಕಾಲನೇಮಿಯು
ನಸುಮಬಲ ಶುಂಭನು ನಿಶುಂಭನು

ವಿಷಮಭಸ್ಮಾಸುರ ಹಿರಣ್ಯಾಕ ಕೈಟಭಾದಿಗಳು ।
ವಸುಧೆಗುಬ್ಬಸ ಮಾಡಲವದಿರ
ಹೆಸರ ತೊಡೆದ ಮುರಾರಿ ಫಲುಗುಣ
ನುಸುರಿದೇಕೀ ಬಲುಹೆನುತ್ತಮರೇಂದ್ರ ಗರ್ಜಿಸಿದ ॥ ೬೪

ಕರೆಯೊ ಜಲನಕ್ಷತ್ರಗಳ ಗಜ
ಪುರದೊಳಗೆ ಹಗಲಿರುಳು ಮಳೆಯನು
ಸುರಿಯ ಹೇಳಿರೆ ಯೋಜನದಿನ ಕರಿಕರದ ತೋರದಲಿ ।
ನರನ ಪಟ್ಟಣವೆಲ್ಲ ನೀರಲಿ
ನೆರೆದು ಹೋಗಲಿ ಪಾರ್ಥನೆಂಬನ
ಪರಿಯ ನೋಡುವೆನೆನುತಲಾಗಮರೇಂದ್ರಗರ್ಜಿಸಿದ ॥ ೬೫

ನಾರದರ ವಚನದಿಂ ಕೋಪಶಮನ.

ನೆರೆದ ದಿವಿಜರ ನಡುವೆ ನಾರದ
ವರಮುನೀಶ್ವರ ನಗುತ ನುಡಿದನು
ನರನು ಕಂಭವನೆಚ್ಚ ನುಚ್ಚುಹಿದ ನಿನ್ನ ಜೀವವನು ।
ಸುರಪತಿಯು ನೆಡಲೆಂದದೆಚ್ಚೊಡೆ
ಸರಳು ನಿನಗಂಜುವುದೆ ಸಾಕಿಂ
ತಿರಲಿ ಫಲಗುಣನೇನ ಬೇಡಿದನಿತ್ತು ಕಳುಹೆಂದ ॥ ೬೬

ನರರ ಭಯದೊಳಗಂಜಿ ಕಪ್ಪವ
ಸುರರು ತೆತ್ತುದ ನೀವು [1] ಬಲ್ಲಿರೆ
ವರಮುನೀಶ್ವರ ನಮಗೆ ಬೆಸಸುವುದೆನಲು ನಾರದನು ।
ಸುರದನುಜನರರೊಳಗೆ ಪಾರ್ಥನ
ಸರಿಯ ಸುಭಟರ ಕಾಣೆನಾತನ
ಸರಳ ಬಲುಹನು ತೋರಿಸುವೆ ದಿವಿಜೇಂದ್ರ ಕೇಳೆಂದ ॥ ೬೭

ಕಳುಹಿಸುವುದೋಲೆಯನು ಪಾರ್ಥನ
ಬಲುಹಿನೋಲೆಯನರಿವುದಾತನ

---

1 ಹಿಂದೆ, ಖ.

ಪ್ರಜಂಘನೆಂಬ ಖಚರನನ್ನು ಕರೆಸುವಿಕೆ.

ನೆಲೆಯನಱಿದಟ್ಟುವುದು ನಾಕದೊಳುಳ್ಳವಸ್ತುಗಳ ।
ಹಲವು ಮಾತೇನೆಂದು ನಾರದ
ತಿಳುಹಿದೊಡೆ ಸುರನಾಥ ದೂತರ
ಕಳುಹಿ ಕರೆಸಲು ಬಂದ ಖಚರಪ್ರಜಂಘನೆಂಬವನು ॥ ೬೮

ಬಂದು ಖಚರನು ದಿವಿಜರಾಯಂ
ಗಂದು ಮೆಯ್ಯಿಕ್ಕಿದನು ಭಯದಲಿ
ನಿಂದು ಕರಗಳ ಮುಗಿದು ಬೆಸನೇನೆನಲು ನಸುನಗುತ ।
ಅಂಧಕಾಸುರ ಮಡಿಯೆ ದಿವಿಜರಿ
ಗಂದಿನಿಂ ಭಯವಿಲ್ಲ ಕುಂತೀ
ನಂದನನ ಭಯವಾಯ್ತು ಕರೆಸಿದೆನೆಂದನಮರೇಂದ್ರ ॥ ೬೯

ಅರ್ಜುನನಿಗೆ ಪ್ರಜಂಘನಿಂದ ಪತ್ರವನ್ನು ಕಳುಹಿಸುವಿಕೆ.

ಬರೆಸಿ ಕೊಟ್ಟನದೋಲೆಯನು ಸುರ
ರೆಱೆಯ ಖಚರನ ಕೈಯ್ಯ ನೀ ಹೋ
ಗಿರದೆ ಹಸ್ತಿನಪುರದೊಳೀವುದು ಪಾರ್ಥಗೆಂದೆನಲು ।
ಧರೆಗಿೞಿದನಾಖಚರ ಲಿಖಿತವ
ನರಗೆ ಕೊಟ್ಟನು ಶಾನುಭಾಗರು
ಸುರಪನೋಲೆಯನೋದಿದರು ಭೂಪಾಲ ಕೇಳೆಂದ ॥ ೭೦

ಶ್ರೀಮದಮರಾಧೀಶವರನಿ
ಸ್ಸೀಮ ರಿಪುಗಜಸಿಂಹ ದನುಜರ
ಧೂಮಕೇತು ಸುರೇಂದ್ರ ನಮ್ಮ ಕುಮಾರಪಾರ್ಥಂಗೆ ।
ಪ್ರೇಮದಿಂ ಪ್ರತಿಲಿಖಿತವಿತ್ತೆವು
ಕಾಮಿಸಿದ ವಸ್ತುಗಳನೀವೆವು
ಭೂಮಿಗೆಯು ಸ್ವರ್ಗಕ್ಕೆ ಬಟ್ಟೆಯು ಬೆಸಗು ಬೇಗೆಂದ [1] ॥ ೭೧

1 ಮಾಡಬೇಕೆಂದ, ಖ.

ಇಂದ್ರನ ಪತ್ರ ಪ್ರಕಾರ ಮಾರ್ಗಮಾಡಲು ಹೇಳಿ ಕಳುಹಿಸುವಿಕೆ.

ಸುರಪನೋಲೆಯು ನೋಡಿದುದನಾ
ಪರಬಲಾಂತಕ ಪಾರ್ಥ ಕೇಳಿಯೆ
ಹರುಷದಿಂ ಗಹಗಹಿಸಿ ನಕ್ಕನಿದಾವ ಘನವೆಂದು ।
ಧರೆಗೆ ಸುರಲೋಕಕ್ಕೆ ಬಟ್ಟೆಯು
ನಿರದೆ ಮಾಡುವೆನಿನ್ನು ನೋಡಲು
ಹರವಿರಿಂಚಿಯು ಬಾಣಸೃಷ್ಟಿಯು ತೋಱುಸುವೆನೆಂದ ॥ ೭೦

ಧರೆಗವುಮರಾವತಿಗೆ ಮಾರ್ಗವ
ನಿರದೆ ಮಾಡುವೆ ನಿಂದ್ರನೇಱುವ
ಕರಿಯು ಸುರತರು ಕಾಮಧೇನುವ ಸಕಲವಸ್ತುಗಳ ।
ಸುರಪ ಕಳುಹಲಿ ಕಳುಹದಿದ್ದೊಡೆ
ಹರಿದು ಧಾಟಿಯನಿಟ್ಟು ನಿರ್ಜರ
ಪುರವ ಸುಡುವೆನು ಖಚರ ನೀ ಪೋಗೆಂದನಾಪಾರ್ಥ ॥ ೭೧

ಚರಣಕೆಱಗಿದೆನೆಂಬುದಿಂದ್ರಂ
ಗರಸಿ ಯೂರ್ವಶಿ ರಂಭೆಮಾತೆಗೆ
ಕರವ ಮುಗಿದ ಕಿರೀಟಿಯೆಂಬುದು ಸಕಲದಿವಿಜರಿಗೆ ।
ಹರುಷದಿಂ ಪೊಡವಟ್ಟನೆಂಬುದು
ನಿರುತದಿಂ ನೋಡುವೊಡೆ ನೀನೇ
ಪರಮಬಾಂಧವನೆನಗೆನುತ ಬೀಳ್ಕೊಟ್ಟನಾಪಾರ್ಥ ॥ ೭೪

ಖಚರನು ಇಂದ್ರನಿಗೆ ಅರ್ಜುನಾಭಿಪ್ರಾಯವನ್ನು ತಿಳಿಸುವಿಕೆ.

ಬಂದನಾಗಳ್ ಖಚರನಿಂದ್ರಂ
ಗೆಂದನೋಲಗದೊಳಗೆ ಕುಂತೀ
ನಂದನನು ಬೆಸಗೊಂಡು ಕಳುಹಿದನುಚಿತವಚನದಲಿ ।
ಎಂದನಲೆ ಸುರನಾಥ ಪಾರ್ಥ ಮು
ಕುಂದನಲ್ಲದೆ ಬೇಱೆ ನರನೇ
ಸಂದೆಗವ ಬಿಡು ಬೇಗ ಜೋಡಿಸುದಿತ್ತು ಕಳುಹೆಂದ ॥ ೭೫

ಕೇಳು ಜನಮೇಜಯಧರಿತ್ರೀ
ಪಾಲ ಪುಣ್ಯದ ಭರವನರ್ಜುನ
ನೇೞಗೆಯು ನಾಕುಂತಿದೇವಿಯು ನೋಂಪಿಯುತ್ಸವವ ।
ಮೇಲು ಲೋಕದಲರಸನಿಂದ್ರನು
ಬಾಲನಹ ಪಾರ್ಥಂಗೆ ವಸ್ತುವ
ಮೇಳವಿಸಿ ಕಳುಹಿಸುವೆ ನೀ ಹೋಗೆಂದ ಖಚರಂಗೆ ॥ ೭೬

ಈ ಉತ್ಸವಪ್ರಸಿದ್ಧಿಯಿಂದ ಜನ ಬರುವಿಕೆ.

ಅರಸ ಕೇಳೀ ಸುದ್ದಿ ಹರಿದುದು
ಶರಧಿ ಮೇರೆಗಳಾಗೆ ದಿಕ್ಕಿನ
ಅರಸುಗಳು ಕೇಳಿದರು ಫಲುಗುಣ ತಾಯ ನೋಂಪಿಯನು ।
ಸುರಕರಿಯು ಸುರಧೇನುವೆನು ತರ
ಲರಿದು ನೋಡುವೆವೆನುತ ತೆರಳಿತು
ಧರಣಿ ಗೂಳಯದೆಗೆದುದೆನೆ ನೆಱೆ ಬಂದುದಿಭಪುರಿಗೆ ॥ ೭೭

ದೆಸೆದೆಸೆಯ ನೋಟಕಜನಂಗಳು
ಮುಸುಕಿದುವು ತಾನಱಿಯೆ ಲೆಖ್ಖವ
ವಸುಮತೀಶರ ಬಲವ ಬಣ್ಣಿಸ ಬಲ್ಲ ಕವಿಯಾರು ।
ಮಸುಳಿದನು ರವಿಧೂಳಿಯಲಿ ಮಿಗೆ
ಕುಸಿದವಾದಿಗುದಂತಿ ಭಾರಕೆ
ವುಸುರಿನುಗಿಬಗೆಯಾಯ್ತು ಶೇಷಂಗರಸ ಕೇಳೆಂದ ॥ ೭೮

ಪೊಡವಿಯೊಳಗಣ ಸಕಲಜನವೊಂ
ದೆಡೆಗೆ ಬಂದುದು ಬಿಡುವ ಪಾಳ್ಯದ
ಕಡೆ ಮೊದಲ ನಿನ್ನಾರು ಬಲ್ಲರು ಶಿವ ಮಹಾದೇವ ।
ಜಡಿದುದಿಳೆ ಫಣಿರಾಜನೆಂಬನ
ಹೆಡಕು ಮುಣಿದುದು ಜನದ ಲೆಖ್ಖವ
ಮೃಡನು ತಾನೇ ಬಲ್ಲ ಹೇೞುವ ಕವಿಯು [1] ದಾರೆಂದ ॥ ೭೯

[1] ಗಣಕನಾ, ಖ,

ಭರದಿ ಬಂದುದು ಸಕಲಮುನಿಜನ
ಪರಶುರಾಮ ವಸಿಷ್ಠ ಗೌತಮ
ವರಭರದ್ವಾಜಾತ್ರಿ ವಿಶ್ವಾಮಿತ್ರ ಮೊದಲಾದ |
ಪರಮಮುನಿಜನರೈದೆ ಬಂದರು
ಹರುಷದಿಂದಿದಿರಾಗಿ ಬಂದರು
ಸುರನದೀಸುತವಿದುರಕೃಪದ್ರೋಣಾದಿಗಳುಸಹಿತ || ೮೦

ಬಂದ ಮುನಿಜನಕೆಲ್ಲ ಪೀಠವ
ನಂದದಿಂ ತಂದಿರಿಸಿ ಭಕ್ತಿಯು
ಳಂದು ಪಾದವ ತೊಳೆದು ಕೊಂಡರು ಚರಣತೀರ್ಥಗಳು |
ಗಂಧದಕ್ಷತೆಷಡುರಸಾಯನ
ದಿಂದ ತುಷ್ಟಿಯ ಮಾಡಿ ಮಿಗೆ ಮುನಿ
ವೃಂದವನು ಮನ್ನಿಸಿದ ಭೀಷ್ಮನು ರಾಯ ಕೇಳೆಂದ || ೮೧

ಬಾಣಮಯಮಾರ್ಗನಿರ್ಮಾಣ

ನೆರೆದು ಬಂದುದು ಸಕಲಜನವಿಂ
ನಿರಲು ಬಾರದೆನುತ್ತ ಫಲುಗುಣ
ಶರಧನುವ ನರ್ಚಿಸಿದ ನಾನಾಪ್ರತಿವಿಧಾನದಲಿ |
ಕರವ ನೊಸಲಿಗೆ ಚಾಚಿ ದಿಗುಪಾ
ಲರಿಗೆ ಮಣಿದನು ದಿವ್ಯಶರವನು
ತಿರುವಿನಲಿ ಹೂಡಿದನು ಬರಸೆಳೆದಚ್ಚ ನಕ್ಷಯವ || ೮೨

ಹಿಡಿದನವನೊಂದಂಬ ತಿರುವಿಗೆ
ತೊಡಿಸಿದರೆ ಹತ್ತಾಯ್ತು ಧನುವಿಂ
ಬಿಡಲು ನೂರುಸಹಸ್ರ ಲಕ್ಷವು ಕೋಟಿಸಂಖ್ಯೆಯಲಿ |
ಕಡೆಗೆ ಹೆಚ್ಚಿದ ಬಾಣದಳತೆಯ
ಮೃಡನು ತಾನೇ ಬಲ್ಲ ಶರದಿಂ
ಜಡಿವುದಂಬರವೇನನುಸುರುವೆ ಭೂಪ ಕೇಳೆಂದ || ೮೩

ನರನು ಮಂತ್ರಾಸ್ತ್ರಗಳನೆಚ್ಚೊಡೆ
ಸರಳು ಕವಿಯಲು ಸೂರ್ಯ ನಡುಗಿದ
ಧರೆಗೆ ಕತ್ತಲೆ ಯಾಯಿತೇನೆಂಬೆನು ಮಹಾದ್ಭುತವ ।
ಗಱಿಯು ಗಾಳಿಯು ರಭಸದಿಂ ಧರೆ
ಗುರುಳಿದವು ತಾರೆಗಳು ಶರಪಂ
ಜರವ ಬಿಗಿದನು ಧರೆಗೆ ಸುರಲೋಕಕ್ಕೆ ಕಲಿ ಪಾರ್ಥ ॥ ೮೪

ಶರವೆರುಷ ಸುಱಿವಲ್ಲಿ ಹುಟ್ಟಿದ
ಮರುತನುರುವಣೆಯಿಂದ ಬೀಸಲು
ತರುನಿಕರ ತರಗೆಲೆಯ ವೋಲ್ ಹಾಱಿದುವು ಗಗನದಲಿ ।
ಗಿರಿಗಳಡಿ ಮೇಲಾಗಿ ಕೆಡೆದುವು
ನರನು ಶರಪಂಜರವ ಬಿಗಿದನು
ಧರೆಗ ಸುರಲೋಕಕ್ಕೆ ಪಥವಾಯ್ತರಸ ಕೇಳೆಂದ ॥ ೮೫

ಸರಳನೊಂದನೆ ತೊಡಚುತೆಚ್ಚೊಡೆ
ತೆರಳಿತಗಣಿತಬಾಣವೆಂಬಿನ
ಶರಧಿಮೇರೆಯನೊಡೆದು ಬರುತಿರ ಬಿಸಿಜಪುರಿಗೆನುತ ।
ಸುರರು ಬೆದಱಿದರಿಂದ್ರ ನಡುಗಿದ
ಹರನು ತಲೆದೂಗಿದನು ಶರಪಂ
ಜರವ ಬಿಗಿದನು ಧರೆಗೆ ಸುರಲೋಕಕ್ಕೆ ಕಲಿ ಪಾರ್ಥ [1] ॥ ೮೬

ಬಟ್ಟೆಗಳ ಕಪಿನಿಕರ ತಂದೊಡೆ
ಕಟ್ಟಿದನು ನಳ ರಾಮಶರಧಿಯ
ಕಟ್ಟಿದುದು ಪಿರಿದಲ್ಲ ಫಲುಗುಣ ಬಯಲ ಬಾಣದಲಿ ।
ಕಟ್ಟಿದನು ಶರಪಂಜರಂಗಳ
ಬಟ್ಟೆಯಾಯಿತು ಧರೆಗ ಗಗನಕ
ಸೃಷ್ಟಿಮೂಱುಱೊಳೀತಗೆಣೆ ಯಿಲ್ಲೆಂದುದಖಿಳಜನ ॥ ೮೭

1 ಪಾರ್ಥನುಱಿಬೆಕಗಾಗೆಸ್ವರಕಟಕ, ಖ.

ಕಂಡರಮರರು ಚಾಪವಿದ್ಯಾ
ಖಂಡಪರಶುವಿನದಟುತನವನು
ಹಿಂಡು ದಿವಿಜರ ನಡುವೆ ನಾರದ ನುಡಿದನಿಂತೆಂದು ।
ಚಂಡಭುಜಬಲ ಬಟ್ಟೆಯನು ಭೂ
ಮಂಡಲಕೆ ಸುರಪುರಕೆ ಹೂಡಿದ
ಗಂಡುಗಲಿ ಫಲುಗುಣನು ಬೇಡಿದನಿತ್ತು ಕಳುಹುವುದು ॥ ೪೮

ದೇವರಲಿ ಪಾರ್ಥನಪರಾಕ್ರಮ
ಕಾವ ನಿಲುವನು ನರಭುಜಂಗಮ
ದೇವದನುಜಾದಿಗಳ ನಿಕರದಿ ಪಾರ್ಥ ಬಲ್ಲಿದನು ।
ನೀವು ಹೇಪೆನಲಾವ ಮಾತನು
ಭಾವಿಸದೆ ವೇಗದಲಿ ಫಲುಗುಣ
ದೇವಗಾಸುರಗಜವ ಕಳುಹಿಸು ಸಕಲಸಿರಿಸಹಿತ ॥ ೪೯

ಕೊಟ್ಟನಾಕ್ಷಣ ಮುನಿಯು ಮಾತಿಗೆ
ನೆಟ್ಟನೇ ತರಿಸಿದನು ಗಜವನು
ಮೆಟ್ಟಿದೊಡೆ ಬ್ರಹ್ಮಾಂಡ ನಡುಗಿದುದೇನ ಹೇಳುವೆನು ।

ಅರ್ಜುನ ನಿರ್ಮಿತಮಾರ್ಗದಿಂದ ಐರಾವತಾದಿಗಳ ಬರುವಿಕೆ.

ಥಟ್ಟುಗೊಂಡರೆ ಬಾರದಿರಲದ
ಮುಟ್ಟುತಂಕುಶದಿಂದ ಮುಂದಣ
ಬಟ್ಟೆಯನು ತೋಱಿಸುತ ತಂದರು ದಿವಿಜಸಭೆಗಾಗಿ ॥ ೫೦

ಬರೆಯಿಸಿದರೈರಾವತವ ಮುಂ
ದಿರಿಸಿದರು ಬಹುರತ್ನನಿಕರದ
ಹಿರಿಯಗುಱಿವನು ಬೀಸಿ ಬಿಗಿದರು ಕಳಿಯ ಪಟ್ಟೆಯವ ।
ಕೊರಳ ಜೊತ್ತಿಗೆ ಹಾರಕಟ್ಟಿಗೆ
ಸುರಳಿತದ ಮೊಗರಂಬ ಸಾವಿರ
ಕರಿಗಳಡಬಲಕೊಲವುತೈದಿದುವಧಿಕರೀವಿಯಲಿ ॥ ೫೧

ಸುತ್ತ ಬೀಸುವ ಚೌರಿಗಳನಂ
ಬತ್ತುಸಾವಿರ ಮೇಲೆ ಪಲ್ಲವ
ಸತ್ತಿಗೆಗಳಪ್ಪತ್ತುಸಾವಿರ ಹೊನ್ನಮಿಳಸಹಿತ |
ಕೆತ್ತಿಸಿದವಿಕ್ಕೆಲದಲಂದಱು
ವತ್ತುಸಾವಿರ ಪಂಚಘಂಟೆಯು
ಮತ್ತಗಜ ಶೃಂಗರಿಸಿತವನೀಪಾಲ ಕೇಳೆಂದ ॥ ೯೨

ಕರಿಯ ಶೃಂಗಾರವನು ಬಣ್ಣಿಸ
ಲರಿದು ಫಣಿಪಗೆ ಜೋದರಾನೆಯ
ತಿರುಹಿ ತೋಱಲು ಹಿರಿದು ಮೆಚ್ಚಿ ಸುರೇಂದ್ರ ನಸುನಗುತ |
ಧರೆಗಿೞಿದು ಗಜಪುರದಿ ನೋಸಿಸಿ
ಮರುಳನಲು ಬೞಿಕೆಂಟುಸಾವಿರ
ಮೊಱೆವ ಪೌಢೆಯ ರಭಸದಿಂದಿೞಿತಂದುದಮರಗಜ ॥ ೯೩

ಸುರಪನಾನೆಯ ಮೇಲೆ ಯೂರ್ವಶಿ
ಯರಮನೆಯ ವೋಲಗದ ಸತಿಯರು
ಹಿರಿದು ಶೃಂಗಾರವನು ಮಾಡಿದರೇನ ಹೇೞುವೆನು |
ಕೊರಳ ಹಾರದ [1] ಕರ್ಣಪೂರದ
ಕರಚರಣದಾಭರಣ ಮೆಱೆಯಲು
ಸುರಸತಿಯರನುವಾದರವನೀಪಾಲ ಕೇಳೆಂದ ॥ ೯೪

ಹತ್ತುಸಾವಿರದಮರಸತಿಯರು
ಮತ್ತೆ ಶೃಂಗಾರವನು ಮಾಡಿದ
ರುತ್ತಮದ ದೇವಾಂಗವಾಭರಣಾದಿಗಳ ತೊಟ್ಟು |
ಚಿತ್ತಜನ ಪರಿವಾರವಿಂದ್ರನ
ಹತ್ತಿರಕೆ ಬರೆ ನಗುತ ನುಡಿದನು
ಪಾರ್ಥಶರಪಂಜರದಿ ನಡೆಯಿನ್ನೆಂದನಮರೇಂದ್ರ [2] ॥ ೯೫

---

1 ಕೊರಳಜೊತ್ತಿಗೆ, ಖ.   2 ಯಿನ್ನಂಜಬೇಡೆಂದ, ಖ.

ಬಳಿಕ ತುಂಬುರುನಾರದಾದ್ಯರ
ಕುಲಿಶವನು ಸುರಧೇನು ಸುರತರು
ಲಲನೆಯರು ಮೊದಲಾದ ನಾನಾವಸ್ತು ಸಂಕುಲವ ।
ಬಲವಿರೋಧಿಯು ಗಜದ ಬೆಂಬಳಿ
ಯೊಳಗೆ ಕಳುಹಲು ಸರಳ ಪಂಜರ
ಕಿಳ ಜಡಿಯೆ ನಡೆಯಿತ್ತು ಗಜಪುರಿಗರಸ ಕೇಳೆಂದ ॥ ೯೬

ಈ ಉತ್ಸವವಾರ್ತೆಯನ್ನು ಧೃತರಾಷ್ಟ್ರನು ಭೀಷ್ಮರಿಗೆ ತಿಳಿಸಲು ಅವರ ಸಂತೋಷ.

ಅರಸ ಕೇಳ್ ಧೃತರಾಷ್ಟ್ರ ಭೂಮಿಾ
ಶ್ವರಗೆ ಬಂದುದು ವಾರ್ತೆ ದುಗುಡದಿ
ಕರೆದು ಗಂಗಾಸುತಗೆ ಹೇಳಿದ ಸುರಗಜದ ಬರವ ।
ನರನು ಜನಿಸಿಯೆ ಕುರುಕುಲವನು
ದ್ಧರಿಸಿದಪನಿದು ನಮ್ಮ ಪುಣ್ಯವು
ಹರುಷದಿಂದಿದಿಗೊಂಬೆವೆಂದನು ಭೀಷ್ಮ ನಸುನಗುತ ॥ ೯೭

ಸುರಗಜವು ಧರೆಗಿಳಿದು ಹಸ್ತಿನ
ಪುರದ ಹೊರಬಾಹೆಯಲಿ ನಿಂದಿರ
ಲಿರುಳು ನೂಂಕಿತು ಮತ್ತೆ ರವಿಯುದಯಾಚಲಕೆ ಬಂದ ।
ಗುರುನದೀಸುತವಿದುರರಂದಾ
ಪುರವ ನೆರೆ ರಚಿಸಿದರು ಕೌರವ
ಧರಣಿಪಾಲಗೆ ದುಗುಡ ಬಲಿದುದು ಭೂಪ ಕೇಳೆಂದ ॥ ೯೮

ಓರಣದ ಬೀದಿಯಲಿ ತಳಿತುವು
ತೋರಣಂಗಳು ಹಲವು ಪರಿಯಲಿ
ಸಾರಿಸಿತು ಮುಗಿಲುಗಳು ಸಾದುಜವ್ವಾದಿಕೆಸರಿನಲಿ ।
ಕಾರಣೆಯು ನವಕುಂಕುಮದ ಪ
ನ್ನೀರಚಳಯಂಗಳಲಿ ಮೆರೆಭಾ
ಗೀರಥೀನಂದನನು ಹಸ್ತಿನಪುರವ ವಿರಚಿಸಿದ ॥ ೯೯

ಹೊೞಲ ಗುಡಿತೋರಣವ ಕಟ್ಟಿಸಿ
ಲಲನೆಯರ ಶೃಂಗಾರ ಮಾಡಿಸಿ
ಕಲಶಕನ್ನಡಿಸಹಿತ ಬಂದನು ಭೂಮಿಲಂಬದಲಿ ।
ಮೊೞಗಿದುದು ಬಲುವಾದ್ಯ ರಭಸಕೆ
ತಳಮಳಲನುಚ್ಚಳಿಸೆ ಜಲನಿಧಿ
ತುೞುಕಿದಪುದೈರಾವತವನಿದಿಗೊರ್ಂಬಸಂಭ್ರಮಕೆ ॥ ೧೦೦

ಅರಸ ಕೇಳರ್ಜುನನು ತನ್ನಯ
ಯರಮನೆಗೆ ನಡೆತಂದು ಕುಂತಿಯ
ಚರಣಪಲ್ಲವಕೆಱಗಿ ಕೈಗಳ ಮುಗಿದು ವಿನಯದಲಿ ।
ಸುರಪನೈರಾವತವ ನಾನಾ
ಸಿರಿಸಹಿತ ಧರೆಗಿೞುಹಿ ತಂದೆನು
ಹರುಷದಿಂದಲಿ ನೋನಿಯೆನೆ ತೆಗೆದಪ್ಪಿದಳು ಮಗನ ॥ ೧೦೧

ತನುಜ ತನ್ನಯ ಜಠರದಲಿ ನೀ
ಜನಿಸಿದುದಱಿಂ ಮೂಱುಲೋಕದೊ
ಳೆನಗೆ ಕೀರ್ತಿಯು ಸುಗತಿಗಳ ಮಾಡಿದೆ ಯೆಲಾ ಯೆನುತ ।
ತನುಪುಳಕದಿಂದುಬ್ಬಿ ತನ್ನಯ
ಮನದ ಹರ್ಷದ ಹರಹಿನಲಿ ಮ
ಜ್ಜನವ ಮಾಡಿದಳಾಗ ವಸ್ತ್ರವನುಟ್ಟಳಾಕುಂತಿ ॥ ೧೦೨

ಕುಂತಿಯು ಗಾಂಧಾರಿಯನ್ನು ವ್ರತಕ್ಕೆ ಕರೆಯಲು ಆಕೆಯ ಅಸಂಮತಿ.

ಇಂದುಮುಖಿ ಹರ್ಷದಲಿ ತಾ ಹೊ
ನ್ನಂದಣವನೇಱಿದಳು ಸತಿಯರ
ಸಂದಣಿಗಳಲಿ ಬಂದಳಾಗಾಂಧಾರಿಯರಮನೆಗೆ ।
ಅಂಧನೃಪನರಸಿಯನು ಕಾಣುತ
ಬಂದು ಚರಣದೊಳೆಱಗೆ ಹರುಷದಿ
ನಿಂದು ತೆಗೆದಪ್ಪಿದಳು ಕುಂತಿಯ ಸುಬಲಸುತೆ ನಗುತ ॥ ೧೦೩

ತಂದು ಮಂಟಪದೊಳೊಲಿದು ಶುಭಕರ
ದಿಂದ ಕುಳ್ಳಿರಿಸಿದರೆ ಬಳಿಕಾ
ಗೆಂದಳಾಗಾಂಧಾರಿದೇವಿಗೆ ಕುಂತಿ ಕೈಮುಗಿದು ।
ತಂದನೈರಾವತವನರ್ಜುನ
ನಿಂದು ನೀವ್ವೈತಂದು ಮನದೊಲ
ವಿಂದ ನೋಂಪಿಯನೋನ ಬರಬೇಕೆಂದಳಾಕುಂತಿ ॥ ೧೦೪

ಭಾನುಮತಿ ಮೊದಲಾದ ಸೊಸೆಯರು
ಸೂನು ದುಶ್ಶಳೆ ಸಹಿತಲಾವರ
ಮಾನಿನಿಯರೆಲ್ಲರನು ನೀವೊಡಗೊಂಡು ಲೀಲೆಯಲಿ ।
ಸಾನುರಾಗದಿ ಬಂದು ನೋಂಪಿಯ
ನ್ನೂನವಿಲ್ಲದೆ ನೋನ ಬೇಹುದು
ಮಾನನಿಧಿ ನೀವ್ ತೆರಳಿ ಬೇಗದೊಳೆಂದಳಾಕುಂತಿ ॥ ೧೦೫

ಮೌನದಲಿ ಗಾಂಧಾರಿ ಕುಂತೀ
ಮಾನಿನಿಯ ನುಡಿಗೇಳಿ ಕಡುದು
ಮ್ಮಾನದಲಿ ಮಾತಾಡದಿರೆ ಕಂಡೀಕೆ ವಿನಯದಲಿ ।
ಏನು ತಪವಿನ್ನಕ್ಕ ಸುರಪತಿ
ಯಾನೆ ಪುರದುದ್ಯಾನವನದಿ ಸು
ಮಾನದಿಂದೈತಂದುದೆಂದಳು ನಗುತ ನಳಿನಾಕ್ಷಿ ॥ ೧೦೬

ಎಂದು ನಾನಾಪ್ರೇಮನುಡಿಗಳ
ಲಿಂದುಮುಖಿ ಕರೆಯಲ್ಕೆ ಸುಬಲನ
ನಂದನೆಯು ಮನದೊಳಗೆ ಕಡುದುಮ್ಮಾನವಡೆಗೊಂಡು ।
ಹಿಂದೆ ನಾ ಸುರಕರಿಯ ನೋಂಪಿಯ
ಲಂದು ನಿನ್ನನು ಕರೆಸಮಱೆದುದ
ಕಿಂದು ನಾಚಿಸಬಂದೆ ಯೆಂದಳು ನೋಡಿ ಗಾಂಧಾರಿ ॥ ೧೦೭

ಮಱೆಯುವಮಾತೇಕಿನ್ನು ಕರೆವುದ
ನಱಿಯ ಬಾರದೆ ಕುಂತಿ ನಿನ್ನನು
ಮಱಿದು ಕಳೆದೆನು ಹಿಂದಣೈರಾವತದ ನೋಂಪಿಯಲಿ ।
ಇರದೆ ನೀನರ್ಜುನಗೆ ದೂಱಲು
ಮೆಱೆದನವನು ಪರಾಕ್ರಮವನಾ
ನಱಿಯೆನೇ ಸಾಕಿನ್ನು ಬಾರೇನೆಂದಳಾದೇವಿ ॥ ೧೦೮

ಬಡವರೆಂದೇ ನೀನು ಬಾರದೆ
ಕೆಡಿಸದಿರು ಗಾಂಧಾರಿ ನೋಂಪಿಯ
ತಡೆಯದೈತಂದಿಂದ್ರನೇಱುವ ಗಜವ ನೀನೇಱು ।
ಕೊಡುವುದುಚಿತವು ಬಾಗಿನವನುಱೆ
ಮಡದಿ ನೀನಿಲ್ಲದಿರೆ ನೋಂಪಿಯ
ಗೊಡವೆ ತನಗೇಕೆಂದು ಕರೆದಳು ಕುಂತಿ ವಿನಯದಲಿ ॥ ೧೦೯

ಎಱೆಯ ಮಣ್ಣಲಿ ಮಾಡಿ ನೋಂತರೆ
ಸುರಪನೈರಾವತವ ತರಿಸಿದೆ
ಸರಸಿಜಾನನೆ ಕಾಣಬಂದುದು ನಿನ್ನ ಬಡತನವು ।
ಮರುಳೆ ನಿನ್ನಯ ಸುತರ ಪಂಗಿನ
ಕರಿಯ ನಾ ನೋನುವೆನೆ ಸಾಕಂ
ತಿರಲಿ ನೀ ಹೋಗೆಂದು ಜಱಿದಳು ಮುನಿದು ಗಾಂಧಾರಿ ॥ ೧೧೦

ಅಕ್ಕ ಕೇಳೌ ಚಿಕ್ಕನುಡಿಗಳು
ತಕ್ಕುವೇ ಹಿರಿಯರ್ಗೆ ಛಲವಿದು
ಮಕ್ಕಳಾಟಿಕೆ ಬೇಡ ವೈರಾವತವ ನೀನೇಱು ।
ಮಿಕ್ಕ ಮಾತೇಕಿನ್ನು ಬಾಗಿನ
ವಿಕ್ಕಿ ನೋನುವುದುಚಿತವೈವರು
ಮಕ್ಕಳಲ್ಲವೆ ನಿಮಗೆ ಯೆಂದಳು ಕುಂತಿ ವಿನಯದಲಿ ॥ ೧೧೧

ತನ್ನ ಬಸುಱಲಿ ಬರಲು ತನುಜರು
ಬೆನ್ನ ಬರಲವರನುಜರಲ್ಲದೆ
ಯನ್ಯರೇ ತನ್ನವರೆ ಹಗೆಯಲಿ ಕುಂತಿ ಮರುಳಾದೆ ।
ನಿನ್ನ ಮಕ್ಕಳ ಸಿರಿಯು ಸಡಗರ
ಕಿನ್ನು ಬಾರೆನು ಹೋಗು ನೀನೇ
ಯುನ್ನತದಿ ನೋನೆಂದು ಗಜಱಲು ನುಡಿದಳಾಕುಂತಿ ॥ ೧೧೨

ಧರಣಿಯೊಡೆತನ ವೊಂದೆ ಬಹಳೈ
ಶ್ವರಿಯವೊಂದೇ ಪಾಂಡುಧೃತರಾ
ಷ್ಟ್ರರ ಕುಮಾರಕರೊಂದೆ ಭೇದವು ಬೇಡ ನೀ ಬಂದು ।
ನರನ ವಿಜಯಶ್ರೀಯ ನೋಡಿಯೆ
ಪರಿಣಮಿಸುವುದುಚಿತವು ಜಱಿವುದು
ಹಿರಿಯರಿಗೆ ಗುಣವಲ್ಲ ಬರಬೇಕೆಂದಳಾಕುಂತಿ ॥ ೧೧೩

ಕೇಳಿದಳು ಗಾಂಧಾರಿ ಕುಂತೀ
ಲೋಲಲೋಚನೆ ನುಡಿದ ನುಡಿಗಳ
ಗೇಳಿದವ ಮಾಡಿದಪೆನೈರಾವತದ ನೋಂಪಿಯಲಿ ।
ಬಾಲೆ ನಿನ್ನನು ಕರೆಸಮಱೆದುದು
ಖೂಳತನವಾಯ್ತೆನುತ ದುಗುಡವ
ತಾಳ ಬಾರೆನು ತಂಗಿ ನೀ ಹೋಗೆಂದಳಂದುಮುಳಿ ॥ ೧೧೪

ಅರಸಿ ನಿಮ್ಮಯ ನೋಂಪಿಗೋಸುಗ
ನೆರೆದುದಗಣಿತಮಂದಿ ಯದಱಿಂ
ಮಱೆದರದನು ತಪ್ಪೇನು ನನ್ನಯ ನೋಂಪಿಗರ್ಜುನನು ।
ಸರಳನಮರರ ಸಭೆಯೊಳಚ್ಚೊಡೆ
ಹಿರಿದು ನಡುಗಿ ಸುರೇಂದ್ರನಾನೆಯ
ಧರೆಗೆ ಕಳುಹಿದ ತಾಯೆ ನೀ ನೋನೆಂದಳಾಕುಂತಿ ॥ ೧೧೫

ಮಡದಿ ಬಲುಪತಿಗಳಲಿ ಜಾಣ್ಮೆಯು
ನುಡಿಯು ಕಲಿತವಳಾಗಿ ಯುತ್ತರ
ಗೊಡುವೆ ಹಿರಿದೆಂದಱಿಯೆ ಯೌವನದುಬ್ಬುಗೊಬ್ಬಿನಲಿ ।
ನುಡಿಯಲಾಗದು ನಿನ್ನ ನೋಂಪಿಯು
ಕಡೆಗ ಬಾರೆನು ಕುಂತಿ ನೀ ಕೇಳ್
ಕಡುಚಪಳ್ ಹೋಗೆಂದು ಜಱಿದಳು ಮುನಿದು ಗಾಂಧಾರಿ ॥೧೧೬

ಬಂದು ನೋನುವ್ರುದುಚಿತ ಬಾರದ
ಯಿಂದು ನೀ ಮುನಿದೇನು ಮಾಡುವೆ
ಚಂದ್ರಶೇಖರ ಬರೆದ ಲಿಪಿಯನು [1] ಮಾಱಲಾರಳವು ।

ಬಳಿಕ ಭೀಷ್ಮಾದಿಗಳ ಸಹಾಯದಿಂದ ಕುಂತಿಯು ವ್ರತಾಚರಣೆ.

ಇಂದ್ರನೈರಾವತವನೋನದ
ಮಂದಭಾಗ್ಯಳ್ ಹೋಗೆನುತಲರ
ವಿಂದಮುಖಿ ತಿರುಗಿದಳು ವಹಿಲದಿ ಭೀಷ್ಮನಿದ್ದೆಡೆಗೆ ॥ ೧೧೭

ಮರಳಿ ಬಂದಳು ಕುಂತಿ ಭೀಷ್ಮನ
ಚರಣಕಮಲದೊಳೆಱಗಿ ವಿದುರಗೆ
ಕರವ ಮುಗಿದೊಲವಿಂದ ಬಿನ್ನೈಸಿದಳು ವಿನಯದಲಿ ।
ಕರೆದೆನಾ ಗಾಂಧಾರಿದೇವಿಯ
ತರುಣಿ ಬಾರದೆ ಜಱಿದಳೆಂದೆನೆ
ಮರುಳೆ ಮಾಣಲಿ ತಾಯೆ ನೀ ನೋನೆಂದನಾಭೀಷ್ಮ ॥ ೧೧೮

ತರುಣಿ ನಿನಗಂಜಿಕೆಯೆ ಹೋಗೌ
ಸುರಗಜವ ನೀನೇಱು ದಾನಕೆ
ಹಿರಿದು ಭಂಡಾರವನು ತೆಗೆಸುವೆ ದಣಿಸು ಭೂಸುರರ ।

---

1 ಬರಹವ, ಖ.

ಧರಣಿಪತಿ ಸಿನ್ನರಸನಾತನ
ಹಿರಿಯಮಗನು ಯುಧಿಷ್ಠಿರಂಗೆಯು
ಗರುವರಾರುಂಟೆಂದು ಮಿಗೆ ಗರ್ಜಿಸಿದನಾಭೀಷ್ಮ ॥ ೧೯

ತರಿಸಿದರು ಬಂಡಿಗಳ ಶತಸಾ
ಸಿರವನಾಕ್ಷಣ ಭೀಷ್ಮವಿದುರರು
ಹಿರಿದು ಭಂಡಾರಗಳನೊಡೆಯಿಸಿ ಹೇಱಿದರು ಧನವ ।
ಪುರದ ಹೊಱವಳಯದಲಿ ನಾನಾ
ಪರಿಯ ವಸ್ತುವ ಸಹಿತ ಸುಱಿದರು
ಧರಣಿಪತಿ ಕೇಳ್ ಕುಂತಿದೇವಿಯ ನೋಂಪಿಯುತ್ಸವವ ॥ ೨೦

ಕಡುಗಲಿಯು ವರಭೀಷ್ಮವಿದುರರು
ನಡೆದರೈರಾವತವನಿದಿರ್ಗೊಳ್
ಮಡದಿಯರ ಕರಕಲಶಕನ್ನಡಿ ಬಹಳವಿಭವದಲಿ ।
ಒಡನೆ ಬಂದರು ರಾಯರೆಲ್ಲರು
ಗಡಬಡಿಪ ಬಹುವಾದ್ಯರವದಿಂ
ದೊಡೆದುದಬುಜಭವಾಂಡವನೆ ನರನಾಥ ಕೇಳೆಂದ ॥ ೨೧

ಜನಪ ಕೇಳ್ ಯಮನಂದನನು ತ
ನ್ನನುಜರೆಲ್ಲರು ಸಹಿತಲಾಮ
ಜ್ಜನವ ಮಾಡಿ ದುಕೂಲದಿವ್ಯಾಭರಣಗಳನಿಟ್ಟು ।
ಜನನಿಯಂಘ್ರಿಯೊಳೆಱಗಿ ಮಿಗೆ ಕಾಂ
ಚನವರೂಥವನಡರಿ ಕುಂತೀ
ತನಯ ಬಂದನು ಧರ್ಮಸುತ ಸುರಗಜದ ಹೊರೆಗಾಗಿ ॥ ೨೨

ಬಂದು ಭೀಷ್ಮನು ಸಕಲಮುನಿಗಳ
ಗಂದು ಕರಗಳ ಮುಗಿದು ಬಿನ್ನಹ
ವಿಂದು ಕುಂತೀದೇವಿ ನೋನುವ್ರದೆಂಬ ವಿವರವನು ।

ಅಂದದಲಿ ವಿರಚಿಪುದು ಲೋಕವು
ಕುಂದು ಗೂಣದ ತೆರದಲೆನೆ ನಗು
ತೆಂದನಾರದ ನುಡಿದನೆಲೆ ಗಾಂಗೇಯ ಕೇಳೆಂದ ॥ ೧-೩

ಪತಿ ಮುನಿಯ ಶಾಪದಲಿರಲು ತ
ತ್ಪತಿಯ ಸನ್ಮತದಿಂದ ದೇವ
ಪ್ರತತಿಯಿಂ ಸುತರಾಯ್ತು ಕುಂತಿಗದಿಲ್ಲ ವೈಥವ್ಯ ।
ಗತಿಗೆ ಬಾರದು ಪಾರ್ಥಸತಿರಥ
ಸುತರೊಳಗ್ಗಳ ಭೀಷ್ಮ ಕುಂತೀ
ಸತಿಗೆ ಸಲುವುದು ನೋಂಪಿ ನೋನಲಿ ಯೆಂದು ಮುನಿ ನುಡಿದ ॥

ದೇವಮುನಿ ನಾರದನ ವಾಕ್ಯವು
ದೇವಕೀಸುತ ಕೃಷ್ಣನೆಂದುದ
ನಾವನೀಗಲ್ಲೆಂದೆನಲಿ ಬ್ರಹ್ಮಾದಿದೇವಂಲಿ ।
ಆವ ಸಂಶಯುವಿಲ್ಲ ಕುಂತೀ
ದೇವಿ ನೋನಲಿ ಯೆಂದು ಮುನಿತಿಲ
ಕಾವಳಿಯು ತಮತಮಗೆ ನುಡಿಯಲು ಭೀಷ್ಮಕೈಗೊಂಡ [1] ॥೧-೩೩

ಧರಯ ಭಾರವ ನಿಲುಹಲೋಸುಗ
ನರನು ನಾರಾಯಣನು ಭೂಮಿಯೊ
ಳುರುವಣಿಸಿ ಜನಿಸಿದರು ನಿಮ್ಮಾ ಭರತವಂಶದಲಿ ।
ಸುರಗಜವ ನೋನಿಸಲು ಮಾತಗೆ
ಹಿರಿದು ಭಾಷೆಯನಿತ್ತನರ್ಜುನ
ಹಿರಿಯನುಡಿ ಹೊಳ್ಳಹುದೆ ನೋನಲಿ ಯುಂವು ಭೃಗು ನುಡಿದ ॥

ಸುರನದೀನಂದನನು ಋಷಿಗಳ
ಪರಮವಾಕ್ಯವ ಕೇಳಿ ಪರುಷದಿ
ಕರೆಯ ಕಳುಹಿದನಾಗ ಕುಂತಿಯನಾಪ್ತಮಂತ್ರಿಯಲಿ ।

1 ರಾಯಕೇಳೆಂದ, ಶ.

ಭರದಿ ಬಂದರು ತಾಯೆ ಭೀಷ್ಮರು
ಕರಿಯ ಸೋಂಪಿಗೆ ಕರೆವರೆನೆ ಕಡು
ಹರುಷಜಲದೊಳಗದ್ದು ಹೊಂಪುಳಿ ಹೋದಳಾ ಕುಂತಿ [1] ॥ ೧೭೭

ಆಯುಧದೊಳಗುತ್ತಮದ ತೇಜಿಯ
ನಾಯ್ದು ಹೂಡಿದ ರಥದ ಬಂಡಿಯೊ
ಳಾಯ್ದು ದಿವ್ಯಾಸ್ತ್ರಗಳನಿರಿಸಿದನಧಿಕಹರುಷದಲಿ ।
ರಾಯ ಪರಬಲಮಥನ ಮಲೆದರಿ
ರಾಯಸುಭಟರ ಗಂಡ ನಿರ್ಜರ
ರಾಯನಂದನ ಧನುವ ಕೊಂಡೇಱಿದನು ನಿಜರಥವ ॥ ೧೭೮

ಹಿಡಿವ ಪಳುಗೊಡೆ ಯೆರಡುಕಡೆಯಲಿ
ಬಿಡದೆ ಚಿಮ್ಮುವ ಚಾಮರಂಗಳ
ಲೊಡನೆ ಗಗನವನಲೆವ ಬಿರುದಿನ ಬಹುಪತಾಕೆಯಲಿ ।
ಹೊಡೆವ ನಾನಾವಾದ್ಯಮುಂದು
ಘುಡಿಪಕೈವಾರಿಗಳ ರಭಸದಿ
ಕಡುಗಲಿಯು ಫಲುಗುಣನು ಸುರಗಜದೆಡೆಗೆ ನಡೆತಂದ ॥ ೧೭೯

ಮಿಂದು ನಾನಾವಸ್ತುಸಹಿತಾ
ಗಂದಣವನೇಱಿದಳು ಕೆಲಬಲ
ದಿಂದುವದನೆಯರೈದಿದರು ಶತಕೋಟಿಸಂಖ್ಯೆಯಲಿ ।
ಸಂದಣಿಯ ಪಾಠಕರ ಗಡಬಡ
ಮುಂದೆ ಕೈವಾರಿಗಳ ರಭಸದ
ಲಿಂದ್ರನೈರಾವತದೆಡೆಗೆ ನಡೆತಂದಳಾಕುಂತಿ ॥ ೧೮೦

ಕುಂತಿಯ ಐರಾವತಾರೋಹಣ.

ಇಂದುಮುಖಿ ಹರುಷದಲಿ ತಾ ಹೊ
ನ್ನಂದಣದೆ ಬೞಿಕಿೞಿದು ನಲವಿನೊ

1 ಬಹುಹರುಷದಿಂದೋಲಾಡುತಿರ್ದಳು ಕುಂತಿ ಬೞಿಕಿನಲಿ, ಥ.

ಳಂದು ಮೈಯ್ಯಿಕ್ಕಿದಳು ಕಾಣಿಕೆ ಯಿಕ್ಕಿ ಚರಣದಲಿ ।
ಚಂದನಸುಗಂಧಾಕ್ಷತೆಗಳರ
ವಿಂದಪುಷ್ಪದಿ ಧೂಪದೀಪಗ
ಳಂದ ನೈವೇದ್ಯಂಗಳಿಂ ಪೂಜಿಸಿದಳಾಕುಂತಿ ॥ ೧೩೧

ನಡೆದು ಬಂದಳು ಧೇನುವನು ಕಂ
ಡೆಡೆಗೆಡಹಿ ತನ್ನೊಡಲ ಚರಣದ
ನಡುವೆ ಪದ್ಮವ ಬರೆದು ಕಾಣಿಕೆಗೊಟ್ಟು ಪೊಡವಟ್ಟು ।
ಮಡದಿ ಗಂಧಾಕ್ಷತೆಯು ಪುಷ್ಪವ
ಹಿಡಿದು ಧೂಪನಿವಾಳಿಯಿಂದವೆ
ಕಡುಗರುವೆ ಸುರಧೇನುವನು ಪೂಜಿಸಿದಳಾಕುಂತಿ ॥ ೧೩೨

ಕಲ್ಪವೃಕ್ಷವ ಕಂಡು ಕುಂತೀ
ಲಲನೆ ಮೈಯ್ಯಿಕ್ಕಿದಳು ನೇತ್ರಾ
ವಳಿಗಳನು ಸುತ್ತಿದಳು ಕಾಣಿಕೆಗೊಟ್ಟು ಮೈಯ್ಯಿಕ್ಕಿ ।
ಬಳಿಕ ಗಂಧಾಕ್ಷತೆಯು ಪುಷ್ಪಂ
ಗಳಲಿ ಧೂಪನಿವಾಳಿಯಿಂದವೆ
ನಳಿನಮುಖಿ ಸುರತರುವ ನೊಲಿದರ್ಚಿಸಿದಳಾಕುಂತಿ ॥ ೧೩೩

ಬಳಿಕ ತುಂಬುರುನಾರದಾದ್ಯರ
ಲಲನೆಯರ ಸುರಜನಕೆ ನಮಿಸುತ
ಹೊಳೆವ ವಜ್ರಾಯುಧಕೆ ಕಾಣಿಕೆಗೊಟ್ಟು ಮೈಯ್ಯಿಕ್ಕಿ ।
ಮೊಳಗಿದುವು ನಿಸ್ಸಾಳಕೋಟಿಗ
ಳುಲಿದು ಗೀತವ ಪಾಡೆ ಹರುಷದ
ಜಲಧಿಯೊಳಗೋಲಾಡುತಿರ್ದುದು ಭೂಪ ಕೇಳೆಂದ ॥ ೧೩೪

ಸುರಭಿ ಕರೆದರೆ ಧರಣಿ ದಣಿದುದು
ನೆರೆದಜನ ನೆಱೆ ವುಂಡು ದಣಿದುದು
ಸುರತರುವಿನಶನದಲಿ ಲೋಕದ ಬಾಯ ಕಡೆಬಿಟ್ಟು ।

ಸುರರ ಸತಿಯರ ಕಂಡು ಕಂಗಳು
ಹಿರಿದು ದಣಿದುವು ಹೇೞಲೇನದ
ನರಸ ಕೇಳೈ ಕುಂತಿದೇವಿಯ ನೋಂಪಿಯುತ್ಸವವ ‖ ೧೩೫

ತಿರುಗಿದಳು ಬಲದಿಂದಲಾನೆಗೆ
ಕರವ ನೊಸಲೊಳು ಚಾಚಿ ದಿಗುಪಾ
ಲರಿಗೆ ಮಣಿವಳು ಮುನಿಜನಕೆ ಕೈಮುಗಿದು ಹರುಷದಲಿ ।
ವರರತುನಮಯತೊಟ್ಟಿಲಲಿ ಕು
ಳ್ಳಿರಲು ತೆಗೆದರು ಗಜದ ಮೇಲಕೆ
ಸರಸಿಜಾನನೆ ಕುಂತಿಯೈರಾವತವನೇಱಿದಳು ‖ ೧೩೬

ಇಂದುಮುಖಿ ಸುರಗಜದ ಮೇಲಣ
ಯಿಂದ್ರನೇಱುವ ಗದ್ದುಗೆಗೆ ನಡೆ
ತಂದು ಕುಳ್ಳಿರೆ ಚಿಮ್ಮಿದರು ಚಾಮರವನಮರಿಯರು ।
ತಂದು ಸುರಪನ ಛತ್ರವನು ನಲ
ವಿಂದ ಪಲ್ಲವಿಸಿದರು ಕುಂತಿಯ
ದಿಂದುಧರನರಸಿಯನು ನೋಂತಳು ರಾಯ ಕೇಳೆಂದ ‖ ೧೩೭

ಸುರಪನೈರಾವತವನೇಱಿಯೆ
ಪುರದ ಬೀದಿಗಳೊಳಗೆ ಬಂದಳು
ಕರಿನಗರಕೇರಿಯಲಿ ನಡೆದುದು ಸಕಲಜನನಿಕರ ।
ಅರಸಿ ಸುರಸತಿಯರಿಗೆ ಕೊಟ್ಟಳು
ಹರುಷದಿಂ ಬಾಗಿನವ ನಿಜಮಂ
ದಿರಕೆ ತಂದಳು ಸುರಭಿ ಸಹ ಸುರಸತಿಯರೊಡಗೂಡಿ ‖ ೧೩೮

ನಳಿನಮುಖಿ ಸುರಗಜದ ಮೇಲಿಂ
ದಿೞಿದು ಬಂದಳು ಸುರರ ಸಂ
ಕುಲಕಿರದೆ ಕೈಗಳ ಮುಗಿದು ಗಂಗಾತನುಜಗಭಿನಮಿಸಿ ।

ಬಳಿಕ ಭೀಷ್ಮನ ನೇಮದಲಿ ನಿಜ
ನಿಳಯಕ್ಕೈದಿದಳರ್ತಿಯಲಿ ಕಡು
ಗಲಿಯು ಪಾರ್ಥಗೆ ಕೀರ್ತಿಯಾಯಿತು ಮೂಱುಲೋಕದಲಿ ‖ ೧೩೯

ದೇವದುಂದುಭಿ ಮೊಳಗಿದುವು ದೇ
ವಾವಳಿಗಳಾಕಾಶದಿಂದವೆ
ಹೂವಿನಲಿ ಮಳೆಗಱೆದರಾಕುಂತೀಕುಮಾರರಿಗೆ ।
ಆವಬಲುಬಿಲುವಿದ್ಯೆ ತಾನಿಂ
ನಾವಗರುಡಿಯು ಸಾಧನೆಯೊ ಭಟ
ದೇವ ಫಲುಗುಣ ಭಾಪುರೆಂದುದು ಸಕಲಭುವನಜನ ‖ ೧೪೦

ಹರಿದುದು ಫಲುಗುಣನ ಪರಾಕ್ರಮ
ಶರಧಿ ಮೇರೆಗಳಾಗೆ ಸೂರ್ಯನ
ಕಿರಣ ಹರಿವಂದದಲಿ ಹರಿದುದು ಕೂಡೆ ದೆಸೆದೆಸೆಗೆ ।
ಧರೆಯ ಸುಜನರು ಭೀಷ್ಮವಿದುರರು
ಪರಿಣಮಿಸಿ ಕೌರವರ ಯೆದೆ ಝು
ಝುರಿತವಾಗಲು ಕೇಳು ಜನಮೇಜಯ ಮಹೀಪಾಲ ‖ ೧೪೧

ಧರ್ಮರಾಜನ ಅಪ್ಪಣೆಯಂತೆ ಐರಾವತಾದಿಗಳನ್ನು ಸ್ವರ್ಗಕ್ಕೆ ಕಳುಹಿ ಮಾರ್ಗವನ್ನು ತೆಗೆದುದು.

ಭೂತಳಾಧಿಪ ಧರ್ಮಸುತನನು
ಜಾತಗೆಂದನ ಮೂಱುಜಗದಲಿ
ಖ್ಯಾತಿಯಾಯಿತದಿಂದ್ರನೈರಾವತವ ಕಳುಹಿನ್ನು ।
ಭೂತಳದ ಸುರಗಜದ [1] ದಾರಿಯು
ನೀತತುಕ್ಷಣ ಕಡಿದು ಬಿಸುಡೆನ
ಲಾತ ವಂದಿಸಿ ಕಳುಹಿದನು ಸುರಗಜವ ಜನಸಹಿತ ‖ ೧೪೨

1 ನೂತನದ ಸುರಪುರದ, ಥ.

ಬಿಲ್ಲನೇಱಿಸಿ ಕವಲ ಬಾಣದ
ಲೆಲ್ಲ ತಾ ಹರುಷದಲಿ ಸಾಹಸ
ಮಲ್ಲ ಬರಸೆಳೆದೆಚ್ಚ ನಾಶರಪಂಜರಂಗಳನು |
ನಿಲ್ಲದವೆ ತಱಿದೊಟ್ಟೆ ನಿಮಿಷದೊ
ಳೆಲ್ಲವವು ಬಯಲಾಗೆ ಗೌರೀ
ವಲ್ಲಭನು ಮೆಚ್ಚಿದನು ಫಲುಗುಣ ಭಾಪು ರೇ ಯೆನುತ || ೧೪೩

ರಾಯ ಭೀಷ್ಮನು ಸಕಲದೇಶದ
ರಾಯರನು ಕಳುಹಿದನು ಪಾಂಡವ
ರಾಯತನುಜರ ಪೊಗಳುತವರೈದಿದರು ತಮತಮಗೆ |
ರಾಯ ಧರ್ಮಜ ತಮ್ಮದಿರು ಸಹ
ರಾಯನಾರಾಯಣನ ಕರುಣದಿ
ರಾಯಗರುಡಿಯನಿಳಯವನು ಸಾರಿದರು ಹರ್ಷದಲಿ || ೧೪೪

ಇಪ್ಪತ್ತನೆಯ ಸಂಧಿ ಮುಗಿದುದು

ಇತಿ ಶ್ರೀಮದಚಿಂತ್ಯಮಹಿಮ ಗದಗು ವೀರನಾರಾಯಣ ಚರಣಾರವಿಂದ
ಮಕರಂದ ಮಧುಪಾನ ಪುಷ್ಟವಚಷ್ಷಟ್ಪದೀಸಿಕಾಯ ಶ್ರೀಮತ್ಕು
ಮಾರ ವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ಣಾಟ
ಭಾರತಕಥಾಮಂಜರಿಯ ಆದಿಪರ್ವದೊಳ್
ಸಂಭವಪರ್ವಂ ಮುಗಿದುದು.

ಶೋಧನಪತ್ರಿಕೆ.

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
15	19	ಕಾಣಿಸಿ	ಕಾಣಿಸಿ
28	,,	ಹೊಱ	ಹೊರೆ
28	16	ಸುಱಿವ	ಸುಳಿವ
31	7	ಬಾಯಿಯುಲಿ	ಬಾಯುಲಿ
,,	10	ಹೊಱೆಗೆ	ಹೊರೆಗೆ
33	12	ಘೋಳಿನುತ	ಘೋಷಿನುತ
,,	18	ಹೊಗೞ್ದವು	ಹೊಗೞ್ದವು
43	19	ಕಾಯುತ್ತು	ಕಾಯಿತು
49	18	ಧಾಳಿ	ಧಾಟಿ
63	19	ಹುಟ್ಟಿದವು	ಹುಟ್ಟಿದುವು
73	13	ಹರ್ಬಹ್ಮ	ಹರಬ್ರಹ್ಮ
81	12	ೀತರೆಲ	ಸೀತರೆಲ
88	6	ಮರೆದು	ಮಱೆದು
92	9	ಯಾದವು	ಯಾದುದು
94	8	ತಱಿಯು	ತಱಿಯು
98	18	ನಳಿಯು	ನಟಿಯು
108	6	ರೋಗ	ರೋರಗ
109	10	ಬಳಲಿಯೆ	ಬೞಲಿಯೆ
,,	18	ಗದು	ಗದುಗಡ
,,	,,	ತನೆ	ತನೇ
,,	,,	ರ ಕಾತ್ರಿ	ರಕಾತ್ರಿ
115	12	ಕೃತ್ಯೆ	ಕೃತ್ಯೆ
118	9	ತ್ಮಾನಿ	ತ್ಮನಿ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
,,	17	ದೇಚಿ	ದೇಟಿ
128	13	ಚೀರಿ	ಚೀಱಿ
132	2	ಸೆಳೆವ	ಸೆಳೆಯು
133	4	ತಲ	ತಲಿ
141	9	ಹೋಹವು	ಹೋಹುವು
156	21	ಹೊಳಲ	ಹೊೞಲ
161	15	ಆರದು	ಆಱದು
165	20	ಲಿಹವು	ಲಿಹುವು
166	10	ಸುದ	ಸುದ್ಧ
173	21	ವಸ	ವಸ್ಧು
176	15	ವವು	ವವುವು
177	14	ಮರೆ	ಮಱೆ
189	23	ಮುಚ್ಚಿ	ಮುಚ್ಚಿ
194	16	ಗುರಿ	ಗುಱಿ
201	3	ಕುಂತಿ	ಕುಂತಿಗೆ
203	1	ಬರಾಜೆ	ಬರಾಜ್ಞ
,,	11	ತ್ರೋಱಿತು	ತ್ರೋಱಲು
207	21	ವೃತಿ	ವೃತ್ತಿ
254	11	ಹೊಳಲ	ಹೊೞಲ
278	14	ತೇಗೆ	ತೇಗ
289	11	ನೂಱೆ	ನೊರೆ
309	7	ನುರ	ನುಱ
326	13	ದವು	ದುವು
339	12	ಹೂಱೆ	ಹೂರಿ
351	9	ಗಳು	ಗಳ
362	18	ಳುರು	ಳುಱು